ಬುಧವಾರ, ಆಗಸ್ಟ್ 4, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 216 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಜನರಿಗೆ ಗೂಗಲ್ ಹೆಚ್ಚು ಮಾಹಿತಿಯನ್ನು ನೀಡುವುದರಿಂದ ಹೊಸದಾಗಿ ಹುಡುಕಾಟ ನಡೆಸುವವರು ಹಾದಿ ತಪ್ಪುವ ಸಾಧ್ಯತೆ ಇರುತ್ತದೆ



ಆಳ-ಅಗಲ
ಒಟಿಟಿ, ಆ್ಯಪ್‌ಗಳ ನೀಲಿ ಮಾರುಕಟ್ಟೆ
ಜುಲೈ: 32 ಲಕ್ಷ ಉದ್ಯೋಗ ನಷ್ಟ 10
ಸಿಬಿಎಸ್‌ಇ: ಬೆಂಗಳೂರು ವಲಯಕ್ಕೆ 2ನೇ ಸ್ಥಾನ 2

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
53,823 ▲	16,130 ▲	₹49,550 (ಬೆಂಗಳೂರು)	₹70,000 (ಬೆಂಗಳೂರು)	74.28 ▲

ವಿಜಯೇಂದ್ರಗೆ ಸಚಿವ ಸ್ಥಾನ ಕೊಡದಿದ್ದರೆ ಬಂಡಾಯ ಖಚಿತ: ಯಡಿಯೂರಪ್ಪ ಬೆದರಿಕೆ

ಬಿಎಸ್‌ವೈ ಬಿಗಿ ಪಟ್ಟು: ಸಂಪುಟ ಇಕ್ಕಟ್ಟು

• ಸಿದ್ದಯ್ಯ ಹಿರೇಮಠ

ನವದೆಹಲಿ: ಕಿರಿಯ ಮಗ ಬಿ.ವೈ. ವಿಜಯೇಂದ್ರಗೆ ಉಪ ಮುಖ್ಯಮಂತ್ರಿ ಸ್ಥಾನ ಹಾಗೂ ಆಯಕಟ್ಟಿನ ಖಾತೆಯೇ ಬೇಕೆಂದು ಪಟ್ಟು ಹಾಕಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಂಡಾಯವೇಳುವ 'ಬೆದರಿಕೆ' ಒಡ್ಡಿರುವುದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸಚಿವ ಸಂಪುಟ ರಚನೆಯನ್ನೇ ಇಕ್ಕಟ್ಟಿಗೆ ಸಿಲುಕಿಸಿದೆ.

ಯಡಿಯೂರಪ್ಪ

'ಮಗನಿಗೆ ಕಡೆ ಪಕ್ಷ ಪ್ರಮುಖ ಖಾತೆಯೊಂದಿಗೆ ಮಂತ್ರಿ ಸ್ಥಾನವನ್ನಾದರೂ ನೀಡದಿದ್ದರೆ, 2012ರಲ್ಲಿ ಪಕ್ಷ ತ್ಯಜಿಸಿ ಹೊರಹೋಗಿದ್ದ ತಮ್ಮ ನಿಲುವನ್ನೇ ಮತ್ತೆ ತಾಳುವುದು ಅನಿವಾರ್ಯವಾಗಲಿದೆ' ಎಂದು ಸಂದೇಶವನ್ನು ಬೊಮ್ಮಾಯಿ ಮೂಲಕವೇ ತಮ್ಮ ಪಕ್ಷದ ವರಿಷ್ಠರಿಗೆ ರವಾನಿಸಿರುವ ಯಡಿಯೂರಪ್ಪ, ಸಂಪುಟ ರಚನೆಗೆ ಷರತ್ತು ಹಾಕಿದ್ದಾರೆ. ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆ ಸರಾಗವಾಗಿ ನಡೆದಂತೆ ಸಂಪುಟ ರಚನೆಯೂ ಸಲೀಸಾಗಲಿದೆ ಎಂಬ ಲೆಕ್ಕಾಚಾರದಲ್ಲಿದ್ದ ಬಿಜೆಪಿ ವರಿಷ್ಠರಿಗೆ ಯಡಿಯೂರಪ್ಪ ಅವರ ಹೊಸ ನಡೆ ತಲೆನೋವಾಗಿ ಪರಿಣಮಿಸಿದೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಪ್ರಮುಖ ಮುಖಂಡರೊಂದಿಗೆ ಸೋಮವಾರ ನಡೆಸಲಾದ ಚರ್ಚೆಯ ವೇಳೆ ಸಂಪುಟ ಸೇರ್ಪಡೆಗೆ 48 ಸಂಭವನೀಯ ಹೆಸರುಗಳ ಪಟ್ಟಿಯೊಂದನ್ನು ಒಪ್ಪಿಸಿದ್ದ ಮುಖ್ಯಮಂತ್ರಿ ಬೊಮ್ಮಾಯಿ, ಯಡಿಯೂರಪ್ಪ ಮಂಡಿಸಿದ್ದ ಬೇಡಿಕೆಯನ್ನು ಅವರ ಮುಂದೆ ಪ್ರಸ್ತಾಪಿಸಿದ್ದರು.

'ಒಂದೊಮ್ಮೆ ವಿಜಯೇಂದ್ರ ಸರ್ಕಾರದ ಭಾಗವಾದರೆ, ಯಡಿಯೂರಪ್ಪ ಅವರಿಂದ ರಾಜೀನಾಮೆ ಪಡೆದ ಉದ್ದೇಶ ತನ್ನ ಅರ್ಥವನ್ನೇ ಕಳೆದುಕೊಳ್ಳಲಿದೆ' ಎಂದು ಅಭಿಪ್ರಾಯಪಟ್ಟಿರುವ ವರಿಷ್ಠರು, 'ವಿಜಯೇಂದ್ರರಿಗೆ ಅವಕಾಶ ಕೊಟ್ಟಲ್ಲಿ ಎರಡೆರಡು ಅಧಿಕಾರ ಕೇಂದ್ರಗಳಿಗೆ ಆಸ್ಪದ ನೀಡಿದಂತಾಗಲಿದೆ' ಎಂಬ ಆತಂಕವನ್ನೂ ವ್ಯಕ್ತಪಡಿಸಿದರು ಎಂದು ಪಕ್ಷದ ಮೂಲಗಳು 'ಪ್ರಜಾವಾಣಿ'ಗೆ ಖಚಿತಪಡಿಸಿವೆ.

ಈ ಕುರಿತು ನಿರ್ಧಾರ ಕೈಗೊಳ್ಳಲೆಂದೇ ಮುಖಂಡರಾದ ಜೆ.ಪಿ. ನಡ್ಡಾ ಹಾಗೂ ಬಿ.ಎಲ್. ಸಂತೋಷ್ ಅವರು ಮಂಗಳವಾರ ಮಧ್ಯಾಹ್ನ ಸಂಸತ್ ಭವನದಲ್ಲಿ ಅಮಿತ್ ಶಾ ಅವರೊಂದಿಗೆ ಒಂದೂವರೆ ಗಂಟೆ ಕಾಲ ಚರ್ಚೆ ನಡೆಸಿದರು. ನಂತರ ಈ ಮೂವರು ಬೊಮ್ಮಾಯಿ ಅವರೊಂದಿಗೆ ಮಾತುಕತೆ ನಡೆಸಿದರೂ ಅಂತಿಮ ನಿರ್ಧಾರ ಕೈಗೊಳ್ಳಲಿಲ್ಲ.

ವರಿಷ್ಠರ ನಿರ್ಧಾರ ಪ್ರಕಟವಾಗಬಹುದು ಎಂದೇ ಬೆಳಿಗ್ಗೆಯಿಂದ ಕಾದುಕುಳಿತ ಬೊಮ್ಮಾಯಿ, ಮೂರು ಬಾರಿ ಬೆಂಗಳೂರು ಪ್ರಯಾಣದ ವಿಮಾನ ಟಿಕೆಟ್ ರದ್ದುಪಡಿಸಿದರಲ್ಲದೆ, ರಾತ್ರಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ನಿವಾಸದಲ್ಲಿ ಭೋಜನಕೂಟದಲ್ಲಿ ಪಾಲ್ಗೊಂಡ ಬಳಿಕ, ಮತ್ತೆ ನಡ್ಡಾ ನಿವಾಸಕ್ಕೆ ತೆರಳಿ ಈ ಸಂಬಂಧ ಚರ್ಚಿಸಿದರು.

6ನೇ ಪುಟ ನೋಡಿ

ಹಿರಿಯರಿಗೆ ಹುದ್ದೆ ಬೇಡ: ವರಿಷ್ಠರ ವಾದ

'ಯಡಿಯೂರಪ್ಪ ಸಂಪುಟದಲ್ಲಿದ್ದ ಎಲ್ಲ ಹಿರಿಯರನ್ನೂ ಸಾರಾಸಗಟಾಗಿ ಕೈಬಿಡುವ ಮೂಲಕ ಹೊಸಬರನ್ನು ಒಳಗೊಂಡು ಆಡಳಿತಕ್ಕೆ ಹೊಸಸ್ಪರ್ಶ ನೀಡಬೇಕು' ಎಂಬ ವರಿಷ್ಠರ ಮತ್ತೊಂದು ತೀರ್ಮಾನ ಮುಖ್ಯಮಂತ್ರಿಗೆ ಬಿಸಿತುಪ್ಪದಂತಾಗಿದೆ.

'ಕೆಲವು ಅನುಭವಿಗಳಿಗಾದರೂ ಅವಕಾಶ ನೀಡದಿದ್ದರೆ ಬಂಡಾಯಕ್ಕೆ ಅನುವು ಮಾಡಿಕೊಟ್ಟಂತಾಗಲಿದೆ' ಎಂದೂ ವರಿಷ್ಠರೆದುರು ಅಳಲು ತೋಡಿಕೊಂಡಿರುವ ಬೊಮ್ಮಾಯಿ, ಈ ಸಂಬಂಧ ವರಿಷ್ಠರು ಕೈಗೊಳ್ಳಬಹುದಾದ ತೀರ್ಮಾನವು 'ಸಂಕಷ್ಟ'ಕ್ಕೆ ದೂಡದಿರಲಿ ಎಂಬ ಆಶಯವನ್ನು ತಮ್ಮ ಆಪ್ತರ ಬಳಿ ವ್ಯಕ್ತಪಡಿಸಿದ್ದಾರೆ ಎಂದು ಗೊತ್ತಾಗಿದೆ.

ಯಡಿಯೂರಪ್ಪ ರಾಜೀನಾಮೆಗೆ ಮುನ್ನ ಭಾರಿ 'ಸುದ್ದಿ'ಯಲ್ಲಿದ್ದ ಅರವಿಂದ ಬೆಲ್ಲದ್, ಸಿ.ಪಿ.ಯೋಗೇಶ್ವರ, ಬಸನಗೌಡ ಪಾಟೀಲ ಯತ್ನಾಳ ಹಾಗೂ ಎಂ.ಪಿ. ರೇಣುಕಾಚಾರ್ಯ ಅವರ ಪೈಕಿ ಒಬ್ಬರನ್ನಾದರೂ ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎಂಬುದೂ ಬೊಮ್ಮಾಯಿ ಬೇಡಿಕೆಗಳಲ್ಲಿ ಒಂದಾಗಿದೆ ಎಂದು ತಿಳಿದುಬಂದಿದೆ.

ಹಿರಿಯರನ್ನು ಸೇರಿಸಿಕೊಳ್ಳದೇ ಇರುವಂತೆ ವರಿಷ್ಠರು ಸೂಚಿಸಿದರೂ ಕೊನೆಗಳಿಗೆಯಲ್ಲಿ ಕೆಲವು ಹೆಸರು ಸೇರ್ಪಡೆಯಾದರೂ ಅಚ್ಚರಿ ಇಲ್ಲ ಎಂದೂ ಹೇಳಲಾಗಿದೆ.

'ಸಚಿವ ಸಂಪುಟಕ್ಕೆ ಸೇರಲಾರೆ' ಎಂದು ಜಗದೀಶ ಶೆಟ್ಟರ್ ಈಗಾಗಲೇ ಘೋಷಿಸಿದ್ದಾರೆ. ಹೊರಗೆ ಹೋಗುವವರ ಪಟ್ಟಿಯಲ್ಲಿ ಮತ್ತೊಬ್ಬ ಹಿರಿಯ ಶಾಸಕ ಕೆ.ಎಸ್. ಈಶ್ವರಪ್ಪ ಹೆಸರೂ ಇದೆ ಎಂದೂ ಹೇಳಲಾಗುತ್ತಿತ್ತು. ಆದರೆ, ಮೂಲ ಬಿಜೆಪಿಗರ ಪೈಕಿ ಕುರುಬ ಸಮುದಾಯವನ್ನು ಪ್ರತಿನಿಧಿಸುವ ಹಾಗೂ ಹಿಂದುಳಿದ ವರ್ಗದ ಪ್ರಬಲ ನಾಯಕರೂ ಆಗಿರುವ ಈಶ್ವರಪ್ಪ ಅವರನ್ನು ಕೈಬಿಡುವ ಸಾಧ್ಯತೆ ಕಡಿಮೆ. ಸಂಘದ ಹಿನ್ನೆಲೆ ಮತ್ತು ಬಿಜೆಪಿ ಬಗೆಗಿನ ಕಡುನಿಷ್ಠೆ ಅವರ ಕೈ ಹಿಡಿಯಲು ಕಾರಣವಾಗಬಹುದು ಎಂದೂ ಹೇಳಲಾಗುತ್ತಿದೆ.

ಇಂದೇ ನೂತನ ಸಚಿವರ ಪ್ರಮಾಣ ವಚನ

ನವದೆಹಲಿ: ಭಾನುವಾರ ರಾತ್ರಿಯಿಂದಲೇ ನಡೆದಿರುವ ಸಂಪುಟ ರಚನೆಯ ಕಸರತ್ತು ಮಂಗಳ ವಾರ ತಡರಾತ್ರಿ ವೇಳೆಗೆ ಪೂರ್ಣಗೊಂಡಿದೆ. ಬುಧವಾರವೇ ಹೊಸ ಸಚಿವರ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯುವುದು ಖಾತರಿ ಎನ್ನಲಾಗಿದೆ.

ವರಿಷ್ಠರು ಅಂತಿಮಗೊಳಿಸಿದ ಪಟ್ಟಿಯೊಂದಿಗೆ ಮುಖ್ಯಮಂತ್ರಿ ಬೊಮ್ಮಾಯಿ ಅವರು ಬುಧವಾರ ಬೆಳಿಗ್ಗೆ ಬೆಂಗಳೂರಿಗೆ ತೆರಳಲಿದ್ದಾರೆ. ಮಧ್ಯಾಹ್ನ 2.15ಕ್ಕೆ 22ರಿಂದ 25 ಜನ ಶಾಸಕರು ರಾಜಭವನದಲ್ಲಿ ನಡೆಯುವ ಸಮಾರಂಭದಲ್ಲಿ ಸಚಿವರಾಗಿ ಪ್ರಮಾಣವಚನ ಸ್ವೀಕರಿಸುವರು.

ಎಲೈನ್‌ಗೆ ನಾಲ್ಕನೇ ಚಿನ್ನ

ಟೋಕಿಯೊ (ಪಿಟಿಐ): ಜಮೈಕಾದ ಎಲೈನ್ ಥಾಮ್ಸನ್ ಹೆರಾ ಮಂಗಳವಾರ ಮಹಿಳೆಯರ 200 ಮೀಟರ್ ಓಟದಲ್ಲಿ ಚಿನ್ನ ಗೆದ್ದರು. ಇದರೊಂದಿಗೆ ಒಲಿಂಪಿಕ್ಸ್‌ನ ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗದಲ್ಲಿ ವೈಯಕ್ತಿಕ ನಾಲ್ಕು ಚಿನ್ನ ಗೆದ್ದ ಮೊದಲ ಮಹಿಳಾ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಪುರುಷರ 400 ಮೀ ಹರ್ಡಲ್ಸ್‌ನಲ್ಲಿ ನಾರ್ವೆಯ ಕರ್ಸ್ಟನ್ ವಾರ್‌ಹಲ್ಮ್ ಚಿನ್ನ ಗೆದ್ದು ವಿಶ್ವದಾಖಲೆ ನಿರ್ಮಿಸಿದರು.



ಪುರುಷರ 400 ಮೀ ಹರ್ಡಲ್ಸ್
- ಕರ್ಸ್ಟನ್ ವಾರ್‌ಹಲ್ಮ್ (ನಾರ್ವೆ) 45.94 ಸೆಕೆಂಡು **ಚಿನ್ನ** (ವಿಶ್ವ ದಾಖಲೆ)
- ರಾಯ್ ಬೆಂಜಮಿನ್ (ಅಮೆರಿಕ) 46.17 ಸೆಕೆಂಡು **ಬೆಳ್ಳಿ**
- ಅಲಿಸನ್ ಸ್ಯಾಂಟೋಸ್ (ಜಮೈಕಾ) 46.72 ಸೆಕೆಂಡು **ಕಂಚು**
- ಹಿಂದಿನ ವಿಶ್ವದಾಖಲೆ 46.70 ಸೆ. ಜುಲೈ 1, 2021 (ಕರ್ಸ್ಟನ್ ವಾರ್‌ಹಲ್ಮ್)

ಮಹಿಳೆಯರ 200 ಮೀಟರ್ಸ್ ಓಟ
- ಎಲೈನ್ ಥಾಮ್ಸನ್ ಹೆರಾ (ಜಮೈಕಾ) 21.53 ಸೆ **ಚಿನ್ನ**
- ಕ್ರಿಸ್ಟಿನ್ ಬೋಮಾ (ನಮೀಬಿಯ) 21.81 ಸೆ **ಬೆಳ್ಳಿ**
- ಗ್ಯಾಬ್ರಿಯೆಲಿ ಥಾಮಸ್ (ಅಮೆರಿಕ) 21.87 **ಕಂಚು**

ಮಂಡ್ಯ: 11 ಕಲ್ಲುಗಣಿ ಗುತ್ತಿಗೆ, 33 ಕ್ರಷರ್ ಅನುಮತಿ ರದ್ದು

ಪ್ರಜಾವಾಣಿ ವಾರ್ತೆ

ಮಂಡ್ಯ: ಕಲ್ಲು ಗಣಿಗಾರಿಕೆಗೆ ಪರಿಸರ ಅನುಮೋದನಾ ಪತ್ರ ಪಡೆಯದ ಜಿಲ್ಲೆಯ 11 ಗಣಿ ಗುತ್ತಿಗೆ ಹಾಗೂ ನಿಯಮ ಉಲ್ಲಂಘಿಸಿದ 33 ಕ್ರಷರ್‌ಗಳ ಪರವಾನಗಿ ರದ್ದುಗೊಳಿಸಿ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಹಾಗೂ ಜಿಲ್ಲಾ ಕಲ್ಲುಪುಡಿ ಘಟಕಗಳ ಅನುಮತಿ ಮತ್ತು ನಿಯಂತ್ರಣ ಪ್ರಾಧಿಕಾರ ಮಂಗಳವಾರ ಆದೇಶ ಹೊರಡಿಸಿದೆ.

ಜುಲೈ 28ರಂದು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ಸಮಿತಿ ಸಭೆಯ ನಿರ್ಣಯದಂತೆ ಕೇಂದ್ರ ಪರಿಸರ ಅನುಮೋದನಾ ಸಮಿತಿ (ಇಸಿ)ಯ ಪರಿಸರ ಅನುಮೋದನಾ ಪತ್ರ ಹಾಜರುಪಡಿಸದ 11 ಕಲ್ಲು ಗಣಿಗಳ ಗಣಿ ಗುತ್ತಿಗೆಯನ್ನು ಜುಲೈ 31ರಿಂದ ಅನ್ವಯವಾಗುವಂತೆ ರದ್ದು ಮಾಡಲಾಗಿದೆ.

ಕರ್ನಾಟಕ ಕಲ್ಲು ಕ್ರಷರ್ ಕಾಯ್ದೆಯ 'ಸುರಕ್ಷತಾ ವಲಯ' ನಿಯಮ ಉಲ್ಲಂಘಿಸಿ ಜಿಲ್ಲಾ ಮುಖ್ಯರಸ್ತೆಯ 100 ಮೀಟರ್ ವ್ಯಾಪ್ತಿಯಲ್ಲಿದ್ದ 7 ಕಲ್ಲು ಕ್ರಷರ್‌ಗಳ ಪರವಾನಗಿಯನ್ನು ಜಿಲ್ಲಾ ಕಲ್ಲುಪುಡಿ ಘಟಕಗಳ ಅನುಮತಿ ಮತ್ತು ನಿಯಂತ್ರಣ ಪ್ರಾಧಿಕಾರ ರದ್ದುಪಡಿಸಿದೆ.

ಬಿಎಸ್‌ವೈ, ವಿಜಯೇಂದ್ರಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಹಾಂ ಸಲ್ಲಿಸಿರುವ ಅರ್ಜಿ ಆಧರಿಸಿ ಶಾಸಕ ಬಿ.ಎಸ್. ಯಡಿಯೂರಪ್ಪ, ಅವರ ಮಗ ಬಿ.ವೈ. ವಿಜಯೇಂದ್ರ, ಶಾಸಕ ಎಸ್.ಟಿ. ಸೋಮಶೇಖರ್ ಮತ್ತು ಇತರರಿಗೆ ನೋಟಿಸ್ ನೀಡಲು ಹೈಕೋರ್ಟ್ ಆದೇಶಿಸಿದೆ.

ಯಡಿಯೂರಪ್ಪ ಅವರ ಮೊಮ್ಮಗ ಶಶಿಧರ ಮರಡಿ, ಅಳಿಯ ವಿರೂಪಾಕ್ಷಪ್ಪ ಯಮಕನಮರಡಿ, ಪುತ್ರಿ ಪದ್ಮಾವತಿ, ಅಳಿಯ ಸಂಜಯ್ ಶ್ರೀ, ಉದ್ಯಮಿ ಚಂದ್ರಕಾಂತ ರಾಮಲಿಂಗಂ ಅವರಿಗೂ ನೋಟಿಸ್ ನೀಡಲು ನ್ಯಾಯಮೂರ್ತಿ ಸುನೀಲ್ ದತ್ತ ಯಾದವ್ ಅವರಿದ್ದ ಪೀಠ ಆದೇಶಿಸಿದೆ.

3A ಪುಟ ನೋಡಿ

ಒಳ ಪುಟ
'ತಮಿಳುನಾಡಿನ ಒಪ್ಪಿಗೆ ಇಲ್ಲದೆ ಮೇಕೆದಾಟು ಯೋಜನೆ ಸಾಧ್ಯವಿಲ್ಲ' 9

ರಾಜ್ಯ ಕೋವಿಡ್ ಅಂಕಿ–ಅಂಶ

29,09,958 ▲ ಒಟ್ಟು ಸೋಂಕಿತರು (29,08,284 ನಿನ್ನೆಯ ವಿವರ)
24,280 ▲ ಸಕ್ರಿಯ ಪ್ರಕರಣಗಳು
28,49,003 ▲ ಗುಣಮುಖರಾದವರು
36,650 ಒಟ್ಟು ಸಾವು ▼

ದಿನದ ಏರಿಕೆ		
ಹೊಸ ಪ್ರಕರಣ	1,674	▲
ಗುಣಮುಖ	1,376	▼
ಸಾವು	38	▲

ಪ್ರಜಾವಾಣಿ ಗ್ರಾಫಿಕ್ಸ್

ಇಂದಿನ ಪಾಡ್‌ಕಾಸ್ಟ್ ವಿಶೇಷ
ಝಣ ಝಣ ಕಾಂಚಾಣ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಸಿಬಿಎಸ್‌ಇ 10ನೇ ತರಗತಿ ಫಲಿತಾಂಶ ಬೆಂಗಳೂರು ವಲಯಕ್ಕೆ 2ನೇ ಸ್ಥಾನ

ನವದೆಹಲಿ: 10ನೇ ತರಗತಿ ಪರೀಕ್ಷೆ ಫಲಿತಾಂಶವನ್ನು ಸಿಬಿಎಸ್‌ಇ ಮಂಗಳವಾರ ಪ್ರಕಟಿಸಿದ್ದು, ಶೇ 99.96ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಬೆಂಗಳೂರು ವಲಯ ರಾಷ್ಟ್ರಮಟ್ಟದಲ್ಲಿ ಎರಡನೇ ಸ್ಥಾನದಲ್ಲಿದೆ.

ಶೇ 99.99ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗುವುದರೊಂದಿಗೆ ತಿರುವನಂತಪುರ ವಲಯ ಮೊದಲ ಸ್ಥಾನದಲ್ಲಿದ್ದರೆ, ಶೇ 99.94ರಷ್ಟು ಫಲಿತಾಂಶದೊಂದಿಗೆ ಚೆನ್ನೈ ವಲಯ ಮೂರನೇ ಸ್ಥಾನದಲ್ಲಿದೆ.

20,97,128 ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಲಾಗಿದೆ. ಇವರ ಪೈಕಿ ಶೇ 99.04ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 16,639 ವಿದ್ಯಾರ್ಥಿಗಳ ಮೌಲ್ಯಮಾಪನ ಕಾರ್ಯ ನಡೆಯುತ್ತಿದೆ ಎಂದು ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) ತಿಳಿಸಿದೆ.

57,824 ವಿದ್ಯಾರ್ಥಿಗಳು ಶೇ 95ಕ್ಕೂ ಅಧಿಕ ಅಂಕ ಗಳಿಸಿದ್ದಾರೆ. ಶೇ 90ರಿಂದ 95ರಷ್ಟು ಅಂಕ ಗಳಿಸಿರುವ ವಿದ್ಯಾರ್ಥಿಗಳ ಸಂಖ್ಯೆ 2,00,962. ರಾಷ್ಟ್ರಮಟ್ಟದಲ್ಲಿ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದಾರೆ ಎಂದೂ ಸಿಬಿಎಸ್‌ಇ ತಿಳಿಸಿದೆ.

ಸಿಬಿಎಸ್‌ಇ ಸಂಲಗ್ನತೆ ಹೊಂದಿದ, ವಿದೇಶಗಳಲ್ಲಿರುವ ಶಾಲೆಗಳ ಫಲಿತಾಂಶ ಶೇ 99.92ರಷ್ಟಿದೆ. ಕೋವಿಡ್–19 ಪಿಡುಗಿನ ಕಾರಣ 10 ಹಾಗೂ 12ನೇ ತರಗತಿ ಪರೀಕ್ಷೆಗಳನ್ನು ಸಿಬಿಎಸ್‌ಇ ರದ್ದುಪಡಿಸಿತ್ತು. ಪರ್ಯಾಯ ಮೌಲ್ಯಮಾಪನ ಪದ್ಧತಿ ಅನುಸಾರ ಈಗ ಫಲಿತಾಂಶವನ್ನು ಪ್ರಕಟಿಸಲಾಗಿದೆ.

ಪೆಟ್ರೋಲ್ ದರ ಏರಿಕೆ ಖಂಡಿಸಿ ಸಂಸತ್‌ಗೆ ಸೈಕಲ್ ಜಾಥಾ

ವಿರೋಧ ಪಕ್ಷಗಳ ಒಗ್ಗಟ್ಟಿನ ಮಂತ್ರ

ನವದೆಹಲಿ (ಪಿಟಿಐ): ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಮಂಗಳವಾರ ಬೆಳಿಗ್ಗೆ ಆಯೋಜಿಸಿದ್ದ ಚಹಾಕೂಟದಲ್ಲಿ 15 ವಿರೋಧ ಪಕ್ಷಗಳ ಮುಖಂಡರು ಭಾಗವಹಿಸಿದ್ದರು. ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ಒಗ್ಗಟ್ಟಾಗಿರಬೇಕು ಎಂಬ ವಿಷಯಕ್ಕೆ ಸಭೆಯಲ್ಲಿ ಒತ್ತು ನೀಡಲಾಯಿತು.

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯನ್ನು ಖಂಡಿಸಿ ರಾಹುಲ್ ಸೇರಿದಂತೆ ಹಲವು ಸಂಸದರು ಸೈಕಲ್‌ನಲ್ಲಿ ಸಂಸತ್ತಿಗೆ ಹೋದರು. ಸೈಕಲ್ ತುಳಿಯಲು ಸಾಧ್ಯವಾಗದವರು ನಡೆದು ಹೋದರು.

ಕಾಂಗ್ರೆಸ್‌ನ ನೂರು ಸಂಸದರಲ್ಲದೆ, ಟಿಎಂಸಿ, ಎಸ್‌ಪಿ, ಶಿವಸೇನಾ, ಡಿಎಂಕೆ, ಎಡಪಕ್ಷಗಳು ಮತ್ತು ಎನ್‌ಸಿಪಿ ಸಂಸದರು ಚಹಾಕೂಟದಲ್ಲಿ ಭಾಗವಹಿಸಿದರು. 17 ವಿರೋಧ ಪಕ್ಷದ ಸಂಸದರಿಗೆ ಚಹಾಕೂಟಕ್ಕೆ ಆಹ್ವಾನ ನೀಡಲಾಗಿತ್ತು. ಬಿಎಸ್‌ಪಿ ಮತ್ತು ಎಎಪಿ ಸಂಸದರು ಚಹಾಕೂಟಕ್ಕೆ ಹಾಜರಾಗಲಿಲ್ಲ.

ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಮತ್ತು ವಿರೋಧ ಪಕ್ಷದ ಸಂಸದರಿಂದ ಸೈಕಲ್ ಜಾಥಾ –ಪಿಟಿಐ ಚಿತ್ರ

ರಾಹುಲ್ ಅವರು ನಡೆಸಿದ್ದ ವಿರೋಧ ಪಕ್ಷಗಳ ಮುಖಂಡರ ಸಭೆಗೆ ಟಿಎಂಸಿ ಗೈರು ಹಾಜರಾಗಿತ್ತು. ಆದರೆ, ಚಹಾಕೂಟದಲ್ಲಿ ಭಾಗಿಯಾಗಿದೆ.

'ನಾವೆಲ್ಲರೂ ಒಗ್ಗಟ್ಟಾಗಿರಬೇಕು. ನಮ್ಮ ಧ್ವನಿಯು ಒಗ್ಗಟ್ಟಾದಂತೆ ಅದರ ಶಕ್ತಿಯು ಹೆಚ್ಚುತ್ತಾ ಹೋಗುತ್ತದೆ. ಈ ಧ್ವನಿಯನ್ನು ದಮನಿಸುವುದು ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ಕಷ್ಟವಾಗುತ್ತಾ ಹೋಗುತ್ತದೆ' ಎಂದು ರಾಹುಲ್ ಹೇಳಿದ್ದಾರೆ.

ಸಂಸತ್ತಿನಲ್ಲಿ ಮುಗಿಯದ ಗದ್ದಲ 11

ಪ್ರಚಾರದ ಗಿಮಿಕ್: ಬಿಜೆಪಿ

ರಾಹುಲ್ ಗಾಂಧಿ ಅವರು ಅಗ್ಗದ ಪ್ರಚಾರಕ್ಕಾಗಿ ಗಿಮಿಕ್ ಮಾಡುತ್ತಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ಸರ್ಕಾರದ ವರ್ಚಸ್ಸಿಗೆ ಮಸಿ ಬಳಿಯಲು ಮತ್ತು ಸಂಸತ್ ಕಲಾಪ ನಡೆಯುವುದಕ್ಕೆ ತಡೆ ಒಡ್ಡಲು ವಿರೋಧ ಪಕ್ಷಗಳು ಯತ್ನಿಸುತ್ತಿವೆ ಎಂದೂ ಬಿಜೆಪಿ ಹೇಳಿದೆ.

'ಸಂಸತ್ ಕಲಾಪಕ್ಕೆ ಅಡ್ಡಿ ಮಾಡುವಲ್ಲಿ ವಿರೋಧ ಪಕ್ಷಗಳ ಸದಸ್ಯರು ಪರಸ್ಪರ ಪೈಪೋಟಿಗೆ ಬಿದ್ದಿದ್ದಾರೆ. ಬಿಜೆಪಿ ವಿರೋಧಿ ಗುಂಪಿನ ನಾಯಕ ಎಂದು ಗುರುತಿಸಿಕೊಳ್ಳಲು ಈ ಪೈಪೋಟಿ ನಡೆಯುತ್ತಿದೆ ಎಂದು ಕೇಂದ್ರ ಸಚಿವ ಮುಖ್ತಾರ್ ಅಬ್ಬಾಸ್ ನಖ್ವಿ ಹೇಳಿದ್ದಾರೆ.

ಸುದ್ದಿ 2 ನಿಮಿಷ

'ಸಾಬರಮತಿ ಆಶ್ರಮದ ಆಧುನೀಕರಣ ಕಳವಳಕಾರಿ'

ಬೆಂಗಳೂರು: 1917ರಿಂದ 1930ರವರೆಗೂ ಮಹಾತ್ಮ ಗಾಂಧೀಜಿಯವರು ನೆಲೆಸಿ, ದೇಶದ ಸ್ವಾತಂತ್ರ್ಯ ಚಳವಳಿಗೆ ಶಕ್ತಿ ತುಂಬಿದ್ದ ಸಾಬರಮತಿ ಆಶ್ರಮವನ್ನು ಪ್ರಧಾನಿ ನರೇಂದ್ರ ಮೋದಿ ಅವರು 'ಆಧುನೀಕರಣ'ದ ಹೆಸರಿನಲ್ಲಿ ಬದಲಿಸಲು ಹೊರಟಿರುವುದು ಕಳವಳಕಾರಿ ಎಂದು ಕಾಂಗ್ರೆಸ್ ಮುಖಂಡ ಪ್ರೊ.ಬಿ.ಕೆ. ಚಂದ್ರಶೇಖರ್ ಹೇಳಿದ್ದಾರೆ.

'ಸಾಬರಮತಿ ಆಶ್ರಮದಲ್ಲಿರುವ ಸಣ್ಣ ಗುಡಿಸಲುಗಳು ಮತ್ತು ಕೆಲವು ಕಟ್ಟಡಗಳೇ ಐತಿಹಾಸಿಕವಾಗಿ ಮಹತ್ವ ಹೊಂದಿದವು' ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸರಳತೆಗೆ ಸಾಕ್ಷಿಯಾಗಿರುವ ಸಾಬರಮತಿ ಆಶ್ರಮವು ಮಹಾತ್ಮ ಗಾಂಧೀಜಿಯವರ 'ಸಂಪೂರ್ಣ ವಿಶ್ವ' ಆಗಿತ್ತು. ಅದು ಅಸ್ಪೃಶ್ಯತೆ ನಿರ್ಮೂಲನೆ, ಅಂತರ್ ಧರ್ಮೀಯ ಸೌಹಾರ್ದ, ಸತ್ಯ ಮತ್ತು ಅಹಿಂಸೆಯ ಸಂಕೇತದಂತೆ ಇದೆ ಎಂದು ಚಂದ್ರಶೇಖರ್ ಹೇಳಿದ್ದಾರೆ.



'ಗಾಂಧೀಜಿಯವರ ತತ್ವಕ್ಕೆ ವಿರುದ್ಧವಾದ ಹಿಂದುತ್ವ ಸಿದ್ಧಾಂತವನ್ನು ಪಾಲಿಸುವ ಮತ್ತು ಗಾಂಧಿವಾದದ ವಿರುದ್ಧ ಸಂಘರ್ಷ ನಡೆಸುತ್ತಿರುವ ವ್ಯಕ್ತಿಯ ನೇತೃತ್ವದ ಸರ್ಕಾರವು ಸಾಬರಮತಿ ಆಶ್ರಮವನ್ನು ವಿದೇಶಿ ಪ್ರವಾಸಿಗರಿಗಾಗಿ ಒಂದು ಪ್ರದರ್ಶನ ಸ್ಥಳವನ್ನಾಗಿ ಬದಲಿಸುವುದು ಸರಿಯೇ? ಆಶ್ರಮವನ್ನು ₹1,200 ಕೋಟಿ ವೆಚ್ಚದಲ್ಲಿ ಆಧುನೀಕರಿಸುವ ಯೋಜನೆಗೆ ಗಾಂಧೀಜಿ ಒಪ್ಪುತ್ತಿದ್ದರೆ? ಈ ಯೋಜನೆಯ ಕುರಿತು ಪ್ರಧಾನಿ ಮರು ಪರಿಶೀಲನೆ ನಡೆಸಿದರೆ ಮಹಾತ್ಮ ಗಾಂಧೀಜಿಯವರಿಗೆ ಗೌರವ ಸಲ್ಲಿಸಿದಂತಾಗುತ್ತದೆ' ಎಂದು ಪ್ರತಿಕ್ರಿಯಿಸಿದ್ದಾರೆ.

ಅನಧಿಕೃತ ಕೇಬಲ್: 1 ತಿಂಗಳ ಗಡುವು

ಬೆಂಗಳೂರು: ನಗರದ ಪಾದಚಾರಿ ಮಾರ್ಗ ಮತ್ತು ಬೀದಿಗಳಲ್ಲಿ ತೂಗಾಡುತ್ತಿರುವ ಎಲ್ಲ ಅನಧಿಕೃತ ಕೇಬಲ್‌ಗಳನ್ನು ತೆರವುಗೊಳಿಸಲು ಕೇಬಲ್ ಟಿ.ವಿ ಆಪರೇಟರ್ ಮತ್ತು ಇಂಟರ್‌ನೆಟ್ ಪೂರೈಕೆದಾರ ಕಂಪನಿಗಳಿಗೆ ಒಂದು ತಿಂಗಳ ಗಡುವಿನ ನೋಟಿಸ್ ನೀಡುವಂತೆ ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ವಕೀಲ ಎನ್.ಪಿ.ಅಮೃತೇಶ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಅನಧಿಕೃತ ಕೇಬಲ್ ತೆರವು ಕಾರ್ಯಾಚರಣೆ ಮುಂದುವರಿಸುವಂತೆ ತಿಳಿಸಿತು.

ಟಿ.ವಿ ಕೇಬಲ್ ಆಪರೇಟರ್‌ಗಳ ಸಂಘ, ವಿವಿಧ ಟೆಲಿಕಾಂ, ಇಂಟರ್‌ನೆಟ್ ಸೇವೆ ಪೂರೈಕೆದಾರ ಕಂಪನಿಗಳನ್ನು ಪ್ರತಿವಾದಿಯಾಗಿ ಸೇರಿಸಿಕೊಳ್ಳಲು ಅನುಮತಿ ಕೋರಿ ಮಧ್ಯಂತರ ಅರ್ಜಿಯನ್ನು(ಐ.ಎ) ಅಮೃತೇಶ್ ಸಲ್ಲಿಸಿದ್ದರು. ತಿದ್ದುಪಡಿ ಮಾಡಿದ ಅರ್ಜಿಯನ್ನು ಎರಡು ವಾರಗಳಲ್ಲಿ ಸಲ್ಲಿಸಲು ಪೀಠ ಅನುಮತಿ ನೀಡಿತು. ಪ್ರತಿವಾದಿಗಳಿಗೆ ನೋಟಿಸ್ ನೀಡಲು ಆದೇಶಿಸಿತು.

'ಅನಧಿಕೃತವಾಗಿ ಕೇಬಲ್‌ಗಳನ್ನು ತೂಗುಬಿಟ್ಟಿರುವವರು ತೆರವುಗೊಳಿಸಲು ಒಂದು ತಿಂಗಳ ಕಾಲಾವಕಾಶ ನೀಡಬಹುದು. ನೋಟಿಸ್ ನೀಡಿದ ಒಂದು ತಿಂಗಳ ಬಳಿಕ ಎಲ್ಲವನ್ನೂ ತೆಗೆದು ಹಾಕಲು ಕಾರ್ಯಾಚರಣೆ ತೀವ್ರಗೊಳಿಸಬೇಕು' ಎಂದು ತಿಳಿಸಿತು.

ಉತ್ತಮ ಉಪನ್ಯಾಸಕರು, ಪ್ರಾಂಶುಪಾಲರಿಗೆ ಪ್ರಶಸ್ತಿ

ಬೆಂಗಳೂರು: ಸರ್ಕಾರಿ, ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ 2020–21ನೇ ಶೈಕ್ಷಣಿಕ ಸಾಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 'ಉತ್ತಮ ಉಪನ್ಯಾಸಕರು, ಪ್ರಾಂಶುಪಾಲರು ಪ್ರಶಸ್ತಿ'ಗೆ ಪದವಿ ಪೂರ್ವಶಿಕ್ಷಣ ಇಲಾಖೆ ಅರ್ಜಿ ಆಹ್ವಾನಿಸಿದೆ. ಪ್ರಶಸ್ತಿ ಪ್ರದಾನ ಸಮಾರಂಭ ಶಿಕ್ಷಕರ ದಿನಾಚರಣೆಯ (ಸೆ. 5) ದಿನ ನಡೆಯಲಿದೆ.

ಪ್ರಶಸ್ತಿಗಾಗಿ ಉಪನ್ಯಾಸಕರು, ಪ್ರಾಂಶುಪಾಲರು ಜಿಲ್ಲಾಮಟ್ಟದಲ್ಲಿ ಉಪ ನಿರ್ದೇಶಕರ ನೇತೃತ್ವದಲ್ಲಿ ರಚಿಸಲಾಗುವ ಆಯ್ಕೆ ಸಮಿತಿಗೆ ಪ್ರಸ್ತಾವನೆ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಇದೇ 16 ಕೊನೆಯ ದಿನ. ಜಿಲ್ಲಾಮಟ್ಟದಲ್ಲಿ 23ರಂದು ಆಯ್ಕೆ ನಡೆಯಲಿದ್ದು, 27ರಂದು ರಾಜ್ಯಮಟ್ಟದಲ್ಲಿ ಆಯ್ಕೆ ನಡೆಯಲಿದೆ.

ಜಿಲ್ಲಾಮಟ್ಟದಲ್ಲಿ ಪ್ರಶಸ್ತಿಗೆ ಆಯ್ಕೆ ಮಾಡಲು ಉಪ ನಿರ್ದೇಶಕರು ತಮ್ಮ ನೇತೃತ್ವದಲ್ಲಿ ಆಯಾ ಜಿಲ್ಲೆಯ ಸರ್ಕಾರಿ, ಅನುದಾನಿತ ಪದವಿ ಪೂರ್ವ ಕಾಲೇಜುಗಳ ಹಿರಿಯ ಇಬ್ಬರು ಪ್ರಾಂಶುಪಾಲರು ಮತ್ತು ಇಬ್ಬರು ಹಿರಿಯ ಉಪನ್ಯಾಸಕರ ಸಮಿತಿ ರಚಿಸಬೇಕು. ಮಾನದಂಡಗಳನ್ನು ಅನುಸರಿಸಿ, ಒಬ್ಬ ಉಪನ್ಯಾಸಕರು, ಒಬ್ಬ ಪ್ರಾಂಶುಪಾಲರನ್ನು ಆಯ್ಕೆ ಮಾಡಬೇಕು ಎಂದು ಇಲಾಖೆಯ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಸೊಪ್ಪು ದುಬಾರಿ; ತರಕಾರಿ ದರ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತೀಚೆಗೆ ಸುರಿದ ಮುಂಗಾರಿನಿಂದಾಗಿ ಕೆಲ ತರಕಾರಿಗಳು ಹಾಗೂ ಸೊಪ್ಪಿನ ದರಗಳು ದಿಢೀರ್ ಏರಿಕೆ ಕಂಡಿವೆ. 'ಮಳೆ ಬಿಡುವು ನೀಡಿದರೆ ದರಗಳು ಸ್ಥಿರವಾಗಿ ಇರಲಿದ್ದು, ಒಂದು ವೇಳೆ ಭಾರಿ ಮಳೆ ಮುಂದುವರಿದರೆ ದರ ಮತ್ತಷ್ಟು ಏರಲಿದೆ' ಎಂದು ವ್ಯಾಪಾರಿಗಳು ತಿಳಿಸಿದ್ದಾರೆ.

ಕೆ.ಜಿ.ಗೆ ₹40ರಂತೆ ಮಾರಾಟವಾಗುತ್ತಿದ್ದ ಕ್ಯಾರೆಟ್ ದರ ಎರಡು ವಾರಗಳಿಂದ ಏರಿಕೆ ಕಂಡಿದ್ದು, ಸದ್ಯ ಕೆ.ಜಿ.ಗೆ ₹85ರವರೆಗೆ ಮಾರಾಟ ಆಗುತ್ತಿದೆ. ಬದನೆ, ಬೆಂಡೆ, ಈರುಳ್ಳಿ ಹಾಗೂ ಹೂಕೋಸು ದರಗಳು ತುಸು ಏರಿವೆ. ಬೀನ್ಸ್, ಎಲೆಕೋಸು, ಮೂಲಂಗಿ, ಟೊಮೆಟೊ ಸೇರಿದಂತೆ ಹಲವು ತರಕಾರಿಗಳ ದರ ಕಡಿಮೆ ಇದೆ. ಹಣ್ಣಿನ ದರಗಳು ಅಷ್ಟೇನೂ ಏರಿಲ್ಲ.

'ಜುಲೈ ಮೊದಲ ವಾರದಿಂದ ಬೆಂಗಳೂರು ಹಾಗೂ ಸುತ್ತಮುತ್ತಲ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಿದೆ. ಇದರಿಂದ ತೋಟದಲ್ಲಿದ್ದ ತರಕಾರಿ ಮತ್ತು ಸೊಪ್ಪಿಗೆ ಹಾನಿಯಾಗಿದೆ. ಹಾಗಾಗಿ, ಎರಡು ವಾರಗಳಿಂದ ದರ ದಿಢೀರ್ ಏರಿದೆ' ಎಂದು ತರಕಾರಿ ಮತ್ತು ಸೊಪ್ಪಿನ ವ್ಯಾಪಾರಿ ಕುಮಾರ್ ತಿಳಿಸಿದರು.

'ಈ ವಾರದಲ್ಲಿ ಆಷಾಢ ಮುಗಿಯಲಿದೆ. ಬಳಿಕ ಸಾಲು ಸಾಲು ಹಬ್ಬಗಳು ಬರಲಿದ್ದು, ಆ ಸಮಯದಲ್ಲಿ ದರಗಳು ಸಾಮಾನ್ಯವಾಗಿ ಹೆಚ್ಚಳವಾಗುತ್ತವೆ. ಈಗ ಮಳೆ ಕಡಿಮೆ ಆಗಿರುವುದರಿಂದ ಮುಂದಿನ ವಾರದಲ್ಲಿ ದರಗಳು ಕಡಿಮೆಯಾದರೂ ಆಗಬಹುದು' ಎಂದು ವಿವರಿಸಿದರು.

ಸೊಪ್ಪುಗಳು ದುಬಾರಿ: ಪ್ರತಿ ಕಟ್ಟು ಸೊಪ್ಪಿನ ದರ ₹10 ಆಸುಪಾಸಿನಲ್ಲಿತ್ತು. ಈಗ ಎಲ್ಲ ಸೊಪ್ಪುಗಳ ದರಗಳೂ ಹೆಚ್ಚಾಗಿವೆ. ಕೊತ್ತಂಬರಿ, ಸಬ್ಬಕ್ಕಿ ಹಾಗೂ ಮೆಂತ್ಯೆ ಸೊಪ್ಪು ಪ್ರತಿ ಕಟ್ಟಿಗೆ ಚಿಲ್ಲರೆ ದರ ₹20ರಷ್ಟಿದೆ. ಪಾಲಕ್ ಮತ್ತು ದಂಟಿನ ಸೊಪ್ಪಿನ ದರಗಳೂ ದುಪ್ಪಟ್ಟಾಗಿದೆ.

ಹಣ್ಣುಗಳು	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ಸೇಬು	120	130
ಮೂಸಂಬಿ	70	72
ಕಿತ್ತಳೆ	90	100
ದ್ರಾಕ್ಷಿ	100	138
ಮಾವು	80	122
ಸಪೋಟ	50	58
ಪಪ್ಪಾಯ	30	40
ಕಲ್ಲಂಗಡಿ	20	36

ದರಪಟ್ಟಿ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ತರಕಾರಿ	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ಬೆಳ್ಳುಳ್ಳಿ	80	158
ಶುಂಠಿ	60	70
ಕ್ಯಾರೆಟ್	80	84
ಬದನೆ	50	59
ಬೀನ್ಸ್	30	44
ಬೆಂಡೆಕಾಯಿ	30	44
ಹೂಕೋಸು	30	48
ಈರುಳ್ಳಿ	25	35
ಆಲೂಗಡ್ಡೆ	25	32
ಎಲೆಕೋಸು	15	22
ಮೂಲಂಗಿ	18	32
ಟೊಮೆಟೊ	15	18
ಸೊಪ್ಪು	**ಚಿಲ್ಲರೆ (ಕಟ್ಟಿಗೆ)**	**ಹಾಪ್‌ಕಾಮ್ಸ್ (ಕೆ.ಜಿ.ಗೆ)**
ಕೊತ್ತಂಬರಿ	25	80
ಸಬ್ಬಕ್ಕಿ	20	62
ಮೆಂತ್ಯೆ	20	94
ದಂಟು	15	67
ಪಾಲಕ್	15	56

'ಧಾರಾಕಾರ ಮಳೆಗೆ ಸೊಪ್ಪು ಬೇಗ ಹಾಳಾಗುತ್ತದೆ. ಹಾಗಾಗಿ ಮಾರುಕಟ್ಟೆಗೆ ಕಡಿಮೆ ಪ್ರಮಾಣದ ಸೊಪ್ಪು ಪೂರೈಕೆ ಆಗುತ್ತಿದೆ. ಹಾಗಾಗಿ, ಮಳೆಗಾಲದಲ್ಲಿ ಸೊಪ್ಪಿಗೆ ಬೇಡಿಕೆ ಹೆಚ್ಚು. ಇತ್ತೀಚಿನ ಮಳೆಯ ಕಾರಣದಿಂದ ಸೊಪ್ಪಿನ ದರಗಳು ಎರಡು ಪಟ್ಟು ಹೆಚ್ಚಾಗಿವೆ' ಎಂದು ಸೊಪ್ಪಿನ ವ್ಯಾಪಾರಿ ಅಮರೇಶ್ ಹೇಳಿದರು.

ಐಸಿಎಆರ್–ರಾಷ್ಟ್ರೀಯ ಹೈನುಗಾರಿಕೆ ಸಂಶೋಧನಾ ಸಂಸ್ಥೆ

ದಕ್ಷಿಣ ವಲಯ ನಿಲ್ದಾಣ, ಹೊಸೂರು ರಸ್ತೆ, ಆಡುಗೋಡಿ ಅಂಚೆ, ಬೆಂಗಳೂರು–560 030.

ಎಫ್.ನಂ.2–13/ಸಿಡಿಎನ್/ಎಲ್‌ಆರ್‌ಸಿ/ಎನ್‌ಡಿಆರ್‌ಐ/2020–21/ ದಿನಾಂಕ: 31–07–2021

ಹೆಚ್ಚುವರಿ ಜಾನುವಾರುಗಳ ವಿಲೇವಾರಿಗಳಿಗಾಗಿ ಬಿಡ್‌ಗಳ ಆಹ್ವಾನ

ನೊಂದಾಯಿತ ಗೋಶಾಲೆಗಳಿಂದ ಸ್ವೀಕೃತ ಆಫರ್‌ಗಳ ಆಧಾರದ ಮೇರೆಗೆ ಸದರಿ ಸಂಸ್ಥೆಯ 61 ಜಾನುವಾರುಗಳನ್ನು ವಿಲೇವಾರಿ ಮಾಡಲು ಉದ್ದೇಶಿಸಲಾಗಿದೆ. ಸದರಿ ಜಾನುವಾರುಗಳನ್ನು ಖರೀದಿಸಲು ಆಸಕ್ತಿಯುಳ್ಳ ಗೋಶಾಲೆಗಳು ತಮ್ಮ ಆಫರ್‌ಗಳನ್ನು ದಿನಾಂಕ 21–08–2021 ರೊಳಗೆ ಸಲ್ಲಿಸುವುದು. ಆಸಕ್ತಿಯುಳ್ಳ ಬಿಡ್‌ದಾರರು ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು www.ndri.res.in ವೆಬ್‌ಸೈಟ್‌ಗೆ ಭೇಟಿ ನೀಡಬೇಕೆಂದು ಕೋರಲಾಗಿದೆ.

ಸಹಾಯಕ ಆಡಳಿತಾಧಿಕಾರಿ

ಫೋನ್ ನಂ. 080–22631405 ಇ–ಮೇಲ್: aaondri@gmail.com

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕೆಂಗೇರಿ ವಿಭಾಗ, 2ನೇ ಮುಖ್ಯ ರಸ್ತೆ, ಜಗಜ್ಯೋತಿ ಬಡಾವಣೆ, ಬೆಂಗಳೂರು.

ಸಂಖ್ಯೆ: ಕಾಅ/ಕೆಂಗೇರಿ/ಟೆಂಡರ್/05/2021-22 ದಿನಾಂಕ: 02-08-2021

ಟೆಂಡರ್ ಮುಂದೂಡಿಕೆ ಪ್ರಕಟಣೆ–2

ಉಲ್ಲೇಖ: 1. ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: ಕಾಅ/ಕೆಂಗೇರಿ/ಟೆಂಡರ್/05/2021-22 ದಿನಾಂಕ: 06-07-2021

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ರೀತ್ಯಾ ಟೆಂಡರ್ ಕರೆಯಲಾಗಿದ್ದು, ತಾಂತ್ರಿಕ ಕಾರಣಗಳಿಂದ ಕಾಮಗಾರಿಗಳ ಟೆಂಡರ್‌ನ್ನು ಮುಂದೂಡಲಾಗಿರುತ್ತದೆ. ಕಾರಣಾಂತರಗಳಿಂದ ಟೆಂಡರ್‌ನ ದಿನಾಂಕಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದೆ. ಉಳಿದಂತೆ ಇನ್ನಾವುದೇ ಬದಲಾವಣೆಗಳಿರುವುದಿಲ್ಲ.

ಪರಿಷ್ಕೃತ ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 09–08–2021ರ ಸಂಜೆ 4:00 ಗಂಟೆಯವರೆಗೆ. 2) ಬಿಡ್‌ಗಳನ್ನು ತೆರೆಯುವ ದಿನಾಂಕ: 10–08–2021ರ ಸಂಜೆ 4:30 ಗಂಟೆಗೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಬೃಬೆಂಮಪಾ.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಯುವಕ ಸಾವು

ಗೋಕರ್ಣ: ಇಲ್ಲಿಯ ಪ್ಯಾರಡೈಸ್ ಕಡಲತೀರದಲ್ಲಿ ಮಂಗಳವಾರ ಈಜಲು ಸಮುದ್ರಕ್ಕೆ ಇಳಿದ ಬೆಂಗಳೂರಿನ ಅದ್ವೈತ್ ದೀಬಬ್ ಜೈನ್ (20) ಮುಳುಗಿ ಮೃತಪಟ್ಟಿದ್ದಾರೆ.

ಮುಂಬೈಯ ಕೆ.ಶಿಮೋನೆ ಬರ್ಡೆ (23) ಎಂಬುವವರನ್ನು ನೀರಿನಿಂದ ಮೇಲೆಳೆದು ತರಲಾಗಿದೆ.

'ಬಿಡಿಎ: ಕಡತ ವಿಲೇವಾರಿಗೆ ಕಾಲಮಿತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಭೂಮಿ ನೀಡಿರುವ ರೈತರಿಗೆ ಸಂಬಂಧಿಸಿದ ಕಡತ ವಿಲೇವಾರಿಯಲ್ಲಿ ವಿಳಂಬವಾಗದು. ಈ ಕಡತಗಳನ್ನು ಆದ್ಯತೆ ಮೇರೆಗೆ ವಿಲೇವಾರಿ ಮಾಡಲು ಕಾಲಮಿತಿ ನಿಗದಿಪಡಿಸಲಾಗುವುದು' ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಯುಕ್ತ ರಾಜೇಶ್ ಗೌಡ ಭರವಸೆ ನೀಡಿದರು.

ಈ ಬಡಾವಣೆಯ ಭೂಸ್ವಾಧೀನ ಸಮಸ್ಯೆಗಳನ್ನು ಇತ್ಯರ್ಥ ಮಾಡುವ ಸಲುವಾಗಿ ರೈತರ ಮುಖಂಡರ ಜೊತೆ ಮಂಗಳವಾರ ಏರ್ಪಡಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು. ಸಭೆಯಲ್ಲಿ ರೈತರು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು.

'ಭೂಸ್ವಾಧೀನಕ್ಕೆ ಸಂಬಂಧಿಸಿದ ಕಡತಗಳ ವಿಲೇವಾರಿಗೆ ಬಿಡಿಎ ಅಧಿಕಾರಿಗಳು ಸುಮ್ಮನೆ ವಿಳಂಬ ಮಾಡುತ್ತಿದ್ದಾರೆ. ದಾಖಲೆಗಳನ್ನು ನೀಡುವಂತೆ ಒತ್ತಾಯಿಸಿ ಅನಗತ್ಯವಾಗಿ ಅಲೆದಾಡಿಸುತ್ತಿದ್ದಾರೆ. ಸಣ್ಣ ಪುಟ್ಟ ಕೆಲಸಗಳಿಗೂ ಹತ್ತಾರು ದಿನಗಳವರೆಗೆ ಕಾಯಿಸುತ್ತಿದ್ದಾರೆ. ಇಂತಹ ಸಮಸ್ಯೆಗಳನ್ನು ನೀಗಿಸಿ ನಮಗೆ ನ್ಯಾಯ ಒದಗಿಸಬೇಕು' ಎಂದು ರೈತರ ಪರವಾಗಿ ಮುಖಂಡ ಚನ್ನಪ್ಪ ಗಮನ ಸೆಳೆದರು.

ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್, 'ಕಂದಾಯ ನಿವೇಶನಗಳಲ್ಲಿ 2012ಕ್ಕೆ ಮುನ್ನ ನಿರ್ಮಾಣವಾಗಿರುವ ಎಲ್ಲಾ ಮನೆಗಳನ್ನು 38 ಡಿ ಅಡಿಯಲ್ಲಿ ಸಕ್ರಮ ಮಾಡಲಾಗುತ್ತದೆ. ಇದಕ್ಕೆ ಈ ಹಿಂದೆ ನಿಗದಿಪಡಿಸಲಾಗಿದ್ದ ಶುಲ್ಕದಲ್ಲಿ ಕಡಿತಗೊಳಿಸುವ ಚಿಂತನೆ ಇದೆ. ಪ್ರಾಧಿಕಾರದ ಆಡಳಿತ ಮಂಡಳಿಯ ಮುಂದಿನ ಸಭೆಯಲ್ಲಿ ಈ ಕುರಿತು ಅಂತಿಮ ನಿರ್ಧಾರ ಕೈಗೊಳ್ಳಲಿದ್ದೇವೆ' ಎಂದು ಭರವಸೆ ನೀಡಿದರು.

'ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ನಿರ್ಮಾಣಕ್ಕೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದೇ ಕೆಲವೆಡೆ ತೊಂದರೆ ಎದುರಾಗಿದೆ. ಇಂತಹ ಪ್ರದೇಶಗಳಲ್ಲಿ ಶೀಘ್ರವೇ ಸರ್ವೆ ನಡೆಸಿ, ಅಲ್ಲಿರುವ ಮನೆಗಳು ಮತ್ತು ಖಾಲಿ ಜಾಗಗಳಿಗೆ ಯೋಗ್ಯ ಪರಿಹಾರ ಒದಗಿಸಲು ಕ್ರಮಕೈಗೊಳ್ಳಲಿದ್ದೇವೆ' ಎಂದರು.

'ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಳ್ಳುವ ಭೂಮಿಗೆ ಪರ್ಯಾಯವಾಗಿ ಬದಲಿ ನಿವೇಶನವನ್ನು ನೀಡುವ ಕುರಿತು ಸರ್ಕಾರಕ್ಕೆ ಪತ್ರ ಬರೆಯಲಿದ್ದೇವೆ' ಎಂದು ತಿಳಿಸಿದರು.

ಮುಖಂಡರಾದ ಕೃಷ್ಣಪ್ಪ, ಮೋಹನ್ ಸೇರಿದಂತೆ 50ಕ್ಕೂ ಹೆಚ್ಚು ರೈತರು ಸಭೆಯಲ್ಲಿ ಭಾಗವಹಿಸಿದರು. ಬಿಡಿಎ ಕಾರ್ಯದರ್ಶಿ ವಾಸಂತಿ ಅಮರ್, ಉಪ ಆಯುಕ್ತರಾದ ಸೌಜನ್ಯಾ, ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ ಮತ್ತು ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಸಮಾಜ ಸೇವಕ ಶಿವಲಿಂಗೇಗೌಡ ಹಾಗೂ ವೆಂಕಟರಂಗಯ್ಯ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ರೋಟರಿ ಸಂಸ್ಥೆಯ ಕೆ.ಟಿ.ನಿರಂಜನ್, ಸತೀಶ್, ಜಿತೇಂದ್ರ ಅಣೇಜ, ಭಾವನಾ ಸತೀಶ್, ಗೀತಾಮಣಿ, ಸುಮಾ ಹಾಗೂ ಇತರರು ಇದ್ದಾರೆ.

ವಿಶ್ವನೀಡಂ ರೋಟರಿ: ಪದಾಧಿಕಾರಿಗಳ ಪದಗ್ರಹಣ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ರೋಟರಿ ಸಂಸ್ಥೆಯು ನಿಸ್ವಾರ್ಥ ಸೇವೆಯ ಮೂಲಕ ಸಾಮಾಜಿಕ, ಆರೋಗ್ಯ, ಶೈಕ್ಷಣಿಕ, ಪ್ರಗತಿಪರವಾದ ಸಮಾಜದ ನಿರ್ಮಾಣಕ್ಕೆ ಬದ್ಧವಾಗಿದೆ' ಎಂದು ರೋಟರಿ ಬೆಂಗಳೂರು ಜಿಲ್ಲಾ ಸಮಿತಿ ನಿರ್ದೇಶಕ ಕೆ.ಟಿ.ನಿರಂಜನ್ ತಿಳಿಸಿದರು.

ಹೇರೋಹಳ್ಳಿಯಲ್ಲಿ ನಡೆದ ರೋಟರಿ ಬೆಂಗಳೂರು ವಿಶ್ವನೀಡಂ ಕ್ಲಬ್‌ನ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೋವಿಡ್ ಪರಿಸ್ಥಿತಿಯಲ್ಲಿ ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳು ಶಿಕ್ಷಣ ಪಡೆಯಲು ಪರದಾಡುತ್ತಿದ್ದರು. ಇದನ್ನು ಮನಗಂಡು ಸಂಸ್ಥೆಯು ಉಚಿತವಾಗಿ ಟ್ಯಾಬ್ ವಿತರಿಸಿ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟಿದೆ' ಎಂದರು.

ನಿಯೋಜಿತ ಜಿಲ್ಲಾ ಪಾಲಕ ಜಿತೇಂದ್ರ ಅಣೇಜ,'ಎಲ್ಲರೂ ಒಗ್ಗೂಡಿ ಸಮಾಜ ಕಟ್ಟುವ ಕೆಲಸ ಮಾಡಬೇಕು. ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಪ್ರಾತಿನಿಧ್ಯ ಸಿಗಬೇಕು' ಎಂದು ಹೇಳಿದರು.

ವಿಶ್ವನೀಡಂ ರೋಟರಿಯ ನೂತನ ಅಧ್ಯಕ್ಷ ಸತೀಶ್,'ಹಿಂದುಳಿದ ಹಾಗೂ ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳನ್ನು ಗುರುತಿಸಿ, ಶುದ್ಧ ಕುಡಿಯುವ ನೀರಿನ ಘಟಕ, ಶೌಚಾಲಯ ಸೇರಿದಂತೆ ಮೂಲ ಸೌಕರ್ಯಗಳನ್ನು ಕಲ್ಪಿಸಲು ಮೊದಲ ಆದ್ಯತೆ ನೀಡಲಾಗುವುದು' ಎಂದರು.

ನೂತನ ಪದಾಧಿಕಾರಿಗಳಾಗಿ ಡಿ.ಎಂ.ಮಲ್ಲಿಕಾರ್ಜುನ್ (ಕಾರ್ಯದರ್ಶಿ), ಡಿ.ಕೆ. ಮೂರ್ತಿ (ಖಜಾಂಚಿ), ಓಂಕಾರ್ ಮೂರ್ತಿ (ಉಪಾಧ್ಯಕ್ಷ) ಹಾಗೂ ಶಶಿಧರ್, ಚಂದ್ರಶೇಖರ್, ಮಲ್ಲಿಕಾರ್ಜುನ್, ಪರಮೇಶ್ ಗೌಡ, ಭರಣಿ ನಿರಂಜನ್, ಯತೀಂದ್ರ, ರಮಣ, ರವಿಕುಮಾರ್, ಭಾವನಾ ಸತೀಶ್, ಗೀತಾಮಣಿ, ಸುಮ, ಶಶಿಧರ್, ಕವಿತಾ ಓಂಕಾರ್ ಅಧಿಕಾರ ಸ್ವೀಕರಿಸಿದರು.

ಪೊಲೀಸರಿಂದಲೇ ಅತಿಕ್ರಮಣ: ವರದಿ ಕೇಳಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾದಚಾರಿ ಮಾರ್ಗ ಅತಿಕ್ರಮಣ ಮಾಡಿ ವಾಹನ ನಿಲುಗಡೆ ಮಾಡುವವರ ವಿರುದ್ಧ ಕ್ರಿಮಿನಲ್ ಕಾನೂನು ಜಾರಿಗೊಳಿಸುವಂತೆ ನೀಡಿದ್ದ ಆದೇಶ ಪಾಲನೆ ಮಾಡಿರುವ ಬಗ್ಗೆ ವರದಿ ಸಲ್ಲಿಸುವಂತೆ ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಲೆಟ್ಜ್‌ಕಿಟ್ ಫೌಂಡೇಷನ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿತು.

ಪಾದಚಾರಿ ಮಾರ್ಗದ ಮೇಲೆ ವಾಹನ ನಿಲುಗಡೆ ನಿಷೇಧವಿದೆ. ಆದರೂ, ಪೊಲೀಸರೇ ಅತಿಕ್ರಮಣ ಮಾಡಿಕೊಂಡಿದ್ದಾರೆ. ಮೋಟಾರು ವಾಹನ ಕಾಯ್ದೆ, ಕರ್ನಾಟಕ ಸಂಚಾರ ನಿಯಂತ್ರಣ ಕಾಯ್ದೆ ಮತ್ತು ಐಪಿಸಿ ಅಡಿಯಲ್ಲಿ ಇವರ ವಿರುದ್ಧ ಕ್ರಿಮಿನಲ್ ಕಾನೂನು ಜಾರಿಗೊಳಿಸಲಾಗಿದೆಯೇ ಎಂಬುದನ್ನು ಖಚಿತಪಡಿಸುವಂತೆ ಬಿಬಿಎಂಪಿಗೆ ಪೀಠ ತಿಳಿಸಿತು.

ಪಾದಚಾರಿ ಮಾರ್ಗಗಳನ್ನು ಪೊಲೀಸರು, ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಮತ್ತು ಬೆಸ್ಕಾಂ ಆಕ್ರಮಿಸಿಕೊಂಡಿವೆ ಎಂದು ಆರೋಪಿಸಿರುವ ಅರ್ಜಿದಾರರು, ಜಯನಗರ ಠಾಣೆ ಎದುರಿನ ಪಾದಚಾರಿ ಮಾರ್ಗದಲ್ಲಿ ಪೊಲೀಸರು ನಿಲ್ಲಿಸಿರುವ ವಾಹನಗಳ ಚಿತ್ರಗಳನ್ನು ಪೀಠಕ್ಕೆ ಸಲ್ಲಿಸಿದರು.

ಈ ಹಿಂದಿನ ಆದೇಶದ ಬಗ್ಗೆ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ತಿಳಿವಳಿಕೆ ಮೂಡಿಸಲಾಗಿತ್ತು ಎಂದು ಬಿಬಿಎಂಪಿ ಪ್ರತಿನಿಧಿಸುವ ವಕೀಲರು ಮೆಮೊ ಸಲ್ಲಿಸಿದರು. ಸಂಚಾರ ಪೊಲೀಸರು ಮತ್ತು ಬಿಬಿಎಂಪಿ ಅಧಿಕಾರಿಗಳು ತಕ್ಷಣವೇ ಸ್ಥಳಕ್ಕೆ ಭೇಟಿ ನೀಡಿ ಕ್ರಮ ಕೈಗೊಳ್ಳಬೇಕು. ಆ.23ರೊಳಗೆ ವರದಿ ಸಲ್ಲಿಸಬೇಕು ಎಂದು ಪೀಠ ಸೂಚನೆ ನೀಡಿತು.

ಗೂಡ್‌ಶೆಡ್ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧ

ಬೆಂಗಳೂರು: ನಗರದ ಗೂಡ್‌ಶೆಡ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಆರಂಭವಾಗಿದ್ದು, ಈ ರಸ್ತೆಯಲ್ಲಿ ನಾಳೆಯಿಂದ (ಆ. 5) ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಈ ಬಗ್ಗೆ ನಗರ ಕಮಿಷನರ್ ಕಮಲ್ ಪಂತ್ ಅವರು ಮಂಗಳವಾರ ಆದೇಶ ಹೊರಡಿಸಿದ್ದಾರೆ.

'ಚಿಕ್ಕಪೇಟೆ ಸಂಚಾರ ಠಾಣೆ ವ್ಯಾಪ್ತಿಯ ಗೂಡ್‌ಶೆಡ್ ರಸ್ತೆಯಲ್ಲಿ (ಕೆ.ಆರ್.ಮಾರುಕಟ್ಟೆ ಮೇಲ್ಸೇತುವೆಯ ಡಾ. ಬಿ.ಆರ್. ಅಂಬೇಡ್ಕರ್ ಡೌನ್‌ರ್‍ಯಾಂಪ್‌ನಿಂದ ಡಾ. ಟಿಸಿಎಂ ರಾಯನ್ ರಸ್ತೆವರೆಗೆ) ಹಗಲು ಹಾಗೂ ರಾತ್ರಿ ಪಾಳಿಯಲ್ಲಿ ಕಾರ್ಮಿಕರು ವೈಟ್ ಟಾಪಿಂಗ್ ಕೆಲಸ ಮಾಡಲಿದ್ದಾರೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಕಾಮಗಾರಿಗೆ ತೊಂದರೆ ಆಗಬಾರದೆಂಬ ಕಾರಣಕ್ಕೆ ಗೂಡ್‌ಶೆಡ್ ರಸ್ತೆಯಲ್ಲಿ ಎಲ್ಲ ಮಾದರಿ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ' ಎಂದೂ ಉಲ್ಲೇಖಿಸಲಾಗಿದೆ.

ಮಾರ್ಗ ಬದಲಾವಣೆ: 'ಗೂಡ್‌ಶೆಡ್ ರಸ್ತೆಯಲ್ಲಿ ಸಂಚರಿಸುತ್ತಿದ್ದ ವಾಹನಗಳು, ಮೈಸೂರು ರಸ್ತೆಯ ಬಾಡಿ ಬಿಲ್ಡರ್ ಜಂಕ್ಷನ್, ಸಿರ್ಸಿ ಜಂಕ್ಷನ್, ಜೆ.ಜೆ.ನಗರ ಜಂಕ್ಷನ್, ಬಿನ್ನಿಮಿಲ್ ಟ್ಯಾಂಕ್‌ಬಂಡ್ ರಸ್ತೆ, ಬಾಳೆಕಾಯಿ ಮಂಡಿ ಜಂಕ್ಷನ್ ಮೂಲಕ ಹೋಗಬಹುದು' ಎಂದೂ ಆದೇಶದಲ್ಲಿ ಹೇಳಲಾಗಿದೆ.

ನಿಧನ ವಾರ್ತೆ

ಸೋಮಸುಂದರಯ್ಯ

ಬೆಂಗಳೂರು: ಪ್ರಜಾವಾಣಿಯ ನಿವೃತ್ತ ಉದ್ಯೋಗಿ ಎಸ್.ವಿ.ಸೋಮಸುಂದರಯ್ಯ (88) ಅವರು ನಗರದ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು. ಹನುಮಂತನಗರದಲ್ಲಿ ವಾಸವಿದ್ದ ಇವರಿಗೆ ಪತ್ನಿ, ಪುತ್ರ ಇದ್ದಾರೆ.

ಸುಮನಹಳ್ಳಿ ಚಿತಾಗಾರದಲ್ಲಿ ಬುಧವಾರ ಮಧ್ಯಾಹ್ನ 12 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

citibank Citibank N. A.,

ಸಿಟಿಬ್ಯಾಂಕ್ ಎನ್. ಎ. ನಂ. 5, ಮೊದಲ ಮಹಡಿ, ರಂಗ ಟವರ್ಸ್, ಎಂ.ಜಿ ರಸ್ತೆ, ಬೆಂಗಳೂರು

ಹರಾಜು ಮಾರಾಟ (ಸರ್ಫೇಸಿ ಆಕ್ಟ್, 2002ರ ಅನ್ವಯ)

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್ ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 (ಸರ್ಫೇಸಿ ಆಕ್ಟ್)ನ ನಿಯಮ 5,6,7,8 ಮತ್ತು 9ನ್ನು ಓದಿಕೊಂಡಂತೆ, ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್ ನಿಯಮ 2002)ರ ಅನ್ವಯ ಬ್ಯಾಂಕಿಗೆ ಅಡಮಾನ ಮಾಡಿರುವ ಸ್ಥಿರಾಸ್ತಿಗಳ ಮಾರಾಟ. ಆದಾಗ್ಯೂ, ಬ್ಯಾಂಕಿನ ಅಧಿಕೃತ ಅಧಿಕಾರಿಯವರು ಸರ್ಫೇಸಿ ಆಕ್ಟ್‌ನ ಸೆಕ್ಷನ್ 13(2)ರ ಅಡಿಯಲ್ಲಿ ಡಿಮ್ಯಾಂಡ್ ನೋಟೀಸನ್ನು ಜಾರಿಮಾಡಿ ತದನಂತರ ಸರ್ಫೇಸಿ ಆಕ್ಟ್‌ನ ಸೆಕ್ಷನ್ 13(12)ರ ಅಡಿಯಲ್ಲಿ ಸಿಟಿಬ್ಯಾಂಕಿಗೆ ಅಡಮಾನ ಮಾಡಿರುವ ಆಸ್ತಿಗಳನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ. ಸರ್ಫೇಸಿ ಆಕ್ಟ್‌ನ ಸೆಕ್ಷನ್ 13(4) ಮತ್ತು 14(1)ರ ಅನ್ವಯ ಕೆಳಸಹಿದಾರರು ಅಧಿಕೃತ ಅಧಿಕಾರಿಯವರ ಅಧಿಕಾರವನ್ನು ಚಲಾಯಿಸಿ ಕೆಳಗೆ ಸೂಚಿಸಿರುವ ಆಸ್ತಿಗಳನ್ನು ಕೆಳಕಂಡ ಸ್ಥಳ ಮತ್ತು ಸಮಯದಲ್ಲಿ ದಿನಾಂಕ 09.09.2021 ರಂದು ಮಾರಾಟ ಮಾಡಲು ನಿರ್ಧರಿಸಿರುತ್ತಾರೆ.

ಮಾರಾಟದ ವಿವರ

ಕ್ರ. ಸಂ.	ಸಾಲಗಾರರ ಹೆಸರು, ಸಾಲದ ಖಾತೆಯ ಹೆಸರು ಆಸ್ತಿಯ ವಿವರ ಮತ್ತು ಮೀಸಲು ಬೆಲೆ	ಭದ್ರತಾ ಮೊತ್ತ ಮತ್ತು ಸೆಕ್ಯೂರ್ಡ್ ಕ್ರೆಡಿಟರ್‌ರವರಿಗೆ ತಿಳಿದಿರುವ ಋಣಭಾರಗಳ ವಿವರ	ಹರಾಜು ಮಾರಾಟದ ಸ್ಥಳ ಮತ್ತು ಸಮಯ
1.	ಶ್ರೀ ರಮೇಶ್ ಎಲ್ ಲೋನ್ ಅಕೌಂಟ್ ನಂ. 328486 ಕೊಡಿಗೆಹಳ್ಳಿ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಹಳೆ ಸಿಎಂಸಿ ಖಾತಾ ನಂ. 685/1, ಅಸೆಸ್‌ಮೆಂಟ್ ನಂ. 688/1162, ಹಾಲಿ ಬಿಬಿಎಂಪಿ ಖಾತಾ ನಂ. 1967/688/1162, ಹಾಲಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿರುವ ವಸತಿ ಆಸ್ತಿಯ ನಿವೇಶನ ನಂ. 01, ವಸತಿ ಉದ್ದೇಶಕ್ಕಾಗಿ ಪರಿವರ್ತಿತ ಸರ್ವೇ ನಂ. 185/2ಬಿ2, (ದಿನಾಂಕ 22.07.1993ರ ಆದೇಶ ನಂ. BDIS.ALN.SR (N)73/89-90ರಂತೆ ಪರಿವರ್ತಿತವಾಗಿದೆ) ಅಳತೆ ಪೂರ್ವದಿಂದ ಪಶ್ಚಿಮಕ್ಕೆ: 60 ಅಡಿ, ಮತ್ತು ಉತ್ತರದಿಂದ ದಕ್ಷಿಣಕ್ಕೆ: 40 ಅಡಿ, ಒಟ್ಟು ಅಳತೆ 2400 ಚದರ ಅಡಿ ಈ ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ಖಾಸಗಿ ಆಸ್ತಿ, ಪಶ್ಚಿಮಕ್ಕೆ: 30 ಅಡಿ ರಸ್ತೆ, ಉತ್ತರಕ್ಕೆ: ಖಾಸಗಿ ಆಸ್ತಿ, ದಕ್ಷಿಣಕ್ಕೆ: ನಿವೇಶನ ನಂ. 02. ಮೀಸಲು ಬೆಲೆ ರೂ.1,44,00,000/-	ರೂ.2,35,23,817/- 30.07.2021 ರಂತೆ ಇಎಂಡಿ. ರೂ.14,40,000/- ಆಸ್ತಿ ವೀಕ್ಷಣೆ ದಿನಾಂಕ : 16.08.2021 ಬೆಳಿಗ್ಗೆ 10.00 ಘಂಟೆಯಿಂದ ಮಧ್ಯಾಹ್ನ 2.00 ಘಂಟೆವರೆಗೆ	ಸಿಟಿಬ್ಯಾಂಕ್ ಎನ್.ಎ. 1ನೇ ಮಹಡಿ, ರಂಗ ಟವರ್ಸ್, ನಂ. 5, ಎಂ.ಜಿ ರಸ್ತೆ, ಬೆಂಗಳೂರು 09.09.2021ರ ಬೆಳಿಗ್ಗೆ 11.00 ಘಂಟೆಗೆ

ಹರಾಜು ಮಾರಾಟದ ನಿಯಮ ಮತ್ತು ನಿಬಂಧನೆಗಳು

1. ಆಸ್ತಿಯನ್ನು ''ಎಲ್ಲಿ ಹೇಗಿದೆಯೋ ಹಾಗೆ ಮತ್ತು ಎಲ್ಲಿ ಏನಿದೆಯೋ ಹಾಗೆ'' ಆಧಾರದ ಮೇಲೆ ಮಾರಾಟ ಮಾಡಲಾಗುವುದು.
2. ಬಿಡ್ದರ್‌ಗಳು ಮೇಲ್ಕಂಡ ಆಸ್ತಿಗಳ ಪ್ರತಿಯೊಂದು ವಿವರಗಳನ್ನು ಷೆಡ್ಯೂಲಿನಲ್ಲಿ ಸೂಚಿಸಿರುವ ದಿನಾಂಕ ಮತ್ತು ಸಮಯದಂದು ಕೂಲಂಕುಶವಾಗಿ ಪರೀಕ್ಷಿಸಬೇಕಾಗಿ ಸೂಚನೆ.
3. ಬಿಡ್ದರ್‌ಗಳು ಸಿಟಿಬ್ಯಾಂಕ್ ಎನ್.ಎ.ಗೆ ಬಿಡ್‌ಗಳನ್ನು ಸಲ್ಲಿಸಿದಲ್ಲಿ ಕೆಳಕಂಡ ವಿವರಗಳನ್ನು ಒಪ್ಪಿಕೊಂಡು ಅರ್ಥೈಸಿ ಬಿಡ್ ಸಲ್ಲಿಸಿರುವುದಾಗಿ ಭಾವಿಸಲಾಗುತ್ತದೆ. (I) ಎಲ್ಲಾ ಸಂದರ್ಭದಲ್ಲೂ ಅವನು/ಅವಳು ಅದಕ್ಕೆ ಸಂಬಂಧಿಸಿದಂತೆ ಜಾಗರೂಕತೆಯಿಂದ, ನಿರ್ವಹಿಸಬೇಕಾಗುತ್ತದೆ.(II) ಆಸ್ತಿ/ಆಸ್ತಿಗಳ ಅಳತೆಯ ವಿವರಗಳನ್ನು ಪರಿಶೀಲಿಸಿ ತೃಪ್ತಿಯಾದಲ್ಲಿ ಬಿಡ್‌ಗಳನ್ನು ಸಲ್ಲಿಸುವುದು. (III) ಹರಾಜನ್ನು ನಿರ್ವಹಿಸಲು ಇರುವ ನಿಯಮ ಮತ್ತು ನಿಬಂಧನೆಗಳನ್ನು ಅನುಮೋದಿಸಿ ಸ್ವೀಕೃತಿ ನೀಡುವುದು. (iv) ಯಾವುದೇ ಭವಿಷ್ಯದ ದಿನಾಂಕಗಳಲ್ಲಿ ಬ್ಯಾಂಕಿನ ವಿರುದ್ಧ ಯಾವುದೇ ಕ್ಲೈಮುಗಳಿಗೆ ಅವನಿಗೆ/ಅವಳಿಗೆ ಹಕ್ಕುಗಳು ಇರುವುದಿಲ್ಲ.
4. ಮಾರಾಟವು ಬ್ಯಾಂಕಿನಿಂದ ದೃಢೀಕರಣಕ್ಕೆ ಒಳಪಟ್ಟಿದೆ. ಒಂದು ವೇಳೆ ಸಾಲಗಾರರು/ಜಾಮೀನುದಾರರು ಬಾಕಿ ಮೊತ್ತವನ್ನು ಪೂರ್ತಿಯಾಗಿ ಪಾವತಿಸಿದಲ್ಲಿ ಮಾರಾಟವನ್ನು ನಡೆಸಲಾಗುವುದಿಲ್ಲ.
5. [illegible] 08.09.2021 ರ ಸಂಜೆ 6.00 ಘಂಟೆಯ ಒಳಗೆ [illegible]
6. [illegible]
7. [illegible]
8. [illegible]
9. [illegible]
10. [illegible] 9986625348/ಸುದರ್ಶನ್ ಎಸ್. - 9962200003 [illegible]
11. ಈ ನೋಟೀಸ್ ನಿರ್ದಿಷ್ಟ ಸಾಲಗಾರರಿಗೆ/ಜಾಮೀನುದಾರರಿಗೆ ಮತ್ತು ಸಾರ್ವಜನಿಕರಿಗೆ ನೀಡುವ ನೋಟೀಸ್ ಸಹ ಆಗಿರುತ್ತದೆ.

ದಿನಾಂಕ :03.08.2021 ಸ್ಥಳ : ಬೆಂಗಳೂರು

ಅಧಿಕೃತ ಅಧಿಕಾರಿ, ಸಿಟಿಬ್ಯಾಂಕ್ ಎನ್.ಎ.

ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಬಾಕಿ ಕುರಿತು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿದರು. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್‌.ಆರ್‌. ಪಾಟೀಲ ಇದ್ದರು

‘ಶಾಸಕರ ಅನುದಾನ ಬಿಡುಗಡೆಗೆ ಸಮಿತಿ’

ಬೆಂಗಳೂರು: ವಿಧಾನ ಪರಿಷತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಅನುದಾನದಲ್ಲಿ ಬಾಕಿ ಇರುವ ಮೊತ್ತದ ಬಿಡುಗಡೆಯ ಕುರಿತು ಮೇಲುಸ್ತುವಾರಿಗೆ ಸಮಿತಿ ನೇಮಿಸಲಾಗುವುದು ಎಂದು ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಅನುದಾನ ಕಡಿತ ಮತ್ತು ಬಾಕಿ ಮೊತ್ತದ ಬಿಡುಗಡೆ ವಿಳಂಬ ಕುರಿತು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಂಗಳವಾರ ಹಿರಿಯ ಅಧಿಕಾರಿಗಳು ಹಾಗೂ ವಿಧಾನ ಪರಿಷತ್ ಸದಸ್ಯರ ಜತೆ ಸಭೆ ನಡೆಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಅವರು ಮಾತನಾಡಿದರು.

‘ಅನುದಾನ ಬಿಡುಗಡೆ ಮಾಡುವಂತೆ ಹಾಗೂ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ತಡೆ ಹಿಡಿಯದಂತೆ ಈಗಾಗಲೇ ಕೆಲವು ಇಲಾಖೆಗಳ ಅಧಿಕಾರಿಗಳಿಗೆ ಪತ್ರ ಬರೆದಿದ್ದೇನೆ. ಜಿಲ್ಲಾಧಿಕಾರಿಗಳಿಂದಲೂ ಈ ಕುರಿತು ಮಾಹಿತಿ ಪಡೆಯುತ್ತೇನೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜತೆಗೂ ಈ ಕುರಿತು ಚರ್ಚೆ ನಡೆಸುವೆ’ ಎಂದರು.

ಪ್ರತಿ ಶಾಸಕರಿಗೆ ವರ್ಷಕ್ಕೆ ₹ 2 ಕೋಟಿ ಅನುದಾನ ನೀಡಬೇಕು. ಬಜೆಟ್‌ನಲ್ಲಿ ಅನುಮೋದನೆ ನೀಡಿದರೂ ಪೂರ್ಣ ಪ್ರಮಾಣದ ಅನುದಾನ ಬಿಡುಗಡೆಯಾಗುತ್ತಿಲ್ಲ ಎಂಬ ದೂರುಗಳಿವೆ. ಈಗ ₹ 90 ಕೋಟಿ ಅನುದಾನ ಬಿಡುಗಡೆ ಬಾಕಿ ಇದೆ. ಅನುದಾನ ಬಿಡುಗಡೆಯಲ್ಲಿ ಇರುವ ಸಮಸ್ಯೆಗಳ ಕುರಿತು ವಿಧಾನ ಪರಿಷತ್‌ನ ಹಲವು ಸದಸ್ಯರು ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮತ್ತೊಮ್ಮೆ ಸಭೆ ನಡೆಸಿ ಸಮಸ್ಯೆ ಪರಿಹರಿಸಲಾಗುವುದು ಎಂದು ತಿಳಿಸಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್‌.ಆರ್‌. ಪಾಟೀಲ, ಬಿಜೆಪಿಯ ಎಚ್‌. ವಿಶ್ವನಾಥ್‌, ಕಾಂಗ್ರೆಸ್‌ನ ಪ್ರಕಾಶ್ ರಾಥೋಡ್‌, ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಸೇರಿದಂತೆ ಹಲವು ಸದಸ್ಯರು ಅನುದಾನ ಬಿಡುಗಡೆ ವಿಳಂಬಕ್ಕೆ ಅಸಮಾಧಾನ ವ್ಯಕ್ತಪಡಿಸಿದರು. ಜಿಲ್ಲಾಧಿಕಾರಿಗಳ ವೈಯಕ್ತಿಕ (ಪಿ.ಡಿ) ಖಾತೆಯಲ್ಲಿ ಅನುದಾನ ಲಭ್ಯವಿದ್ದು, ಕಾಮಗಾರಿ ಕೈಗೊಳ್ಳಬಹುದು ಎಂದು ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್‌.ಎನ್‌. ಪ್ರಸಾದ್ ಉತ್ತರಿಸಿದರು.

ಉಪ ಸಭಾಪತಿ ಎಂ.ಕೆ. ಪ್ರಾಣೇಶ್‌, ಸದಸ್ಯರಾದ ಬಿ.ಕೆ. ಹರಿಪ್ರಸಾದ್‌, ಕೆ.ಸಿ. ಕೊಂಡಯ್ಯ, ಅಲ್ಲಂ ವೀರಭದ್ರಪ್ಪ, ಯು.ಬಿ. ವೆಂಕಟೇಶ್‌, ಎನ್‌. ರವಿಕುಮಾರ್‌, ತಿಪ್ಪೇಸ್ವಾಮಿ, ಕಾಂತರಾಜ್ ಸೇರಿದಂತೆ ಹಲವು ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಅನುಮಾನ ಮೂಡಿಸಿದೆ ‘ಬಿಬಿಎಂಪಿ ಜಾಹೀರಾತು ನಿಯಮ 2019’

ಕಳ್ಳದಾರಿ ಬಳಸಿ ಸ್ಥಾಪಿಸಿದ್ದ ಹೋರ್ಡಿಂಗ್ ಸಕ್ರಮ?

ಪ್ರಜಾವಾಣಿ ವಾರ್ತೆ

ಹೋರ್ಡಿಂಗ್ ಮಾಫಿಯಾಕ್ಕೆ ಮಣೆ 6

ಬೆಂಗಳೂರು: ಈ ಹಿಂದೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಕಳ್ಳದಾರಿ ಹಿಡಿದು ಸ್ಥಾಪಿಸಿದ್ದ ಹೋರ್ಡಿಂಗ್‌ಗಳ ಮರುಸ್ಥಾಪನೆಗೆ ರಾಜ್ಯ ಸರ್ಕಾರವು ಇತ್ತೀಚೆಗೆ ಅನುಷ್ಠಾನಗೊಳಿಸಿರುವ ‘ಬಿಬಿಎಂಪಿ ಜಾಹೀರಾತು ನಿಯಮಗಳು 2019’ ಅವಕಾಶ ಮಾಡಿಕೊಡಲಿದೆಯೇ? ಈ ನಿಯಮಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಇಂತಹ ಅನುಮಾನ ಮೂಡುತ್ತದೆ.

ಬಿಬಿಎಂಪಿ ಜಾಹೀರಾತು ನಿಯಮ 6 (7)ರ ಪ್ರಕಾರ, ಲೆಗಸಿ ಜಾಹೀರಾತು ಬಿಲ್‌ಬೋರ್ಡ್‌ಗಳನ್ನೂ ಸೇರಿದಂತೆ ಹೋರ್ಡಿಂಗ್‌ಗಳನ್ನು ನಿಗದಿತ ಶುಲ್ಕ ಕಟ್ಟಿಸಿಕೊಂಡು ಒಮ್ಮೆ ಮಾತ್ರ ಸ್ಥಳಾಂತರ ಮಾಡಲು ಅವಕಾಶ ಕಲ್ಪಿಸಲಾಗಿದೆ. ಆದರೆ, ಪರ್ಯಾಯ ಜಾಗವು ಜಾಹೀರಾತು ನಿಯಮಗಳಿಗೆ ಪೂರಕವಾಗಿರಬೇಕು ಎಂಬ ಷರತ್ತು ವಿಧಿಸಲಾಗಿದೆ.

‘ಇಂತಹದ್ದೊಂದು ನಿಯಮದ ಅಗತ್ಯವೇ ಇರಲಿಲ್ಲ. ಬಿಬಿಎಂಪಿ ಕೌನ್ಸಿಲ್ ಸಭೆಯಲ್ಲಿ ಅಂಗೀಕರಿಸಿದ್ದ, ‘ಹೊರಾಂಗಣ ಸೈನೇಜ್ ಮತ್ತು ಸಾರ್ವಜನಿಕ ಸಂದೇಶ ನೀತಿ ಹಾಗೂ ಹೊರಾಂಗಣ ಜಾಹೀರಾತು ಮತ್ತು ಸಾರ್ವಜನಿಕ ಸಂದೇಶ ಬೈಲಾ -2018’ರಲ್ಲೂ ನಿರ್ದಿಷ್ಟ ಸ್ಥಳದಲ್ಲಿ ಜಾಹೀರಾತು ಅಳವಡಿಸಲು ಪಡೆದ ಪರವಾನಗಿ ಬಳಸಿಕೊಂಡು ಬೇರೆ ಸ್ಥಳದಲ್ಲಿ ಜಾಹೀರಾತು ಅಳವಡಿಸುವುದಕ್ಕೆ ಅವಕಾಶ ಇರಲಿಲ್ಲ. ಈ ಹಿಂದೆ ಕಳ್ಳದಾರಿಯ ಮೂಲಕ ಸ್ಥಾಪಿಸಿದ್ದ ಹೋರ್ಡಿಂಗ್‌ಗಳನ್ನು ಮುಂದುವರಿಸುವುದಕ್ಕೆ ಇದು ಅವಕಾಶ ಕಲ್ಪಿಸಲಿದೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

ಶಾಸಕ ಮುನಿರತ್ನ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಿ ಲಗ್ಗೆರೆಯಲ್ಲಿ ಅಳವಡಿಸಿರುವ ಫ್ಲೆಕ್ಸ್ ಇನ್ನೂ ತೆರವಾಗಿಲ್ಲ

‘ನಗರದಲ್ಲಿ ಹೋರ್ಡಿಂಗ್‌ಗಳನ್ನು ಎಲ್ಲೆಂದರಲ್ಲಿ ಸ್ಥಾಪಿಸುವುದನ್ನು ತಡೆಯಲು ಹೈಕೋರ್ಟ್ ಚಾಟಿ ಬೀಸಿತ್ತು. ಆ ಬಳಿಕವೇ ಬಿಬಿಎಂಪಿ ಜಾಹೀರಾತುಗಳಿಗೆ ಸಂಬಂಧಿಸಿ ನೀತಿ ಹಾಗೂ ಬೈಲಾಗಳನ್ನು ರೂಪಿಸಿತ್ತು. ಆದರೆ, ಈಗ ಸರ್ಕಾರ ರೂಪಿಸಿರುವ ಜಾಹೀರಾತು ನಿಯಮಗಳು ಹೈಕೋರ್ಟ್ ಆದೇಶದ ಆಶಯಗಳ ಉಲ್ಲಂಘನೆ’ ಎಂದು ಅವರು ಅಭಿಪ್ರಾಯಪಟ್ಟರು.

ಜಾಹೀರಾತು ನಿಯಮ 6(8)ರ ಪ್ರಕಾರ ಒಂದು ಏಜೆನ್ಸಿಯು ಹೋರ್ಡಿಂಗ್/ ಬಿಲ್‌ಬೋರ್ಡ್ ಅಳವಡಿಕೆಗೆ ಪಡೆದ ಪರವಾನಗಿಯನ್ನು ಇನ್ನೊಂದು ಏಜೆನ್ಸಿ ಹೆಸರಿಗೆ ವರ್ಗಾಯಿಸಬಹುದು. ಇದಕ್ಕೆ ಹೋರ್ಡಿಂಗ್ ಅಳವಡಿಸುವ ಏಜೆನ್ಸಿಯು ಮೂಲದಲ್ಲಿ ಪರವಾನಗಿ ಪಡೆದ ಏಜೆನ್ಸಿಯ ನಿರಾಕ್ಷೇಪಣಾ ಪತ್ರ ಹಾಜರುಪಡಿಸಬೇಕು. ಒಂದು ಬಾರಿ ₹ 10 ಸಾವಿರ ಶುಲ್ಕವನ್ನು ಡಿಮಾಂಡ್ ಡ್ರಾಫ್ಟ್ ರೂಪದಲ್ಲಿ ಪಾವತಿಸಬೇಕು. ಪರವಾನಗಿಯನ್ನು ಖರೀದಿಸುವ ಏಜೆನ್ಸಿಯು ಈ ವಿಚಾರವನ್ನು ನಮೂನೆ 6 ಎ ಮೂಲಕ ಬಿಬಿಎಂಪಿ ಮುಖ್ಯ ಆಯುಕ್ತರ ಗಮನಕ್ಕೆ ತರಬೇಕು. ಬಿಬಿಎಂಪಿ ಜಾಹೀರಾತು ನಿಯಮಗಳ ಜಾರಿಗಾಗಿ ಹೊರಡಿಸಿದ್ದ ಕರಡು ಅಧಿಸೂಚನೆಯಲ್ಲಿ ಈ ಅಂಶಗಳು ಇರಲಿಲ್ಲ. ಈ ಅಂಶ ಸೇರ್ಪಡೆ ಹಿಂದೆ ಭಾರಿ ಅವ್ಯವಹಾರ ನಡೆದಿರುವ ಶಂಕೆ ವ್ಯಕ್ತವಾಗಿದೆ.

‘ಈ ಹೊಸ ಅಂಶವನ್ನೇ ಬಳಸಿಕೊಂಡು ಈಗ ಹೋರ್ಡಿಂಗ್ ಅಳವಡಿಕೆಗೆ ಹೊಂದಿರುವ ಪರವಾನಗಿಯನ್ನು ಬೇನಾಮಿ ಹೆಸರುಗಳಿಗೆ ವರ್ಗಾಯಿಸುವ ಸಾಧ್ಯತೆ ಇದೆ. ಹೊಸ ಜಾಹೀರಾತು ನಿಯಮಗಳ ಜಾರಿಗೆ ಮೂರು ವರ್ಷಗಳಿಂದ ಹಗ್ಗಜಗ್ಗಾಟ ನಡೆಯುತ್ತಿತ್ತು. ಜಾಹೀರಾತು ಬೈಲಾದಲ್ಲಿ ಇಲ್ಲದ ಈ ಅಂಶವನ್ನು ಕೊನೆಯ ಕ್ಷಣದಲ್ಲಿ ನಿಯಮಗಳಲ್ಲಿ ಸೇರಿಸಲಾಗಿದೆ. ಅಚ್ಚರಿ ಎಂದರೆ ಈ ಬಗ್ಗೆ ಯಾವುದೇ ಜಾಹೀರಾತು ಸಂಸ್ಥೆಯೂ ಮನವಿ ಸಲ್ಲಿಸಿರಲಿಲ್ಲ. ಹೊಸ ನಿಯಮಗಳ ಜಾರಿಯ ಹಿಂದೆ ಅವ್ಯವಹಾರ ನಡೆದಿರುವುದಕ್ಕೆ ಈ ಅಂಶವೇ ಸಾಕ್ಷಿ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ನಗರದಲ್ಲಿ ಹೋರ್ಡಿಂಗ್ ಅಳವಡಿಸಲು ಅವಕಾಶ ಇಲ್ಲದ ಸಂದರ್ಭದಲ್ಲೂ ಹೆಬ್ಬಾಳ ಮೇಲ್ಸೇತುವೆ ಬಳಿ ಹೋರ್ಡಿಂಗ್ ಅಳವಡಿಸಲಾಗಿತ್ತು. ಈ ಮೇಲ್ಸೇತುವೆಯ ನಿರ್ವಹಣೆಯ ಹೊಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬಿಬಿಎಂಪಿಗೆ ಹಸ್ತಾಂತರಿಸಿದೆ. ಆದರೂ ಬಿಡಿಎಯಿಂದ ಅನುಮತಿ ನೀಡಲಾಗಿತ್ತು. ಇಂತಹ ಅಕ್ರಮವನ್ನು ‘ಬಿಬಿಎಂಪಿ ಜಾಹೀರಾತು ನಿಯಮಗಳು 2019’ರ ಮೂಲಕ ಸಕ್ರಮಗೊಳಿಸುವ ಪ್ರಯತ್ನ ನಡೆದಿದೆ. ನಿಯಮ 16 (3)ರಲ್ಲಿ ಇದಕ್ಕೆ ಅವಕಾಶ ಮಾಡಿಕೊಡಲಾಗಿದೆ.



ಶಾಸಕ ಜಮೀರ್ ಅಹ್ಮದ್ ಖಾನ್ ಅವರ ಹುಟ್ಟುಹಬ್ಬಕ್ಕೆ ಶುಭಕೋರಿ ಚಾಮರಾಜಪೇಟೆಯ ಬುಲ್ ಟೆಂಪಲ್ ರಸ್ತೆ ಬಳಿ ಅಳವಡಿಸಿರುವ ಫ್ಲೆಕ್ಸ್ ಅನೇಕ ದಿನಗಳಿಂದ ಅಲ್ಲೇ ಇದೆ

ಮುನೇಶ್ವರ ನಗರದ ಮುಖ್ಯ ರಸ್ತೆಯಲ್ಲಿ ಮಹಾಶಿವರಾತ್ರಿ ವಾರ್ಷಿಕೋತ್ಸವಕ್ಕಾಗಿ ಅಳವಡಿಸಿರುವ ಫ್ಲೆಕ್ಸ್ ಹಲವು ತಿಂಗಳುಗಳಿಂದ ಹಾಗೆಯೇ ಇದೆ

ಲೆಗಸಿ ಜಾಹೀರಾತಿಗೇಕೆ ವಿಶೇಷ ಅವಕಾಶ

ಹೊಸ ನಿಯಮಗಳ ಪ್ರಕಾರ, ಎಲ್ಲ ಮಾದರಿಯ ಜಾಹೀರಾತುಗಳಿಗೆ ಪರವಾನಗಿಯನ್ನು ಆನ್‌ಲೈನ್ ವ್ಯವಸ್ಥೆಯ ಮೂಲಕವೇ ಪಡೆಯಬೇಕು. ಆದರೆ, ಲೆಗಸಿ ಜಾಹೀರಾತುಗಳಿಗೆ ಮಾತ್ರ ಬಿಬಿಎಂಪಿಯು ಆನ್‌ಲೈನ್ ಪರವಾನಗಿ ನೀಡುವ ವ್ಯವಸ್ಥೆ ಜಾರಿಗೊಳಿಸುವವರೆಗೆ ಮ್ಯಾನುವಲ್ ಆಗಿಯೂ ಪರವಾನಗಿ ನೀಡಬಹುದು ಎಂಬ ಅಂಶವನ್ನು ಹೊಸ ನಿಯಮಗಳಲ್ಲಿ ಸೇರಿಸಲಾಗಿದೆ. ಆನ್‌ಲೈನ್ ಪರವಾನಗಿ ವ್ಯವಸ್ಥೆ ಜಾರಿಯಾಗುವವರೆಗೆ ಲೆಗಸಿ ಜಾಹೀರಾತುಗಳ ಅಳವಡಿಕೆಗೆ ಅವಕಾಶ ಕಲ್ಪಿಸುವ ಹುನ್ನಾರ ಇದು ಎಂಬ ಟೀಕೆ ವ್ಯಕ್ತವಾಗಿದೆ.

ಏನಿದು ಲೆಗಸಿ ಬಿಲ್‌ಬೋರ್ಡ್?

ಖಾಸಗಿ ಸಂಸ್ಥೆಗಳ ಜಮೀನಿನಲ್ಲಿ ನೋಂದಾಯಿತ ಜಾಹೀರಾತು ಸಂಸ್ಥೆಗಳು ಬಿಬಿಎಂಪಿ ಜಾಹೀರಾತು ಬೈಲಾ 2006ರ ಅಡಿ ಪರವಾನಗಿ ಪಡೆದು ಸ್ಥಾಪಿಸಲಾದ ಬಿಲ್‌ಬೋರ್ಡ್‌ಗಳನ್ನು ಲೆಗಸಿ ಬಿಲ್‌ಬೋರ್ಡ್‌ಗಳು ಎಂದು ‘ಬಿಬಿಬಿಂಪಿ ಜಾಹೀರಾತುನಿಯಮಗಳು 2019’ರಲ್ಲಿ ವ್ಯಾಖ್ಯಾನಿಸಲಾಗಿದೆ.

ಅನಧಿಕೃತ ಜಾಹೀರಾತು–ಕಣ್ಮುಚ್ಚಿ ಕುಳಿತ ಬಿಬಿಎಂಪಿ

ಕಳೆದ ಮೂರು ವರ್ಷಗಳಿಂದ ಬಿಬಿಎಂಪಿ ವ್ಯಾಪ್ತಿಯಲ್ಲಿ ಫ್ಲೆಕ್ಸ್ ಬ್ಯಾನರ್‌ಗಳ ಹಾವಳಿ ತುಸು ಕಡಿಮೆಯಾಗಿತ್ತು. ಬಿಬಿಎಂಪಿ ಅಧಿಕಾರಿಗಳ ನಿಷ್ಕ್ರಿಯತೆಯಿಂದಾಗಿ ಫ್ಲೆಕ್ಸ್ ಮತ್ತು ಬ್ಯಾನರ್‌ಗಳ ಹಾವಳಿ ಇತ್ತೀಚೆಗೆ ಮತ್ತೆ ಕಾಣಿಸಿಕೊಂಡಿದೆ.

ರಾಜಕಾರಣಿಗಳ ಹುಟ್ಟುಹಬ್ಬಕ್ಕೆ ಶುಭಕೋರಿ ಫ್ಲೆಕ್ಸ್‌ಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸುವ ಪರಿಪಾಠ ಮತ್ತೆ ಅಲ್ಲಲ್ಲಿ ಆರಂಭವಾಗಿದೆ. ಹಬ್ಬ–ಹರಿದಿನಗಳ ಪ್ರಯುಕ್ತ ಹಾಗೂ ಕಾರ್ಯಕ್ರಮಗಳ ಪ್ರಯುಕ್ತ ಕೆಲವು ಸಂಘ–ಸಂಸ್ಥೆಗಳು ಬ್ಯಾನ ರ್‌ಅಳವಡಿಸುತ್ತಿವೆ. ಆದರೆ, ಕಾರ್ಯಕ್ರಮಗಳು ಮುಗಿದ ಬಳಿಕವೂ ಇವುಗಳನ್ನು ತೆರವುಗೊಳಿಸುವ ಗೋಜಿಗೇ ಹೋಗುತ್ತಿಲ್ಲ. ಬಿಬಿಎಂಪಿ ಪರವಾನಗಿ ಪಡೆಯದೆ ಅಳವಡಿಸುವ ಬ್ಯಾನರ್‌ಗಳನ್ನು ತೆರವುಗೊಳಿಸಲು ಹಾಗೂ ಅಕ್ರಮವಾಗಿ ಜಾಹೀರಾತುಗಳನ್ನು ಅಳವಡಿಸಿದವರಗೆ ದಂಡ ವಿಧಿಸಲು ಪಾಲಿಕೆ ಅಧಿಕಾರಿಗಳೂ ಕ್ರಮ ಕೈಗೊಳ್ಳುತ್ತಿಲ್ಲ.

ಬೆಂಗಳೂರಿನ ಕಥೆ ಹೇಳೋಣ ಬನ್ನಿ!

ವಿಡಿಯೊ ಕಥೆಗಳಿಗೆ ಬಿಐಸಿಯಿಂದ ಆಹ್ವಾನ, ಪ್ರತಿ ವಿಡಿಯೊಕ್ಕೆ ₹ 20 ಸಾವಿರ ಗೌರವಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚರಿತ್ರೆ, ಸಂಸ್ಕೃತಿ, ಪರಂಪರೆ ಹಾಗೂ ಕಲೆಗಳಿಗೆ ಸಂಬಂಧಿಸಿದಂತೆ ಹೇಳಲು ನಿಮ್ಮಲ್ಲಿ ಕಥೆಗಳಿವೆಯೇ? ದೃಶ್ಯರೂಪ ಕೊಟ್ಟು ಹೇಳುವುದಾದರೆ ಅಂತಹ ಕಥೆಗಳು ತನಗೆ ಬೇಕು ಎನ್ನುತ್ತದೆ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ).

ಬೆಂಗಳೂರಿನ ಕುರಿತು ಅನನ್ಯ ವಿಡಿಯೊ ಕಥೆಗಳ ಕಣಜ ‘B·LORE’ಅನ್ನು ಹೊಂದುವ ಅಪೇಕ್ಷೆ ಹೊಂದಿರುವ ಬಿಐಸಿ, ಅದಕ್ಕಾಗಿ ಆಸಕ್ತರಿಂದ ಸಾಕ್ಷ್ಯಚಿತ್ರಗಳನ್ನು ಆಹ್ವಾನಿಸಿದೆ.

ಗಂಗರ ಆಧಿಪತ್ಯದ ಕಾಲದಲ್ಲಿ ಪುಟ್ಟ ಗ್ರಾಮವಾಗಿದ್ದ ಬೆಂಗಳೂರು, ಮಹಾನಗರವಾಗಿ ಬೆಳೆಯುವವರೆಗೆ ಕಾಲದ ಕುಲುಮೆಯಲ್ಲಿ ದಿಗಿಲು ಉಂಟು ಮಾಡುವಷ್ಟು ರೂಪಾಂತರ ಹೊಂದಿದೆ. ಗಗನಚುಂಬಿ ಕಟ್ಟಡಗಳನ್ನೂ ನೆಲದಡಿ ರೈಲು ಮಾರ್ಗಗಳನ್ನೂ ಹೊಂದಿರುವ ಈ ಊರು ದಶದಿಕ್ಕುಗಳಲ್ಲಿ ಹಬ್ಬಿದೆ.

‘ದೇಶದ ವಿಜ್ಞಾನದ ರಾಜಧಾನಿ’, ‘ಸಿಲಿಕಾನ್ ವ್ಯಾಲಿ’ ಎಂದೆಲ್ಲ ಕರೆಸಿಕೊಳ್ಳುವ ಬೆಂಗಳೂರು ಮಹಾನಗರ, ಆರು ಶತಮಾನಗಳ ಹಿಂದೆ ಒಂದು ಪುಟ್ಟ ಹಳ್ಳಿಯಾಗಿತ್ತು ಎಂದರೆ ಈಗ ಯಾರೂ ನಂಬುವುದಿಲ್ಲ. ಚೋಳ, ಹೊಯ್ಸಳ, ವಿಜಯನಗರ, ಮರಾಠ ಮತ್ತು ಮೈಸೂರು ಅರಸರ ಆಡಳಿತವನ್ನು ಕಂಡಿದ್ದ ಈ ಊರು ಮೊಗಲ್ ದೊರೆಗಳ ಆಳ್ವಿಕೆಗೂ ಒಳಪಟ್ಟಿತ್ತು.

ಚರಿತ್ರೆಯ ಗಣಿಯೊಳಗೆ ಇಳಿದಷ್ಟೂ ನಗರದ ಕುರಿತು ಇಂತಹ ಲೆಕ್ಕವಿಲ್ಲದಷ್ಟು ಕಥೆಗಳು ಸಿಗುತ್ತವೆ. ಮಲ್ಲಿಗೆ ಪರಿಮಳವನ್ನು ಸೂಸುವ ಜಗದ್ವಿಖ್ಯಾತ ಕರಗ, ದೇಶದ ಸಂಗೀತಪ್ರಿಯರನ್ನು ಸೂಜಿಗಲ್ಲಿನಂತೆ ಸೆಳೆಯುವ ಶ್ರೀರಾಮನವಮಿ ಸಂಗೀತೋತ್ಸವ... ಹೀಗೆ ಸಾಂಸ್ಕೃತಿಕವಾಗಿಯೂ ಈ ಊರು ಶ್ರೀಮಂತ.

ಚರಿತ್ರೆ (ನಗರದ ನಿರ್ಮಾಣ, ಸ್ವಾತಂತ್ರ್ಯಪೂರ್ವದ ಕಾಲಘಟ್ಟ, ಕೈಗಾರಿಕಾ ಬೆಳವಣಿಗೆ), ಸಂಸ್ಕೃತಿ (ಸಮುದಾಯ, ಸಂಪ್ರದಾಯ, ಆಡುಭಾಷೆ, ಆಚಾರ, ವಿಚಾರ, ಆಹಾರ), ಪರಂಪರೆ, ಕಲೆ (ದೃಶ್ಯ ಹಾಗೂ ಪ್ರದರ್ಶನ), ಆವಿಷ್ಕಾರ, ನಾಗರಿಕರ ಸಹಭಾಗಿತ್ವ ಇವೇ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಸ್ಫೂರ್ತಿದಾಯಕ ವಿಡಿಯೊ ಕಥೆಗಳು ಬೇಕು ಎನ್ನುವುದು ಬಿಐಸಿ ಬೇಡಿಕೆ. ‘ಸಲಹೆ ರೂಪದಲ್ಲಿ ಕೆಲವು ವಿಷಯಗಳನ್ನು ಮುಂದಿಟ್ಟಿದ್ದೇವೆ. ಇವುಗಳಿಗೇ ಸೀಮಿತವಾಗಬೇಕು ಎಂದೇನಿಲ್ಲ. ಈ ವಿಷಯಗಳ ಆಚೆಗೂ ಯೋಚಿಸಿ, ಸಿದ್ಧಪಡಿಸಿದ ವಿಡಿಯೊ ಕಥೆಗಳಿಗೂ ಸ್ವಾಗತ. ವೈವಿಧ್ಯ ಹೆಚ್ಚಿದಷ್ಟೂ ನಮಗೆ ಸಂತೋಷ’ ಎನ್ನುತ್ತಾರೆ ಬಿಐಸಿಯ ಗೌರವ ನಿರ್ದೇಶಕ ವಿ.ರವಿಚಂದರ್.

‘ಮುಂದಿನ ಕೆಲವು ವರ್ಷಗಳಲ್ಲಿ ಬೆಂಗಳೂರಿನ ವೈವಿಧ್ಯಕ್ಕೆ ಸಂಬಂಧಿಸಿದಂತೆ ಅನನ್ಯ ಕಥೆಗಳ ಅರ್ಕೈವ್ ರೂಪಿಸುವುದು ಬಿಐಸಿಯ ಈ ಯೋಜನೆ ಹಿಂದಿರುವ ಉದ್ದೇಶ. ಈಗಾಗಲೇ ಮೊದಲ 75 ವಿಡಿಯೊಗಳಿಗೆ ಗೌರವಧನ ನೀಡಲು ದೇಣಿಗೆದಾರರು ಸಿಕ್ಕಿದ್ದಾರೆ. ಮುಂದಿನ ದಿನಗಳಲ್ಲಿ 500 ವಿಡಿಯೊಗಳನ್ನು ಸಂಗ್ರಹಿಸಲು ಬೇಕಾದಷ್ಟು ಹಣಕಾಸಿನ ನೆರವು ಹರಿದುಬರುವ ನಿರೀಕ್ಷೆ ಇದೆ’ ಎನ್ನುತ್ತಾರೆ ರವಿಚಂದರ್.

ವೈಯಕ್ತಿಕವಾಗಿ ಅಥವಾ ಸಾಂಸ್ಥಿಕವಾಗಿ ಯಾರು ಬೇಕಾದರೂ ಪ್ರವೇಶ ಕಳುಹಿಸಬಹುದು. ಇದಕ್ಕೆ ಯಾವುದೇ ಕಾಲಮಿತಿ ಇಲ್ಲ. ಅರ್ಜಿಯ ಜತೆಗೆ ವಿಡಿಯೊವನ್ನೂ ಕಳುಹಿಸಬಹುದು ಇಲ್ಲವೆ ಉದ್ದೇಶಿತ ಫಿಲಂ ವಿವರ ಬರೆದು ಕಳುಹಿಸಬಹುದು. ಕಂಟೆಂಟ್‌ಗೆ ಸಂಬಂಧಿಸಿದಂತೆ ಹಕ್ಕುಸ್ವಾಮ್ಯ ನಿಯಮಾವಳಿ ಉಲ್ಲಂಘನೆಯಾಗದಂತೆ ನೋಡಿಕೊಳ್ಳುವುದು ವಿಡಿಯೊ ನಿರ್ಮಾಣ ಮಾಡುವವರ ಹೊಣೆ ಎಂದು ಅವರು ವಿವರಿಸುತ್ತಾರೆ.

ಹೆಚ್ಚಿನ ವಿವರಗಳಿಗೆ ಬಿಐಸಿ ವೆಬ್‌ಸೈಟ್ ನೋಡಬಹುದು. ಅರ್ಜಿ ಸಲ್ಲಿಸುವ **ಇ–ಮೇಲ್ ವಿಳಾಸ:** bic@bangaloreinternationalcentre.org

ವಿಡಿಯೊ ಹೇಗಿರಬೇಕು?

ಬೆಂಗಳೂರಿನ ಯಾವುದೇ ವಿಶೇಷಕ್ಕೆ ಸಂಬಂಧಿಸಿದಂತೆ ಗರಿಷ್ಠ ನಾಲ್ಕು ನಿಮಿಷದ ವಿಡಿಯೊ ಕಥೆಯನ್ನು ನೀವು ಹೇಳಬಹುದು. ಅದು ಎ.ವಿ. ಫಿಲಂ (ಆಡಿಯೊ–ವಿಡಿಯೊ, ಎಂಪಿ–4) ರೂಪದಲ್ಲಿರಬೇಕು. ಈ ವಿಡಿಯೊ ಯಾವುದೇ ಭಾಷೆಯಲ್ಲೂ ಸಿದ್ಧವಾಗಿರಬಹುದು. ಆದರೆ, ಇಂಗ್ಲಿಷ್‌ನ ಶೀರ್ಷಿಕೆಗಳನ್ನು ಕೊಡುವುದು ಕಡ್ಡಾಯ. ಸೃಜನಶೀಲತೆ, ಸ್ವಂತಿಕೆ ಹಾಗೂ ಕುತೂಹಲಕಾರಿ ವಿವರಗಳುಳ್ಳ ಕಥೆಗಳಿಗೆ ಆದ್ಯತೆ. ತಮಾಷೆ ಸಂಗತಿಗಳೂ ಅಪೇಕ್ಷಣೀಯ ಎನ್ನುತ್ತದೆ ಬಿಐಸಿ.

ನಗರದ ಎಲ್ಲ ಆಯಾಮಗಳ ಕುರಿತು ಕುತೂಹಲಕಾರಿ ವಿಡಿಯೊ ಕಥೆಗಳ ಕಣಜವನ್ನಾಗಿ ‘B·LORE’ ಅನ್ನು ಅಭಿವೃದ್ಧಿಪಡಿಸುವುದು ಬಿಐಸಿ ಗುರಿ. ಅದರ ವೆಬ್‌ಸೈಟ್ ಮತ್ತು ಯುಟ್ಯೂಬ್ ಚಾನಲ್ ಹಾಗೂ ಇತರ ಮಲ್ಟಿಮೀಡಿಯಾ ವೇದಿಕೆಗಳ ಮೂಲಕ ಈ ಕಥಾ ಕಣಜ ಬೆಂಗಳೂರಿನ ಕುರಿತು ತಿಳಿಯಬಯಸುವವರ ಮುಂದೆ ತೆರೆದುಕೊಳ್ಳಲಿದೆ. ಅಂದಹಾಗೆ, ಆಯ್ಕೆಯಾದ ವಿಡಿಯೊ ಕಥೆಗಳಿಗೆ ಬಿಐಸಿಯಿಂದ ತಲಾ ₹ 20 ಸಾವಿರ ಗೌರವಧನ ಸಿಗಲಿದೆ.

ಕಾಮಗಾರಿ ಪರಿಶೀಲಿಸಿದ ಬಿಬಿಎಂಪಿ ಮುಖ್ಯ ಆಯುಕ್ತರ ಗಡುವು

ವಾಹನ ನಿಲುಗಡೆಯ ಕಟ್ಟಡ ಸೆಪ್ಟೆಂಬರ್‌ಗೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಾಂಧಿನಗರ ವಾರ್ಡ್ ವ್ಯಾಪ್ತಿಯ ಸ್ವಾತಂತ್ರ್ಯ ಉದ್ಯಾನದ ಬಳಿ ವಾಹನ ನಿಲುಗಡೆ ಸಲುವಾಗಿ ನಿರ್ಮಿಸುತ್ತಿರುವ ಬಹುಮಹಡಿ (ಎಂಎಲ್‌ಸಿಪಿ) ಕಟ್ಟಡದ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು. ಈ ಸೌಕರ್ಯವು ಸೆಪ್ಟೆಂಬರ್ ಅಂತ್ಯದೊಳಗೆ ಸಾರ್ವಜನಿಕ ಬಳಕೆಗೆ ಲಭ್ಯವಾಗಬೇಕು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸ್ಥಳೀಯ ಶಾಸಕ ದಿನೇಶ್ ಗುಂಡೂರಾವ್ ಅವರ ಜೊತೆ ಮುಖ್ಯ ಆಯುಕ್ತರು ಈ ಕಾಮಗಾರಿಯನ್ನು ಮಂಗಳವಾರ ಪರಿಶೀಲನೆ ನಡೆಸಿದರು. ಈ ಕಟ್ಟಡ ಲೋಕಾರ್ಪಣೆಗೊಂಡ ಬಳಿಕ ಗಾಂಧಿನಗರ, ಮೆಜೆಸ್ಟಿಕ್ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ವಾಹನ ನಿಲುಗಡೆ ಸಮಸ್ಯೆ ನೀಗುವ ನಿರೀಕ್ಷೆ ಇದೆ.

‘ನಗರೋತ್ಥಾನ ಯೋಜನೆಯಡಿ ಕೈಗೊಂಡಿರುವ ಈ ಕಟ್ಟಡದಲ್ಲಿ ವಾಹನ ನಿಲುಗಡೆ ವ್ಯವಸ್ಥೆಯ ಕಾಮಗಾರಿ ಈಗಾಗಲೇಪೂರ್ಣಗೊಂಡಿದೆ.ತಳಮಟ್ಟದಿಂದ ಕೆಳಗೆ ಮೂರು ಮಹಡಿಗಳನ್ನು ನಿರ್ಮಿಸಲಾಗಿದೆ. ಕಟ್ಟಡದಲ್ಲಿ 4 ಲಿಫ್ಟ್‌ಗಳು ಇರಲಿವೆ. 40 ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಕಾಮಗಾರಿ ಸ್ಥಳದಲ್ಲಿ ಭಾರಿ ಗಾತ್ರದ ಬಂಡೆ ಸಿಕ್ಕಿದ ಪರಿಣಾಮ ಕಾಮಗಾರಿ ವಿಳಂಬವಾಗಿದೆ’ ಎಂದು ಬಿಬಿಎಂಪಿಯ ಮುಖ್ಯ ಎಂಜಿನಿಯರ್ (ಯೋಜನೆ ವಿಭಾಗ) ಲೋಕೇಶ್ ಮಾಹಿತಿ ನೀಡಿದರು.

‘ಪ್ರತಿಭಟನೆ ನಡೆಸಲು ಕಟ್ಟಡದಲ್ಲಿ ಸ್ಥಳಾವಕಾಶ ಕಲ್ಪಿಸಲಾಗುತ್ತದೆ. ಪ್ರತಿಭಟನೆ ಸ್ಥಳದ ಚಾವಣಿ ಹಾಗೂ ಸೌರ ವಿದ್ಯುತ್ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ. ವಿದ್ಯುತ್ ಸಂಪರ್ಕ, ಅಗ್ನಿಶಾಮಕ ವ್ಯವಸ್ಥೆ ಅಳವಡಿಕೆ, ಆವರಣ ಗೋಡೆ ನಿರ್ಮಾಣ, ಪ್ರವೇಶ ದ್ವಾರ, ಪಾದಚಾರಿ ಮಾರ್ಗದ ಕೆಲಸಗಳು ಬಾಕಿ ಇವೆ. ಇವುಗಳನ್ನೂ ತ್ವರಿತಗತಿಯಲ್ಲಿ ಪೂರ್ಣಗೊಳಿಸಲಾಗುವುದು. ಈ ಕಟ್ಟಡದ ಹಸಿರೀಕರಣಕ್ಕೂ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಅವರು ತಿಳಿಸಿದರು.

ವಾಹನಗಳ ನಿಲುಗಡೆಗೆ ಸಲುವಾಗಿ ಗಾಂಧಿನಗರ ವಾರ್ಡ್‌ನಲ್ಲಿ ನಿರ್ಮಿಸುತ್ತಿರುವ ಬಹುಮಹಡಿ ಕಟ್ಟಡದ ಕಾಮಗಾರಿಯನ್ನು ಗೌರವ್ ಗುಪ್ತ ಮಂಗಳವಾರ ಪರಿಶೀಲಿಸಿದರು. ಪಶ್ಚಿಮ ವಲಯ ಜಂಟಿ ಆಯುಕ್ತ ಶಿವಸ್ವಾಮಿ, ಮುಖ್ಯ ಎಂಜಿನಿಯರ್ ಲೋಕೇಶ್, ಕಾರ್ಯಪಾಲಕ ಎಂಜಿನಿಯರ್ ಫತೇಹ್ ಅಹ್ಮದ್ ಹಾಗೂ ಇತರ ಅಧಿಕಾರಿಗಳು ಇದ್ದಾರೆ.

ಅಂಕಿ-ಅಂಶಗಳು

₹79.8 ಕೋಟಿ
ವಾಹನ ನಿಲುಗಡೆಯ ಬಹುಮಹಡಿ ಕಟ್ಟಡ ಕಾಮಗಾರಿಯ ಅಂದಾಜು ವೆಚ್ಚ

556
ಕಾರುಗಳ ನಿಲುಗಡೆಗೆ ಇಲ್ಲಿ ವ್ಯವಸ್ಥೆ ಕಲ್ಪಿಸಲಾಗುತ್ತಿದೆ

445
ದ್ವಿಚಕ್ರ ವಾಹನಗಳ ನಿಲುಗಡೆಗೆ ಇಲ್ಲಿ ವ್ಯವಸ್ಥೆ ಕಲ್ಪಿಸಲಾಗುತ್ತಿದೆ

ಪೊಲೀಸರ ಮೇಲೆ ಹಲ್ಲೆ: ಐವರ ಬಂಧನ

ಆಫ್ರಿಕಾ ಪ್ರಜೆ ‘ಕಸ್ಟಡಿ’ ಸಾವು ಪ್ರಕರಣ • ಠಾಣೆ ಎದುರು ನಡೆದಿದ್ದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ವಶದಲ್ಲಿದ್ದ ಆಫ್ರಿಕಾ ಪ್ರಜೆ ಜೋಯೆಲ್ ಶಿಂದನಿ ಮಲು (27) ಅನುಮಾನಾಸ್ಪದ ರೀತಿಯಲ್ಲಿ ಸಾವನ್ನಪ್ಪಿದ್ದನ್ನು ಖಂಡಿಸಿ ಸೋಮವಾರ ನಡೆಸಿದ್ದ ಪ್ರತಿಭಟನೆ ವೇಳೆ ಪೊಲೀಸರ ಮೇಲೆ ಹಲ್ಲೆ ಮಾಡಿದ್ದವರ ವಿರುದ್ಧ ಪ್ರತ್ಯೇಕ ಎಫ್‌ಐಆರ್ ದಾಖಲಾಗಿವೆ.

ಜೆ.ಸಿ. ನಗರ ಠಾಣೆ ಎದುರು ಸೇರಿದ್ದ ಆಫ್ರಿಕಾದ 30ಕ್ಕೂ ಹೆಚ್ಚು ಪ್ರಜೆಗಳು, ‘ಜೋಯೆಲ್ ಸಾವಿಗೆ ಪೊಲೀಸರೇ ಕಾರಣ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಘೋಷಣೆ ಕೂಗಿದ್ದರು. ಇದೇ ಸಂದರ್ಭದಲ್ಲೇ ಪಿಎಸ್‌ಐ ಹಾಗೂ ಮೂವರು ಕಾನ್‌ಸ್ಟೆಬಲ್ ಮೇಲೆ ಹಲ್ಲೆ ಮಾಡಿದ್ದರು ಎನ್ನಲಾಗಿದೆ. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದ್ದಂತೆ ಪೊಲೀಸರು, ಆಫ್ರಿಕಾ ಪ್ರಜೆಗಳ ಮೇಲೆ ಲಾಠಿ ಪ್ರಹಾರ ನಡೆಸಿದ್ದರು. ಮೂವರು ಪ್ರಜೆಗಳು ಗಾಯಗೊಂಡಿದ್ದರು.

‘ಆಫ್ರಿಕಾ ಪ್ರಜೆಗಳ ಹಲ್ಲೆಯಿಂದ ಗಾಯಗೊಂಡಿರುವ ಪಿಎಸ್‌ಐ ಹಾಗೂ ಮೂವರು ಕಾನ್‌ಸ್ಟೆಬಲ್‌ಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಅವರು ನೀಡಿದ್ದ ದೂರು ಆಧರಿಸಿ ಎರಡು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಪೊಲೀಸರ ಮೇಲೆ ಹಲ್ಲೆ ಮಾಡಿದ ಹಾಗೂ ಹಲ್ಲೆಗೆ ಪ್ರಚೋದನೆ ನೀಡಿದ ಆರೋಪದಡಿ ಐವರನ್ನು ಮಂಗಳವಾರ ಬಂಧಿಸಲಾಗಿದೆ. ಅದರಲ್ಲಿ ಒಬ್ಬ ಮಾದಕ ವಸ್ತು ಸೇವಿಸಿದ್ದು ವೈದ್ಯಕೀಯ ಪರೀಕ್ಷೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಪ್ರಕರಣದ ಮತ್ತಷ್ಟು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗಾಗಿ ಪ್ರತ್ಯೇಕ ತಂಡಗಳು ತನಿಖೆ ಮುಂದುವರಿಸಿವೆ’ ಎಂದೂ ತಿಳಿಸಿದರು.

ಮರಣೋತ್ತರ ಪರೀಕ್ಷೆ ಬಾಕಿ: ಮೃತ ಜೋಯೆಲ್ ಮೃತದೇಹವನ್ನು ಬೌರಿಂಗ್ ಆಸ್ಪತ್ರೆಯಲ್ಲಿ ಇರಿಸಲಾಗಿದ್ದು, ಮರಣೋತ್ತರ ಪರೀಕ್ಷೆ ಬಾಕಿ ಇದೆ. ಮೃತರ ಸಂಬಂಧಿಕರಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದು, ರಾಯಭಾರಿ ಕಚೇರಿ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.

‘ಬಾಲಕನನ್ನು ಎತ್ತಿ ಎಸೆದಿದ್ದ ಪ್ರತಿಭಟನಕಾರ’

‘ಗಲಾಟೆ ಮಾಡುವ ಉದ್ದೇಶದಿಂದಲೇ ಠಾಣೆ ಎದುರು ಬಂದಿದ್ದ ಆಫ್ರಿಕಾ ಪ್ರಜೆಯೊಬ್ಬ, ಸ್ಥಳೀಯ ಬಾಲಕನನ್ನು ಎತ್ತಿ ಎಸೆದಿದ್ದ ಘಟನೆ ತಡವಾಗಿ ಗೊತ್ತಾಗಿದೆ. ಆ ಬಾಲಕನಿಗೆ ತೀವ್ರ ಗಾಯವಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಾಲಕ ಹಾಗೂ ಅವರ ತಾಯಿ, ಜೆ.ಸಿ. ನಗರ ಠಾಣೆ ಎದುರಿನ ರಸ್ತೆಬದಿಯಲ್ಲಿ ನಡೆದುಕೊಂಡು ಹೊರಟಿದ್ದರು. ಅದೇ ಸಂದರ್ಭದಲ್ಲೇ ಅವರನ್ನು ಅಡ್ಡಗಟ್ಟಿದ್ದ ಆಫ್ರಿಕಾ ಪ್ರಜೆಯೊಬ್ಬ, ಬಾಲಕನ್ನು ಒತ್ತಾಯದಿಂದ ಎತ್ತಿಕೊಂಡು ಕಾರಿಗೆ ತಾಗುವಂತೆ ಎಸೆದಿದ್ದ. ಅದರಿಂದ ಬಾಲಕನ ಕಿವಿ ಹಾಗೂ ಮುಖಕ್ಕೆ ತೀವ್ರ ಗಾಯವಾಗಿದೆ. ಬಾಲಕನ ಪೋಷಕರು ನೀಡಿರುವ ದೂರು ಆಧರಿಸಿ ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ತಿಳಿಸಿವೆ.

ಹೊಸ ಆರು ಮಾರ್ಗಗಳಲ್ಲಿ ಬಸ್

ಬೆಂಗಳೂರು: ಹೊಸ ಆರು ಮಾರ್ಗಗಳಲ್ಲಿ ಬಸ್‌ಗಳ ಕಾರ್ಯಾಚರಣೆಯನ್ನು ಬಿಎಂಟಿಸಿ ಆರಂಭಿಸಿದೆ.

ಕೆಂಗೇರಿ ಟಿಟಿಎಂಸಿಯಿಂದ ಜಾಲಹಳ್ಳಿ ಕ್ರಾಸ್, ಜಾಲಹಳ್ಳಿ ಕ್ರಾಸ್‌ನಿಂದ ರಾಜಗೋಪಾಲನಗರ–ಕಂಠೀರವ ಸ್ಟುಡಿಯೋ ಮಾರ್ಗದಲ್ಲಿ ಜಾಲಹಳ್ಳಿ ಕ್ರಾಸ್, ಜಾಲಹಳ್ಳಿ ಮೆಟ್ರೊ ರೈಲು ನಿಲ್ದಾಣದಿಂದ ಲಗ್ಗೆರೆ, ಶ್ರೀನಗರದಿಂದ ಸುಂಕದಕಟ್ಟೆ ಮಾರ್ಗದಲ್ಲಿ ಜಾಲಹಳ್ಳಿ ಕ್ರಾಸ್, ಕೆ.ಆರ್. ಪುರದಿಂದ ದೊಮ್ಮಲೂರು ಟಿಟಿಎಂಸಿ, ಸೇಂಟ್ ಜಾನ್ಸ್ ಆಸ್ಪತ್ರೆಯಿಂದ ಬೊಮ್ಮನಹಳ್ಳಿ–ಹೊಂಗಸಂದ್ರ–ಬೇಗೂರು ಮಾರ್ಗದಲ್ಲಿ ಬನ್ನೇರುಘಟ್ಟ ಸರ್ಕಲ್ ತನಕ ಹೊಸ ಮಾರ್ಗಗಳಲ್ಲಿ ಬಸ್‌ಗಳು ಕಾರ್ಯಾಚರಣೆ ಮಾಡಲಿವೆ.

ಒಟ್ಟು 20 ಬಸ್‌ಗಳು 223 ಸುತ್ತುವಳಿ ಸಂಚರಿಸಲಿವೆ ಎಂದು ಬಿಎಂಟಿಸಿ ತಿಳಿಸಿದೆ.

ಕಾಣೆಯಾಗಿದ್ದಾರೆ

ಶಿವರೆಡ್ಡಿ, ವಯಸ್ಸು 50 ವರ್ಷ
ಕಾಣೆಯಾದ ದಿನಾಂಕ 10–07–2021
ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಸಂಪರ್ಕಿಸಿ:
9740166498 ಅಥವಾ
ಹತ್ತಿರದ ಪೊಲೀಸ್ ಸ್ಟೇಷನ್‌ಗೆ ತಿಳಿಸಿ.
ಹುಡುಕಿಕೊಟ್ಟವರಿಗೆ ಸೂಕ್ತ ಬಹುಮಾನ

Dayananda Sagar Institutions
Bengaluru

BBA / BCom
BCA / BSc –PCM

ADMISSIONS NOW OPEN

The perfect way to start a great and exciting career!

Admissions in DSI Colleges are now open for the academic year 2021 - 22 in the online and offline format.

Now that you are armed with your Plus 2 results please visit our website/ walk into our campuses for on-the-spot admissions.

Dayananda Sagar College of Arts, Science and Commerce (Affiliated to Bangalore University)	Dayananda Sagar Business Academy (Affiliated to Bangalore University)
Shavige Malleswara Hills, Kumaraswamy Layout, Bengaluru-560 111	Opp. Art of Living International Centre, Udayapura, Kanakapura Road, Bengaluru-560082
Programmes: **BBA/MBA, BCom/MCom, BCA/MCA, BSc-PCM**	Programmes: **BBA, BCom, BCA**
Email: principal-dscasc@dayanandasagar.edu	Email :suryakantmk@dayanandasagar.edu Email: dean@dsba.edu.in
www.dscasc.edu.in	www.dsba.edu.in
Ph: **99163 20077 / 90087 44805 / 99808 37449 / 70199 23314**	Ph: **9108025271 / 9108025270** Phone: **+91 8792909134**

21 07 21

Dayananda Sagar Institutions
Shavige Malleswara Hills, Kumaraswamy Layout, Bengaluru-560 111
www.dayanandasagar.edu
Hall of Admissions: **9916075170/9741882324 / 9741214448 / 9741889394 (080) - 42161750**
Email: admissions@dayanandasagar.edu

ಶ್ರೀ ಸಿದ್ಧರಾಮೇಶ್ವರ ಗ್ರಾಮೀಣ ವಿದ್ಯಾವರ್ಧಕ ಸಂಘ (ರಿ) ಚಿಕ್ಕಬಾಸೂರ ತಾ॥ ಬ್ಯಾಡಗಿ ಜಿ॥ ಹಾವೇರಿ

–: ಮರು ಪತ್ರಿಕಾ ಪ್ರಕಟಣೆ:– ಬೇಕಾಗಿದ್ದಾರೆ

ಶ್ರೀ ಸಿದ್ಧರಾಮೇಶ್ವರ ಗ್ರಾಮೀಣ ವಿದ್ಯಾವರ್ಧಕ ಸಂಘ (ರಿ) ಚಿಕ್ಕಬಾಸೂರ ತಾ॥ ಬ್ಯಾಡಗಿ, ಜಿ॥ ಹಾವೇರಿ ಇದರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅನುದಾನಿತ ಪ್ರೌಢ ಶಾಲೆಯಾದ ಶ್ರೀ ಬಾಲಕೀಯರ ಪ್ರೌಢಶಾಲೆ ಆಡೂರ ತಾ॥ ಹಾನಗಲ್ಲ ಜಿ॥ ಹಾವೇರಿ ಇಲ್ಲಿ ವಿವಿಧ ಕಾರಣಗಳಿಂದ ಖಾಲಿ ಇರುವ ಸಹ ಶಿಕ್ಷಕ ಹುದ್ದೆಗಳನ್ನು ತುಂಬಿಕೊಳ್ಳಲು ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ ಇವರ ಆದೇಶ ಸಂಖ್ಯೆ ಜಿ4:ಶಾಶಿಅ:ಖಾಹುತು: ಸಿದ್ಧರಾಮೇಶ್ವರ ಆಡೂರ 56/2019/20 ದಿನಾಂಕ:16–03–2020 ರಂದು ಅನುಮತಿ ನೀಡಿರುತ್ತಾರೆ. ಈ ಪ್ರಕಾರ ಸಹಶಿಕ್ಷಕ ಹುದ್ದೆಗಳನ್ನು ತುಂಬಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ	ಶಾಲೆಯ ಹೆಸರು	ಹುದ್ದೆಯ ವಿವರ	ಅನುಮತಿಸಿದ ವಿಷಯ	ವಿದ್ಯಾರ್ಹತೆ	ಮೀಸಲಾತಿ ಸೂಚ್ಯಂಕ	ಮಿಸಲಾತಿ ಗುಂಪು	ಮಾಧ್ಯಮ	ಹುದ್ದೆಯ ಸಂಖ್ಯೆ	ವೇತನ ಶ್ರೇಣಿ
1	ಬಾಲಕೀಯರ ಪ್ರೌಢಶಾಲೆ ಆಡೂರು ತಾ॥ ಹಾನಗಲ್ಲ ಜಿ॥ ಹಾವೇರಿ	ಸಹ ಶಿಕ್ಷಕರು	ಹಿಂದಿ ಭಾಷೆ	ಬಿ.ಎ, ಬಿ.ಎಡ್	14	ಸಾಮಾನ್ಯ (ಅಂಗವಿಕಲ)	ಕನ್ನಡ	01	33450–62600
2		ಸಹ ಶಿಕ್ಷಕರು	ವಿಜ್ಞಾನ(ಪಿಸಿಎಂ)	ಬಿಎಸ್‌ಸಿ, ಬಿ.ಎಡ್	15	ಪರಿಶಿಷ್ಟ ಜಾತಿ (ಗ್ರಾಮೀಣ ಅಭ್ಯರ್ಥಿ	ಕನ್ನಡ	01	33450–62600
3		ಸಹ ಶಿಕ್ಷಕರು	ಸಮಾಜ ವಿಜ್ಞಾನ	ಬಿ.ಎ, ಬಿ.ಎಡ್	16	ಸಾಮಾನ್ಯ ಮಹಿಳಾ	ಕನ್ನಡ	01	33450–62600

ಈ ಮೇಲ್ಕಂಡ ಸಹಶಿಕ್ಷಕ ಹುದ್ದೆಗಳಿಗೆ ಅರ್ಜಿ ಹಾಕಬಯಸುವ ಅರ್ಹ ಅಭ್ಯರ್ಥಿಗಳು ತಮ್ಮ ಪೂರ್ಣ ವಿವರಗಳೊಂದಿಗೆ ಹಾಗೂ ಅವಶ್ಯಕ ದೃಢಿಕೃತ ದಾಖಲೆಗಳೊಂದಿಗೆ ಪ.ಜಾ ರೂ.1000=00. ಸಾಮಾನ್ಯ ರೂ.1500=00 ರಾಷ್ಟ್ರೀಕೃತ ಬ್ಯಾಂಕಿನಿಂದ ಡಿಡಿಯನ್ನು ಗೌರವ ಕಾರ್ಯದರ್ಶಿ ಶ್ರೀ ಸಿದ್ಧರಾಮೇಶ್ವರ ಗ್ರಾಮೀಣ ವಿದ್ಯಾವರ್ಧಕ ಸಂಘ (ರಿ) ಚಿಕ್ಕಬಾಸೂರ ತಾ॥ ಬ್ಯಾಡಗಿ ಜಿ॥ ಹಾವೇರಿ ಇವರ ಹೆಸರಿನಲ್ಲಿ ಪಡೆದು ಅರ್ಜಿ ಸಮೇತ ಸದರಿಯವರ ವಿಳಾಸಕ್ಕೆ ದಿ:04.08.2021 ರಿಂದ 24.08.2021ರ 21 ದಿನಗಳೊಳಗಾಗಿ ಅರ್ಜಿಗಳನ್ನು ಕಳಿಸಬೇಕು. ಅರ್ಜಿಯ ಒಂದು ಪ್ರತಿಯನ್ನು ಮಾನ್ಯ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಹಾವೇರಿ ಇವರ ವಿಳಾಸಕ್ಕೆ ಕಳಿಸಬೇಕು. ಅಭ್ಯರ್ಥಿಗಳು ಅರ್ಜಿಯ ಜೊತೆಗೆ ತಮ್ಮ ವಿದ್ಯಾರ್ಹತೆ ಮತ್ತು ಮೀಸಲಾತಿಗೆ ಸಂಬಂದಿಸಿದ ಮೂಲ ದಾಖಲೆಗಳ ದೃಢೀಕೃತ ಝರಾಕ್ಸ ಪ್ರತಿಗಳನ್ನು ಲಗತ್ತಿಸಬೇಕು. ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹಾಗೂ ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಆಯ್ಕೆ ಪ್ರಕ್ರಿಯೆಯು ಇಲಾಖಾ ನಿಯಮಾನುಸಾರ ನಡೆಸಲಾಗುವುದು. ಅಭ್ಯರ್ಥಿಗಳಿಗೆ ನೊಂದಾಯಿತ ಅಂಚೆಯ ಮೂಲಕ ಸಂದರ್ಶನಕ್ಕೆ ಕರೆಯಲಾಗುವುದು.

ವಿಶೇಷ ಸೂಚನೆ: “ಈ ಹಿಂದೆ ಅರ್ಜಿ ಸಲ್ಲಿಸಿದವರು ಪುನಃ ಅರ್ಜಿ ಸಲ್ಲಿಸಬೇಕು”

ಸ್ಥಳ:ಚಿಕ್ಕಬಾಸೂರ
ದಿನಾಂಕ:03–08–2021

ಸಹಿ/– ಅಧ್ಯಕ್ಷರು
ಶ್ರೀ ಎಸ್..ಎಸ್.ಜಿ.ವ್ಹಿ ಸಂಘ (ರಿ) ಚಿಕ್ಕಬಾಸೂರ ತಾ॥ಬ್ಯಾಡಗಿ ಜಿ॥ ಹಾವೇರಿ

ಸಹಿ/– ಗೌರವ ಕಾರ್ಯದರ್ಶಿಗಳು
ಶ್ರೀ ಎಸ್..ಎಸ್.ಜಿ.ವ್ಹಿ ಸಂಘ (ರಿ) ಚಿಕ್ಕಬಾಸೂರ ತಾ॥ಬ್ಯಾಡಗಿ ಜಿ॥ ಹಾವೇರಿ

ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂನ ಕಾಡುಬೀಸನಹಳ್ಳಿ ವಿದ್ಯುತ್ ಉಪಕೇಂದ್ರದಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಆ.4 ರಂದು ಬೆಳಿಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: ಕಾಡುಬೀಸನಹಳ್ಳಿ, ಪಣತ್ತೂರು ದಿಣ್ಣೆ, ವಾಗ್ದೇವಿ ಬಡಾವಣೆ, ಮುನಿರೆಡ್ಡಿ ಬಡಾವಣೆ, ಪಾಪಯ್ಯರೆಡ್ಡಿ ಬಡಾವಣೆ, ಪ್ರಕೃತಿ ಅರ್ಬನ್ ವಿಲ್ಲಾ ಬಡಾವಣೆ, ಹೊರವರ್ತುಲ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ರೌಡಿ ಬೈಲ್ ಬಂಧನ

ಬೆಂಗಳೂರು: ಅಪರಾಧ ಕೃತ್ಯಗಳಲ್ಲಿ ನಿರಂತರವಾಗಿ ಭಾಗಿಯಾಗುತ್ತಿದ್ದ ಆರೋಪದಲ್ಲಿ ಸಯ್ಯದ್ ನಾಸೀರ್ ಅಲಿಯಾಸ್ ಬೈಲ್‌ನನ್ನು (31) ಗೂಂಡಾ ಕಾಯ್ದೆಯಡಿ ಬಂಧಿಸಲಾಗಿದೆ.

'ಆತನ ವಿರುದ್ಧ ಕೊಲೆ ಯತ್ನ, ಅಪಹರಣ, ಅತ್ಯಾಚಾರ, ಸುಲಿಗೆ ಯತ್ನ ಸೇರಿದಂತೆ 11 ಪ್ರಕರಣಗಳು ದಾಖಲಾಗಿದ್ದವು. ಶಿವಾಜಿನಗರ ಠಾಣೆ ರೌಡಿಪಟ್ಟಿಯಲ್ಲಿ ಆತನ ಹೆಸರಿದೆ' ಎಂದು ಪೊಲೀಸರು ಹೇಳಿದರು.

'ಶಿವಾಜಿನಗರ, ಭಾರತಿನಗರ, ಅಶೋಕನಗರ ಹಾಗೂ ಇತರೆ ಠಾಣೆಗಳ ವ್ಯಾಪ್ತಿಯಲ್ಲಿ ಆತ ಅಪರಾಧ ಕೃತ್ಯ ಎಸಗುತ್ತಿದ್ದ. ಜನರಲ್ಲಿ ಭಯವನ್ನುಂಟು ಮಾಡುತ್ತಿದ್ದ. ಆತನ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಲು ಕೋರಿ ಇನ್‌ಸ್ಪೆಕ್ಟರ್ ಅವರು ಎಸಿಪಿ ಹಾಗೂ ಡಿಸಿಪಿ ಮೂಲಕ ಕಮಿಷನರ್ ಕಮಲ್ ಪಂತ್ ಅವರಿಗೆ ಪ್ರಸ್ತಾವ ಸಲ್ಲಿಸಿದ್ದರು' ಎಂದೂ ತಿಳಿಸಿದರು. 'ಕಮಿಷನರ್ ಒಪ್ಪಿಗೆ ಸಿಗುತ್ತಿದ್ದಂತೆ ಬೈಲ್‌ನನ್ನು ಬಂಧಿಸಲಾಗಿದೆ. ಸದ್ಯ ಆತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದೂ ಹೇಳಿದರು.

ಆ್ಯಪ್ ಹೂಡಿಕೆ: ₹ 2.40 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆ್ಯಪ್ ಮೂಲಕ ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಬರುವುದಾಗಿ ಆಮಿಷವೊಡ್ಡಿ ನಗರದ ಮಹಿಳೆಯೊಬ್ಬರನ್ನು ವಂಚಿಸಲಾಗಿದ್ದು, ಈ ಬಗ್ಗೆ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉತ್ತರಹಳ್ಳಿಯ 39 ವರ್ಷದ ಮಹಿಳೆ ದೂರು ನೀಡಿದ್ದಾರೆ. 'ಐಬಿಎಂ68 ಆ್ಯಪ್‌ನಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಬರುವುದಾಗಿ ಸ್ನೇಹಿತರೊಬ್ಬರು ಮಹಿಳೆಗೆ ಹೇಳಿದ್ದರು. ಅದನ್ನು ನಂಬಿದ್ದ ಅವರು, ಹಣ ಹೂಡಿಕೆ ಮಾಡಿದ್ದರು. ನಿಗದಿತ ಸಮಯಕ್ಕೆ ಯಾವುದೇ ಲಾಭ ಬಂದಿರಲಿಲ್ಲ. ಅಸಲು ಸಹ ವಾಪಸು ಸಿಕ್ಕಿರಲಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಆ್ಯಪ್ ಸೃಷ್ಟಿಸಿರುವ ಕೆಲವರು ಜನರಿಂದ ಹಣ ಹೂಡಿಕೆ ಮಾಡಿಸಿಕೊಂಡು ವಂಚಿಸುತ್ತಿರುವಾಗಿ ಮಹಿಳೆ ದೂರುತ್ತಿದ್ದಾರೆ. ಕೆಲ ಆ್ಯಪ್‌ಗಳ ಹೆಸರು ನೀಡಿದ್ದಾರೆ. ಪ್ರಕರಣದ ತನಿಖೆ ಮುಂದುವರಿದಿದೆ' ಎಂದೂ ತಿಳಿಸಿವೆ.

ಬಿಎಸ್‌ವೈ, ವಿಜಯೇಂದ್ರಗೆ ನೋಟಿಸ್

ಒಂದನೇ ಪುಟದಿಂದ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವಸತಿ ಯೋಜನೆ ಅನುಷ್ಠಾನ ಮಾಡುವಾಗ ಯಡಿಯೂರಪ್ಪ ಮತ್ತು ಅವರ ಕುಟುಂಬ ಸದಸ್ಯರು ಲಂಚ ಸಂಗ್ರಹಿಸಿದ್ದಾರೆ ಎಂದು ಆರೋಪಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಅಬ್ರಹಾಂ ಖಾಸಗಿ ದೂರು ಸಲ್ಲಿಸಿದ್ದರು. ಭ್ರಷ್ಟಾಚಾರ ತಡೆ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಬೇಕು ಎಂದು ಅವರು ಕೋರಿದ್ದರು.

ಮುಖ್ಯಮಂತ್ರಿ ಆಗಿದ್ದ ಯಡಿಯೂರಪ್ಪ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯಡಿ ವಿಚಾರಣೆ ನಡೆಸಲು ರಾಜ್ಯಪಾಲರ ಪೂರ್ವಾನುಮತಿ ಬೇಕಿತ್ತು. ಅನುಮತಿ ನೀಡಲು ರಾಜ್ಯಪಾಲರು ನಿರಾಕರಿಸಿದ್ದರಿಂದ ವಿಶೇಷ ನ್ಯಾಯಾಲಯ ಖಾಸಗಿ ದೂರನ್ನು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿದ್ದ ಅಬ್ರಹಾಂ, ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಈಗ ಯಡಿಯೂರಪ್ಪ ಮುಖ್ಯಮಂತ್ರಿ ಅಲ್ಲದಿರುವುದರಿಂದ ಪೂರ್ವಾನುಮತಿ ಅನಗತ್ಯ ಎಂದು ಅರ್ಜಿದಾರರು ವಾದಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

MORNING STAR School, Ramachandra Puram, (Rajajinagar Entrance) Bangalore, Require B.Sc/ M.Sc, B.Ed, (Mathematics) Lady Teachers, Contact: 9845018480

BISHOP COTTON BOYS' SCHOOL
BANGALORE
REQUIRES

KINDERGARTEN
ASSOCIATE TEACHER: Regular Degree in any subject, NTT along with good written and spoken English
COMPUTER TEACHER: Regular B.Sc. (Computer Science) / BCA, NTT along with good written and spoken English

JUNIOR SCHOOL
TEACHER: Regular Degree in any subject, B.Ed. with good written and spoken English
ASSOCIATE TEACHER: Regular Degree in any subject, B.Ed. with good written and spoken English
KANNADA TEACHER: Regular B.A. / MA (Kannada) with B.Ed.
HINDI TEACHER: Regular B.A. / MA (Hindi), with B.Ed.

MIDDLE SCHOOL
MATHEMATICS TEACHER: Regular B.Sc. (Maths as one of the major subjects to be studied for 3 years) / M.Sc.,(Mathematics), B.Ed with good written and spoken English
PHYSICS TEACHER: Regular B.Sc. (Physics as one of the major subjects to be studied for 3 years) / M.Sc.,(Physics), B.Ed with good written and spoken English
ENGLISH TEACHER: Regular B.A. (English Literature as one of the major subjects to be studied for 3 years) / M.A., (English), B.Ed. with good written and spoken English\
HISTORY TEACHER: Regular B.A. (History as one of the major subjects to be studied for 3 years) / M.A., (History), B.Ed. with good written and spoken English

SENIOR SCHOOL
MATHEMATICS TEACHER: Regular M.Sc., (Mathematics), B.Ed with good written and spoken English
GEOGRAPHY TEACHER: Regular M.A. / M.Sc. (Geography), B.Ed., with good written and spoken English

ISC
MATHEMATICS TEACHER: Regular M.Sc., (Mathematics), B.Ed with good written and spoken English

Apply to: The Principal,
BISHOP COTTON BOYS' SCHOOL
Residency Road, Bangalore - 560 025.
Last date for submission of applications:
Wednesday, the 18th Aug. 2021 before 3 p.m.
ROUNAQH

Wanted Trained and Experienced Lady Teachers with excellent communication skills in English for Higher Primary and High School Graduate/ Post-Graduate with B.Ed. to teach Science, Social Science and English.
Walk-In Interview between 10 a.m.- 1 p.m. on 5th, 6th and 7th of August, 2021
Florence High School
3rd Stage, 3rd Block Basaveshwaranagar, Bengaluru-560 079
Tel : 080-23236160 080-41536693

RNS FIRST GRADE COLLEGE
(A Unit of R N Shetty Trust and Affiliated to Bangalore University)
Dr. Vishnuvardhan Road, RR Nagar Post, Channasandra, Bengaluru-560098
FACULTY RECRUITMENT
Applications are invited for the post of Assistant Professor in the Department of Commerce /Computer Applications/ Management / Visual Arts/ English / Kannada.
Qualification as per UGC norms Preference will be given to experienced candidate with NET / SLET / Ph.D. Interested candidates can mail their CV to **careerrnsfgc@gmail.com**
Management

WANTED ENGLISH MEDIUM TRAINED LADY TEACHERS B.A /M.A., B.Ed to teach English/ Social Science for Primary /Hindi for Primary/ High School/ B.Sc Computer Science faculty Full time/ Part time/ Lady Graduates Interested can also apply. Contact in person (10.00 am-3.00 pm on all working days) -Secretary, Deccan Educational Society, No.95, 3rd Cross, Srirampuram, Bengaluru– 560021 (Near Sampige Theater, Malleswaram) Mobile: 8660030680 (Between 11.00 am -3.00 pm)

WANTED: EXPERIENCED Lecturers M.Com,MCA (Computer Science) & MA (History) Attractive salary. Contact Principal with original Certificates between 10.00 am to 1.00 pm SREE-VENKATESHWARA PU-COLLEGE, Krishnarajapuram, Bangalore-36. Contact:9036068144, 7411135627

REQUIRED TEACHERS for Maths, Science, English and Computer from Nursery to 10th standard. Dedicated, fluent in English, Knowledge of computers and enthusiastic teachers are well appreciated. GNANA GANGOTHRI VIDYALAYA, 7th cross, 7th main, Ittamadu, B.S.K-3rd Stage, Bengaluru-85.

HERITAGE PUBLIC SCHOOL, Srinidhi Layout, Konanakunte, J.P.Nagar 8th-Phase, Bangalore-62. Urgently Requires Hindi and Chemistry/Biology TEACHERS For High School. Contact: 9901733776.

WANTED
BA / B.Com / B.Sc / M.Sc / B.Ed / Fresher / Experience Teachers Class 5 to 10 Science (PCM / CBZ) Maths / Social / English / Kannada / Hindi
WALK IN INTERVIEW
ALL WORKING DAYS B/w 10.30 AM TO 1.00PM
MATHA'S INTERNATIONAL SCHOOL (ICSE) MATHA'S ENGLISH HIGH SCHOOL CBSE / State Syllabus
55/2 B, 11th K.M. Hosur Main Road, Garuve Bhavi Palya, Bommanahalli Post, Bengaluru - 560 068 (Google Map Location : Matha's School) BMTC Bus Facility AVAIL.
Mob: 8971672116 / 8277257669 / 9449814917 / 8277256859

WANTED
Nursing College requires following staff.
M.Sc / B.Sc NURSING TUTORS
OFFICE STAFF (FEMALE) Degree with Computer Knowledge
SUPERVISOR (MALE)
Experienced / Fresher's may apply to: mccn.admission 2020@gmail.com; mountcarmelcollegeofnursing @gmail.com.
CONTACT: 9008542044-9008421044
MCCN-21202

TEACHERS WANTED 1st To 10th Std Teachers, English Medium All Subjects SAGAR-CONVENT Kanakapura Main Road Bangalore-82 Near APS Engineer College, Good Salary & Vehicle Facility:-9342552428

WANTED ENGLISH, Social-Studies,Hindi, Sanskrit, for Primary & High School. Contact immediately: 9740382364/9900049664

WANTED EXPERIENCED PRINCIPAL/ HEADMASTER/ LECTURER/ TEACHERS for Pre-primary, Primary, High school & PU College. Attractive Salary,food and accommodation available. Location: Around Bangalore Contact: 6364600930 Mail your CV to: hrhopetowin@gmail.com

WANTED LADY Teachers for High School Hindi & Maths Hebbal Kempapura, Coffee Board-Layout, Ph:22330003, 9008981637

Engg/ Production Technical

REQUIRES
FOR A REPUTED ESTABLISHMENT MANUFACTURING SHEET METAL PRESSED COMPONENTS SITUATED AT BENNIGANAHALLI, OLD MADRAS ROAD, BANGALORE.
1. GENERAL MANAGER WORKS -INDEPENDENT CHARGE.
2. TOOL ROOM MANAGER.
3. MANAGER – QUALITY .
4. QUALITY INSPECTORS
Note : 1 to 3 GRADUATE / DIPLOMA ENGINEERS WITH MINIMUM 10 YEARS and for Sl. No.4 - 5 YEARS EXPERIENCE
ATTRACTIVE SALARY ASSURED
Apply : ahp@ahppl.com
Tel : 080 28510188

Accounts & Finance

WANTED RESIDENT Accounts Executive with accounts, computer & tally knowledge for a factory at Nagamangala, Mandya District. Good Salary, food & accommodation provided. Send your resume to standardbricksynk@gmail.com

WANTED: ACCOUNTANT ASSISTANT With Computer Knowledge- FOR A CORPORATE RESELLER at Jayanagar- Exp 3-4 years- Phone- 26632953/ 959/ rana@mentorsystems.co.in

Graphic Designers

WANTED MALE/ Female Graphic Designer for HI- END Prepress Software for a Pvt Limited Company in around Rajajinagar Age below 40 years Contact: 9108458798/ 23384085

Wanted

HIRING FOR reputed financial services company. Min Experience of 2 to 3 years in Stocks, Mutual funds, research. Apply before 14th August to fsinfo40@gmail.com

Walk-in

REQUIRED: OFFICE Admin (male/ female) for NCC Packers and Movers company located bangalore, Magadi Road minimum 3 years experience 9916646172

Hospital & Medical Jobs

HOSMAT HOSPITAL
is Recruiting the following Medical Professionals at HOSMAT Second Unit at Ring Road, Hennur Junction (open) and Third Unit of HOSMAT is opening shortly at Sadashivanagar, Palace Orchards, #18, Bellary Main (Airport) Road.

1. Medical Director – Hospital experience
2. CEO / COO with Hospital experience(Male / Female)
3. Orthopaedic Surgeons and Sub specialists
4. Foot and Ankle Orthopaedic Surgeon
5. Paediatrician
6. General Surgeon with Laparoscopic and Trauma experience
7. Gynecologists
8. General Physician
9. Internists
10. Neurologist and Stroke Specialists
11. Paediatric Neurologist
12. Cranial and Skull Base Neuro Surgeons
13. Non interventional Cardiologist
14. Neuro Interventional Radiologist
15. HOD Anesthesia Department
16. Neuro/ Cardiac/ Paediatric Anaesthestists and Intensivists
17. Urologist
18. Nephrologist
19. Oncologist – Surgical and Medical
20. ENT – Surgeon
21. Pulmonologist
22. Qualified Emergency Medicine Doctors
23. CMOS
24. GI Team
25. Haematologist
26. Ophthalmologist
27. Diabetologist / Endocrinologist
28. Plastic surgeon
29. Vascular & Microvascular surgeon
30. ICU Registrars
31. Faciomaxillary surgeons
32. Dentists - BDS with 3 years' experience in Root Canal and Dental Specialists & Dental Implantologist.
33. Paediatric Dentist
34. Registrars – Orthopaedics, Trauma and General
35. Medico Legal consultants

Medical & Surgical Specialty Groups and Attending/ Visiting Consultants are also welcome to be Part of HOSMAT Team.
Call: 080 41139762 / 9108450312
recruitment@hosmathospitals.com; coordinatorhosmat@gmail.com

General

'WANTED FRESH BE GRADUATES for a Export Company in Peenya: Contact 9845963410

OFFICE ASSISTANT positions for Fortuna Conect (visit www.fortunaconect.com for details) at Nagarabhavi, male / female, Bcom/ BBM /BBA. Final year students are welcome. Email bio-data to resume@fortunawealth.in. Call 99013 98865 10.30 am to 5 pm only

WANTED MARRIED hindu couple husband as driver not more than 40 years and wife as Cook for a family of 5 at Bangalore Good salary Accommodation and food Police verification will be made Call 9741900909

EARN UP TO 1 lakh monthly. Immediate joining & required insurance Agents Also. Contact- 9380875722.

Medical Transcriptionist

WANTED PHARMACIST for a reputed medical store in Chandralayout, Bangalore. Good salary.Call :7349020277/ 9900124007

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/ 7676760399

Security & Detectives

SENTINEL SECURITY, a reputed Security Agency Urgent requirement for Field Officers Total package: Rs.25,000/-. Contact 9035221652

Manager

WANTED RESIDENT MANAGER for a factory building materials at Nagamangala, Mandya District. Good Salary, food & accommodation provided. Send your resume to standardbricksynk@gmail.com

Marketing & Sales

WANTED MARKETING Executives For Private Limited Company Bangalore, Age Below 40 with Good Communication Skill fluent In English, Kannada, Hindi Contact: 9108458798/ 23384085

GOIT DISTRIBUTION Pvt Ltd, Karnataka,RequiresMarketing Manager for IT products. Contact: Mr.Ravi: 9003206505/ Mr.Sai:9840799997

WANTED TEAMLEADERS, Sales Executives, and Telecallers. Salary+ incentives. Opportunity to earn upto 20-25K. Age 22/50years. 8147311490

EDUCATIONAL

Admission

ONE SITTING: B.Tech/ Diploma/ MBA/MCA/M.Sc/ M.Com/BBA/BCA/B.Sc/B.Com /LL.B/D.Pharm/ B.Pharm/ B.Ed. Recognised Govt. Genuine students need contact.Asha Institute, Bangalore. Ph:9448460103/ 7093438248

SOCIAL SERVICES

Others

HOME NURSES available for HOME/ HOSPITAL/ PATIENT CARE-24/7. MAJ Gandhinagar, Bangalore. Contact: 7022399993, 6366883838

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PUBLIC NOTICE

PUBLIC NOTICE

My client intends to purchase the property mentioned and described in the Schedule hereunder from its Owners, **Sri. Santosh Suresh,** son of Sri. Suresh J.S and **Sri. Chandramouli .S**, son of Sri. Suresh J.S. The Owners represent and warrant that they are the absolute owners of the Schedule Property and have good marketable, right, title and interest therein and that apart from them there are no other person/s having any right or claim over the Schedule Property and they have not entered into any Agreements/ Memorandum of Understanding etc. with any third party which is subsisting. The Owners further represent that they have not mortgaged, created any lien, or encumbered the Schedule Property or any part thereof in any manner to any person/s. Any person/s having objection/s or claims shall with documentary evidence lodge their objection(s)/claim(s) **within fifteen (15) days** from the date of this notice with the undersigned, failing which my client shall proceed with the above-mentioned transaction.

SCHEDULE

All that piece and parcel of the Industrial Plot bearing BBMP Katha No. 133 (old Katha No. 13B) and Industrial Plot bearing BBMP Katha No. 13B (earlier Plot No. 2B, carved out of Survey No. 42, of Dyavasandra Village), situated at Dyavasandra Industrial Area, II Phase, Dyavasandra Village, Krishnarajapura Hobli, Bengaluru East Taluk, measuring in total 17,250 square feet and bounded on the:

East by : Property bearing Plot No. 2C
West by : 40 Feet Wide Road
North by : Remaining portion of the property bearing Plot No. 2B
South by : Property bearing Plot No. 1B

Jayanth M. Pattanshetti
Advocate,
Jayanth Pattanshetti Associates
102, Ground Floor, "Rams Infantry Manor", Infantry Road, Bengaluru-560001.
Ph.: 080 41238516 / 41238367
Place : Bengaluru
Date: 03-08-2021

REAL ESTATE BUYING

Sites

Banashankari

BDA SITES Wanted Banashankari 6th Stage, Anjanapura, Vishweshwaraiah Layout,20x30,30x40, 40x60,50x80, Immediate Settlement.Contact: 9845444588

REAL ESTATE SELLING

Industrial & Factory

Tumkur Road

SALE, 100/ 20/ 4 acres lands. T.Begur to Thayamagondlu, Dobespet to Koratagere Road. 9972636255, 9141326819

Sites

Hebbal

WANTED/ AVAILABLE Plots/houses Arkavathy Layout, R.T.Nagar, Thanisandra, Hebbal, Jakkur, Yelahanka, HBR,Hennur. Immediate settlement. "SPACELINKS" 9845129934.

Kengeri

KENGERI LAYOUT near Busstop East Facing Site 30x40 cleartitles Going Cheap. Call: 8660514834, 9342410224.

Kumaraswamy Layout

BDA 30X40 Intermediate Vacant 2nd Stage, Near 15F/G Bus Stop, ISKCON South, Genuine Buyers Call 9972095359 Brokers Excuse.

Multiple Locations

30X50 SANJAYNAGAR, 50x80 Bhoopasandra, 30x40 Arkavathi, 30x40 KEB Layout, 200x200 Malleshwaram, 80x120 Sadashivanagar. 9538111239.

Sunkadakatte

SUNKADKATTE NEAR Anjali School South Facing 30X50 Available for Sale. Rate 5300/Sqft (Negotiable) Contact: 9880439138

CONNECT

ವರಮಹಾಲಕ್ಷ್ಮಿ ಹಬ್ಬದ ವಿಶೇಷ ಸಂಗ್ರಹ
ನ್ಯಾಷನಲ್ ಸಿಲ್ಕ್ ಎಕ್ಸ್‌ಪೋ
ನೇಕಾರರಿಂದ ನೇರ ಮಾರಾಟ
ಭಾರತದ ರಾಜ್ಯ ಮತ್ತು ರಾಷ್ಟ್ರೀಯ ಪ್ರಶಸ್ತಿಗಳಿಗೆ ಭಾಜನರಾದ ಅತ್ಯುನ್ನತ ಕಲಾವಿದರಿಂದ ತಯಾರಿಸಲ್ಪಟ್ಟ ಪರಿಶುದ್ಧ ರೇಷ್ಮೆ ಮತ್ತು ಕಾಟನ್ ಕೈಮಗ್ಗ ಉತ್ಪನ್ನಗಳು
31 ಜುಲೈ – 8 ಆಗಸ್ಟ್
ಸ್ಥಳ: ವೈಟ್ ಪೆಟಲ್ಸ್ (ವಿಜಯನಗರ)
ಬಿಎಂಟಿಸಿ ಬಸ್ ಡಿಪೋ, ರಿಲಯನ್ಸ್ ಮಾರ್ಟ್ ಪಕ್ಕ, ಮಾರುತಿ ಮಂದಿರದ ಹತ್ತಿರ, ವಿಜಯನಗರ, ಬೆಂಗಳೂರು
ಸಿಲ್ಕ್ & ಕಾಟನ್ ಸೀರೆ | ಕುರ್ತಿ | ಡ್ರೆಸ್ ಮಟೀರಿಯಲ್ | ಫ್ಯಾಷನ್ ಜ್ಯುವೆಲ್ಲರಿ
UP TO 50% Discount
All Debit & Credit cards accepted M: 9412258826
All Covid-19 precautions to be taken• Social Distancing • Face Mask • Hand Sanitizer

BUSINESS

Business to Business

Business

WANTED BUSINESS Partner, Lahab Veg Hotel, Investment Rs 5 Lakhs, Income 50:50. Contact: 8892501007/ 9606701007

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

Business Offers

General

EARN REGULAR INCOME through online TRADING from your home. Forex, Equity and Commodity segments. Get TRAINED by experts. Call 8105303232

PERSONAL

Change of Name

I, NARAYAN MANU NAIK S/o. Mani, R/a#250, Abhihitlu Bhatkal, Belke, Uttara Kannada, Karnataka-581320 Have Changed My Name to ISHWAR MANI NAIK Vide Affidavit Dated: 03.08.2021 Before Notary A.Manjula, Bangalore-09.

I, ANANDA SANJEEVA S/o. Barkur Sanjeeva R/a, Sobha Sunbeam #1051, Survey#8/1, Manavarathekaval Talaghattapura, Kanakapura Road, Bengaluru- 560062 Have Changed My Minor Daughter Name From ANVITHA ANANDA to ANVITHA ANAND (DOB: 04.06.2004) Vide Affidavit Dated:2.8.2021 Before Notary N.Narayana Swamy, Bangalore-94.

I, TAISEEN, residing at No. 2733/1 and 2, 2nd Main, 4th Cross, Perfect Driving School, MCCB Block P. O, Southern Extension, Davanagere -577004, have changed my name to TAISEEN JABBAR, vide affidavit dated 29.07.2021, sworn before notary Sivakumara M.N, Bengaluru.

I, SHAHIN SULTHANA, residing at No. 3263, Asha Saw Mill, Shivamogga Road, Vidyanagar, Harihara, Opp. LIC Office, Harihara, Davanagere -577601, have changed my name to SHAHIN SULTANA R, vide affidavit dated 29.07.2021, sworn before notary Sivakumara M.N, Bengaluru.

I, R. ESHWAR, aged about 50 Years, R/at #2-N, East Wing Fernhill Garden, 6th Sector, H.S.R Layout, Bengaluru - 560102. have changed our Son's name from E. Rakshith Rao Bhonsale to E. RAKSHITH RAO BHONSLE vide affidavit dated 03/08/2021 before notary L.Gopalakrishna, Bangalore.

MYSELF P.R.Vittal residing at No.2979, 8th main, 4th cross, Kumarswamy layout 2nd stage, Bangalore-560078. I had changed my son's name from KIRAN.P.V to ANEESH PISSAY vide affidavit dated 27/05/2008 sworn before Notary P.Vijay Kumar REG NO.2321, Bangalore.

14832909K– NK/MT– VELPULA BALUDU at ASC Centre & College, Bangalore changed my Minor Daughter's name from KIRTHI to VELPULA KIRTHI notary KV Mani Bangalore.

6485481L, EX-HAV, A MURUGAN, Vill- INTHERA NAGAR, KAMUTHKUDI, PARAMAKUDI, RAMANATHAPURAM, TAMIL NADU, have changed my son's name from KAMALAK GANTHI to KAMALAGANDHI M, 31/07/2021, Notary K.V. Mani, Bangalore

V NANDINI W/o 14832909K– NK/MT– VELPULA BALUDU, R/a Jillela, Nandayal, Kurnool, Andhra Pradesh changed name from V NANDINI to VELPULA NANDINI notary KV Mani Bangalore.

I, AFZAL UNNISA BASHIR AHMED R/o.#502, 5th Cross, 2nd Block, RT.Nagar, Bengaluru- 560032 have changed name to AFZAL UNNISA vide affidavit 02.08.2021 before Notary Hemalatha, Bangalore-27.

I GEETHA BADKAMBI R/a Flat #202, Indraprastha Ruhe Apartments, Whitefield main Road, Near Hopefarm Signal, Whitefield, Bangalore-66 Have Changed my name to GEETHA BHADKAMBII vide Affidavit Dated 02/08/2021 Before Notary Aravind Patil G.G Bangalore

I, SURESH NARAYANAREDDY, R/@ near church, Anekal taluk, Yadavanahalli, Bengaluru Rural-562017, have changed my name to SURESH YADAVANAHALLI NARAYANAREDDY vide affidavit dated 03/08/2021 before notary K.V.Mani

I, VISHWANATH S R/at No.68, 4thcross, Ramakrishna Nagar, 4th Block, Nandini Layout, Bangalore- 560096, have changed my name to S VISHWANATHAN vide affidavit dated: 3/8/2021 Before Notary R.Raghunath Rao Bangalore

PUBLIC NOTICE
To Place your Classified Ads Contact:
9880856233

DH DECCAN HERALD
ಪ್ರಜಾವಾಣಿ ಕ್ಲಾಸಿಫೈಡ್ಸ್
NAME CHANGE
BOOK YOUR NAME CHANGE AD IN DECCAN HERALD ALL KARNATAKA+ PRAJAVANI BENGALURU ALL DAY
CHANGE OF NAME @40/-* Per Words
Condition Apply*
For More Details Contact:
9880856233 | 9731810277
9901641752 | 9845114560 | 9886213331
080- 45557163 | 164

EDUCATION SPECIAL
DH Classifieds | PV Classifieds
We are coming out with special offer for Admission Notice, Education Success Congratulation Ads
For details contact:
Jerry: 9731810277 Vishal: 9845114560
Tanveer: 9886213331
E-mail: dhclassifieds@deccanherald.co.in
DH Classifieds

ಕೇರಳ, ಮಹಾರಾಷ್ಟ್ರದಿಂದ ಬಂದ ಪ್ರಯಾಣಿಕರ ಮೇಲೆ ವಿಶೇಷ ನಿಗಾ • ಬಿಬಿಎಂಪಿ ತಪಾಸಣಾ ತಂಡದಿಂದ ಪರಿಶೀಲನೆ

1,736 ಮಂದಿಗೆ ಪರೀಕ್ಷೆ: ಒಬ್ಬರಿಗೂ ಕೋವಿಡ್ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳ ಹಾಗೂ ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಾ ಇರುವುದರಿಂದ ಈ ರಾಜ್ಯಗಳಿಂದ ಬಂದಿರುವ 1,736 ಮಂದಿಯನ್ನು ನಗರದಲ್ಲಿ ಎರಡು ದಿನಗಳಲ್ಲಿ ತಪಾಸಣೆಗೆ ಒಳಪಡಿಸಲಾಗಿದೆ. ಯಾರೊಬ್ಬರಲ್ಲೂ ಸೋಂಕು ಪತ್ತೆಯಾಗಿಲ್ಲ.

'ಕೇರಳ ಹಾಗೂ ಮಹಾರಾಷ್ಟ್ರದಿಂದ ನಗರಕ್ಕೆ ಪ್ರಯಾಣಿಕರನ್ನು ಬಿಬಿಎಂಪಿ ವಿಶೇಷ ತಪಾಸಣಾ ತಂಡಗಳು ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಹಾಗೂ ವಿಮಾನ ನಿಲ್ದಾಣಗಳಲ್ಲಿ ಪರಿಶೀಲನೆ ನಡೆಸುತ್ತಿವೆ. ಅವರು 72 ಗಂಟೆಯ ಈಚೆಗೆ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಿಸಿಕೊಂಡ ವರದಿ ಹಾಜರುಪಡಿಸುವ ಮೂಲಕ ತಮಗೆ ಕೋವಿಡ್ ಇಲ್ಲ ಎಂಬುದನ್ನು ಸಾಬೀತುಪಡಿಸಬೇಕು. ಆರ್‌ಟಿಪಿಸಿಆರ್ ವರದಿ ಹಾಜರುಪಡಿಸದವರನ್ನು ನಮ್ಮ ಸಿಬ್ಬಂದಿ ಕೋವಿಡ್ ಪರೀಕ್ಷೆಗೆ ಒಳಪಡಿಸುತ್ತಿದ್ದಾರೆ. 2 ದಿನಗಳಲ್ಲಿ ಪರೀಕ್ಷೆಗೆ ಒಳಪಡಿಸಿದ ಯಾರೊಬ್ಬರಲ್ಲೂ ಕೊರೊನಾ ಸೋಂಕು ಪತ್ತೆಯಾಗಿಲ್ಲ' ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ಬಿ.ಕೆ.ವಿಜಯೇಂದ್ರ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಈ ರೀತಿ ಕೋವಿಡ್ ಪರೀಕ್ಷೆಗೆ ಒಳಪಡುವ ಪ್ರಯಾಣಿಕರನ್ನು ಫಲಿತಾಂಶ ಬರುವವರೆಗೆ ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಡಿಸಲು ಬಿಬಿಎಂಪಿ ಸಿದ್ಧತೆ ನಡೆಸಿದೆ. ಸದ್ಯಕ್ಕೆ ಈ ವ್ಯವಸ್ಥೆ ಸಜ್ಜಾಗಿಲ್ಲ. ಹಾಗಾಗಿ ಪರೀಕ್ಷೆಗೆ ಒಳಗಾದವರು ಮನೆಯಲ್ಲೇ ಪ್ರತ್ಯೇಕ ವಾಸದಲ್ಲಿರಬೇಕು. ಹೊರಗಡೆ ಅಡ್ಡಾಡಬಾರದು ಎಂದು ಸೂಚನೆ ನೀಡಿ ಅವರನ್ನು ಬಿಬಿಎಂಪಿ ಸಿಬ್ಬಂದಿ ಬಿಟ್ಟು ಕಳುಹಿಸುತ್ತಿದ್ದಾರೆ.

'ಸಾಂಸ್ಥಿಕ ಕ್ವಾರಂಟೈನ್‌ಗೆ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಇಂತಹ ಕ್ವಾರಂಟೈನ್ ಕೇಂದ್ರಗಳಲ್ಲಿ ಒಳಗಾಗುವ ಪ್ರಯಾಣಿಕರಿಗೆ ಮೂಲಸೌಕರ್ಯಗಳನ್ನು ಪಾಲಿಕೆ ವತಿಯಿಂದಲೇ ಉಚಿತವಾಗಿ ಒದಗಿಸುತ್ತೇವೆ. ಒಂದು ವೇಳೆ ಕೆಲವು ಪ್ರಯಾಣಿಕರು ಹೆಚ್ಚಿನ ಸೌಕರ್ಯಗಳಿರುವ ವ್ಯವಸ್ಥೆ ಬಯಸಿದರೆ, ಅಂತಹವರು ಖಾಸಗಿ ಹೋಟೆಲ್‌ಗಳಲ್ಲಿ ಪ್ರತ್ಯೇಕವಾಸಕ್ಕೆ ಒಳಗಾಗಲು ಅವಕಾಶ ಕಲ್ಪಿಸಲಾಗುತ್ತದೆ. ಆದರೆ, ಅದರ ವೆಚ್ಚವನ್ನು ಅವರೇ ಭರಿಸಬೇಕಾಗುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಆರ್‌ಟಿಪಿಸಿಆರ್ ಪರೀಕ್ಷಾ ವರದಿ ಹೊಂದಿಲ್ಲದ ಕೆಲವು ಪ್ರಯಾಣಿಕರು ಕಡ್ಡಾಯ ಕೋವಿಡ್ ಪರೀಕ್ಷೆಗೆ ಒಳಗಾಗಲು ಒಪ್ಪುತ್ತಿಲ್ಲ. ಅವರಿಗೆ ಮನವರಿಕೆ ಮಾಡಲು ಪಾಲಿಕೆಯ ವಿಶೇಷ ತಂಡದ ಸಿಬ್ಬಂದಿ ಹರಸಾಹಸ ಪಡುತ್ತಿದ್ದಾರೆ. ಕೆಲವು ಪ್ರಯಾಣಿಕರು ಪಾಲಿಕೆ ಸಿಬ್ಬಂದಿ ಜೊತೆಗೆ ವಾಗ್ವಾದಕ್ಕೂ ಇಳಿಯುತ್ತಿದ್ದಾರೆ.

'ಕೇರಳ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿ ಸೋಂಕು ಹೆಚ್ಚುತ್ತಿದೆ. ಅಲ್ಲಿಂದ ಇಲ್ಲಿಗೆ ಪ್ರಯಾಣಿಸುವ ಮೂಲಕ ಇಲ್ಲೂ ಸೋಂಕು ಹೆಚ್ಚಳ ಆಗುವುದಕ್ಕೆ ಆಸ್ಪದ ಕಲ್ಪಿಸಬಾರದು ಎಂಬ ಕಾರಣಕ್ಕೆ ಪಾಲಿಕೆ ಈ ಕ್ರಮ ಕೈಗೊಂಡಿದೆ. ಇದು ಜನರ ಒಳಿತಿನ ಸಲುವಾಗಿ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಇದನ್ನು ಪ್ರಯಾಣಿಕರು ಕೂಡಾ ಅರ್ಥಮಾಡಿಕೊಳ್ಳಬೇಕು' ಎಂದರು.

ರಾತ್ರಿ 10ರ ಬಳಿಕ ಹೋಟೆಲ್ ವಹಿವಾಟಿಗೆ ಇಲ್ಲ ಅವಕಾಶ : ಬಿಬಿಎಂಪಿ ಸೂಚನೆ



ಬೆಂಗಳೂರು: ನಗರದ ಹೋಟೆಲ್‌ಗಳು ರಾತ್ರಿ 10 ಗಂಟೆ ಬಳಿಕ ವಹಿವಾಟು ನಡೆಸಬಾರದು ಎಂದು ಬಿಬಿಎಂಪಿ ಸೂಚನೆ ನೀಡಿದೆ.

ಹೋಟೆಲ್ ಮಾಲೀಕರ ಸಂಘದ ಪದಾಧಿಕಾರಿಗಳ ಜೊತೆ ವರ್ಚುವಲ್ ರೂಪದಲ್ಲಿ ಮಂಗಳವಾರ ಸಭೆ ನಡೆಸಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ನಗರದಲ್ಲಿ ಕೋವಿಡ್ ಸೋಂಕು ನಿಯಂತ್ರಣದಲ್ಲಿರಬೇಕಾದರೆ ಎಲ್ಲ ಹೋಟೆಲ್‌ಗಳಲ್ಲೂ ಕೋವಿಡ್ ನಿಯಂತ್ರಣ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು' ಎಂದು ಸೂಚನೆ ನೀಡಿದರು.

'ನಗರದಲ್ಲಿ ರಾತ್ರಿ 10 ರಿಂದ ಮುಂಜಾನೆ 5 ರವರೆಗೆ ರಾತ್ರಿ ಕರ್ಫ್ಯೂ ಜಾರಿಯಲ್ಲಿದೆ. ಆದರೂ ಬಹುತೇಕ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು ರಾತ್ರಿ 10 ಬಳಿಕವೂ ವಹಿವಾಟು ನಡೆಸುತ್ತಿವೆ. ಇದರಿಂದಾಗಿ ನಾಗರಿಕರು ಹೊರಗಡೆ ಅಡ್ಡಾಡುತ್ತಿದ್ದಾರೆ. ಇನ್ನು ರಾತ್ರಿ 10ರ ಒಳಗೆ ಹೋಟೆಲ್‌ಗಳನ್ನು ಮುಚ್ಚಬೇಕು' ಎಂದು ಕಟ್ಟುನಿಟ್ಟಾಗಿ ತಿಳಿಸಿದರು.

'ಅಡುಗೆ ಸಿಬ್ಬಂದಿ, ಊಟ ಬಡಿಸುವವರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಗ್ರಾಹಕರು ಊಟ/ ತಿಂಡಿ ತಿನಿಸು ಸೇವಿಸುವ ಸಂದರ್ಭದ ಹೊರತಾಗಿ ಇತರ ವೇಳೆ ಮಾಸ್ಕ್ ಧರಿಸುವಂತೆ ನೋಡಿಕೊಳ್ಳಬೇಕು. ಗ್ರಾಹಕರು ಅಂತರ ಕಾಯ್ದುಕೊಳ್ಳುವುದಕ್ಕೆ ಅಗತ್ಯ ವ್ಯವಸ್ಥೆ ಕಲ್ಪಿಸಬೇಕು. ನಿಯಮ ಪಾಲನೆ ಕುರಿತು ಅವರಲ್ಲಿ ಅರಿವು ಮೂಡಿಸಬೇಕು' ಎಂದರು.

'ಹೋಟೆಲ್‌ನ ಸಿಬ್ಬಂದಿಯನ್ನೂ ಆಗಿಂದಾಗ್ಗೆ ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕು. ಸೋಂಕು ಪತ್ತೆಯಾದಲ್ಲಿ, ಅಂತಹ ಸಿಬ್ಬಂದಿಯ ಪ್ರತ್ಯೇಕ ವಾಸಕ್ಕೆ ವ್ಯವಸ್ಥೆ ಸಜ್ಜಾಗಿರಬೇಕು' ಎಂದು ತಿಳಿಸಿದರು.

'ರೆಸ್ಟೋರೆಂಟ್‌ಗಳಲ್ಲಿ, ಪಾರ್ಟಿ ಹಾಲ್‌ಗಳಲ್ಲಿ ಕೋವಿಡ್ ನಿಯಮ ಕಟ್ಟುನಿಟ್ಟಾಗಿ ಪಾಲನೆಯಾಗುವಂತೆ ನೋಡಿಕೊಳ್ಳಬೇಕು. ಯಾವುದಾದರೂ ಸಮಾರಂಭ ನಡೆಯುವಾಗ ನಿಯಮಗಳ ಉಲ್ಲಂಘನೆ ಆಗದಂತೆ ಸಂಬಂಧಪಟ್ಟ ಸಿಬ್ಬಂದಿ ಎಚ್ಚರ ವಹಿಸಬೇಕು' ಎಂದರು.

ಹೋಟೆಲ್ ಕಾರ್ಮಿಕನಿಗೆ ಕೋವಿಡ್

ಜ್ಞಾನಭಾರತಿ ವಾರ್ಡ್‌ನ ಎನ್.ಜಿ.ಎಫ್ ಬಡಾವಣೆಯ ಹೋಟೆಲ್‌ನ ಕಾರ್ಮಿಕರೊಬ್ಬರಲ್ಲಿ ಕೋವಿಡ್ ದೃಢಪಟ್ಟಿದೆ. ಹಾಗಾಗಿ ಹೋಟೆಲ್‌ನ ಎಲ್ಲ ಕಾರ್ಮಿಕರನ್ನೂ ಬಿಬಿಎಂಪಿ ಕೋವಿಡ್ ಪರೀಕ್ಷೆಗೆ ಒಳಪಡಿಸಿದೆ. ಹೋಟೆಲ್ ಕಟ್ಟಡಕ್ಕೆ ಸೋಂಕು ನಿವಾರಕ ದ್ರಾವಣ ಸಿಂಪಡಣೆ ಮಾಡಲಾಗಿದ್ದು, ಹೋಟೆಲನ್ನು ಮುಚ್ಚಲಾಗಿದೆ.

'ನಾಗರಭಾವಿ ಮುಖ್ಯರಸ್ತೆ ಬಳಿಯಲ್ಲಿರುವ ನಮ್ಮೂರ ತಿಂಡಿ ಹೋಟೆಲ್ ಕಾರ್ಮಿಕರನ್ನು ಕೋವಿಡ್- ಪರೀಕ್ಷೆಗೆ ಒಳಪಡಿಸಿದ್ದೆವು. ಈ ವೇಳೆ ಒಬ್ಬ ವ್ಯಕ್ತಿಗೆ ಸೋಂಕು ದೃಢಪಟ್ಟಿದೆ. ಚಿಕಿತ್ಸೆಗಾಗಿ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದೇವೆ. ಪರೀಕ್ಷೆಗೆ ಒಳಪಟ್ಟ ಇತರ ಕಾರ್ಮಿಕರನ್ನು ಫಲಿತಾಂಶ ಬರುವವರೆಗೆ ಕ್ವಾರಂಟೈನ್‌ನಲ್ಲಿ ಇರಿಸಲಾಗುತ್ತದೆ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ರಾಜರಾಜೇಶ್ವರಿನಗರ ವಲಯದ ಎಲ್ಲ ಹೋಟೆಲ್‌ಗಳ ಕಾರ್ಮಿಕರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸುವಂತೆ ಮತ್ತು ಅವರೆಲ್ಲರಿಗೂ ಕೋವಿಡ್ ಲಸಿಕೆ ಹಾಕಿಸುವಂತೆ ವಲಯ ಆಯುಕ್ತ ರೆಡ್ಡಿ ಶಂಕರಬಾಬು ಅವರು ಹೋಟೆಲ್‌ಗಳ ಮಾಲೀಕರಲ್ಲಿ ಮನವಿ ಮಾಡಿದ್ದಾರೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,28,515 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
8,986 ▲	12,03,636 ▲	15,892 ▲

ಮಂಗಳವಾರದ ಏರಿಕೆ	
ಹೊಸ ಪ್ರಕರಣ	477 ▲
ಗುಣಮುಖ	154 ▼
ಸಾವು	7 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	19.99 ಕೋಟಿ ▲	3.17 ಕೋಟಿ ▲
ಸಕ್ರಿಯ ಪ್ರಕರಣ	1.53 ಕೋಟಿ ▲	4.04 ಲಕ್ಷ ▲
ಗುಣಮುಖ	18.03 ಕೋಟಿ ▲	3.09 ಕೋಟಿ ▲
ಸಾವು	42.55 ಲಕ್ಷ ▲	4.25 ಲಕ್ಷ ▲
ದಿನದ ಮಾಹಿತಿ: ಹೊಸ ಪ್ರಕರಣ	4.80 ಲಕ್ಷ ▲	42,026 ▲
ದಿನದ ಮಾಹಿತಿ: ಗುಣಮುಖ	4.05 ಲಕ್ಷ ▲	35,734 ▼
ದಿನದ ಮಾಹಿತಿ: ಸಾವು	7,866 ▲	559 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 56,369 ▲ ಅಮೆರಿಕ; 37,189 ▲ ಇರಾನ್; 22,404 ▼ ಇಂಡೊನೇಷ್ಯಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 55.48 ▲ ಅಮೆರಿಕ; 12.36 ▲ ಬ್ರಿಟನ್; 7.08 ▼ ಬ್ರೆಜಿಲ್

(*ರಾತ್ರಿ 12 ಗಂಟೆಯ ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು: 1.33 ಲಕ್ಷ ಮಹಾರಾಷ್ಟ್ರ ▲; 34,159 ತಮಿಳುನಾಡು ▲; 25,058 ದೆಹಲಿ ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 63.21 ಮಹಾರಾಷ್ಟ್ರ ▲; 34.49 ಕೇರಳ ▲; 25.65 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ದಾರಿ ತಪ್ಪಿಸುತ್ತಿರುವ ಪ್ರಯಾಣಿಕರು

ಬಿಬಿಎಂಪಿಯು ಮೆಜೆಸ್ಟಿಕ್ ಬಸ್ ನಿಲ್ದಾಣ ಹಾಗೂ ನಗರದ ಕೆಲವು ಬಸ್ ನಿಲ್ದಾಣ ಗಳಲ್ಲಿ ಮಾತ್ರ ಕೇರಳ ಮತ್ತು ಮಹಾರಾಷ್ಟ್ರದಿಂದ ಬರುವ ಪ್ರಯಾಣಿಕರ ಮೇಲೆ ನಿಗಾ ಇಟ್ಟಿದೆ.

ಆದರೆ, ಕೆಲವು ಪ್ರಯಾಣಿಕರು ಬಸ್‌ಗಳು ಈ ನಿಲ್ದಾಣಕ್ಕೆ ತಲುಪುವುದಕ್ಕೆ ಮುನ್ನವೇ ಇಳಿದು ಹೋಗುತ್ತಿದ್ದಾರೆ. ಇಂತಹ ಪ್ರಯಾಣಿಕರ ಮೇಲೆ ನಿಗಾ ಇಡಲು ಬಿಬಿಎಂಪಿಯ ವಿಶೇಷ ತಂಡಗಳಿಗೂ ಸಾಧ್ಯವಾಗುತ್ತಿಲ್ಲ. ಇದನ್ನು ನಿಭಾಯಿಸುವುದು ಬಿಬಿಎಂಪಿ ಪಾಲಿಗೂ ತಲೆನೋವಾಗಿ ಪರಿಣಮಿಸಿದೆ.

ಶ್ರೀರಾಮುಲು ಅಭಿಮಾನಿಗಳಿಂದ 120 ಕಿ.ಮೀ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಿಜೆಪಿ ಶಾಸಕ ಬಿ. ಶ್ರೀರಾಮುಲು ಅವರಿಗೆ ಡಿಸಿಎಂ ಹುದ್ದೆ ಸಿಗುವಂತಾಗಲಿ ಎಂದು ಅವರ ಅಭಿಮಾನಿಗಳು 120 ಕಿಲೋಮೀಟರ್ ಪಾದಯಾತ್ರೆ ಕೈಗೊಂಡು ಇಲ್ಲಿನ ದುರ್ಗಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

ಶ್ರೀರಾಮುಲು

ರಾಯಚೂರು ಜಿಲ್ಲೆಯ ಮಸ್ಕಿಯಿಂದ ಬಳ್ಳಾರಿಯ ಕನಕ ದುರ್ಗಮ್ಮ ದೇವಸ್ಥಾನದವರೆಗೂ ನಡೆದುಕೊಂಡು ಬಂದ ಮೌನೇಶ್, ಕಳಸಪ್ಪ, ಹನುಮರೆಡ್ಡಿ ವಿಶೇಷ ಪೂಜೆ ಸಲ್ಲಿಸಿದರು.

ಸಂಕ್ಷಿಪ್ತ ಸುದ್ದಿ

ಕ್ರೀಡಾಪಟುಗಳಿಂದ ಅರ್ಜಿ ಆಹ್ವಾನ

2020ನೇ ಸಾಲಿನಲ್ಲಿ ನಡೆದ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಕ್ರೀಡಾ ಕೂಟಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ₹50 ಸಾವಿರ ನಗದು ಬಹುಮಾನ ನೀಡಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅರ್ಜಿ ಆಹ್ವಾನಿಸಿದೆ.

ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ ಇಲಾಖೆಯು 2020ನೇ ಸಾಲಿನ ಕ್ರೀಡಾಪಟುಗಳಿಗೆ ನೀಡುವ 'ಏಕಲವ್ಯ ಪ್ರಶಸ್ತಿ' ಹಾಗೂ ಕ್ರೀಡಾ ಪೋಷಕರಿಗೆ ನೀಡುವ 'ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ'ಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಜಿಗಳನ್ನು ಸಲ್ಲಿಸಲು ಆಗಸ್ಟ್ 25 ಕೊನೆಯ ದಿನ. ಅರ್ಜಿಗಳನ್ನು ಇಲಾಖೆಯ ಕಚೇರಿಯಿಂದ ಪಡೆದುಕೊಳ್ಳುವಂತೆ ಪ್ರಕಟಣೆ ತಿಳಿಸಿದೆ. **ವಿಳಾಸ:** ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕಂಠೀರವ ಕ್ರೀಡಾಂಗಣ, ಕಸ್ತೂರ ಬಾ ರಸ್ತೆ. ಸಂಪರ್ಕ:9480 886470

ವಕೀಲ ವೃತ್ತಿಯ ತರಬೇತಿ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಹಿಂದುಳಿದ ವರ್ಗಗಳ ಕಾನೂನು ಪದವೀಧರ ಅಭ್ಯರ್ಥಿಗಳಿಂದ ನ್ಯಾಯಾಂಗ ಆಡಳಿತ ಹಾಗೂ ವಕೀಲ ವೃತ್ತಿಯ ತರಬೇತಿಗೆ ಅರ್ಜಿ ಆಹ್ವಾನಿಸಿದೆ.

ಕಾನೂನು ಪದವಿ ಪೂರೈಸಿದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಆಯ್ಕೆಯಾದವರಿಗೆ ಅಭ್ಯರ್ಥಿಗಳಿಗೆ 4 ವರ್ಷಗಳವರೆಗೆ ಪ್ರತಿ ತಿಂಗಳು ₹4 ಸಾವಿರ ತರಬೇತಿ ಭತ್ಯೆ ನೀಡಲಾಗುವುದು. ಅರ್ಜಿಗಳನ್ನು ಇಲಾಖೆ ಕಚೇರಿ ಯಿಂದ ಪಡೆದುಕೊಳ್ಳಬಹುದು. ಅರ್ಜಿ ಸಲ್ಲಿಸಲು ಆ. 28 ಕೊನೇ ದಿನ ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ. ಸಂಪರ್ಕ:080-22867628

ಬ್ಯಾಕ್‌ಲಾಗ್ ಹುದ್ದೆ ಭರ್ತಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳಿಗೆ ಇದೇ ತಿಂಗಳ (ಆಗಸ್ಟ್) ಅಂತ್ಯದೊಳಗೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿ, ವರದಿ ನೀಡಬೇಕು' ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗೆ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ಸೂಚನೆ ನೀಡಿದ್ದಾರೆ.

ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ 20 ಬ್ಯಾಕ್ ಲಾಗ್ ಹುದ್ದೆಗಳನ್ನು ಮೂರು ತಿಂಗಳ ಒಳಗೆ ಭರ್ತಿ ಮಾಡಿ ವರದಿ ನೀಡುವಂತೆ ಏ. 15ರಂದೇ ಸೂಚಿಸಲಾಗಿತ್ತು. ಸಮಾಜ ಕಲ್ಯಾಣ ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆ ಸೂಚನೆ ನೀಡಿದರೂ ಹುದ್ದೆಗಳನ್ನು ಭರ್ತಿ ಮಾಡಲು (ಜೂನ್ 14) ನೇಮಕಾತಿ ಅಧಿಸೂಚನೆ ಹೊರಡಿಸಲಾಗಿದೆ. ಅಲ್ಲದೆ, ಈವರೆಗೂ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿಲ್ಲ. ತಿಂಗಳ ಒಳಗೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸದಿದ್ದರೆ 'ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳ ಹಾಗೂ ಇತರ ಹಿಂದುಳಿದ ವರ್ಗಗಳ ನೇಮಕಾತಿ ಮುಂತಾದವುಗಳ ಮೀಸಲಾತಿ (ತಿದ್ದುಪಡಿ) ಕಾಯ್ದೆ -1990' ರ ಸೆಕ್ಷನ್ 5 ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು' ಎಂದೂ ಅವರು ಎಚ್ಚರಿಕೆ ನೀಡಿದ್ದಾರೆ.

ಬ್ಯಾಕ್‌ಲ್ಯಾಗ್ ಹುದ್ದೆ ಭರ್ತಿಗೆ ಹಿಂದೇಟು ಹಾಕುತ್ತಿರುವ ಕುರಿತು ಸಮಾಜ ಕಲ್ಯಾಣ ಇಲಾಖೆಗೆ ಕರ್ನಾಟಕ ಸಮತಾ ಸೈನಿಕ ದಳ ದೂರು ಸಲ್ಲಿಸಿತ್ತು.

ನೋಡಲ್ ಅಧಿಕಾರಿಗಳ ನೇಮಕ ಸೇರಿದಂತೆ ವಿವಿಧ ಕ್ರಮಕ್ಕೆ ಶಿಫಾರಸು

ಕೋವಿಡ್: 3ನೇ ಅಲೆಗೆ ತಜ್ಞರ ವರದಿ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮೂರನೇ ಅಲೆಗೆ ಸಂಬಂಧಿಸಿದಂತೆ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ರಚಿಸಿದ ತಜ್ಞರ ಸಮಿತಿಯು ಅಂತಿಮ ವರದಿಯನ್ನು ಸಿದ್ಧಪಡಿಸಿದೆ. ಇದನ್ನು ಸರ್ಕಾರಕ್ಕೆ ಬುಧವಾರ ಸಲ್ಲಿಸಲು ಫನಾ ತೀರ್ಮಾನಿಸಿದೆ.

ದಿವಾಕರ್ಸ್ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕಿ ಡಾ. ಹೇಮಾ ದಿವಾಕರ್ ಅಧ್ಯಕ್ಷತೆಯಲ್ಲಿ ರಚಿಸಲಾದ ತಜ್ಞರ ಸಮಿತಿಯು 15 ಜನರನ್ನು ಒಳಗೊಂಡಿದೆ. ಸಮಿತಿಯು ಈಗಾಗಲೇ 7 ಬಾರಿ ಸಭೆ ನಡೆಸಿ, ವರದಿಯನ್ನು ಅಂತಿಮಗೊಳಿಸಿದೆ.

ಪಾರದರ್ಶಕ ವ್ಯವಸ್ಥೆ ಅಗತ್ಯ: 'ಮೂರನೇ ಅಲೆ ಎದುರಿಸಲು ಮಾಡಿಕೊಳ್ಳಬೇಕಾದ ಸಿದ್ಧತೆಗೆ ಸಂಬಂಧಿಸಿದಂತೆ ವರದಿ ಸಿದ್ಧಗೊಂಡಿದೆ. ಎರಡನೇ ಅಲೆಯನ್ನು ಸಂಪೂರ್ಣವಾಗಿ ವಿಶ್ಲೇಷಣೆ ಮಾಡಲಾಗಿದೆ. ಈ ಹಿಂದೆ ಎದುರಿಸಿದ ಸಮಸ್ಯೆಗಳು ಮುಂದೆ ಮರುಕಳಿಸದಂತೆ ನೋಡಿಕೊಳ್ಳಬೇಕು. ಕೋವಿಡ್ ಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗಳನ್ನು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರ ಗುರುತಿಸುವುದರಿಂದ ಈಗಲೇ ನೋಡಲ್ ಅಧಿಕಾರಿಗಳನ್ನು ನೇಮಿಸುವುದು ಉತ್ತಮ. ಈ ಬಗ್ಗೆ ಸಹ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ' ಎಂದು ಫನಾದ ಕಾರ್ಯದರ್ಶಿ ಡಾ.ರಾಜಶೇಖರ್ ವೈ.ಎಲ್. ಅವರು ತಿಳಿಸಿದರು.

'ಹಾಸಿಗೆಗಳ ಹಂಚಿಕೆ, ವೈದ್ಯಕೀಯ ಆಮ್ಲಜನಕ ವಿತರಣೆ ಸೇರಿದಂತೆ ವಿವಿಧ ವೈದ್ಯಕೀಯ ವ್ಯವಸ್ಥೆಯು ಸಮರ್ಪಕವಾಗಿ ನಿರ್ವಹಣೆಯಾಗುವಂತೆ ನೋಡಿಕೊಳ್ಳಬೇಕು. ಬಿಬಿಎಂಪಿ ಪೋರ್ಟಲ್‌ನಲ್ಲಿ ಪಾರದರ್ಶಕತೆ ತರಬೇಕು. ಆಗ ರೋಗಿಗಳಿಗೆ ಸಮಸ್ಯೆಯಾಗದಂತೆ ಹಾಸಿಗೆಗಳು ದೊರೆಯಲಿವೆ. ವೈದ್ಯಕೀಯ ಆಮ್ಲಜನಕ ಹಂಚಿಕೆಗೆ ಸಂಬಂಧಿಸಿದಂತೆ ವಲಯವಾರು ನೋಡಲ್ ಅಧಿಕಾರಿಗಳನ್ನು ನೇಮಿಸಬೇಕು. ಆಗ ಅಲೆದಾಟ ನಡೆಸುವುದು ತಪ್ಪಲಿದೆ' ಎಂದು ಹೇಳಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕೆ

ಬಿಎಸ್‌ವೈಗೆ ಹಿಂಬಾಗಿಲ ರಾಜಕಾರಣ ಮಾತ್ರ ಗೊತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಡಿಯೂರಪ್ಪ ಅವರಿಗೆ ಮುಂಬಾಗಿಲ ರಾಜಕಾರಣ ಗೊತ್ತಿಲ್ಲ. ಆಪರೇಷನ್ ಕಮಲ, ಕುದುರೆ ವ್ಯಾಪಾರದಂಥ ಹಿಂಬಾಗಿಲ ರಾಜಕಾರಣ ಮಾತ್ರ ಗೊತ್ತು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

ಕಾಂಗ್ರೆಸ್ ವತಿಯಿಂದ ಪದ್ಮನಾಭ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ದಿನಸಿ ಕಿಟ್‌ಗಳ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಯಡಿಯೂರಪ್ಪ ಅವರ ಭ್ರಷ್ಟಾಚಾರ ಜಾಸ್ತಿಯಾದ ಕಾರಣ ಅವರನ್ನು ಅಧಿಕಾರದಿಂದ ಕಿತ್ತು ಹಾಕಿದ್ದಾರೆ. ಆರ್‌ಟಿಜಿಎಸ್ ಮೂಲಕ ಲಂಚ ಪಡೆದ ಭ್ರಷ್ಟ ರಾಜಕಾರಣಿ ಅವರು' ಎಂದು ಕಿಡಿಕಾರಿದರು.

'ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಮಾಡಿರುವುದೇ ಯಡಿಯೂರಪ್ಪ. ಹೀಗಾಗಿ, ಅವರ ರಬ್ಬರ್ ಸ್ಟಾಂಪ್ ರೀತಿ ಬೊಮ್ಮಾಯಿ ಕೆಲಸ ಮಾಡದೆ ಸ್ವತಂತ್ರವಾಗಿ ಕೆಲಸ ಮಾಡಲು ಆಗುತ್ತಾ' ಎಂದು ಪ್ರಶ್ನಿಸಿದರು.

ದಿನಸಿ ಕಿಟ್‌ಗಳನ್ನು ಸಿದ್ದರಾಮಯ್ಯ ವಿತರಿಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಮಾಜಿ ಸಂಸದ ಪ್ರೊ. ರಾಜೀವ್ ಗೌಡ, ಮುಖಂಡರಾದ ಶಿವಣ್ಣ, ವೆಂಕಟೇಶಮೂರ್ತಿ ಇದ್ದರು —ಪ್ರಜಾವಾಣಿ ಚಿತ್ರ

'ಬಿಜೆಪಿ ಭ್ರಷ್ಟ, ಬಂಡವಾಳ ಶಾಹಿಗಳ ಪಕ್ಷ. ಬಿಜೆಪಿಯಿಂದ ಅಭಿವೃದ್ಧಿಯನ್ನು ನಿರೀಕ್ಷೆ ಮಾಡಲು ಸಾಧ್ಯವೇ ಇಲ್ಲ. ಕಾರ್ಖಾನೆಗಳನ್ನು ಸ್ಥಾಪಿಸಿ ಉದ್ಯೋಗ ಸೃಷ್ಟಿದವರು ಜವಾಹರಲಾಲ್ ನೆಹರೂ. ಗರೀಬಿ ಹಟಾವೋ ಘೋಷಣೆ ಮಾಡಿದ್ದು ಇಂದಿರಾಗಾಂಧಿ. ದೂರಸಂಪರ್ಕ ಅಭಿವೃದ್ಧಿ ಮಾಡಿದವರು ರಾಜೀವ್ ಗಾಂಧಿ. ದೇಶಕ್ಕೆ ಬಿಜೆಪಿಯ ಕೊಡುಗೆ ಏನು? ಸರ್ಕಾರಿ ಸಂಸ್ಥೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡುತ್ತಿರುವುದು ಬಿಜೆಪಿಯವರು' ಎಂದು ವಾಗ್ದಾಳಿ ನಡೆಸಿದರು.

ಬಡಜನರಿಗೆ ಆಹಾರದ ಕಿಟ್: 'ಬೆಂಗಳೂರಿನ ಬಹುತೇಕ ಕೇಂದ್ರಗಳಲ್ಲಿ ಪಕ್ಷದ ಕಾರ್ಯಕರ್ತರು ಬಡಜನರಿಗೆ ನೆರವಾಗುತ್ತಿದ್ದಾರೆ. ಪಕ್ಷದ ಹಿರಿಯ ಮುಖಂಡ ಬಿ.ಕೆ. ಹರಿಪ್ರಸಾದ್ ನೇತೃತ್ವದಲ್ಲಿ ಇಲ್ಲಿ ಕಿಟ್ ವಿತರಿಸಲಾಗಿದೆ. ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಹರಿಪ್ರಸಾದ್, ಬಹುಕಾಲದಿಂದ ರಾಜಕಾರಣದಲ್ಲಿದ್ದಾರೆ' ಎಂದರು.

'ಕೋವಿಡ್ ಎರಡನೇ ಅಲೆಯಲ್ಲಿ ಸಾವಿರಾರು ಜನ ಸಾವಿಗೀಡಾಗಲು ಅಧಿಕಾರದಲ್ಲಿರುವ ಪಕ್ಷದ ನಾಯಕರ ಬೇಜವಾಬ್ದಾರಿ ಕಾರಣ. ಪದ್ಮನಾಭ ನಗರದಲ್ಲಿ ಕೊರೊನಾ ಸೋಂಕಿಗೆ ಯಾರಾದರೂ ಬಲಿಯಾಗಿದ್ದರೆ ಅದಕ್ಕೆ ಕ್ಷೇತ್ರದ ಶಾಸಕ ಆರ್. ಅಶೋಕ ಕಾರಣ. ಇಲ್ಲಿ ಸಾರ್ವಜನಿಕ ಸ್ಥಳದಲ್ಲಿ ಸಭೆ ಮಾಡಲು ಅಶೋಕ ಅವರ ಅನುಮತಿ ಪಡೆಯಬೇಕು ಎಂದು ಹೇಳುತ್ತಾರೆ. ಇದೇನು ಅಶೋಕ ಅವರ ಸ್ವಂತ ಸ್ವತ್ತೇ? ಇಂಥ ಅಸಂಬದ್ಧ ವಿಷಯಗಳಿಗೆ ಪೊಲೀಸ್ ಇಲಾಖೆ ಸೊಪ್ಪು ಹಾಕಬಾರದು. ಒಂದೂವರೆ ವರ್ಷ ಕಳೆದರೆ ನಾವೇ ಅಧಿಕಾರಕ್ಕೆ ಬರುತ್ತೇವೆ. ಆಗ ಇದಕ್ಕೆಲ್ಲ ಉತ್ತರ ಕೊಡಬೇಕಾಗುತ್ತದೆ' ಎಂದು ಸಿದ್ದರಾಮಯ್ಯ ಅವರು ಎಚ್ಚರಿಕೆ ನೀಡಿದರು.

ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ ಡಾ.ಸಿ.ಎನ್. ಮಂಜುನಾಥ್ ಅಭಿಮತ

ಶಾಲಾರಂಭಕ್ಕೆ 2 ವಾರ ವಿಳಂಬ ಸೂಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೆರೆಯ ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ರಾಜ್ಯದಲ್ಲಿ ಶಾಲೆಗಳನ್ನು ಪ್ರಾರಂಭಿಸಲು ಮುಂದಿನ ಎರಡು ವಾರಗಳು ಕಾಯುವುದು ಉತ್ತಮ' ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸದಸ್ಯ, ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅಭಿಪ್ರಾಯಪಟ್ಟಿದ್ದಾರೆ.

ಶಾಲೆಗಳ ಪುನರಾರಂಭದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ರಾಜ್ಯದಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ಸೋಂಕು ದೃಢ ಪ್ರಮಾಣದಲ್ಲಿ ವ್ಯತ್ಯಾಸವಿದೆ. ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಲ್ಲಿ ಈ ಪ್ರಮಾಣ ಏರಿಕೆ ಕಾಣುತ್ತಿದೆ. ಹಾಗಾಗಿ, ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಎರಡು ವಾರಗಳ ಬಳಿಕ ನಿರ್ಧಾರ ಕೈಗೊಳ್ಳುವುದು ಉತ್ತಮ. ಈ ಬಗ್ಗೆ ಸರ್ಕಾರವು ಶಾಲಾ ಆಡಳಿತ ಮಂಡಳಿಗಳು ಹಾಗೂ ಪಾಲಕರ ಅಭಿಪ್ರಾಯ ಪಡೆದು, ಅಂತಿಮ ತೀರ್ಮಾನ ಕೈಗೊಳ್ಳಬೇಕು' ಎಂದು ತಿಳಿಸಿದ್ದಾರೆ.

'ಸೋಂಕು ದೃಢ ಪ್ರಮಾಣದ ಬಗ್ಗೆ ಗಮನ ನೀಡಬೇಕು. ಶೇ 3ರಿಂದ ಶೇ 4ರಷ್ಟು ಸೋಂಕು ದೃಢ ಪ್ರಮಾಣ ಇರುವ ಜಿಲ್ಲೆಗಳಲ್ಲಿ ಶಾಲೆಗಳನ್ನು ಪ್ರಾರಂಭಿಸುವುದು ಸ್ವಲ್ಪ ದಿನಕ್ಕೆ ಮುಂದೂಡುವುದು ಉತ್ತಮ. ಆಗ ಸೋಂಕು ಏರಿಕೆಯಾಗುತ್ತದೆಯೇ ಅಥವಾ ಇಳಿಕೆಯಾಗುತ್ತದೆಯೇ ಎನ್ನುವುದರ ಬಗ್ಗೆ ಚಿತ್ರಣ ದೊರೆಯಲಿದೆ. ಈಗ ಮೂರಲೇ ಅಲೆಯ ಮುನ್ಸೂಚನೆಗಳು ಗೋಚರಿಸುತ್ತಿವೆ. ಹಾಗಾಗಿ, ಎಚ್ಚರಿಕೆಯ ನಡೆ ಅಗತ್ಯ' ಎಂದು ವಿವರಿಸಿದರು.

ಮೂರನೇ ಅಲೆ ಖಚಿತ: 'ಕೇರಳದಲ್ಲಿ ದಿನವೊಂದಕ್ಕೆ 20 ಸಾವಿರಕ್ಕೂ ಅಧಿಕ ಪ್ರಕರಣಗಳು ವರದಿಯಾಗುತ್ತಿವೆ. ರಾಜ್ಯದಲ್ಲಿ ಮೂರನೇ ಅಲೆ ಕಾಣಿಸಿಕೊಳ್ಳುವುದು ಖಚಿತ. ಆದರೆ, ಅದು ರಾಜ್ಯದಲ್ಲಿ ಯಾವ ಪ್ರಮಾಣದಲ್ಲಿ ಕಾಣಿಸಿಕೊಳ್ಳಲಿದೆ ಎನ್ನುವುದನ್ನು ನಿರ್ಧರಿಸಲು ಈಗಲೇ ಸಾಧ್ಯವಿಲ್ಲ. ಹೆಚ್ಚಿನ ಸಂಖ್ಯೆಯ ಜನರು ಲಸಿಕೆ ಹಾಕಿಸಿಕೊಂಡು, ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿದಲ್ಲಿ ಮೂರನೇ ಅಲೆಯನ್ನು ಸಮರ್ಪಕವಾಗಿ ಎದುರಿಸಲು ಸಾಧ್ಯ' ಎಂದು ಹೇಳಿದರು.

'ಸಭೆ-ಸಮಾರಂಭಗಳನ್ನು ಸದ್ಯ ನಡೆಸಬಾರದು. ಮುಂಬರುವ ತಿಂಗಳುಗಳಲ್ಲಿ ಸಾಲು ಸಾಲು ಹಬ್ಬಗಳು ಬರುತ್ತವೆ. ಜನರು ಮೈಮರೆಯ ಬಾರದು. ಹಬ್ಬಗಳನ್ನು ಸರಳವಾಗಿ ಮನೆಯಲ್ಲೇ ಆಚರಣೆ ಮಾಡಬೇಕು' ಎಂದರು.

ವರ್ತೂರು ಸೇರಿ 105 ಮಂದಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಕೋಲಾರ: ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣಾ ಸಿದ್ಧತೆ ಸಂಬಂಧ ಸಭೆ ನಡೆಸಿ ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿದ ಆರೋಪದ ಮೇಲೆ ಮಾಜಿ ಸಚಿವ ವರ್ತೂರು ಪ್ರಕಾಶ್ ಸೇರಿದಂತೆ 105 ಮಂದಿ ವಿರುದ್ಧ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವರ್ತೂರು ಪ್ರಕಾಶ್ ಹಾಗೂ ಬೆಂಬಲಿಗರು ಪೂರ್ವಾನುಮತಿ ಪಡೆಯದೆ ನಗರದ ಎ.ಎಫ್ ಸಭಾಂಗಣದಲ್ಲಿ ಸೋಮವಾರ (ಆಗಸ್ಟ್ 2) ನೂರಾರು ಕಾರ್ಯಕರ್ತರನ್ನು ಒಂದೆಡೆ ಸೇರಿಸಿ ಚುನಾವಣೆ ಸಂಬಂಧ ಸಭೆ ನಡೆಸಿದ್ದರು. ಸಭಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಕಾರ್ಯಕರ್ತರು ಅಂತರ ಕಾಯ್ದುಕೊಳ್ಳದೆ ಹಾಗೂ ಮಾಸ್ಕ್ ಧರಿಸದೆ ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿದ್ದರು.

ವರ್ತೂರು ಪ್ರಕಾಶ್

ಈ ಸಂಬಂಧ ಕೋಲಾರ ಕಸಬಾ ಕಂದಾಯ ನಿರೀಕ್ಷಕ ವಿಜಯ್‌ದೇವ್ ಸ್ಥಳ ಪರಿಶೀಲನೆ ಮಾಡಿ ಪೊಲೀಸರಿಗೆ ದೂರು ಕೊಟ್ಟಿದ್ದರು. ಈ ದೂರು ಆಧರಿಸಿ ಪೊಲೀಸರು ವರ್ತೂರು ಪ್ರಕಾಶ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಸಿ.ಎಸ್.ವೆಂಕಟೇಶ್, ಕೋಲಾರ ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಎಂ.ಆಂಜಿನಪ್ಪ, ದರಖಾಸ್ತು ಸಮಿತಿ ಮಾಜಿ ಅಧ್ಯಕ್ಷ ಬೆಗ್ಲಿ ಸೂರ್ಯಪ್ರಕಾಶ್, ಎ.ಎಫ್ ಸಭಾಂಗಣದ ಮಾಲೀಕರು ಹಾಗೂ 100 ಮಂದಿ ವಿರುದ್ಧ ಕರ್ನಾಟಕ ಸಾಂಕ್ರಾಮಿಕ ಕಾಯಿಲೆ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದಾರೆ.

ಅನುಪಮಾ ಪ್ರಸಾದ್‌ಗೆ ಡಾ.ಎಚ್. ಶಾಂತಾರಾಮ್ ಸಾಹಿತ್ಯ ಪ್ರಶಸ್ತಿ

ಕುಂದಾಪುರ: ಈ ವರ್ಷದ ಡಾ.ಎಚ್. ಶಾಂತಾರಾಮ್ ಸಾಹಿತ್ಯ ಪ್ರಶಸ್ತಿಯು ಅನುಪಮಾ ಪ್ರಸಾದ್ ಕಾಸರಗೋಡು ಅವರ 'ಪಕ್ಕಿಹಳ್ಳದ ಹಾದಿಗುಂಟ' ಕಾದಂಬರಿಗೆ ದೊರಕಿದೆ.

ಕನ್ನಡ ಸಾಹಿತ್ಯ ಲೋಕದಲ್ಲಿ ಕತೆಗಳ ಮೂಲಕ ಪ್ರಸಿದ್ಧರಾಗಿರುವ ಅನುಪಮಾ ಅವರ ಚೊಚ್ಚಲ ಕಾದಂಬರಿ ಇದಾಗಿದೆ. ಲೇಖಕರಾದ ಓ.ಎಲ್.ನಾಗಭೂಷಣ ಸ್ವಾಮಿ, ದೇವು ಪತ್ತಾರ್, ಮತ್ತು ನರೇಂದ್ರ ರೈ ದೇರ್ಲ ಅವರು ನಿರ್ಣಾಯಕರಾಗಿದ್ದರು. ಪ್ರಶಸ್ತಿಯು ₹ 15,000 ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

ಸಚಿವ ನಿತಿನ್ ಗಡ್ಕರಿಗೆ ಎಚ್‌.ಡಿ. ದೇವೇಗೌಡ ಮನವಿ

ಚನ್ನರಾಯಪಟ್ಟಣ– ಮಾಕುಟ ಮಾರ್ಗ ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚನ್ನರಾಯಪಟ್ಟಣ–ಮಡಿಕೇರಿ– ಮಾಕುಟ ಮೂಲಕ ಕೇರಳ ಸಂಪರ್ಕಿಸುವ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸುವಂತೆ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ, ಸಂಸದ ಎಚ್.ಡಿ.ದೇವೇಗೌಡ ನೇತೃತ್ವದ ನಿಯೋಗ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿ ಮಾಡಿದೆ.

ದೆಹಲಿಯಲ್ಲಿ ಮಂಗಳವಾರ ಗಡ್ಕರಿ ಅವರನ್ನು ಭೇಟಿ ಮಾಡಿದ ದೇವೇಗೌಡ, ನಾಲ್ಕು ಪಥಗಳ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮಾಡುವುದರಿಂದ ಈ ಭಾಗದಲ್ಲಿ ಮೂಲಭೂತ ಸೌಕರ್ಯಗಳು ನಿರ್ಮಾಣಗೊಂಡು ಕೃಷಿ ಮತ್ತು ಆರ್ಥಿಕ ಚಟುವಟಿಕೆಗೆ ಹೆಚ್ಚಿನ ಒತ್ತು ಸಿಗುತ್ತದೆ ಎಂದು ಕೇಂದ್ರ ಸಚಿವರಿಗೆ ವಿವರಿಸಿದರು.

ಕೊಡಗು ಪ್ರದೇಶ ಬೆಟ್ಟ, ಗುಡ್ಡ ಮತ್ತು ಕಾಡುಗಳಿಂದ ಕೂಡಿದೆ. ಇಲ್ಲಿ ಈಗ ಇರುವ ರಸ್ತೆ ಸಂಚಾರಕ್ಕೆ ಕಷ್ಟವಾಗಿದೆ. ಮಳೆಗಾಲದಲ್ಲಿ ಭೂಕುಸಿತದಿಂದ ಸಂಚಾರಕ್ಕೆ ತೊಂದರೆ ಆಗುತ್ತಿದೆ. ಇಲ್ಲಿನ ಪ್ರಕೃತಿ ಸೌಂದರ್ಯವನ್ನು ನೋಡಲು ದೇಶ-ವಿದೇಶಗಳಿಂದ ಪ್ರವಾಸಿಗರು ಬರುತ್ತಾರೆ. ರಸ್ತೆ ಸಂಪರ್ಕದ ಸಮಸ್ಯೆ ಇರುವುದರಿಂದ ಚನ್ನರಾಯಪಟ್ಟಣ–ಹೊಳೆ ನರಸಿಪುರ–ಅರಕಲಗೂಡು–ಕೊಡ್ಲಿಪೇಟೆ–ಮಡಿಕೇರಿ ಮೂಲಕ ಕೇರಳಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ನಾಲ್ಕು ಪಥಗಳಾಗಿ ಮೇಲ್ದರ್ಜೆಗೇರಿಸುವ ಅಗತ್ಯವಿದೆ ಎಂದು ಅವರು ಪ್ರತಿಪಾದಿಸಿದರು.

ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿದ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ. ಶಾಸಕರಾದ ಎಚ್‌.ಎಂ. ರಮೇಶ್‌ಗೌಡ, ಸಿ.ಎಸ್. ಪುಟ್ಟರಾಜು ಮತ್ತು ಎಚ್‌.ಡಿ.ರೇವಣ್ಣ ಇದ್ದರು.

ಈ ಹೆದ್ದಾರಿ ಮೇಲ್ದರ್ಜೆಗೇರಿಸಲು ಆದಷ್ಟು ಶೀಘ್ರವೇ ಅನುಮೋದನೆ ನೀಡಬೇಕು. ಈ ಹೆದ್ದಾರಿ ನಿರ್ಮಾಣದಿಂದ ಕಣ್ಣೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಸಿಗುತ್ತದೆ. ಇದರಿಂದ ಕೃಷಿ ಉತ್ಪನ್ನಗಳ ಸಾಗಣೆಗೆ ಅನುಕೂಲವಾಗುತ್ತದೆ, ಹಾಸನ ಮತ್ತು ಕೊಡಗು ಜಿಲ್ಲೆಗಳ ಆರ್ಥಿಕ ಚಟುವಟಿಕೆ ಇನ್ನಷ್ಟು ವೃದ್ಧಿಯಾಗುತ್ತದೆ ಎಂದು ಅವರು ಹೇಳಿದರು.

ಇದಕ್ಕೆ ಸಂಬಂಧಿಸಿದಂತೆ ರಾಜ್ಯ ಲೋಕೋಪಯೋಗಿ ಇಲಾಖೆ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ತಯಾರಿಸಿ, ಕೇಂದ್ರ ಹೆದ್ದಾರಿಗಳ ಇಲಾಖೆಗೆ 2018 ರಲ್ಲೇ ಸಲ್ಲಿಸಿದೆ ಎಂದು ದೇವೇಗೌಡ ತಿಳಿಸಿದರು.

ಅಲ್ಲದೆ, ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಯಡಗೊಂಡನಹಳ್ಳಿ, ಬಿಳಿಕೆರೆ ಮತ್ತು ಹಾಸನ–ಬೇಲೂರು ನಡುವಿನ ಎರಡು ಪಥದ ರಾಜ್ಯ ಹೆದ್ದಾರಿಯನ್ನು ನಾಲ್ಕು ಪಥದ ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತಿಸಲು ಟೆಂಡರ್‌ಗೆ ಅನುಮೋದನೆ ನೀಡಲು ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಗಡ್ಕರಿ ಅವರು ಟೆಂಡರ್ ಕರೆಯಲು ಅನುಮೋದನೆ ನೀಡಿದರು.

ಮೊಟ್ಟೆಯ ₹ 2 ಹೆಚ್ಚುವರಿ ಹಣ ಬಿಡುಗಡೆ: ಆದೇಶ ಪಾಲಿಸದ ಗ್ರಾ.ಪಂ.ಗಳು

ಅಂಗನವಾಡಿ ಕಾರ್ಯಕರ್ತೆಯರಿಗೆ ಹೆಚ್ಚುವರಿ ಹೊರೆ

• ಎಚ್. ಅನಿತಾ

ದಾವಣಗೆರೆ: ಮಕ್ಕಳು, ಗರ್ಭಿಣಿಯರು ಮತ್ತು ಬಾಣಂತಿಯರಿಗೆ ನೀಡುವ ಮೊಟ್ಟೆಯ ₹ 2 ಹೆಚ್ಚುವರಿ ಹಣ ಬಿಡುಗಡೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡಿರುವ ಆದೇಶವನ್ನು ಗ್ರಾಮ ಪಂಚಾಯಿತಿಗಳು ಪಾಲಿಸದಿರುವುದರಿಂದ ಅಂಗನವಾಡಿ ಕಾರ್ಯಕರ್ತೆಯರು ತೊಂದರೆಗೆ ಸಿಲುಕಿದ್ದಾರೆ.

ಸರ್ಕಾರವು ಒಂದು ಮೊಟ್ಟೆಗೆ ₹ 5 ದರ ನಿಗದಿಪಡಿಸಿದೆ. ಈಚೆಗೆ ಮಾರುಕಟ್ಟೆಯಲ್ಲಿ ದರ ಹೆಚ್ಚಾಗಿರುವುದರಿಂದ ₹ 7ಕ್ಕೆ ಹೆಚ್ಚಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಮನವಿ ಮಾಡಿತ್ತು.

ಪ್ರಜಾವಾಣಿ ವಿಶೇಷ

ಅಂಗನವಾಡಿ ಕೇಂದ್ರಕ್ಕೆ ಖರೀದಿಸುವ ಮೊಟ್ಟೆಗಳ ಹೆಚ್ಚುವರಿ ಹಣವನ್ನು ಸ್ವಂತ ಸಂಪನ್ಮೂಲದಿಂದ ಭರಿಸುವಂತೆ ಗ್ರಾಮ ಪಂಚಾಯಿತಿಗಳಿಗೆ ಇಲಾಖೆ ಆದೇಶಿಸಿತ್ತು. ಆದರೆ, ಗ್ರಾಮ ಪಂಚಾಯಿತಿಗಳು ಆದೇಶವನ್ನು ಪಾಲಿಸುತ್ತಿಲ್ಲ. ಹೆಚ್ಚುವರಿ ಹಣದ ಹೊರೆಯನ್ನು ಕಾರ್ಯಕರ್ತೆಯರೇ ಹೊರುವಂತಾಗಿದೆ.

'ಫಲಾನುಭವಿಗಳಿಗೆ ಮೊಟ್ಟೆ ವಿತರಿಸಲು ಸರ್ಕಾರವು ಮುಂಗಡವಾಗಿ ಹಣ ಬಿಡುಗಡೆ ಮಾಡದ್ದರಿಂದ ಕೈಯಿಂದ ಹಣ ಹಾಕಿ ಮೊಟ್ಟೆಗಳನ್ನು ವಿತರಿಸಿ, ನಂತರ ಬಿಲ್ ಕಳುಹಿಸಿ ಹಣ ಪಡೆದುಕೊಳ್ಳುತ್ತಿದ್ದೇವೆ. ಮೊಟ್ಟೆಗೆ ತಗಲುವ ಹೆಚ್ಚುವರಿ ಹಣವನ್ನೂ ನಾವೇ ಭರಿಸಬೇಕು. ಈ ಬಗ್ಗೆ ಅಧಿಕಾರಿಗಳನ್ನು ಕೇಳಿದರೆ ಮೊಟ್ಟೆ ವಿತರಣೆ ನಿಲ್ಲಿಸಬೇಡಿ ಎನ್ನುತ್ತಾರೆ. ಮೊಟ್ಟೆ ವಿತರಣೆಯಲ್ಲಿ ವ್ಯತ್ಯಾಸವಾದರೆ ಫಲಾನುಭವಿಗಳು ದೂರುತ್ತಾರೆ. ಅಡಕತ್ತರಿ ನಡುವೆ ಸಿಕ್ಕಿದ ಹಾಗಾಗಿದೆ ನಮ್ಮ ಸ್ಥಿತಿ' ಎನ್ನುವುದು ಅಂಗನವಾಡಿ ಕಾರ್ಯಕರ್ತೆಯರ ಅಳಲು.

'ಹೆಚ್ಚುವರಿ ಹಣ ಬಿಡುಗಡೆ ಮಾಡುವಂತೆ ಗ್ರಾಮ ಪಂಚಾಯಿತಿಗಳಿಗೆ ಕೇಳಿದರೆ, ಕೊರೊನಾದಿಂದಾಗಿ ತೆರಿಗೆ ಸಂಗ್ರಹಿಸಿಲ್ಲ. ಸಣ್ಣಪುಟ್ಟ ಉಸ್ತುವಾರಿಗೇ ಹಣವಿಲ್ಲ ಎನ್ನುತ್ತಾರೆ. ಮನೆ ಮನೆಗೆ ತೆರಳಿ ತೆರಿಗೆ ಸಂಗ್ರಹಿಸಿ, ಜಾಬ್ ಕಾರ್ಡ್ ಮಾಡಿಸಿ ಕೊಡಿ ಎಂದು ಪಂಚಾಯಿತಿ ಕೆಲಸಗಳನ್ನೂ ನಮಗೇ ಹೇಳುತ್ತಾರೆ' ಎಂದೂ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಪೌಷ್ಟಿಕ ಮಕ್ಕಳ ಪ್ರಮುಖ 10 ಜಿಲ್ಲೆಗಳ ಪಟ್ಟಿ (2020ರ ಸೆಪ್ಟೆಂಬರ್‌ವರೆಗೆ)

ಜಿಲ್ಲೆ	ಮಕ್ಕಳ ಸಂಖ್ಯೆ
ಬೆಳಗಾವಿ	862
ಬಳ್ಳಾರಿ	787
ರಾಯಚೂರು	705
ಹಾವೇರಿ	663
ಕಲಬುರ್ಗಿ	628
ಯಾದಗಿರಿ	392
ಗದಗ	313
ಚಿತ್ರದುರ್ಗ	281
ಶಿವಮೊಗ್ಗ	271
ಉತ್ತರ ಕನ್ನಡ	267

ಕುಕ್ಕುಟ ಮಹಾಮಂಡಳದಿಂದ ವಿತರಿಸಲಿ

ನಗರವಿರಲಿ, ಹಳ್ಳಿ ಇರಲಿ ಒಂದು ಮೊಟ್ಟೆಗೆ ₹ 5 ನಿಗದಿಪಡಿಸಿರುವುದರಿಂದ ಹೆಚ್ಚುವರಿ ಹಣವನ್ನು ಕಾರ್ಯಕರ್ತೆಯರು ಕೈಯಿಂದ ಹಾಕುತ್ತಿದ್ದಾರೆ. ಹಾಗಾಗಿ ಮೊಟ್ಟೆ ಖರೀದಿಸಲು ಕಾರ್ಯಕರ್ತೆಯರಿಗೆ ಮುಂಗಡವಾಗಿ ಹಣ ಬಿಡುಗಡೆ ಮಾಡಬೇಕು. ಇಲ್ಲವೇ ಕುಕ್ಕುಟ ಮಹಾಮಂಡಳದಿಂದ ಮೊಟ್ಟೆಗಳನ್ನು ವಿತರಿಸಲು ಕ್ರಮ ಕೈಗೊಳ್ಳಬೇಕು. ಫಲಾನುಭವಿಗಳಿಗೆ ಮೊಟ್ಟೆ ವಿತರಿಸಲು ತಿಂಗಳಿಗೆ ₹ 5 ಕೋಟಿ ವೆಚ್ಚವಾಗುತ್ತದೆ. ಅದರಲ್ಲಿ ಸಚಿವರಿಗೆ ₹ 1 ಕೋಟಿ, ಟೆಂಡರ್ ಕುದುರಿಸಿದ ಶಾಸಕರಿಗೆ ₹ 50 ಲಕ್ಷ , ಏಜೆನ್ಸಿ ಪಡೆದ ವ್ಯಕ್ತಿ ಮತ್ತು ಸರಬರಾಜು ವೆಚ್ಚ ಕಳೆದು ಮಿಕ್ಕುವ ಹಣದಲ್ಲಿ ಎಷ್ಟರಮಟ್ಟಿಗೆ ಮೊಟ್ಟೆಗಳನ್ನು ವಿತರಿಸಲು ಸಾಧ್ಯ? ಸಂಬಂಧಪಟ್ಟವರು ಕಾರ್ಯಕರ್ತೆಯರಿಗೆ ಎದುರಾಗಿರುವ ಸಮಸ್ಯೆ ಪರಿಹರಿಸಲು ಮುಂದಾಗಬೇಕು.

ಎಸ್. ವರಲಕ್ಷ್ಮಿ, ಅಧ್ಯಕ್ಷೆ, ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು)

ಯಾವ ಗ್ರಾಮ ಪಂಚಾಯಿತಿಗಳೂ ಅಂಗನವಾಡಿ ಕಾರ್ಯಕರ್ತೆಯರಿಗೆ ಒಂದು ಮೊಟ್ಟೆಗೆ ತಗುಲುವ ಹೆಚ್ಚುವರಿ ₹ 2 ಅನ್ನು ನೀಡುತ್ತಿಲ್ಲ. ಈ ಸಂಬಂಧ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆದಿದ್ದೇನೆ

ಎಂ.ಪಿ. ರೇಣುಕಾಚಾರ್ಯ, ಹೊನ್ನಾಳಿ ಶಾಸಕ, ದಾವಣಗೆರೆ

ರಾಜ್ಯದಲ್ಲಿರುವ ಫಲಾನುಭವಿಗಳ ಅಂದಾಜು ಪಟ್ಟಿ

ವರ್ಗ	ಸಂಖ್ಯೆ (ಲಕ್ಷಗಳಲ್ಲಿ)
6 ತಿಂಗಳಿನಿಂದ 3 ವರ್ಷ	20.09
3ರಿಂದ 6 ವರ್ಷ	15.94
ಗರ್ಭಿಣಿಯರು	4.12
ಬಾಣಂತಿಯರು	3.93
ಕಿಶೋರಿಯರು (11ರಿಂದ 14 ವರ್ಷ)	0.08
ಒಟ್ಟು	46.16

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ | ಹೊರಗೆ ಹೋಗುವಾಗ ಮುಖಗವಸು ಧರಿಸಿ | ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆಗಳು ವಿಭಾಗ,
ಯಲಹಂಕ ವಲಯ, ಬೆಂಗಳೂರು – 560 092.

ಸಂಖ್ಯೆ: ಬೃಬೆಂಮಪಾ/ಯ/ಕಾಪಾಅ(ಯೋ)/ಟೆಂಡರ್/05/2021–22 ದಿನಾಂಕ: 02.08.2021

ತಿದ್ದುಪಡಿ

ವಿಷಯ: ಟೆಂಡರ್ ಆಹ್ವಾನ ಸೇವೆಗಳ ತಿದ್ದುಪಡಿ ಬಗ್ಗೆ. (ಐಎಫ್‌ಟಿ)
ಉಲ್ಲೇಖ: ಬೃ.ಬೆಂ.ಮಪಾ/ಯ/ಕಾಪಾಅ(ಯೋ)/ಟೆಂಡರ್/05/2021–22 ದಿನಾಂಕ: 26.07.2021

ಈ ಮೂಲಕ ಮೇಲ್ಕಂಡ ಉಲ್ಲೇಖದ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಏಜೆನ್ಸಿ/ಗುತ್ತಿಗೆದಾರರಿಗೆ ತಿಳಿಸಿರುವಂತೆ ಸದರಿ ಟೆಂಡರನ್ನು ದಿನಾಂಕ: 26.07.2021ರಂದು ಪ್ರಕಟಿಸಲಾಗಿದ್ದು, ತಾಂತ್ರಿಕ ಕಾರಣಗಳಿಂದಾಗಿ ರದ್ದುಪಡಿಸಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು–
ಯೋಜನೆಗಳು ವಿಭಾಗ, ಯಲಹಂಕ ವಲಯ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

INSTITUTE OF HOTEL MANAGEMENT CATERING TECHNOLOGY AND APPLIED NUTRITION

"An Autonomous Body under Ministry of Tourism, Govt. of India"
S.J.P. Campus, Seshadri Road, Bangalore 560 001.
www.ihmbangalore.kar.nic.in E-mail: ihmbengaluru@gmail.com
Ph. 080-22262960 / 22268562

ADMISSION NOTICE

APPLICATIONS ARE INVITED FOR ADMISSION TO THE 1 ½ YR.DIPLOMA /CRAFT COURSES IN FOOD PRODUCTION/ BAKERY/ FOOD & BEVERAGE SERVICE/ FOR THE ACADEMIC SESSION 2021-2021

1. Application form along with other details is available on payment of Rs.300/- (Rs.150/- for SC/ST) inclusive of Registration fee payable by cash or D.D. in person. By post Rs.350/- (Rs.175/- for SC/ST & P.H.)
2. Issue of application form from 22-07-2021
3. Last date for receipt of filled in Application Form by the Institute: 03-09-2021.
4. Limited Hostel facility available.
5. For details of courses / fee etc., please visit: www.ihmbangalore.kar.nic.in

Sd/- PRINCIPAL

ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಸರಕು ಖರೀದಿ ಅಧಿಕಾರಿಗಳ ಕಚೇರಿ,
ಕೃಷಿ ನಗರ ಧಾರವಾಡ–580005 e-mail : spo@uasd.in

ನಂ.ಎಸ್‌ಪಿಒ/ಇಒ/25/801/ಟೆಂಡರ–ಇಪ್ರೋಕ್–01/2020–21ದಿನಾಂಕ : 31.07.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಮೂಲಕ)

ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ವೈಜ್ಞಾನಿಕ ಉಪಕರಣಗಳು, ಪಿಠೋಪಕರಣಗಳು, ಕೃಷಿ ಸಲಕರಣೆಗಳು ಹಾಗೂ ಇನ್ನಿತರ ಸಾಮಗ್ರಿಗಳ ಖರೀದಿಗಾಗಿ ಟೆಂಡರನ್ನು ಆಹ್ವಾನಿಸಿದ್ದು ನೋಂದಾಯಿತ ಸರಬರಾಜುದಾರರು ಟೆಂಡರಿನಲ್ಲಿ ಭಾಗವಹಿಸಲು ಮುಂದೆ ಹೇಳಿದ ವೆಬ್‌ಸೈಟನ್ನು ಆನ್‌ಲೈನ ಮುಖಾಂತರ ಸಂಪರ್ಕಿಸುವುದು **www.eproc.karnataka.gov.in**

ಟೆಂಡರ ವೇಳಾಪಟ್ಟಿ (1) ಟೆಂಡರ್ ವಿಚಾರಣೆ / ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ : **07.08.2021** (ಶನಿವಾರ) 12.30 ಗಂಟೆಯವರೆಗೆ (2) ಪ್ರಿ ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ ಸ್ಥಳ ಆಸ್ತಿ ಅಧಿಕಾರಿಗಳ ಕಛೇರಿ, ಕೃ.ವಿ.ವಿ ಧಾರವಾಡ : **09.08.2021** (ಸೋಮವಾರ) 12.00 ಗಂಟೆ (3) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : **19.08.2021** (ಗುರುವಾರ) 16.00 ಗಂಟೆಯವರೆಗೆ (4) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ (ಐಟಂ. ನಂ. 07, 08, 09, 10, 11, 12, 13) : **21.08.2021** (ಶನಿವಾರ) 10.00 ಗಂಟೆ (5) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ : **23.08.2021** (ಸೋಮವಾರ) 11.00 ಗಂಟೆ

ಟೆಂಡರಿನಲ್ಲಿ ಭಾಗವಹಿಸಲಿಚ್ಛಿಸುವ ಸರಬರಾಜುದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಬೆಂಗಳೂರು, ಇವರಲ್ಲಿ ನೋಂದಣಿ ಮಾಡಿಕೊಂಡಿರಬೇಕು. ನೋಂದಣಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : **080–46010000**. ಭಾಗವಹಿಸುವ ಸರಬರಾಜುದಾರರು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗಾಗಿ **0836–2444438** ದೂರವಾಣಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಬಿಡ್‌ದಾರರು ಟೆಂಡರಿನ ಒಟ್ಟಾರೆ ಅವಧಿಯಲ್ಲಿ ಆನ್‌ಲೈನ್ ಮೂಲಕ **www.eproc.karnataka.gov.in** ನಲ್ಲಿ ನೀಡಲಾಗುವ ತಿದ್ದುಪಡಿ / ಸೇರ್ಪಡೆ (ಇದ್ದಲ್ಲಿ) ತಪ್ಪದೇ ಗಮನಿಸುವುದು.

ವಾಸಾಸಂಇ/ಧಾರವಾಡ/ಎಂಸಿಎ/355/2021–22 ಸಹಿ/– ಆಸ್ತಿ ಅಧಿಕಾರಿಗಳು

ಕರ್ನಾಟಕ ಗೃಹ ಮಂಡಳಿ

3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.

ಸಂಖ್ಯೆ:ಕಗೃಮಂ/ಉಪ್ರವ್ಯ (ಗ್ರಾ.ಸೇ)/ಹಂಚಿಕೆ–10/ಪ್ರಕಟಣೆ/2021–22 ದಿನಾಂಕ: 16.07.2021

ಸಾರ್ವಜನಿಕ ಪ್ರಕಟಣೆ

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು ಪಂಜನಹಳ್ಳಿ 3ನೇ ಹಂತದ ಬಡಾವಣೆಯಲ್ಲಿ(ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿ, ಗುಂಡ್ಲುಪೇಟೆ, APMC ಸಮೀಪ) ಎಲ್ಲಾ ಸಾರ್ವಜನಿಕ ಸೌಲಭ್ಯಗಳೊಂದಿಗೆ ವಿವಿಧ ವರ್ಗದ ನಿವೇಶನಗಳನ್ನು ಅಭಿವೃದ್ಧಿಪಡಿಸಿ ಈಗಾಗಲೇ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿ ಹಂಚಿಕೆ ಮಾಡಲಾಗಿರುತ್ತದೆ. ಪ್ರಸ್ತುತ ಹಂಚಿಕೆಗೆ ಲಭ್ಯವಿರುವ ನಿವೇಶನಗಳ ಹಂಚಿಕೆಗಾಗಿ ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲು ಆರಂಭಿಕ ಠೇವಣಿ ಮೊತ್ತವನ್ನು E-Payment ಮೂಲಕ ಪಾವತಿ ಮಾಡಬಹುದಾಗಿದೆ. ಅರ್ಜಿ ಜೊತೆಯಲ್ಲಿ ಪಾವತಿಸಬೇಕಾದ ನೊಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿ ವಿವರ ಹಾಗೂ ಸ್ವತ್ತುಗಳ ವಿವರಗಳು ಈ ಕೆಳಕಂಡಂತಿದೆ. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 02.09.2021** ಅಗಿರುತ್ತದೆ.

ಕ್ರ. ಸಂ.	ಸ್ಥಳ ಮತ್ತು ಜಿಲ್ಲೆ	ವರ್ಗ	ಅಂದಾಜು ಸ್ವತ್ತುಗಳ ವಿವರ	ನೋಂದಣಿ ಶುಲ್ಕ	ಆರಂಭಿಕ ಠೇವಣಿ	ಮಂಡಳಿಯ ದರ ಪ್ರತಿ ಚದರ ಅಡಿಗೆ(ರೂ.ಗಳಲ್ಲಿ)
1	ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಪಂಜನಹಳ್ಳಿ 3ನೇ ಹಂತ	LIG	45	500/-	25,000/-	ರೂ.455/–
		MIG	146	1000/-	50,000/-	
		HIG	49	1500/-	75,000/-	

ಅರ್ಜಿ ಮತ್ತು ಆರಂಭಿಕ ಠೇವಣಿ ಹಣ **e-payment** ಹಾಗೂ ನಿಯಮ ಮತ್ತು ಷರತ್ತುಗಳ ವಿವರಗಳಿಗಾಗಿ ವೆಬ್ ಸೈಟ್ **https://www.khb.karnataka.gov.in** ಸಂಪರ್ಕಿಸುವುದು.

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/BAN.U/KC/1028/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ.

ಸಂ:ಪಿಬಿ/ಟೆಂಡರ್ ಪ್ರಕಟಣೆ/2021–22/705 ದಿ:–03/08/2021

ಅಲ್ಪಾವದಿ ಇ–ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಗೆ ಇ–ಪ್ರಾಕ್ಯೂರ್‌ಮೆಂಟ್ ಪೋರ್ಟ್‌ಲ್ ಮುಖಾಂತರ ಈ ಕೆಳಗಿನ ಕಾಮಗಾರಿಗಳ ಟೆಂಡರ್‌ನ್ನು ಆಹ್ವಾನಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರಾಕ್ಯೂರ್‌ಮೆಂಟ್ ಪೋರ್ಟ್‌ಲ್ http://eproc.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ಗಾಗಿ ಭಾಗವಹಿಸಬಹುದು, ಹೆಚ್ಚಿನ ವಿವರಗಳಿಗೆ ಸದರಿ ಕಚೇರಿಯಿಂದ ಹಾಗೂ ಸಹಾಯಕ ದೂರವಾಣಿ ಸಂ:08399–240143 ರಿಂದ ಮಾಹಿತಿ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕಾರ್ಯನರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೂವಿನಹಡಗಲಿ ಕಾರ್ಯಾಲಯ ಇ–ಮೇಲ್ eepwdhoovinahadagali@gmail.com ಮೂಲಕ ಅಥವಾ ಖುದ್ದಾಗಿ ಕಚೇರಿಯಲ್ಲಿ ತಾಂತ್ರಿಕ ಸಹಾಯಕರು ಹಾಗೂ ಲೆಕ್ಕ ಅಧೀಕ್ಷಕರು ಇವರನ್ನು ಸಂಪರ್ಕಿಸಿ ಮಾಹತಿ ಪಡೆಯಬಹುದು.

ಕ್ರ.ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
	These works are Reserve for SC Catogery	
1	KPWD/2019-20/BD/WORK_INDENT119210	14.00
2	KPWD/2021-22/OW/WORK_INDENT137121	26.00
	These works are Reserve for ST Catogery	
1	KPWD/2020-21/BD/WORK_INDENT135114	16.50
	General Works	
1	KPWD/2020-21/BD/WORK_INDENT135106	165.00
2	KPWD/2020-21/RD/WORK_INDENT134981/CALL-2	143.55
3	KPWD/2020-21/BD/WORK_INDENT135109	115.98
4	KPWD/2021-22/RD/WORK_INDENT138568	76.17
5	KPWD/2020-21/BD/WORK_INDENT135107	58.75
6	KPWD/2021-22/BD/WORK_INDENT140276	96.00
7	KPWD/2020-21/BD/WORK_INDENT135113	22.00
8	KPWD/2020-21/BD/WORK_INDENT135110	10.84
9	KPWD/2020-21/BD/WORK_INDENT135115	11.00

ಅ) ಗುತ್ತಿಗೆದಾರರ ಕ್ವಾರೀಸ್ ದಿನಾಂಕ: **17/08/2021ರಂದು 16.00 ಗಂಟೆಯ ವರೆಗೆ.** ಆ) ಟೆಂಡರ್‌ಗೆ ಅರ್ಜಿ ಮತ್ತು ಟೆಂಡರ್ ಸಲ್ಲಿಸುವ ದಿನಾಂಕ: **18/08/2021 ರಂದು 16.00 ಗಂಟೆಯ ವರೆಗೆ.** ಇ) ಇ–ಪ್ರಾಕ್ಯೂರ್‌ಮೆಂಟ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ: **19/08/2021 ರಂದು 16.30 ಗಂಟೆಗೆ.** ಈ) ಅರ್ಥೀಕ ಬಿಡ್ ತೆರೆಯುವ ದಿನಾಂಕ: **ನಂತರ ತಿಳಿಸುವುದು.**

NOTE: 1.12.00% GST will be added to the contract amount 2. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು E-procurement Portal ನಲ್ಲಿ ನೊಡಿಕೊಳ್ಳಬಹುದು

ಸಹಿ/–ಕಾರ್ಯನಿರ್ವಾಹಕ ಅಭಿಯಂತರು,
ಲೋಕೋಪಯೋಗಿ ಇಲಾಖೆ ವಿಭಾಗ ಹಡಗಲಿ.

ಡಿಐಪಿಆರ್/ಬಳ್ಳಾರಿ/232/ಎಂಸಿಎ/2021–22

ಕೈಗಾರಿಕಾ ತರಬೇತಿ ಸಂಸ್ಥೆ ಮತ್ತು ಉದ್ಯೋಗ ಇಲಾಖೆ

ಆಯುಕ್ತರವರ ಕಛೇರಿ, ಕೌಶಲ್ಯ ಭವನ, ಡೈರಿ ವೃತ್ತದ ಹತ್ತಿರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029,
ದೂರವಾಣಿ ಸಂಖ್ಯೆ: 080–25189105 ಇ–ಮೇಲ್: karcet.iti.admissions@gmail.com, Website: www.emptrg.kar.nic.in

(ITI) ಗಳಿಗೆ ON-LINE ಮುಖಾಂತರ ಆಗಸ್ಟ್ 2021 ನೇ ಸಾಲಿನ ಪ್ರವೇಶ ಪ್ರಕಟಣೆ

- ರಾಜ್ಯದಲ್ಲಿರುವ ಎಲ್ಲಾ 270 ಸರ್ಕಾರಿ ಹಾಗೂ 196 ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿರುವ ರಾಷ್ಟ್ರೀಯ ವೃತ್ತಿ ಶಿಕ್ಷಣ ಪರಿಷತ್ **(NCVT)** ಸಂಯೋಜನೆ ಹೊಂದಿರುವ ವೃತ್ತಿಗಳಿಗೆ ON-LINE ಮುಖಾಂತರ ಇಲಾಖಾ **Website:www.emptrg.kar.nic.in** ರಲ್ಲಿ ಪ್ರಕಟಿಸಿರುವಂತೆ ಅರ್ಹತೆಯೊಂದಿಗೆ ಮೀಸಲಾತಿ ಆಧಾರದ ಮೇಲೆ ಆಗಸ್ಟ್–2021 ನೇ ಸಾಲಿಗೆ ಪ್ರವೇಶ ಪಡೆಯಲು ಅರ್ಜಿಗಳನ್ನು ಅಹ್ವಾನಿಸಲಾಗಿದೆ.
- ಅಭ್ಯರ್ಥಿಗಳು ಇಲಾಖಾ **Website:www.emptrg.kar.nic.in** ರಲ್ಲಿ ನೇರವಾಗಿ ಆಥವಾ ಹತ್ತಿರದ ಸರ್ಕಾರಿ /ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ / ಸಾರ್ವಜನಿಕ Cyber Café ಗಳ ಮೂಲಕ ON-LINE ಅರ್ಜಿ ಸಲ್ಲಿಸಬಹುದಾಗಿದೆ.
- ರಾಷ್ಟ್ರೀಯ ವೃತ್ತಿ ಶಿಕ್ಷಣ ಪರಿಷತ್ (NCVT)ನಿಂದ ಸಂಯೋಜನೆ ಹೊಂದಿ ಅನುಷ್ಠಾನಗೊಳಿಸಿರುವ 52 ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡಲಾಗುವುದು.
- ಅಭ್ಯರ್ಥಿಗಳು ಪ್ರವೇಶ ಸಮಯದಲ್ಲಿ ನೀಡುವ Mobile number ಮತ್ತು e-Mail id ಗಳನ್ನು ತರಗತಿಗಳು ಮತ್ತು AITT ಪರೀಕ್ಷೆಗಳು ಮುಗಿಯುವರೆಗೆ ಬದಲಾವಣೆ ಮಾಡುವಂತಿಲ್ಲ. ಪರೀಕ್ಷೆಗೆ ಸಂಬಂಧಿಸಿದಂತೆ ಎಲ್ಲಾ ಉಪಯುಕ್ತ ಮಾಹಿತಿಗಳನ್ನು ನೋಂದಣಿ ಮಾಡಿಕೊಂಡಿರುವ Mobile ಮತ್ತು e-Mail id ಗೆ ಮಾತ್ರ ರವಾನಿಸಲಾಗುವುದು.
- S.S.L.C Board ಅಥವಾ Council of Boards of School Education, New Delhi (COBSE). ರವರಿಂದ ಮಾನ್ಯತೆ ಪಡೆದ ಪರೀಕ್ಷಾ ಮಂಡಳಿಗಳಿಂದ 10ನೇ ತರಗತಿಯ ಪ್ರಮಾಣ ಪತ್ರ ಹೊಂದಿರುವಂತಹ ಅಭ್ಯರ್ಥಿಗಳು ಪ್ರವೇಶಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.
- ಮರಗೆಲಸ (Carpentry), ವೆಲ್ಡರ್, ಶೀಟ್ ಮೆಟಲ್ ವರ್ಕರ್, ಹೊಲಿಗೆ ತಂತ್ರಜ್ಞಾನ (Sewing technology), ಸರ್ಫೇಸ್ ಆರ್ನಾಮೆಂಟೇಶನ್ ಟೆಕ್ನಿಕ್, ಪ್ಲಂಬರ್, ವೈರ್‌ಮ್ಯಾನ್, ಡ್ರೆಸ್ ಮೇಕಿಂಗ್ ಇತ್ಯಾದಿ ವೃತ್ತಿಗಳಿಗೆ 8th pass/10th failed ಅಭ್ಯರ್ಥಿಗಳು ಸಹ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.
- **ದಿ.29.07.2021 ರಿಂದ ದಿ.28.08.2021** ರವರೆಗೆ **ON-LINE** ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.
- 270 ಸರ್ಕಾರಿ ಮತ್ತು 196 ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಪಡೆಯಲು ಮಾತ್ರ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ.
- ರಾಜ್ಯದಲ್ಲಿ PPP ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಕೈ.ತ. ಸಂಸ್ಥೆಗಳಲ್ಲಿ Bakery & Confectionery, Basic Cosmetology, Food Production (General) ಇತ್ಯಾದಿ ವಿಶೇಷ ವೃತ್ತಿಗಳನ್ನು ಹೊಸದಾಗಿ ಪ್ರಾರಂಭಿಸಲಾಗಿದೆ.

ವಿಶೇಷ ಸೂಚನೆ: ಅರ್ಜಿದಾರರು ಭಾರತ ಸರ್ಕಾರದ DGT, New Delhi, ಯಿಂದ ಸಂಯೋಜನೆಗೊಂಡಿರುವ ಕೈ.ತ.ಸಂಸ್ಥೆ ಮತ್ತು ವೃತ್ತಿಗಳ ಬಗ್ಗೆ ಖಚಿತಪಡಿಸಿಕೊಂಡು ಪ್ರವೇಶ ಪಡೆಯಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು/ ಇಲಾಖಾ **Website** ಸಂಪರ್ಕಿಸಲು ತಿಳಿಸಲಾಗಿದೆ.

ಸಹಿ/– ಆಯುಕ್ತರು,
ಕೈಗಾರಿಕಾ ತರಬೇತಿ ಮತ್ತು ಉದ್ಯೋಗ

ವಾಸಾಸಂಇ/ಬೆಂ.ನ/963/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

Mangaluru City Corporation

ADDRESS: Post Box No:756, Lalbagh Mangaluru- 575003, Dakshina Kannada
Phone: Office:0824-2220313-318 , Fax:0824-2220310
Email: commissioner.mcc@gmail.com Website:www.mangalurucity.mrc.gov.in
No MCC/HS/CR-57/2020-21/G1 Date: 02-08-2021

CORRIGENDUM TO TENDER NOTIFICATION

Mangaluru City Corporation invited tender for "REMEDIATION OF LEGACY WASTE THROUGH BIO-MINING. MATERIAL RECOVERY. REJECTS DISPOSAL & LAND RECLAMATION AT LANDFILL SITE - PACHANADY - MANGALURU ".The tender notification dated 07.07.2021 was published in the News Paper as on 08.07.2021. Since there are some changes in the tender notification please go through the corrigendum. Last date for submission of Tender (As per Earlier paper Notification): **09.08.2021**, **Postponed last Date for Submission: 04.09.2021 at 17:00 hours**, For more Details : Visit e-portal site or contact Environment Engineer, MCC, Mangaluru during office hours or over phone 0824-2220313-18

Sd/- Commissioner, Mangaluru City Corporation

ಪ್ರಧಾನ ಇಂಜಿನಿಯರ್ ರವರ ಕಛೇರಿ

ಪಿ.ಆರ್.ಎ.ಎಂ.ಸಿ., 4ನೇ ಮಹಡಿ, ಪಿ.ಡಬ್ಲ್ಯೂ.ಡಿ. ಅನೆಕ್ಸ್ ಕಟ್ಟಡ,
ಕೆ.ಆರ್.ವೃತ್ತ, ಬೆಂಗಳೂರು – 560 001.

ಸಂಖ್ಯೆ: ಪ್ರಇಂ/27/ಪಿಆರ್‌ಎಎಂಸಿ/ರಸು/2020–21/ ದಿನಾಂಕ: 30–07–2021

ತುಮಕೂರು ಜಿಲ್ಲೆಯ 01 ರಸ್ತೆ ಸುರಕ್ಷತಾ ಕಾಮಗಾರಿಗೆ ಕಾರ್ಯಪಾಲಕ ಇಂಜಿನಿಯರ್ ಪಿ.ಆರ್.ಎ.ಎಂ.ಸಿ., ರವರು ರಾಜ್ಯಪಾಲರ ಪರವಾಗಿ ಟೆಂಡರ್ ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ–ಪ್ರಾಕ್ ನಿಂದ (**www.eproc.karnataka.gov.in**) **ದಿನಾಂಕ: 02–08–2021** ರಿಂದ ಪಡೆಯಬಹುದಾಗಿರುತ್ತದೆ. ಟೆಂಡರ್ ಅನ್ನು **ದಿನಾಂಕ 16–08–2021 ಸಂಜೆ 5:30** ರೊಳಗಾಗಿ ಇ–ಪ್ರಾಕ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಪಡೆಯಬಹುದಾಗಿರುತ್ತದೆ ಇ–ಮೇಲ್: **cepramc@kpwd.gov.in.**

ಸಹಿ/–
ಕಾರ್ಯಪಾಲಕ ಇಂಜಿನಿಯರ್,
ಪಿ.ಆರ್.ಎ.ಎಂ.ಸಿ, ಪಿಡಬ್ಲ್ಯೂಡಿ, ಬೆಂಗಳೂರು

ವಾಸಾಸಂಇ/ಬೆಂನ/1030/ ಅಲಕ್‌ನಂದ/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್

ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಗ್ರಾ.ನೀ.ಸ.&ನೈವಿ/ಚಿದು/ಕಾಇಂ/ತಾಂಶಾ/ಟೆಂಡರ್/426/2021–22
ದಿನಾಂಕ: 30.07.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್)

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಚಿತ್ರದುರ್ಗ ವ್ಯಾಪ್ತಿಯ ಹೊಳಲ್ಕೆರೆ ತಾಲ್ಲೂಕಿನಲ್ಲಿ 2021–22ನೇ ಸಾಲಿನ ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದಿತ ಹೊಳಲ್ಕೆರೆ ತಾಲ್ಲೂಕಿನ ಹೊಳಲ್ಕೆರೆ ಪಟ್ಟಣ ಮತ್ತು 215 ಗ್ರಾಮೀಣ ಜನವಸತಿಗಳಿಗೆ ಬಹುಗ್ರಾಮ ಕುಡಿಯುವ ನೀರು ಯೋಜನೆ [(5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಸೇರಿದಂತೆ (O&M)DBOT)] ಆಧಾರದ ಮೇಲೆ ಟೆಂಡರ್‌ಅನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದೆ. ವಿವರಗಳನ್ನು (www.eproc.karnataka.gov.in)ರಲ್ಲಿ ಪಡೆಯಬಹುದಾಗಿರುತ್ತದೆ.

(1) ಪೂರ್ವಭಾವಿ ಸಭೆ ಮತ್ತು ದಿನಾಂಕ ಹಾಗೂ ಸ್ಥಳ: 16.08.2021ರ ಸಮಯ 11:00, ಮಾನ್ಯ ಮುಖ್ಯ ಇಂಜಿನಿಯರ್‌ರವರ ಕಛೇರಿ, ಗ್ರಾ.ಕು.ನೀ&ನೈ ಇಲಾಖೆ, ಕೆ.ಹೆಚ್.ಬಿ. ಕಟ್ಟಡ, ಇ–ಬ್ಲಾಕ್, 1ನೇ ಮಹಡಿ, ಕೆಂಪೇಗೌಡ ರಸ್ತೆ, ಬೆಂಗಳೂರು. (2) ಭರ್ತಿ ಮಾಡಲಾದ ಟೆಂಡರ್ ದಾಖಲಾತಿಗಳನ್ನು ಆನ್‌ಲೈನ್‌ನಲ್ಲಿ ಸ್ವೀಕರಿಸುವ ಕೊನೆಯ ದಿನಾಂಕ: 31.08.2021ರ ಸಮಯ 16:00. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ದಿನಾಂಕ: 02.09.2021ರ ಸಮಯ 11:00. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ದಿನಾಂಕ: 08.09.2021ರ ಸಮಯ 11:00.

Scheme Name: Providing Water Supply Facilities to Holalkere Urban and 215 Rural Habitations of Holalkere Taluk Chitradurga District, KARNATAKA STATE, INDIA Under DBOT EMD Amount Rs. 2,14,00,000.00

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾ.ನೀ.ಸ&ನೈರ್ಮಲ್ಯ ವಿಭಾಗ, ಚಿತ್ರದುರ್ಗ.

RO No. 327: DIPR/CTA/MCA/2021-22

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ತುಮಕೂರು

ಶ್ರೀ ಮಹಾಲಕ್ಷ್ಮೀ ಆರ್ಕೇಡ್, ಎಸ್.ಎಸ್.ಪುರಂ ಮುಖ್ಯರಸ್ತೆ, ಕಾಫಿ ಬೋರ್ಡ್ ಕಾಲೋನಿ, ತುಮಕೂರು–572 102
ದೂರವಾಣಿ:0816–2278190
ವೆಬ್‌ಸೈಟ್: www.smartcitytumakuru.in
ಇ–ಮೇಲ್: smartcitytumakuru@gmail.com

ಸಂಖ್ಯೆ:ತುಸ್ಮಾಸಿ/ಟೆಂಡರ್/ಸಿಆರ್/02/2021–22 ದಿನಾಂಕ: 02.08.2021

ಟೆಂಡರ್ ಪ್ರಕಟಣೆ

ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ದಾಸ್ತಾನನ್ನು ಇ–ಪೋರ್ಟಲ್ www.eproc.karnataka.gov.in–ಮುಖಾಂತರ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಇ–ಪೋರ್ಟಲ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ: 080–22340948 ಹಾಗೂ ತುಮಕೂರು ಸ್ಮಾರ್ಟ್‌ಸಿಟಿ ದೂರವಾಣಿ ಸಂಖ್ಯೆ: 0816–2278190 ಯನ್ನು ಸಂಪರ್ಕಿಸಬಹುದು.

ಕಾಮಗಾರಿಯ ಹೆಸರು: ತುಮಕೂರು ಎಂಪ್ರೆಸ್ ಬಾಲಕಿಯರ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನ ಮಲ್ಟಿ ಫಂಕ್ಷನಲ್ ಆಡಿಟೋರಿಯಂಗೆ ಪೀಠೋಪಕರಣಗಳ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆ. ಕಾಮಗಾರಿ ಅಂದಾಜು ಮೊತ್ತ: 97.02 ಲಕ್ಷಗಳು. ಇಎಂಡಿ: ದಿನಾಂಕ:22.12.2020ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 675 ಎಕ್ಸ್‌ಪೆ 12/2020 ರ ಅನ್ವಯ ಡಿಕ್ಲರೇಷನ್ ನಮೂನೆಯನ್ನು ಭರ್ತಿ ಮಾಡಿ ಸಲ್ಲಿಸುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:**18.08.2021**. ಟೆಂಡರ್ ತೆರೆಯುವ ದಿನಾಂಕ: **19.08.2021**.

ಸೂಚನೆ: ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು, ತುಮಕೂರು
ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು.

DIPR/TUM/203/MCA/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಇಂಜಿನೀಯರವರ ಕಚೇರಿ, ಕನೀನಿನಿ, ಜಿಆರ್‌ಬಿಸಿಸಿ ವಿಭಾಗ ನಂ.4 ಚಿಕ್ಕೋಡಿ ಫೋನ ನಂ:08338–272485 ಫ್ಯಾಕ್ಸ ನಂ: 08338–275186 ಇ–ಮೇಲ್ ಐಡಿ:ee_knnlgrbc4ckd@rediffmail.com

ಟೆಂಡರ ಅವಧಿ ವಿಸ್ತರಣೆ ಅಧಿಸೂಚನೆ–2
(ಇ–ಪ್ರೊಕ್ಯೂರಮೆಂಟ ಮೂಲಕ ಮಾತ್ರ)

ಟೆಂಡರ ಅವಧಿ ವಿಸ್ತರಣೆ ಅಧಿಸೂಚನೆ ಪತ್ರ ಸಂ: ಕನೀನಿನಿ/ಜಿಆರ್‌ಬಿಸಿಸಿ ವಿ–4/ಅಡವಿಸಿದ್ದೇಶ್ವರ & ಶಂಕರಲಿಂಗ ಏ.ನೀ.ಯೋ/ಅ.ವಿ/2021–22/799 ದಿನಾಂಕ: 02–08–2021

ಉಲ್ಲೇಖ:1) ಈ ಕಚೇರಿಯ ಅಲ್ಪಾವಧಿ ಟೆಂಡರ ಅಧಿಸೂಚನೆ ಸಂ: ಕನೀನಿನಿ/ ಜಿಆರ್‌ಬಿಸಿಸಿ ವಿ–4/ಟೆಂಡರ/2021–22/03 ದಿನಾಂಕ: 17–07–2021.2) ಸಂ: ಕನೀನಿನಿ/ಜಿಆರ್‌ಬಿಸಿಸಿ ವಿ–4/ಅಡವಿಸಿದ್ದೇಶ್ವರ & ಶಂಕರ ಲಿಂಗ ಏ.ನೀ.ಯೋ/ಅ.ವಿ/2021–22/ 715 ದಿನಾಂಕ: 26–07–2021.

ಮೇಲಿನ ಉಲ್ಲೇಖದಲ್ಲಿ ದಿನಾಂಕ 17–07–2021 ರಂದು ಅಲ್ಪಾವಧಿ ಟೆಂಡರ ಅಧಿಸೂಚನೆ ಹೊರಡಿಸಲಾಗಿತ್ತು. ತಾಂತ್ರಿಕ ಕಾರಣಾಂತರಗಳಿಂದ ಟೆಂಡರ ಪ್ರಕ್ರಿಯೆ ವೇಳಾಪಟ್ಟಿಯನ್ನು ಉಲ್ಲೇಖಿತ ಪತ್ರ (2)ರಡಿಯಲ್ಲಿ ತಿದ್ದುಪಡಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು.

ತಾಂತ್ರಿಕ ಕಾರಣಾಂತರಗಳಿಂದಾಗಿ ಹಾಗೂ ಹೆಚ್ಚಿನ ಬಿಡ್ಡರ್‌ಗಳು ಟೆಂಡರ ಪ್ರಕ್ರಿಯೆಯಲ್ಲಿ ಭಾಗವಹಿಸಲು ಟೆಂಡರ ಪ್ರಕ್ರಿಯೆ ವೇಳಾಪಟ್ಟಿಯನ್ನು ಈ ಕೆಳಗಿನಂತೆ ತಿದ್ದುಪಡಿ ಅಧಿಸೂಚನೆಯನ್ನು ಮರು ಹೊರಡಿಸಲಾಗಿದೆ.

ಇಂಡೆಂಟ ನಂ. 31455 ಗಾಗಿ ಅವಧಿ ವಿಸ್ತರಣೆ:
ಸಂ:d:ಪರಿಷ್ಕೃತ ವೇಳಾಪಟ್ಟಿ:: ಭರ್ತಿ ಮಾಡಿದ ಟೆಂಡರಗಳನ್ನು ಇ–ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ & ಸಮಯ: 09–08–2021 ರ 16.00 ಘಂಟೆಯವರೆಗೆ.ಸಂ:e:ಪರಿಷ್ಕೃತ ವೇಳಾಪಟ್ಟಿ:: ತಾಂತ್ರಿಕ ಬಿಡ್‌ನ್ನು (ಲಕೋಟೆ–1) ತೆರೆಯುವ ದಿನಾಂಕ & ಸಮಯ: 10–08–2021 ರ 16.30 ಘಂಟೆಯ ನಂತರ,ಸಂ:f:ಪರಿಷ್ಕೃತ ವೇಳಾಪಟ್ಟಿ:: ತಾಂತ್ರಿಕ ಬಿಡ್‌ನಲ್ಲಿ (ಲಕೋಟೆ–1) ಪೂರ್ವಾಹತೆ ಹೊಂದಿದ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು (ಲಕೋಟೆ–2) ತೆರೆಯುವ ದಿನಾಂಕ ಸಮಯ:ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ.

ಹೆಚ್ಚುವರಿ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಚೇರಿಯ ದೂರವಾಣಿ ಸಂಖ್ಯೆ 08338–272485 ನಿಂದ ಕಚೇರಿ ಸಮಯದಲ್ಲಿ ಪಡೆಯಬಹುದು ಮತ್ತು ಇ–ಪ್ರೊಕ್ಯೂರಮೆಂಟ ಪೋರ್ಟ ನಲ್ಲಿ (https://www.eproc.karnataka.gov.in) ನೋಡಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರು,
ಕನೀನಿನಿ, ಜಿಆರ್‌ಬಿಸಿಸಿ ವಿಭಾಗ ನಂ. 4 ಚಿಕ್ಕೋಡಿ

DIPR/BGM/RO-NO-577/MCA/2021-22

ಬಾಂಗ್ಲಾ ಗಡಿಯಲ್ಲಿ ಗುಂಡಿನ ದಾಳಿ: ಯೋಧ ಹುತಾತ್ಮ


ರಾಜಕುಮಾರ

ಕಮಲಾಪುರ (ಕಲಬುರ್ಗಿ ಜಿಲ್ಲೆ): ತ್ರಿಪುರ ರಾಜ್ಯಕ್ಕೆ ಹೊಂದಿಕೊಂಡಿರುವ ಬಾಂಗ್ಲಾದೇಶದ ಗಡಿಯಲ್ಲಿ ಉಗ್ರರ ವಿರುದ್ಧ ಹೋರಾಡುವಾಗ ಗುಂಡು ತಗಲಿ ಕಲಬುರ್ಗಿ ಜಿಲ್ಲೆ ಆಳಂದ ತಾಲ್ಲೂಕಿನ ಚಿಂಚನಸೂರ ಗ್ರಾಮದ ಯೋಧ ರಾಜಕುಮಾರ ಎಂ. ಮಾವಿನ ಅವರು ಹುತಾತ್ಮರಾಗಿದ್ದಾರೆ.

ಮಂಗಳವಾರ ಬೆಳಿಗ್ಗೆ ಬಾಂಗ್ಲಾ ಗಡಿಯಲ್ಲಿ ಪಹರೆಗೆ ತೆರಳಿದ್ದ ವೇಳೆ ಬಾಂಗ್ಲಾದ ಉಗ್ರಗಾಮಿಗಳು ಗುಂಡಿನ ದಾಳಿ ನಡೆಸಿದರು. ಈ ವೇಳೆ ರಾಜಕುಮಾರ ಹಾಗೂ ಜತೆಗಿದ್ದ ಸಬ್‌ಇನ್‌ಸ್ಪೆಕ್ಟರ್ ಭುರುಸಿಂಗ್ ಹುತಾತ್ಮರಾದರು.

2002ರಲ್ಲಿ ಗಡಿ ಭದ್ರತಾ ಪಡೆ ಸೇರಿದ್ದ ರಾಜಕುಮಾರ ಅವರು, ಜಮ್ಮು, ಒಡಿಶಾ, ಅಸ್ಸಾಂ ಗಡಿಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಅವರಿಗೆ ತಾಯಿ, ಪತ್ನಿ, ಇಬ್ಬರು ಪುತ್ರಿಯರು, ಪುತ್ರ ಹಾಗೂ ಇಬ್ಬರು ಸಹೋದರರು ಇದ್ದಾರೆ.

ಯೋಧನ ಕಳೇಬರವನ್ನು ಗುರುವಾರ (ಆ. 5) ಮಧ್ಯಾಹ್ನ ಸ್ವಗ್ರಾಮಕ್ಕೆ ತರಲಾಗುತ್ತಿದೆ. ಅಲ್ಲಿನ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ಸಂಜೆಗೆ ಅಂತ್ಯಸಂಸ್ಕಾರ ನೆರವೇರಿಸಲಾಗುವುದು' ಎಂದು ಆಳಂದ ತಹಶೀಲ್ದಾರ್ ಯಲ್ಲಪ್ಪ ಸುಬೇದಾರ ಮಾಹಿತಿ ನೀಡಿದ್ದಾರೆ.

ಉಗ್ರರ ಪರ ಕಾಂಗ್ರೆಸ್ ಸಹಾನುಭೂತಿ: ನಳಿನ್

ಬೆಂಗಳೂರು: 'ಭಯೋತ್ಪಾದಕರನ್ನು ಮಟ್ಟ ಹಾಕಲು ಸಂಸತ್ತಿನಲ್ಲಿ ಮಸೂದೆಯನ್ನು ಮಂಡಿಸಿದಾಗ, ಕಾಂಗ್ರೆಸ್ ಸಂಸದರು ಸದನದಿಂದ ಹೊರ ನಡೆದಿರುವುದು ದೇಶದ ಭದ್ರತೆ ಮತ್ತು ಸುರಕ್ಷತೆ ವಿಚಾರದಲ್ಲಿ ಆ ಪಕ್ಷಕ್ಕಿರುವ ಕಾಳಜಿಗೆ ಸಾಕ್ಷಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹರಿಹಾಯ್ದಿದ್ದಾರೆ.

'ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಿ ಆಡಳಿತದಲ್ಲಿದ್ದಾಗ ಹಿಂದೂಗಳನ್ನು ದಮನ ಮಾಡಲು ಮಸೂದೆಗಳನ್ನು ತರುತ್ತಿತ್ತು. ಆದರೆ, ಈಗ ದೇಶ ವಿರೋಧಿ ಶಕ್ತಿಗಳನ್ನು ಪತ್ತೆ ಹಚ್ಚಲು ಪೂರಕ ಮಸೂದೆ ತಂದಾಗ, ಅದನ್ನು ಬೆಂಬಲಿಸದೇ ಕಲಾಪ ಬಹಿಷ್ಕರಿಸಿರುವುದು ಕಾಂಗ್ರೆಸ್ ಪಕ್ಷ ಭಯೋತ್ಪಾದಕರ ಪರ ನೀತಿ ಹೊಂದಿರುವುದನ್ನು ತೋರಿಸುತ್ತದೆ' ಎಂದು ಅವರು ಹೇಳಿದ್ದಾರೆ.

'ಮತದಾನದ ಸಮಯ ಬಂದಾಗ, ಸೋನಿಯಾಗಾಂಧಿ ಸೇರಿ ಕಾಂಗ್ರೆಸ್‌ನ ಎಲ್ಲ ಸಂಸದರೂ ಮಸೂದೆ ಸರಿ ಇಲ್ಲ ಎಂದು ಹೇಳಿ ಸದನವನ್ನು ಬಹಿಷ್ಕರಿಸಿದರು. ಭಯೋತ್ಪಾದಕರಿಗೆ ಆರ್ಥಿಕವಾಗಿ ಸಹಾಯ ಮಾಡುವ ಮತ್ತು ಜಿಹಾದಿ ಸಾಹಿತ್ಯದ ಮೂಲಕ ಅವರನ್ನು ಭಯೋತ್ಪಾದಕರನ್ನಾಗಿ ಮಾಡುತ್ತಿರುವ ಜನರ ಬಗ್ಗೆ ಸೋನಿಯಾಗಾಂಧಿ ಮತ್ತು ಕಾಂಗ್ರೆಸ್‌ಗೆ ಸಹಾನುಭೂತಿ ಏಕೆ' ಎಂದು ನಳಿನ್ ಪ್ರಶ್ನಿಸಿದ್ದಾರೆ.

'ಭಯೋತ್ಪಾದಕರಿಗೆ ಆರ್ಥಿಕ ನೆರವು ನೀಡುವವರನ್ನು ಮತ್ತು ಭಯೋತ್ಪಾದನೆಗೆ ಪ್ರಚೋದನೆ ನೀಡುವ ಜಿಹಾದಿ ಸಾಹಿತ್ಯವನ್ನು ಒದಗಿಸಿಕೊಡುವವರನ್ನು ಭಯೋತ್ಪಾದಕರು ಎಂದು ಪರಿಗಣಿಸುವ ಮಸೂದೆಯನ್ನು ಕೇಂದ್ರ ಸರ್ಕಾರವು ಅಂಗೀಕರಿಸಿದೆ. ಭಯೋತ್ಪಾದನೆಯನ್ನು ಮಟ್ಟ ಹಾಕಲು ಅವರ ದುಷ್ಕೃತ್ಯವನ್ನು ಗುರುತಿಸಿ, ಶಿಕ್ಷಿಸಿ ಭಯೋತ್ಪಾದನೆಯನ್ನು ಬೇರು ಸಹಿತ ಕಿತ್ತೊಗೆಯಲು ಕಠಿಣ ಕಾನೂನುಗಳನ್ನು ತರಲಾಗಿದೆ' ಎಂದು ಅವರು ಹೇಳಿದ್ದಾರೆ.

ಶಾಲೆಗಳಲ್ಲಿ 'ಪರ್ಯಾಯ ಶಿಕ್ಷಣ' ಯೋಜನೆ

ಬೆಂಗಳೂರು: ಶಾಲೆಗಳು ಆರಂಭ ಆಗದೇ ಇರುವುದರಿಂದ ಸರ್ಕಾರಿ ಶಾಲಾ ಮಕ್ಕಳ ಕಲಿಕೆಗೆ ಅನುಕೂಲವಾಗುವಂತೆ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ಆಗಸ್ಟ್ ತಿಂಗಳ ಪರ್ಯಾಯ ಶಿಕ್ಷಣ ಯೋಜನೆ ಪ್ರಕಟಿಸಿದೆ.

1ರಿಂದ 3ನೇ ತರಗತಿ ವಿದ್ಯಾರ್ಥಿಗಳಿಗೆ ಕನ್ನಡ ಮತ್ತು ಉರ್ದು ಮಾಧ್ಯಮದ ಸೇತುಬಂಧ ಕಾರ್ಯಕ್ರಮವನ್ನೇ ಮುಂದುವರಿಸಲಾಗಿದೆ. 4ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಭಾಷೆಯಲ್ಲಿ ಯಾವ ಯಾವ ಪಾಠ ಬೋಧನೆ ಮಾಡಬೇಕು ಮತ್ತು ಯಾವೆಲ್ಲ ಚಟುವಟಿಕೆ ನಿರ್ವಹಿಸಬೇಕು ಎಂಬುದನ್ನು ಉಲ್ಲೇಖಿಸಿದೆ.

ಪದವಿ ಪ್ರವೇಶ ಮುಂದೂಡಿಕೆ

ಬೆಂಗಳೂರು: ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2021–22ನೇ ಸಾಲಿನ ಪದವಿ ತರಗತಿಗಳಿಗೆ ಇದೇ 4ರಿಂದ ಆರಂಭವಾಗಬೇಕಿದ್ದ ಪ್ರವೇಶ ಪ್ರಕ್ರಿಯೆಯನ್ನು ಕಾಲೇಜು ಶಿಕ್ಷಣ ಇಲಾಖೆ ದಿಢೀರ್ ಮುಂದೂಡಿದೆ.

ಪ್ರವೇಶ ಪ್ರಕ್ರಿಯೆ ಆರಂಭಿಸಲು ಸೂಚಿಸಿ ಜುಲೈ 30ರಂದು ಸುತ್ತೋಲೆ ಹೊರಡಿಸಲಾಗಿತ್ತು. ಇದೀಗ ತಾತ್ಕಾಲಿಕವಾಗಿ ಮುಂದೂಡಿ ಪರಿಷ್ಕೃತ ಸುತ್ತೋಲೆ ಹೊರಡಿಸಲಾಗಿದೆ. ಮುಂದಿನ ದಿನಾಂಕ ಶೀಘ್ರದಲ್ಲೇ ಪ್ರಕಟಿಸಲಾಗುವುದು.

ಗೂಗಲ್‌ನಲ್ಲಿ 'ಹುಡುಕಾಟ'ದ ಇತಿಹಾಸ

ಕೃಷ್ಣ ಭಟ್

‘ಅಂಗೈ ವಿಶ್ವಕೋಶ’ ಎಂದೇ ನಾವು ಕರೆದಿರುವ ಗೂಗಲ್‌ನಲ್ಲಿ ನಾವು ಯಾವುದೇ ಒಂದು ಶಬ್ದವನ್ನು ಹುಡುಕಾಟ ನಡೆಸಿದರೂ ಅದು ಸಾವಿರಾರು ಪುಟಗಳಷ್ಟು ಆಕರವನ್ನು ನಮಗೆ ತೆರೆದಿಡುತ್ತದೆ. ಅದರ ಹಿಂದೆ ಅಪಾರ ಪ್ರಮಾಣದ ಅಲ್ಗೊರಿಥಮ್‌ಗಳು ಕೆಲಸ ಮಾಡಿರುತ್ತವೆ. ಆದರೆ, ಹೇಗೆ ಇದು ನಮಗೆ ಇಷ್ಟೆಲ್ಲ ಆಕರಗಳನ್ನು ತಂದಿಡುತ್ತದೆ ಎಂಬುದು ನಮಗೆ ಗೊತ್ತಾಗುವುದಿಲ್ಲ.

ಕೆಲವೇ ತಿಂಗಳುಗಳ ಹಿಂದೆ ಗೂಗಲ್‌ನಲ್ಲಿ ‘ಕೆಟ್ಟ ಭಾಷೆ ಯಾವುದು’ ಎಂದು ಹುಡುಕಾಟ ನಡೆಸಿದಾಗ ‘ಕನ್ನಡ’ ಎಂಬ ಸರ್ಚ್ ರಿಸಲ್ಟ್ ಬಂದು ಕನ್ನಡಿಗರು ಆಕ್ಷೇಪ ವ್ಯಕ್ತಪಡಿಸಿದ್ದರು. ಅದು ಗೂಗಲ್‌ಗೂ ಭಾರಿ ಮುಜುಗರ ಉಂಟುಮಾಡಿತ್ತು. ಆದರೆ, ಅದು ಯಾವುದೋ ಒಂದು ವೆಬ್‌ಸೈಟ್‌ನಲ್ಲಿ ಬರೆದ ಒಂದು ಆಕ್ಷೇಪಾರ್ಹ ಲೇಖನವಾಗಿತ್ತು. ಅದು ಗೂಗಲ್ ಹುಡುಕಾಟದಲ್ಲಿ ಮೇಲೆದ್ದು ಕಾಣಿಸುವಂತಿತ್ತು ಅಷ್ಟೇ! ಕನ್ನಡಿಗರು ಆಕ್ಷೇಪಿಸಿದ ನಂತರ ಗೂಗಲ್ ಆ ತಪ್ಪನ್ನು ಸರಿಪಡಿಸಿಕೊಂಡು, ಆ ವೆಬ್‌ಸೈಟ್‌ನ ಆ ಪುಟವನ್ನು ಮರೆ ಮಾಡಿತು.

ಇಂಥ ಸಮಸ್ಯೆಗಳು ಮತ್ತೆ ಮತ್ತೆ ಮರುಕಳಿಸದಂತಿರಲಿ ಎಂಬ ಕಾರಣಕ್ಕೆ ಗೂಗಲ್ ತನ್ನ ಸರ್ಚ್ ರಿಸಲ್ಟ್ ಬಗ್ಗೆ ಒಂದಷ್ಟು ಮಾಹಿತಿಯನ್ನು ಕೊಡುವುದಕ್ಕೆ ಆರಂಭಿಸಿದೆ.

ಗೂಗಲ್‌ನಲ್ಲಿ ಏನಾದರೂ ಹುಡುಕಾಟ ನಡೆಸಿದರೆ, ಆ ಗೂಗಲ್ ಪುಟದ ಬಲಮೂಲೆಯಲ್ಲಿ ಮೂರು ಚುಕ್ಕೆಗಳು ಇರುತ್ತವೆ. ಅದರ ಮೇಲೆ ಕ್ಲಿಕ್ ಮಾಡಿದರೆ ‘ಈ ಫಲಿತಾಂಶದ ಬಗ್ಗೆ’ ಎಂಬ ಪ್ಯಾನೆಲ್ ತೆರೆದುಕೊಳ್ಳುತ್ತದೆ. ಇದರಲ್ಲಿ ಮಾಡಿದ ಹುಡುಕಾಟದ ಬಗ್ಗೆ ಎಲ್ಲ ಮಾಹಿತಿ ಇರುತ್ತದೆ. ಯಾಕೆ ಆ ಮಾಹಿತಿ ಪ್ರದರ್ಶನವಾಯಿತು. ಆ ವೆಬ್‌ಸೈಟ್‌ಗಳು ಪ್ರದರ್ಶನವಾಗಿದ್ದರ ಹಿಂದೆ ಯಾವ ಯಾವ ಕೀವರ್ಡ್‌ಗಳು ಕೆಲಸ ಮಾಡಿವೆ – ಎಂಬ ಎಲ್ಲ ಮಾಹಿತಿ ಸಿಗುತ್ತದೆ.

ವಾಸ್ತವವಾಗಿ ಈ ಪ್ಯಾನೆಲ್ ಕಳೆದ ಫೆಬ್ರುವರಿಯಲ್ಲೇ ಆರಂಭವಾಗಿದ್ದರೂ, ಆಗ ಕೇವಲ ವಿಕಿಪೀಡಿಯಾ ವೆಬ್‌ಪೇಜ್ ಮೂಲ ಮಾತ್ರ ಇರುತ್ತಿತ್ತು. ಕಂಡುಬಂದ ಫಲಿತಾಂಶ ಸುರಕ್ಷಿತವಾಗಿದೆಯೇ ಹಾಗೂ ಹುಡುಕಾಟದಲ್ಲಿ ಬಂದ ಫಲಿತಾಂಶಗಳು ಸಹಜವಾಗಿವೆಯೇ ಅಥವಾ ಜಾಹೀರಾತು ನೀಡಿರುವ ಫಲಿತಾಂಶಗಳೂ ಇವೆಯೇ ಎಂಬ ಮಾಹಿತಿಯಷ್ಟೇ ಇರುತ್ತಿತ್ತು. ಆದರೆ, ಈಗ ಇದಕ್ಕೆ ಇನ್ನಷ್ಟು ಮಾಹಿತಿ ಸೇರಿಸಲಾಗಿದೆ.

ಗೂಗಲ್ ಹೇಳುವ ಪ್ರಕಾರ ಇದು ಉತ್ತಮ ಫಲಿತಾಂಶವನ್ನು ನಾವು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದರೆ, ಇದರ ಜೊತೆಗೆ ಕೆಟ್ಟ ಫಲಿತಾಂಶ ಕೊಟ್ಟಿದ್ದಕ್ಕೆ ಗೂಗಲ್‌ಗೆ ಬೈಯುವುದನ್ನೂ ತಪ್ಪಿಸುವ ಪ್ರಯತ್ನವೂ ಹೌದು. ಏಕೆಂದರೆ, ಬಹುತೇಕ ಜನರಿಗೆ ಗೂಗಲ್ ತನ್ನ ಬಳಕೆದಾರರು ಬಳಸುವ ಕೀವರ್ಡ್‌ಗಳನ್ನು ಆಧರಿಸಿ ಕೆಲಸ ಮಾಡುತ್ತದೆ ಎಂಬ ಮಾಹಿತಿ ಇಲ್ಲದ್ದರಿಂದ ಕೆಟ್ಟ ಫಲಿತಾಂಶ ಬಂದಾಗ ಗೂಗಲ್ ಉದ್ದೇಶಪೂರ್ವಕವಾಗಿ ಹೀಗೆ ಮಾಡುತ್ತಿದೆ ಎಂಬ ಅಭಿಪ್ರಾಯಕ್ಕೆ ಬರುವಂತಾಗುತ್ತದೆ. ಆದರೆ, ಈ ಮಾಹಿತಿ ಕೊಡುವುದರಿಂದ ಈ ಫಲಿತಾಂಶದ ತೆರೆಯ ಹಿಂದೆ ಏನು ನಡೆದಿರಬಹುದು ಎಂಬುದನ್ನು ಜನರು ಊಹಿಸಲು ಸಾಧ್ಯವಾಗುತ್ತದೆ.

> ಕೆಲವೇ ತಿಂಗಳುಗಳ ಹಿಂದೆ ಗೂಗಲ್‌ನಲ್ಲಿ ‘ಕೆಟ್ಟ ಭಾಷೆ ಯಾವುದು’ ಎಂದು ಹುಡುಕಾಟ ನಡೆಸಿದಾಗ ‘ಕನ್ನಡ’ ಎಂಬ ಸರ್ಚ್ ರಿಸಲ್ಟ್ ಬಂದು ಕನ್ನಡಿಗರು ಆಕ್ಷೇಪ ವ್ಯಕ್ತಪಡಿಸಿದ್ದರು. ಅದು ಗೂಗಲ್‌ಗೂ ಭಾರಿ ಮುಜುಗರ ಉಂಟುಮಾಡಿತ್ತು.

ಆದರೆ ಗೂಗಲ್‌ನ ಮೂಲ ಉದ್ದೇಶವೇನೆಂದರೆ, ಇದು ಬೇಕಾದ ಮಾಹಿತಿಯನ್ನು ಇನ್ನಷ್ಟು ನಿಖರವಾಗಿ ಹುಡುಕಲು ಸಹಾಯ ಮಾಡಬೇಕು. ಯಾವ ಶಬ್ದಗಳನ್ನು ಸರ್ಚ್ ಮಾಡಿದರೆ ಯಾವ ಮಾಹಿತಿ ಕಾಣಿಸಿಕೊಳ್ಳುತ್ತದೆ ಮತ್ತು ಯಾವ ಶಬ್ದಗಳ ಜೊತೆಗೆ ಯಾವ ಶಬ್ದ ಸೇರಿದರೆ ನಮಗೆ ಬೇಡದ ಮಾಹಿತಿ ಬರುತ್ತದೆ ಎಂಬ ತಿಳಿವಳಿಕೆ ಹುಡುಕಾಟ ನಡೆಸುವವರಿಗೆ ಬರುವುದರಿಂದ ಜನರು ಇನ್ನಷ್ಟು ಹೆಚ್ಚು ಸೂಕ್ತವಾದ ಶಬ್ದಗಳನ್ನು ಬಳಸಿಯೇ ಹುಡುಕಾಟ ನಡೆಸುತ್ತಾರೆ. ಅದರಿಂದ ಫಲಿತಾಂಶ ಹೆಚ್ಚು ನಿಖರವಾಗಿ ಕಾಣಿಸಿಕೊಳ್ಳುತ್ತದೆ.

ಇನ್ನೂ ಒಂದು ಪ್ರಮುಖ ಸಂಗತಿಯೆಂದರೆ, ಹುಡುಕಾಟದ ಹಿಂದಿನ ಮಾಹಿತಿಯನ್ನು ನೀಡುವುದರ ಜೊತೆಗೆ ಗೂಗಲ್ ಕೆಲವು ಸಲಹೆಗಳನ್ನೂ ನೀಡಲಿದೆ. ಇದರಲ್ಲಿ ಇನ್ನಷ್ಟು ನಿಖರವಾದ ಶಬ್ದಗಳ ಸಲಹೆ ನೀಡುತ್ತದೆ. ನಿಮಗೆ ಬೇಕಾಗಿರಬಹುದಾದ ಫಲಿತಾಂಶಗಳನ್ನು ಹುಡುಕಲು ಯಾವುದೋ ಒಂದು ಶಬ್ದಕ್ಕೆ ಉದ್ಧರಣ ಚಿಹ್ನೆಯನ್ನು ಹಾಕುವಂತೆ ಸಲಹೆ ನೀಡಬಹುದು. ಇವೆಲ್ಲವೂ ಜನರು ಹೆಚ್ಚು ನಿಖರವಾಗಿ ಹುಡುಕಾಟ ನಡೆಸಲಿ ಮತ್ತು ಸೂಕ್ತ ಫಲಿತಾಂಶವನ್ನು ಪಡೆಯಲಿ ಎಂಬ ನೇರ ಉದ್ದೇಶವನ್ನೇ ಹೊಂದಿದೆ.

ಗೂಗಲ್ ತನ್ನ ಅಲ್ಗೊರಿಥಮ್ ಅನ್ನು ಕಾಲಕಾಲಕ್ಕೆ ಹೆಚ್ಚು ಹೆಚ್ಚು ಸುಭದ್ರಗೊಳಿಸುತ್ತಲೇ ಬಂದಿದೆ. ಅದು ಹೆಚ್ಚು ಹೆಚ್ಚು ನಿಖರವಾದ ಫಲಿತಾಂಶಗಳನ್ನು ಜನರಿಗೆ ಒದಗಿಸಬೇಕು ಎಂಬುದರತ್ತಲೇ ಗಮನ ನೆಟ್ಟಿದೆ. ಆದರೆ, ಇದೇ ಸಮಯದಲ್ಲಿ ಇನ್ನೂ ಒಂದು ಪ್ರಮುಖ ಸಂಗತಿಯನ್ನು ಗಮನಿಸಬಹುದಾದ್ದೆಂದರೆ, ಹೀಗೆ ಹೆಚ್ಚು ಮಾಹಿತಿಯನ್ನು ಗೂಗಲ್ ಜನರಿಗೆ ನೀಡುವುದರಿಂದ ಹೊಸದಾಗಿ ಹುಡುಕಾಟ ನಡೆಸುವವರು ಹಾದಿ ತಪ್ಪುವ ಸಾಧ್ಯತೆ ಇರುತ್ತದೆ. ಅಲ್ಲದೆ, ಅವರಿಗೆ ಬೇಕಾದ ಮಾಹಿತಿಯನ್ನು ಹುಡುಕುವುದು ಕಷ್ಟವಾಗುತ್ತ ಹೋಗಲಿದೆ. ಮುಂದೊಂದು ದಿನ, ಆಗಷ್ಟೇ ಗೂಗಲ್ ಪರಿಚಯವಾದ ವ್ಯಕ್ತಿಯೊಬ್ಬ ಒಂದು ಶಬ್ದ ಬರೆದು ತನಗೆ ಬೇಕಾದ ಅಥವಾ ಸರಿಯಾದ ಅರ್ಥವೋ ವೆಬ್ ಪುಟವೋ ಸಿಗದಿದ್ದಾಗ ಕಂಗಾಲಾಗುವ ಪರಿಸ್ಥಿತಿಯೂ ಬರಬಹುದು. ಏಕೆಂದರೆ ವಿವರಣೆ ಹೆಚ್ಚಿದಷ್ಟೂ ಗೊಂದಲಕ್ಕೊಳಗಾಗುವುದು ಮನುಷ್ಯ ಸ್ವಭಾವ.

ಸಾದಾ ಅಲ್ಲ, ಸ್ಮಾರ್ಟ್ ಮಾಸ್ಕ್‌ಗಳು

ಪೃಥ್ವಿರಾಜ್

ಇಂದು ವೈರಸ್‌ಗಳ ದಾಳಿಯಿಂದ ರಕ್ಷಿಸಿಕೊಳ್ಳಲು ಕಡ್ಡಾಯವಾಗಿ ಮಾಸ್ಕ್‌ಗಳನ್ನು ಧರಿಸುವುದು ಅನಿವಾರ್ಯವಾಗಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ನಿರ್ದಿಷ್ಟ ಉದ್ದೇಶಕ್ಕೆ ಸೀಮಿತವಾದ ಹಲವು ಬಗೆಯ ಮಾಸ್ಕ್‌ಗಳಿವೆ. ಇವುಗಳಿಗೆ ಭಿನ್ನವೆಂಬಂತೆ ತಂತ್ರಜ್ಞಾನ ಆಧಾರಿತ ಸ್ಮಾರ್ಟ್ ಮಾಸ್ಕ್‌ಗಳನ್ನು ತಯಾರಿಸುವಲ್ಲಿ ತಂತ್ರಜ್ಞರು ಮಗ್ನರಾಗಿದ್ದಾರೆ. ಇಂಥ ಕೆಲವು ಮಾಸ್ಕ್‌ಗಳು ಈಗಾಗಲೇ ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದರೆ, ಇನ್ನೂ ಕೆಲವು ಬಳಕೆಗೆ ಸಿಗುವ ಹಂತದಲ್ಲಿವೆ. ಅಂಥ ಕೆಲವು ಸ್ಮಾರ್ಟ್ ಮಾಸ್ಕ್‌ಗಳ ಮಾಹಿತಿ ಇಲ್ಲಿದೆ.

ವೂಬಿ ಪಾಪ್ ಮಾಸ್ಕ್

ಇದೊಂದು ಸಿಲಿಕಾನ್ ಮಾಸ್ಕ್. ಇದನ್ನು ಮಕ್ಕಳ ರಕ್ಷಣೆಗಾಗಿಯೇ ತಯಾರಿಸಲಾಗಿದೆ. ಇದರಲ್ಲಿ ಎಲೆಕ್ಟ್ರಾನಿಕ್ ತಂತ್ರಜ್ಞಾನವಿಲ್ಲದಿದ್ದರೂ ಗಾಳಿಯಲ್ಲಿನ ಶೇ. 95ರಷ್ಟು ಹಾನಿಕಾರಕಗಳು ನಮ್ಮ ದೇಹವನ್ನು ಪ್ರವೇಶಿಸದಂತೆ ತಡೆಯುವ ಸಾಮರ್ಥ್ಯ ಹೊಂದಿದೆ. ಇದನ್ನು ವಿವಿಧ ಉಪಕರಣಗಳನ್ನು ಜೋಡಿಸಿ ತಯಾರಿಸಲಾಗಿದ್ದು, ಬೇಕೆಂದಾಗ ಬಿಡಿಸಿ ಸ್ವಚ್ಛಗೊಳಿಸಿಕೊಳ್ಳಬಹುದು. ಎರಡು ಬಗೆಯ ಫಿಲ್ಟರ್‌ಗಳನ್ನು ಅಳವಡಿಸಲಾಗಿದ್ದು, ಅಗ್ನಿದುರಂತ, ವಿಪರೀತ ವಾಯುಮಾಲಿನ್ಯವಿರುವಂಥ ಸಂದರ್ಭಗಳಲ್ಲಿ ಬಳಸಿಕೊಳ್ಳಬಹುದು.

ಎಒ ಏರ್ ಫ್ಲೈಥ್ರೊ

ನೋಡಲು ಕನ್ನಡಕದಂತೆ ಕಾಣುವ ಈ ಮಾಸ್ಕ್ ವಿನ್ಯಾಸ ಆಕರ್ಷಕವಾಗಿದೆ. ಇದು ಪ್ರಸ್ತುತ ಬಳಕೆಗೆ ಲಭ್ಯವಿಲ್ಲದಿದ್ದರೂ ಭವಿಷ್ಯದಲ್ಲಿ ಪೂರ್ಣ ಪ್ರಮಾಣದಲ್ಲಿ ಮಾರುಕಟ್ಟೆಗೆ ಬರುವ ಸಾಧ್ಯತೆ ಇದೆ. ಸಾಮಾನ್ಯ ಮನುಷ್ಯರಷ್ಟೇ ಅಲ್ಲದೆ ಬೃಹತ್ ಕೈಗಾರಿಕಾ ಪ್ರದೇಶಗಳು ಹಾಗೂ ಹೆಚ್ಚು ವಾಯುಮಾಲಿನ್ಯವಿರುವಂಥ ಪ್ರದೇಶಗಳಲ್ಲಿ ಬಳಸುವುದಕ್ಕೆ ನೆರವಾಗಲೆಂದೇ ಇದನ್ನು ತಯಾರಿಸಲಾಗಿದೆ. ಇದರಲ್ಲಿ ಮೂರು ಎಲೆಕ್ಟ್ರಿಕ್ ಏರ್‌ಫಿಲ್ಟರ್ ಫ್ಯಾನ್‌ಗಳನ್ನು ಅಳವಡಿಸಲಾಗಿದ್ದು, ವಾತಾವರಣದಲ್ಲಿರುವ ಹಾನಿಕಾರಕಗಳು ದೇಹವನ್ನು ಪ್ರವೇಶಿಸದಂತೆ ತಡೆಯುತ್ತದೆ. ಮಕ್ಕಳಿಂದ ಹಿರಿಯರವರೆಗೆ ಗಾತ್ರಕ್ಕೆ ತಕ್ಕಂತೆ ಹೊಂದಿಸಿಕೊಂಡು ಮೂತಿಗೆ ಸಿಕ್ಕಿಸಿಕೊಳ್ಳಬಹುದು. 2020ರ ಜನವರಿಯಲ್ಲಿ ನಡೆದ ಸಿಇಎಸ್ ವಸ್ತು-ಉಪಕರಣಗಳ ಪ್ರದರ್ಶನದಲ್ಲಿ ಇದನ್ನು ಪ್ರದರ್ಶಿಸಲಾಗಿತ್ತು.



ಕ್ಲಿಯು ಮಾಸ್ಕ್

ಇದು ಪಾರದರ್ಶಕ ಸಿಲಿಕಾನ್ ಮಾಸ್ಕ್ ಆಗಿದ್ದು, ಮ್ಯಾಗ್ನೆಟಿಕ್ ತಂತ್ರಜ್ಞಾನವನ್ನು ಇದರಲ್ಲಿ ಅಳವಡಿಸಲಾಗಿದೆ. ಎಲೆಕ್ಟ್ರಿಕ್ ತಂತ್ರಜ್ಞಾನ ಆಧಾರಿತ ಮಾಸ್ಕ್‌ಗಳಿಗೆ ಹೋಲಿಸಿದರೆ ಇದರ ವಿನ್ಯಾಸ ಸರಳವಾಗಿಯೇ ಕಾಣುತ್ತದೆ. ಮೂತಿಯನ್ನು ತೋರಿಸುವ ಪಾರದರ್ಶಕ ಭಾಗವನ್ನು ಸರಿಸಿ ಆಹಾರ, ಪಾನೀಯಗಳನ್ನು ಸೇವಿಸಬಹುದು. ಇದರಲ್ಲಿ ಪುಟ್ಟ ಗಾತ್ರದ ಸ್ಮಾರ್ಟ್ ಸ್ಪೀಕರ್ ಫೋನ್ ಹಾಗೂ ಮೈಕ್ರೊ ಫೋನ್ ಅಳವಡಿಸಲಾಗಿದ್ದು, ನಮ್ಮ ಸ್ಮಾರ್ಟ್ ಫೋನ್‌ಗೆ ಜೋಡಿಸಿಕೊಂಡು ಕರೆ ಬಂದಾಗ ಇದರ ಮೂಲಕವೇ ಮಾತನಾಡಬಹುದು. ಇದರ ಜತೆಗೆ ಚಾರ್ಜ್ ಮಾಡಲು ಚಾರ್ಜಿಂಗ್ ಸ್ಟ್ಯಾಂಡ್ ಕೂಡ ಸಿಗುತ್ತದೆ. ಚಾರ್ಜ್‌ನ ಸಮಯದಲ್ಲಿ ನೇರಳಾತೀತ ಕಿರಣಗಳು ಮಾಸ್ಕ್‌ನೊಳಗೆ ಬಿಡುಗಡೆಯಾಗುತ್ತವೆ. ಇವು ಮಾಸ್ಕ್‌ನಲ್ಲಿ ವೈರಸ್, ಬ್ಯಾಕ್ಟೀರಿಯಾಗಳನ್ನು ಕೊಲ್ಲುತ್ತವೆ.

ಫಿಲಿಪ್ಸ್ ಏರ್ ಮಾಸ್ಕ್

ಹೆಸರೇ ಹೇಳುವಂತೆ ಇದು ಫಿಲಿಪ್ಸ್ ಕಂಪನಿ ತಯಾರಿಸಿದ ಸ್ಮಾರ್ಟ್ ಮಾಸ್ಕ್. ಇದು ಸಂಪೂರ್ಣ ಎಲೆಕ್ಟ್ರಾನಿಕ್ ತಂತ್ರಜ್ಞಾನ ಆಧಾರಿತ ಮಾಸ್ಕ್ ಆಗಿದ್ದು, ಆಟೊಮೆಟೆಡ್ ಏರ್ ಫಿಲ್ಟರ್‌ಗಳನ್ನು ಅಳವಡಿಸಲಾಗಿದೆ. ಇದು ನೋಡಲು ಸಾಮಾನ್ಯ ಬಟ್ಟೆಯ ಮಾಸ್ಕ್‌ನಂತೆ ಕಂಡರೂ ಎಡಭಾಗದಲ್ಲಿ ಗಾಳಿ ಶುದ್ಧೀಕರಿಸುವ ಫಿಲ್ಟರ್ ಅಳವಡಿಸಲಾಗಿದೆ. ಇದು ಪುಟ್ಟ ಮೋಟಾರ್ ಶಕ್ತಿಯಿಂದ ಕಾರ್ಯನಿರ್ವಹಿಸುತ್ತದೆ. ಮೈಕ್ರೊ ಯುಎಸ್‌ಬಿ ಚಾರ್ಜಿಂಗ್ ಪೋರ್ಟಲ್ ಇರುವುದರಿಂಧ ಚಾರ್ಜ್‌ಗೆ ಇಟ್ಟು ಅಗತ್ಯ ಸಂದರ್ಭಗಳಲ್ಲಿ ಬಳಸಬಹುದು. ಇದರ ಹೊರನೋಟ ಕ್ರೀಡಾಪಟುಗಳಿಗೆ ಹೆಚ್ಚು ಒಪ್ಪುತ್ತದೆ. ವಿವಿಧ ಬಣ್ಣಗಳಲ್ಲಿ ಲಭ್ಯವಿದೆ. ಇವಲ್ಲದೆ ನೇರಳಾತೀತ ಕಿರಣಗಳಿಂದ ರಕ್ಷಣೆ ಒದಗಿಸುವಂತೆ ಇದನ್ನು ತಯಾರಿಸಲಾಗಿದೆ. ಮೂರು ವಿಂಡ್ ಮೋಡ್‌ಗಳು, 3ಡಿ ಲೇಸರ್ ಕಟ್‌ನಂಥ ವೈಶಿಷ್ಟ್ಯಗಳೂ ಇದರಲ್ಲಿವೆ.

ಬ್ರೀಜ್ ಮಾಸ್ಕ್

ಇದು ಆಟೊಮೆಟೆಡ್ ಸ್ಮಾರ್ಟ್ ಎಲೆಕ್ಟ್ರಿಕ್ ಮಾಸ್ಕ್. ಇದನ್ನು ನಮ್ಮ ಮೊಬೈಲ್ ಫೋನ್, ಡಿವೈಸ್ ಯುಎಸ್‌ಬಿ ಕೇಬಲ್‌ಗಳು ಅಥವಾ ಗುಣಮಟ್ಟದ ಮೈಕ್ರೊ ಯುಎಸ್‌ಬಿ ಕೇಬಲ್ ಬಳಸಿ ಚಾರ್ಜ್ ಮಾಡಬಹುದು. 30 ನಿಮಿಷ ಚಾರ್ಜ್‌ಗಿಟ್ಟರೆ ಸಂಪೂರ್ಣ ಚಾರ್ಜ್ ಆಗುತ್ತದೆ. ನೋಡುವುದಕ್ಕೂ ಸುಂದರವಾಗಿರುವಂತೆ ಇದನ್ನು ತಯಾರಿಸಲಾಗಿದ್ದು, ಮೂತಿಯ ಭಾಗ ಕಾಣುವಂತೆ ಫೈಬರ್ ಗ್ಲಾಸನ್ನು ಅಳವಡಿಸಲಾಗಿದೆ; ಹೀಗಾಗಿ ಮಾಸ್ಕ್ ಧರಿಸಿದ್ದರೂ ನಮ್ಮನ್ನು ಇತರರು ಸುಲಭವಾಗಿ ಗುರುತಿಸಬಹುದು. ಈ ಮಾಸ್ಕ್‌ನ ಎಡಭಾಗದಲ್ಲಿ ಏರ್‌ಫಿಲ್ಟರ್ ಫ್ಯಾನ್ ಅಳವಡಿಸಲಾಗಿದ್ದು, ಇದು ವಾತಾವರಣದಲ್ಲಿರುವ ಕಲುಷಿತ ಗಾಳಿಯನ್ನು ಶುದ್ಧೀಕರಿಸಿ ನಮಗೆ ತಲುಪಿಸುತ್ತದೆ; ಬ್ಯಾಕ್ಟೀರೀಯಾ ಹಾಗೂ ವೈರಸ್‌ಗಳು ದೇಹ ಪ್ರವೇಶಿಸದಂತೆ ತಡೆಯುತ್ತದೆ. ಆದರೆ ಈ ಮಾಸ್ಕ್ ಇನ್ನೂ ಪೂರ್ಣ ಪ್ರಮಾಣದಲ್ಲಿ ಬಳಕೆಗೆ ಬಂದಿಲ್ಲ.

ಸಿಇಟಿ ದಿಕ್ಸೂಚಿ

Chemistry – Thermodynamics & Equilibrium-2

1. The correct statement regarding entropy is,

(1) At absolute zero temperature, the entropy of a perfectly crystalline solid is zero.

(2) At absolute zero temperature, the entropy of a perfectly crystalline substance is +Ve.

(3) At absolute zero temperature, the entropy of all crystalline substances is zero.

(4) At 0 °C, the entropy of a perfect crystalline solid is zero.

2. Equilibrium constants K_1 and K_2 for the following equilibrium

(a) $NO_{(g)} + \frac{1}{2}O_{2(g)} \rightleftarrows NO_{2(g)}$

(b) $2NO_{2(g)} \rightleftarrows 2NO_{(g)} + O_{2(g)}$

(1) $K_1 = \sqrt{K_2}$ (2) $K_2 = 1/K_1$

(3) $K_1 = 2K_2$ (4) $K_2 = \left[\frac{1}{K_1}\right]^2$

3. If the bond energies of H–H, Br–Br and H–Br are 433, 192 and 364 kJ mol^{-1} respectively, then $\Delta H°$ for the reaction: $H_2(g) + Br_2(g) \rightarrow 2HBr(g)$ is

(1) –261 kJ (2) + 103 kJ

(3) +261 kJ (4) –103 kJ



ಸಾಂದರ್ಭಿಕ ಚಿತ್ರ

4. The reaction in which is H > U is

(1) $CaCO_{3(s)} CaO_{(s)} + CO_{2(g)}$

(2) $N_{2(g)} + O_{2(g)} 2NO_{(g)}$

(3) $CH_{4(g)} + 2O_{2(g)} CO_{2(g)} + 2H_2O_{(l)}$

(4) $N_{2(g)} + 3H_{2(g)} 2NH_{3(g)}$

5. Which of the following is NOT true regarding the use of hydrogen as a fuel?

(1) The combustible energy of hydrogen can be directly converted to electrical energy in a fuel cell.

(2) High calorific value

(3) Hydrogen gas can be easily liquefied and stored.

(4) Combustion product is eco friendly.

6. A reaction has both ΔH and ΔS as -ve. The rate of reaction

(1) increases with increase in temperature

(2) increases with decrease in temperature

(3) remains unaffected by change in temperature

(4) cannot be predicted for change in temperature

7 In the reaction $S + \frac{3}{2}O^2 \rightarrow SO_3 + 2x\,kJ$ and $SO_2 + \frac{1}{2}O_2 \rightarrow SO_3 + y\,kJ$ heat of formation of SO_2 is

(1) x + y (2) x – y

(3) 2x – y (4) 2x + y

8. Which of the following compound possesses the "C – H" bond with the lowest bond dissociation energy?

(1) Toluene

(2) Benzene

(3) n-pentane

(4) 2,2-dimethyl propane

Answers

1. Answer (1)

Solution: The third law of thermodynamics tells us that all molecular movement stops at a temperature we call absolute zero or zero (0) Kelvin (-273°C)Since temperature is a measure of molecule movement, there can be no temperature lower than absolute zero. At this temp., a perfect crystal has no disorder.

The entropy (s) of a pure perfectly crystalline compound at T = 0K is zero (no disorder).

$S_{T=0} = 0$

2. Answer (4)

Solution : $K_1 = \frac{[NO_2]}{[NO][O_2]^{\frac{1}{2}}}$ $K_2 = \frac{1}{\frac{[NO]^2[O_2]}{[NO_2]^2}}$

$K_2 = \left[\frac{1}{K_1}\right]^2$

3. Answer (4)

Solution : Given that:

Bond energies of H–H = 433 KJ mol^{-1}

Bond energies of Br–Br = 192 KJ mol^{-1}

Bond energies of H–Br = 364 KJ mol^{-1}

H – H + Br – Br → 2H – Br

$\Delta H° = \sum$ bond energy (reactant) – $\sum$ bond energy (products)

= 433 + 192 – 2 × 364

= +625 – 728

= – 103 KJ

4 Answer (1)

Solution :In the reaction

$CaCO_{3(s)} \rightarrow CaO(S) + CO_{2(g)}$

Here n = +1

$H = U + n_gRT$

So, H > U.

5 Answer (3)

Solution :The critical temperature of hydrogen is low hence it cannot be easily liquefied. Its combustion is eco-friendly, it does not liberate harmful gases on combustion. It has a high calorific value.

6 Answer (2)

Solution : We know, $\Delta G = \Delta H - T\Delta S$

Given ΔH and ΔS are negative.

Therefore the expression will be

$\Delta G = -\Delta H + T\Delta S$

$-\Delta G = \Delta H - T\Delta S$

By seeing the above equation for negative ΔG the value of ΔS must be less than ΔH.

$\Delta H > T\Delta S$

So, the reaction will be exothermic. If the reaction is exothermic then, it's rate will increase with a decrease in temperature

7 Answer ()

Solution :Data insufficient Grace

8 Answer (1)



Toluene possesses lowest bond dissociation enthalpy because of hyper conjugation

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 35

466) ಕರ್ಕಾಟಕ ಸಂಕ್ರಾಂತಿ ವೃತ್ತವು ಈ ರಾಜ್ಯದ ಮೂಲಕ ಹಾದು ಹೋಗುತ್ತದೆ
ಎ) ಬಿಹಾರ್ ಬಿ) ಮಹಾರಾಷ್ಟ್ರ
ಸಿ) ಅಸ್ಸಾಂ ಡಿ) ಮಿಜೋರಾಂ

467) ಕಂಪ್ಯೂಟರ್‌ನ ಮುಖ್ಯ ಸಂಸ್ಕಾರಕ
ಎ) ಮೌಸ್ ಬಿ) ಮದರ್ ಬೋರ್ಡ್
ಸಿ) ಮಾನಿಟರ್ ಡಿ) ಸಿ.ಪಿ.ಯು

468) ಈ ಕೆಳಗಿನವುಗಳಲ್ಲಿ ಯಾವುದು ಇನ್‌ಪುಟ್ ಸಾಧನವಾಗಿದೆ?
ಎ) ಸ್ಪೀಕರ್ ಬಿ) ಮೌಸ್
ಸಿ) ಮಾನಿಟರ್ ಡಿ) ಪ್ರಿಂಟರ್

469) ‘ದಂಗಲ್’ ಹಿಂದಿ ಚಿತ್ರವನ್ನು ಯಾವ ಕ್ರೀಡಾಪಟುವಿನ ಜೀವನದ ಮೇಲೆ ನಿರ್ಮಿಸಲಾಗಿದೆ?
ಎ) ಸಾಕ್ಷಿ ಮಲಿಕ್
ಬಿ) ಕೃಷ್ಣಾ ಪೂನಿಯಾ
ಸಿ) ಜೆ.ಸಿ.ಮೇರಿಕೋಮ್
ಡಿ) ಗೀತಾ ಪೋಗಟ್

470) ಅಮಾನವೀಯ ‘ನಿರ್ಭಯಾ ಪ್ರಕರಣ’ ಎಲ್ಲಿ ನಡೆಯಿತು?
ಎ) ಬೆಂಗಳೂರು ಬಿ) ದೆಹಲಿ
ಸಿ) ಮುಂಬೈ ಡಿ) ಕೋಲ್ಕತ್ತ

471) ಕೋಲ್ಕತ್ತ ನಗರ ಯಾವ ನದಿಯ ದಂಡೆ ಮೇಲಿದೆ?
ಎ) ಹೂಗ್ಲಿ ಬಿ) ಬ್ರಹ್ಮಪುತ್ರ
ಸಿ) ನರ್ಮದಾ ಡಿ) ಸಟ್ಲೆಜ್

472) ಶಾತವಾಹನರ ರಾಜಧಾನಿ
ಎ) ಪ್ರತಿಷ್ಠಾನ ಬಿ) ಪಾಟಲೀಪುತ್ರ
ಸಿ) ಬನವಾಸಿ ಡಿ) ಬಾದಾಮಿ

473) ಭಾರತದಲ್ಲಿ ಅತೀ ಹೆಚ್ಚು ಕಾಫಿ ಉತ್ಪಾದಿಸುವ ರಾಜ್ಯ
ಎ) ಕರ್ನಾಟಕ ಬಿ) ಕೇರಳ
ಸಿ) ಒಡಿಶಾ ಡಿ) ಅಸ್ಸಾಂ

474) ವಿಶ್ವದಲ್ಲೇ ಅತೀ ಹೆಚ್ಚು ಹತ್ತಿ ಬೆಳೆಯುವ ದೇಶ
ಎ) ಚೀನಾ ಬಿ) ಅಮೆರಿಕ
ಸಿ) ಬ್ರೆಜಿಲ್ ಡಿ) ಭಾರತ

475) ಭಾರತದಲ್ಲಿ ರಾಷ್ಟ್ರೀಯ ವಿಜ್ಞಾನ ದಿನವನ್ನು ಯಾವ ದಿನಾಂಕದಂದು ಆಚರಿಸಲಾಗುತ್ತಿದೆ?
ಎ) ಏಪ್ರಿಲ್ 22 ಬಿ) ಫೆಬ್ರುವರಿ 28
ಸಿ) ಜೂನ್ 5 ಡಿ) ಸೆಪ್ಟೆಂಬರ್ 12

476) ಭಾರತದ ಯಾವ ಮಹಿಳಾ ಕ್ರೀಡಾಪಟು ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಪಡೆದ ಖ್ಯಾತಿ ಹೊಂದಿದ್ದಾರೆ?
ಎ) ಸಾನಿಯಾ ಮಿರ್ಜಾ
ಬಿ) ಪಿ.ಟಿ.ಉಷಾ ಸಿ) ಸೈನಾ ನೆಹ್ವಾಲ್
ಡಿ) ಪಿ.ವಿ.ಸಿಂಧು

477) ‘ಮಾವಿನ ಹಣ್ಣು’ ಹಾಗೂ ‘ಕ್ಯಾರೆಟ್’ ಈ ಕೆಳಗಿನ ಯಾವ ಅಂಶಗಳನ್ನು ಹೆಚ್ಚಾಗಿ ಹೊಂದಿವೆ?
ಎ) ವಿಟಮಿನ್ ಸಿ ಬಿ) ವಿಟಮಿನ್ ಎ
ಸಿ) ಕ್ಯಾಲ್ಸಿಯಂ ಡಿ) ಕಬ್ಬಿಣದ ಅಂಶ

478) ವಾತಾವರಣದ ಮೇಲ್ಭಾಗದಲ್ಲಿರುವ ಓಜೋನ್ ಪದರವು ನಮ್ಮನ್ನು ರಕ್ಷಿಸುವುದು ಯಾವ ಕಿರಣಗಳಿಂದ?
ಎ) ಇನ್ಫ್ರಾರೆಡ್ ಕಿರಣ
ಬಿ) ಅಲ್ಟ್ರಾವೈಲೆಟ್ ಕಿರಣ
ಸಿ) ಕಾಸ್ಮಿಕ್ ಕಿರಣ
ಡಿ) ಅಲ್ಟ್ರಾಸೋನಿಕ್ ಕಿರಣ

479) ಈ ಕೆಳಗಿನವುಗಳಲ್ಲಿ ಯಾವುದರ ಹೊರಸೂಸುವಿಕೆಯು ಜಾಗತಿಕ ತಾಪಮಾನ ಹೆಚ್ಚಲು ಮುಖ್ಯ ಕಾರಣವೆಂದು ಹೇಳಲಾಗುತ್ತದೆ?
ಎ) ಸಿ.ಎಫ್.ಸಿ.ಗಳು ಬಿ) ಜಲಜನಕ
ಸಿ) ಸಾರಜನಕ ಡಿ) ಅಮೋನಿಯಂ

480) ಮಾನವ ಶರೀರದ ಪ್ರತಿ ಜೀವಕೋಶಕ್ಕೂ ಆಮ್ಲಜನಕವನ್ನು ಸಾಗಿಸಿ, ತಲುಪಿಸುವುದು
ಎ) ಕೆಂಪು ರಕ್ತಕಣಗಳು
ಬಿ) ಬಿಳಿ ರಕ್ತಕಣಗಳು
ಸಿ) ಹಾರ್ಮೋನುಗಳು
ಡಿ) ಕಿಣ್ವಗಳು

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 34ರ ಉತ್ತರ: 451. ಡಿ, 452. ಬಿ, 453. ಡಿ, 454. ಸಿ, 455. ಎ,456. ಎ, 457. ಬಿ, 458. ಬಿ, 459. ಎ, 460. ಬಿ, 461. ಬಿ, 462. ಬಿ, 463. ಸಿ, 464. ಬಿ, 465. ಸಿ

ಶಾಲೆಗಳ ಆರಂಭಕ್ಕೆ ರಾಜ್ಯ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ವರದಿ ಕೊಟ್ಟಿಲ್ಲ • ಗಡಿ ಜಿಲ್ಲೆಗಳಲ್ಲಿ ಕಟ್ಟೆಚ್ಚರ

ಕೋವಿಡ್ ಹೆಚ್ಚಳ: ಬಿಗಿ ನಿರ್ಬಂಧ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ತುಸು ಏರಿಕೆ ಕಂಡು-ಬಂದಿರುವುದರಿಂದ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಕಟ್ಟುನಿಟ್ಟಿನ ರಾತ್ರಿ ಕರ್ಫ್ಯೂ ಸೇರಿದಂತೆ ಕೆಲವು ಬಿಗಿ ನಿರ್ಬಂಧಗ-ಳನ್ನು ಜಾರಿಗೊಳಿಸಲಾಗಿದೆ. ಕೆಲವೆಡೆ ದೇವಸ್ಥಾನ, ಪ್ರವಾಸಿ ತಾಣಗಳಿಗೆ ಸಾರ್ವಜನಿಕರ ಪ್ರವೇಶ ನಿಷೇಧಿಸಿದ ಆದೇಶ ಹೊರಡಿಸಲಾಗಿದೆ.

ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಎರಡೂ ರಾಜ್ಯಗಳಿಗೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಲ್ಲಿ ಕಟ್ಟೆಚ್ಚರಕ್ಕೆ ಆದೇಶಿಸಲಾಗಿ-ತ್ತು. ಆದರೆ, ಕೆಲವು ದಿನಗಳಿಂದ ರಾಜ್ಯದ ಒಳ ನಾಡಿನಲ್ಲೂ ಕೋವಿಡ್ ಪ್ರಕರಣಗ-ಳಲ್ಲಿ ಕೊಂಚ ಏರಿಕೆಯಾಗುತ್ತಿದೆ. ಮತ್ತೆ ಸೋಂಕು ಹರಡದಂತೆ ನಿಯಂತ್ರಿಸುವ ಉದ್ದೇಶದಿಂದ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಕೊಡಗು, ಬೀದರ್, ಒಳನಾಡಿನ ದಾವಣಗೆರೆ, ಉಡುಪಿ, ಧಾರವಾಡ, ಕೊಪ್ಪಳ ಸೇರಿದಂತೆ ಹಲವು ಕಡೆಗಳಲ್ಲಿ ನಿರ್ಬಂಧಗಳನ್ನು ಹೇರಲಾಗಿದೆ.

ರಾತ್ರಿ ಕರ್ಫ್ಯೂ ಮರು ಜಾರಿ: ಲಾಕ್‌ಡೌನ್ ಸಡಿಲಿಕೆ ಆದ ಬಳಿಕವೂ ರಾತ್ರಿ 10ರಿಂದ ಬೆಳಿಗ್ಗೆ 5ರವರೆಗೆ ರಾತ್ರಿ ಕರ್ಫ್ಯೂ ಜಾರಿಯಲ್ಲಿಡಲಾಗಿತ್ತು. ಆದರೆ, ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ರಾತ್ರಿ ಕರ್ಫ್ಯೂ ಅನುಷ್ಠಾನ ಸ್ಥಗಿತಗೊಂಡಿತ್ತು. ಜನರ ಮುಕ್ತ ಸಂಚಾರಕ್ಕೆ ಅವಕಾಶ ನೀಡಲಾಗಿತ್ತು. ಮಂಗಳವಾರದಿಂದ ಕೆಲವು ಜಿಲ್ಲೆಗಳಲ್ಲಿ ಪುನಃ ಕಟ್ಟುನಿಟ್ಟಾಗಿ ರಾತ್ರಿ ಕರ್ಫ್ಯೂ ಜಾರಿಗೆ ಆದೇಶ ಹೊರಡಿಸಲಾಗಿದೆ.

ದಾವಣಗೆರೆ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಮಂಗಳವಾರದಿಂದ ಆ.16ರವ-ರೆಗೂ ರಾತ್ರಿ ಕರ್ಫ್ಯೂ ಕಟ್ಟುನಿಟ್ಟಿನ ಜಾರಿಗೆ ಅಲ್ಲಿನ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ. ಹಾವೇರಿ ಜಿಲ್ಲೆಯಲ್ಲಿ ಮಾಸ್ಕ್ ಧರಿಸದೇ ಓಡಾಡುವವರಿಗೆ ದಂಡ ವಿಧಿಸುವುದಕ್ಕೂ ಆದೇಶ ಹೊರಡಿಸಲಾಗಿದೆ.

ಪದವಿ ಪರೀಕ್ಷೆಗಳು ರದ್ದು: ಕೇರಳಕ್ಕೆ ಹೊಂದಿಕೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾನುವಾರದಿಂದಲೇ ಹಲವು ನಿರ್ಬಂಧಗಳು ಜಾರಿಯಲ್ಲಿವೆ. ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರ ಆದೇಶದಂತೆ, ಮಂಗಳೂರು ವಿಶ್ವವಿದ್ಯಾಲಯದ ಎಲ್ಲ ಪದವಿ ತರಗತಿಗಳ ಪರೀಕ್ಷೆಗಳನ್ನು ರದ್ದುಗೊಳಿಸಿ, ತರಗತಿಗಳನ್ನು ಮುಂದೂಡಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಮಂಗಳವಾರ ಆದೇಶ ಹೊರಡಿಸಿದ್ದಾರೆ.

ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಸಭೆ ಹಾಗೂ ಸಮಾರಂಭಗಳನ್ನು ನಿರ್ಬಂಧಿಸಲಾ-ಗಿದೆ. ಮದುವೆಗಳಿಗೆ 50 ಜನರ ಮಿತಿ ವಿಧಿಸಲಾಗಿದೆ. ಕೇರಳ ಗಡಿಯಿಂದ 5 ಕಿ.ಮೀ. ದೂರದವರೆಗೂ ಇರುವ ಮದ್ಯ-ದಂಗಡಿಗಳನ್ನು ಮಂಗಳವಾರದಿಂದ ಆಗಸ್ಟ್ 15ರವರೆಗೂ ಮುಚ್ಚಲಾಗಿದೆ.

ಉಡುಪಿ ಜಿಲ್ಲೆಯ 10 ಸ್ಥಳಗಳಲ್ಲಿ ತನಿಖಾ ಠಾಣೆಗಳನ್ನು ತೆರೆದಿದ್ದು, ಪ್ರಯಾಣಿಕರ ದೇಹದ ಉಷ್ಣಾಂಶ ತಪಾಸಣೆ ಮಾಡಲಾಗುತ್ತಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸಿಗರಿಗೆ ಆರ್‌ಟಿ–ಪಿಸಿಆರ್ ವಿಧಾನದಲ್ಲಿ ಪಡೆದಿರುವ ಕೋವಿಡ್ ವರದಿ ಕಡ್ಡಾಯಗೊಳಿಸಲಾಗಿ-ದೆ. ಹೋಟೆಲ್, ಲಾಡ್ಜ್‌ಗಳಲ್ಲಿ ಕೊಠಡಿ ಕಾಯ್ದಿರಿಸುವುದಕ್ಕೂ ವರದಿ ಕಡ್ಡಾಯಗೊಳಿಸಿ ಚಿಕ್ಕಮಗಳೂರು ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ದೇವಸ್ಥಾನ ಪ್ರವೇಶಕ್ಕೆ ನಿಷೇಧ: ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟ, ಹುಲಿಗಿಯ ಹುಲಿಗೆಮ್ಮ ದೇವಸ್ಥಾನ, ತುಂಗಭದ್ರಾ ಜಲಾಶಯ ಮತ್ತು ಪಂಪಾವನಕ್ಕೆ ಆ.17ರರೆಗೂ ಸಾರ್ವಜನಿಕರ ಪ್ರವೇಶ ನಿಷೇಧಿಸಲಾಗಿದೆ.

ಬೀದರ್ ಜಿಲ್ಲೆಯಲ್ಲಿ ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವ ಗಡಿ ಪ್ರದೇಶಗಳ-ಲ್ಲಿ ಆರು ತನಿಖಾ ಠಾಣೆಗಳನ್ನು ತೆರೆದಿದ್ದು, ಆರ್‌ಟಿ–ಪಿಸಿಆರ್ ವಿಧಾನದಲ್ಲಿ ಪಡೆದಿರುವ ನೆಗೆಟಿವ್ ವರದಿ ಇಲ್ಲ-ದವರನ್ನು ವಾಪಸ್ ಕಳುಹಿಸಲಾಗು-ತ್ತಿದೆ. ಕೇರಳ ಮತ್ತು ಮಹಾರಾಷ್ಟ್ರ-ದಿಂದ ಬರುವವರಿಗೆ ಧಾರವಾಡ ಜಿಲ್ಲೆ ಪ್ರವೇಶಕ್ಕೂ ಕೋವಿಡ್ ನೆಗಟಿವ್ ವರದಿ ಕಡ್ಡಾಯಗೊಳಿಸಲಾಗಿದೆ.

ಗಡಿಯಲ್ಲಿ ತಪಾಸಣೆಯೇ ಇಲ್ಲ: ಕಲಬುರ್ಗಿ ಜಿಲ್ಲೆಯ ಗಡಿಗಳಲ್ಲಿ ತನಿಖಾ ಠಾಣೆಗಳನ್ನು ತೆರೆದಿದ್ದರೂ, ಬಿಗಿ ಕ್ರಮಗಳು ಜಾರಿಯಾಗಿಲ್ಲ. ಗಾಣಗಾಪುರ ದತ್ತ ಕ್ಷೇತ್ರಕ್ಕೆ ಮಹಾರಾಷ್ಟ್ರದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದಾರೆ. ರಾಯಚೂರು ಜಿಲ್ಲೆಗೆ ಹೊಂದಿಕೊಂಡಿರುವ ಆಂಧ್ರಪ್ರದೇಶ ಮತ್ತು ತೆಲಂಗಾಣ ಗಡಿಗಳಲ್ಲೂ ವಾಹನ ತಪಾಸಣೆ ನಡೆಸುತ್ತಿಲ್ಲ.

ಬೆಂಗಳೂರಿನಲ್ಲಿ ರಾತ್ರಿ ಕರ್ಫ್ಯೂ ಜಾರಿಗೆ ಸಿದ್ಧತೆ

ರಾಜಧಾನಿಯಲ್ಲಿ ರಾತ್ರಿ ವೇಳೆ ಕರ್ಫ್ಯೂವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಬಿಬಿಎಂಪಿ ಹಾಗೂ ಪೊಲೀಸ್ ಇಲಾಖೆ ಸಿದ್ಧತೆ ನಡೆಸಿವೆ.

ನಗರದಲ್ಲಿ ರಾತ್ರಿ 10 ಗಂಟೆಯಿಂದ ಮುಂಜಾನೆ 5 ಗಂಟೆಯವರೆಗೆ ಕರ್ಫ್ಯೂ ಈಗಲೂ ಜಾರಿಯಲ್ಲಿದೆ. ಆದರೆ, ಕಟ್ಟುನಿಟ್ಟಾಗಿ ಅನುಷ್ಠಾನ ಆಗುತ್ತಿ-ರಲಿಲ್ಲ.

ರಾತ್ರಿ ಕರ್ಫ್ಯೂ ಅನುಷ್ಠಾನದ ಬಗ್ಗೆ ಪ್ರತಿಕ್ರಿಯಿಸಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ‘ಕೋವಿಡ್ ನಿಯಂತ್ರಣಕ್ಕಾಗಿ ಸರ್ಕಾರ ಜಾರಿಗೊಳಿಸಿರುವ ನಿಬಂಧನೆಗಳನ್ನು ಯಾವ ರೀತಿ ಜಾರಿಗೊಳಿಸಬೇಕು ಎಂದು ಚರ್ಚಿಸಿದ್ದೇವೆ. ಎರಡನೇ ಅಲೆಯ ಉತ್ತುಂಗದಲ್ಲಿದ್ದಾಗ ನಿಬಂಧನೆಗಳನ್ನು ಯಾವ ರೀತಿ ಜಾರಿಗೊಳಿಸಲಾಗಿತ್ತೋ ಅದೇ ಮಾದರಿಯನ್ನು ಈಗಲೂ ಅನು-ಸರಿಸಲಿದ್ದೇವೆ. ಬಸ್, ಟ್ಯಾಕ್ಸಿ, ಆಟೊಗಳಿಗೆ ಸಂಬಂಧಿಸಿದ ನಿಬಂಧನೆಗಳೂ ಮುಂದುವರಿಯಲಿವೆ’ ಎಂದರು.

‘ಶಾಲೆ ಆರಂಭ: ಸರ್ಕಾರದ ಮಟ್ಟದಲ್ಲಿ ತೀರ್ಮಾನ ಆಗಿಲ್ಲ’

‘ರಾಜ್ಯದಲ್ಲಿ ಶಾಲೆಗಳನ್ನು ಆರಂಭಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ತೀರ್ಮಾನ ಆಗಬೇಕಿದೆ’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ತಿಳಿಸಿದರು.

ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು, ಮೂರನೇ ಅಲೆಯ ಆತಂಕದ ಮಧ್ಯೆ, ಆಗಸ್ಟ್ 16ರಿಂದ ಶಾಲೆಗಳನ್ನು ತೆರೆಯಲು ರಾಜ್ಯ ಸರ್ಕಾರ ಸಿದ್ಧತೆ ನಡೆಸುತ್ತಿದೆ ಎಂಬ ವದಂತಿಗಳಿಗೆ ಪ್ರತಿಕ್ರಿಯಿಸಿದ ಅವರು, ‘ಸರ್ಕಾರದ ಮಟ್ಟದಲ್ಲಿ ಈ ಬಗ್ಗೆ ಯಾವುದೇ ತೀರ್ಮಾನ ಆಗಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಶಾಲೆಗಳನ್ನು ಆರಂಭಿಸುವಂತೆ ರಾಜ್ಯ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಯಾವುದೇ ವರದಿ ಕೊಟ್ಟಿಲ್ಲ. ಆದರೆ, ಇಲಾಖೆಯ ಆಯುಕ್ತ ವಿ. ಅನ್ಬುಕುಮಾರ್ ನೇತೃತ್ವದಲ್ಲಿ ರಚಿಸಿದ್ದ ಶಿಕ್ಷಣ ತಜ್ಞರ ಸಮಿತಿ ವರದಿ ಕೊಟ್ಟಿದೆ. ಆ ವರದಿಯನ್ನು ಪರಿಶೀಲಿಸುತ್ತಿದ್ದೇವೆ’ ಎಂದರು.

‘ಚಿಕ್ಕ ಮಕ್ಕಳಿಗೆ ಆರಂಭಿಕ ಹಂತದಿಂದಲೇ ಶಾಲೆಗಳನ್ನು ಶುರುಮಾಡುವಂತೆ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಹೇಳಿದೆ. ಡಾ. ದೇವಿಶೆಟ್ಟಿ ನೇತೃತ್ವದ ತಜ್ಞರ ಸಮಿತಿ ಕೂಡಾ ಪ್ರಾಥಮಿಕ ಹಂತದಿಂದಲೇ ಶಾಲೆಗಳನ್ನು ಆರಂಭಿಸಲು ಸಲಹೆ ನೀಡಿದೆ. ಇದೇ ರೀತಿ ಬೇರೆ ಬೇರೆ ಸಮಿತಿಗಳು ನೀಡಿದ ವರದಿಗ-ಳನ್ನೆಲ್ಲ ಕ್ರೋಡೀಕರಿಸಿ ಆಯುಕ್ತರು ವರದಿ ಸಲ್ಲಿಸಿದ್ದಾರೆ. ಮುಖ್ಯಮಂತ್ರಿ ಬದಲಾಗಿರುವುದರಿಂದ ಈ ಬಗ್ಗೆ ತೀರ್ಮಾನಿಸಲು ಇನ್ನೂ ಸ್ವಲ್ಪ ದಿನ ಬೇಕು’ ಎಂದರು.

‘ಶಾಲೆಗಳನ್ನು ಆರಂಭಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ತೀರ್ಮಾನ ತೆಗೆದುಕೊಳ್ಳಲು ಸದ್ಯ ಸಚಿವರು ಇಲ್ಲ. ಈ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿ ಕೂಡಾ ಸಿಗುತ್ತಿಲ್ಲ. ಮುಖ್ಯ-ಮಂತ್ರಿಯವರು ಬಿಡುವು ಆದ ತಕ್ಷಣ ಅವರ ಜೊತೆ ಚರ್ಚೆ ನಡೆಸಲಾಗುವುದು ಅಥವಾ ಹೊಸ ಸಚಿವರು ಬಂದು ಇಲಾಖೆಯ ಹೊಣೆ ವಹಿಸಿಕೊಂಡು ತೀರ್ಮಾನ ತೆಗೆದುಕೊಳ್ಳುವರೆಗೆ ಕಾಯಬೇಕು’ ಎಂದೂ ಅವರು ವಿವರಿಸಿದರು.

‘ಕೋವಿಡ್ ಮುನ್ನೆಚ್ಚರಿಕೆ ಕ್ರಮಗಳು ಮತ್ತು ಎಸ್‌ಒಪಿ (ಪ್ರಮಾಣಿತ ಕಾರ್ಯಾಚರಣಾ ವಿಧಾನ) ಕಟ್ಟುನಿಟ್ಟಾಗಿ ಪಾಲಿಸಿ, ಯಾವುದೇ ವಿಳಂಬ ಮಾಡದೆ ಪಾಳಿ ವ್ಯವಸ್ಥೆಯಲ್ಲಿ ಶಾಲೆಗಳನ್ನು ಆರಂಭಿಸಬಹುದು. ಸಾಧ್ಯವಾಗದೇ ಇದ್ದರೆ ವಿದ್ಯಾಗಮ ಯೋಜನೆಯನ್ನು ಆರಂಭಿಸಬೇಕು’ ಎಂದು ಅನ್ಬುಕುಮಾರ್ ನೇತೃತ್ವದ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ ಎಂದು ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

ಕೋವಿಡ್: ಗಡಿ ಜಿಲ್ಲೆಗಳಲ್ಲಿ ಏರಿಳಿತ

ಬೆಂಗಳೂರು: ರಾಜ್ಯದಲ್ಲಿ 1,674 ಮಂದಿ ಕೋವಿಡ್ ಪೀಡಿತರಾಗಿರುವು-ದು ಮಂಗಳವಾರ ದೃಢಪಟ್ಟಿದೆ. ನೆರೆಯ ಕೇರಳ ರಾಜ್ಯಕ್ಕೆ ಹೊಂದಿಕೊಂಡಿರುವ ಜಿಲ್ಲೆಗಳಲ್ಲಿ ವಾರದಿಂದ ಪ್ರಕರಣಗಳ ಸಂಖ್ಯೆ ಏರಿಳಿತ ಕಾಣುತ್ತಿದೆ.

ಒಂದು ದಿನದ ಅವಧಿಯಲ್ಲಿ 1.21 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 1.38ರಷ್ಟು ವರದಿಯಾಗಿದೆ. ರಾಜ್ಯದ 13 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 9 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಯಾದಗಿರಿ, ರಾಯಚೂರು ಹಾಗೂ ಬೀದರ್‌ನಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಬೆಂಗಳೂರಿನಲ್ಲಿ 477 ಮಂದಿ ಕೋವಿಡ್ ಪೀಡಿತರಾಗಿ-ರುವದು ದೃಢಪಟ್ಟಿದೆ. ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 307, ಮೈಸೂರಿನಲ್ಲಿ 147 ಹಾಗೂ ಕೊಡಗಿನಲ್ಲಿ 94 ಪ್ರಕರಣಗಳು ಪತ್ತೆಯಾಗಿವೆ. ಉಡುಪಿ ಹಾಗೂ ಹಾಸನದಲ್ಲಿ ತಲಾ 104 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 29.09 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ 38 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 17 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡದಲ್ಲಿ 8, ಬೆಂಗಳೂರಿನಲ್ಲಿ 7, ಮೈಸೂರಿನಲ್ಲಿ 4, ತುಮಕೂರು, ಕೋಲಾರ, ಧಾರವಾಡ ಹಾಗೂ ಚಿಕ್ಕ-ಬಳ್ಳಾಪುರದಲ್ಲಿ ತಲಾ ಇಬ್ಬರು ಸಾವಿ-ಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾ-ರೆ. ಮರಣ ಪ್ರಮಾಣ ದರವು ಶೇ 2.27ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ನಿಂದ ಸಾವಿಗೀಡಾದವರ ಒಟ್ಟು ಸಂಖ್ಯೆ 36,650ಕ್ಕೆ ಏರಿಕೆಯಾಗಿದೆ.

ಕೊರೊನಾ ಸೋಂಕಿತರಲ್ಲಿ 1,376 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 28.49 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಏರಿಕೆಕಂಡಿದ್ದು, ಸದ್ಯ 24,280 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಮಂಗಳೂರು: ಗಡಿಭಾಗಕ್ಕೆ ಎಡಿಜಿಪಿ ಪ್ರತಾಪ್ ರೆಡ್ಡಿ ಭೇಟಿ

‘ಜಿಲ್ಲೆಗೆ ಬರಲು ನೆಗೆಟಿವ್ ವರದಿ ಕಡ್ಡಾಯ’

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು-ಕಾಸರಗೋಡು ಗಡಿಭಾಗದ ತಲಪಾಡಿಗೆ ಕಾನೂನು–ಸುವ್ಯವಸ್ಥೆ ಎಡಿಜಿಪಿ ಪ್ರತಾಪ್ ರೆಡ್ಡಿ ಮಂಗಳವಾರ ಭೇಟಿ ನೀಡಿದರು. ಕೋವಿಡ್ ನೆಗೆಟಿವ್ ವರದಿ ಇಲ್ಲದೆ ರಾಜ್ಯದೊಳಗೆ ಪ್ರವೇಶ ನೀಡಬಾರದೆಂದು ಸರ್ಕಾರದ ಸೂಚಿಸಿದೆ. ಅದನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಕೇರಳ ಭಾಗದ ವಿದ್ಯಾರ್ಥಿಗಳು ಪರೀಕ್ಷಾ ಹಾಲ್ ಟಿಕೆಟ್ ತೋರಿಸಿದರೆ ಮಾತ್ರ ಅವಕಾಶ ನೀಡಲಾಗುತ್ತದೆ. ತುರ್ತು ಭೇಟಿಗೆ ಮಾತ್ರ ಅವಕಾಶವಿದೆ. ಕೇರಳದಿಂದ ರೈಲು ಮಾರ್ಗವಾಗಿ ಬರುವರಿಗೆ ಪರೀಕ್ಷೆ ನಡೆಸಲಾಗುತ್ತಿ-ದ್ದು, ಮಂಗಳೂರಿನ ಪುರಭವನದ-ಲ್ಲಿ ಪರೀಕ್ಷಾ ಕೇಂದ್ರ ತೆರೆಯಲಾಗಿದೆ ಎಂದು ತಿಳಿಸಿದರು.

ನೆಗೆಟಿವ್ ವರದಿ ಕಡ್ಡಾಯ ಮಾಡಿರುವುದನ್ನು ವಿರೋಧಿಸಿದ ಕೇರಳದ ಜನರು ತಲಪಾಡಿ ಚೆಕ್‌ಪೋಸ್ಟ್ ಬಳಿ ಮಂಗಳವಾರ ಪ್ರತಿಭಟನೆ ನಡೆಸಿದರು

ಕಾಸರಗೋಡು ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ ಜೊತೆ ದಕ್ಷಿಣ ಕನ್ನಡ ಜಿಲ್ಲೆಯ ಅಧಿಕಾರಿಗಳು ಸಂಪರ್ಕದಲ್ಲಿದ್ದಾರೆ. ಉಭಯ ಜಿಲ್ಲೆಗಳ ನಡುವೆ ಯಾವುದೇ ಗೊಂದಲವಿಲ್ಲ ಎಂದು ಸ್ಪಷ್ಟಪಡಿಸಿದರು.

ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ನಗರ ಪೊಲೀಸ್ ಕಮಿಷನರ್ ಶಶಿಕುಮಾರ್, ಎಸ್ಪಿ ಋಷಿಕೇಶ್ ಸೊನಾವಣೆ, ಗಡಿ ಭಾಗದ ತಪಾಸಣೆ ಕುರಿತು ಮಾಹಿತಿ ನೀಡಿದರು. ನಂತರ ಗಡಿ ಭಾಗದ ವಿವಿಧ ಪ್ರದೇಶಗಳಿಗೆ ತೆರಳಿದ ಎಡಿಜಿಪಿ, ತಪಾಸಣೆಯ ಬಗ್ಗೆ ಖುದ್ದು ಪರಿಶೀಲನೆ ನಡೆಸಿದರು.

ರೈಲು ನಿಲ್ದಾಣದಲ್ಲಿ ಗಂಟಲು ದ್ರವ ಸಂಗ್ರಹಿಸಲಾಗುತ್ತಿದ್ದು, ವರದಿ ಬರುವವರೆಗೆ ಪರೀಕ್ಷೆಗೆ ಒಳಗಾದವ-ರನ್ನು ಪುರಭವನದಲ್ಲಿ ಕ್ವಾರಂಟೈನ್ ಮಾಡಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಕೇರಳ ಜನರ ಪ್ರತಿಭಟನೆ: ನೆಗೆಟಿವ್ ವರದಿ ಕಡ್ಡಾಯಗೊಳಿಸಿದ್ದನ್ನು ವಿರೋಧಿಸಿ ಕೇರಳ ಭಾಗದ ರಸ್ತೆ ಬಂದ್ ಮಾಡಿ ಕೇರಳಿಗರು ಪ್ರತಿಭಟನೆ ನಡೆಸಿದರು. ನೆಗೆಟಿವ್ ವರದಿ ಕಡ್ಡಾಯ ಆದೇಶ ಹಿಂಪಡೆಯಬೇಕು ಎಂದು ಒತ್ತಾಯಿಸಿದರು. ಕೇರಳಕ್ಕೆ ತೆರಳುವ ವಾಹನಗಳು ತಲಪಾಡಿ ಬಳಿ ಸಾಲುಗಟ್ಟಿ ನಿಂತಿದ್ದವು.

ಕರಾವಳಿಯಲ್ಲಿ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರಾವಳಿಯಲ್ಲಿ ಮಂಗಳವಾರ ಮತ್ತೆ ಮಳೆ ಆರಂಭವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಹಲವೆಡೆ ಸಂಜೆಯ ವೇಳೆಗೆ ಉತ್ತಮ ಮಳೆಯಾಗಿದೆ. ಕೆಲದಿನಗಳಿಂದ ಬಿಡುವ ನೀಡಿದ್ದ ಮಳೆ, ಮಂಗಳವಾರ ಬೆಳಿಗ್ಗೆಯಿಂದ ಆರಂಭವಾಗಿದೆ. ಸಂಜೆಯಿಂದ ನಿರಂತರವಾಗಿ ಸುರಿಯಿತು.

ಉಡುಪಿ ಜಿಲ್ಲೆಯ ಹಲವೆಡೆ ಸಾಧಾರಣ ಮಳೆ ಸುರಿದಿದೆ.

ಕೊಡಗು ಜಿಲ್ಲೆಯ ಮಡಿಕೇರಿ, ನಾಪೋಕ್ಲು, ಭಾಗಮಂಡಲ, ತಲಕಾವೇರಿ ಭಾಗದಲ್ಲಿ ಮಂಗಳವಾರ ಉತ್ತಮ ಮಳೆಯಾಗಿದೆ. ಒಂದು ವಾರದಿಂದ ಬಿಡುವು ನೀಡಿದ್ದ ಮಳೆ, ಮತ್ತೆ ಬಿರುಸು ಪಡೆಯುವ ಲಕ್ಷಣ ಕಾಣಿಸಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಮಂಗಳವಾರ 12.66 ಮಿ.ಮೀ. ಸರಾಸರಿ ಮಳೆಯಾಗಿದ್ದು, ಹೊಸನಗರ-ದಲ್ಲಿ 53 ಮಿ.ಮೀ.ಮಳೆಯಾಗಿದೆ.

ತೀರ್ಥಹಳ್ಳಿಯಲ್ಲಿ 19 ಮಿ.ಮೀ, ಸಾಗರದಲ್ಲಿ 9.40 ಮಿ.ಮೀ, ಶಿಕಾರಿಪು-ರದಲ್ಲಿ 2.40 ಮಿ.ಮೀ ಮಳೆಯಾಗಿದ್ದು, ಉಳಿದೆಡೆ ತುಂತುರು ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	115.42	6,565	5,320
ಹಾರಂಗಿ	2,859	2,855.67	3,220	2,440
ಕಬಿನಿ	2,284	2,280.25	4,250	1,000
ಹೇಮಾವತಿ	2,922	2,919.35	5,605	5,550
ಲಿಂಗನಮಕ್ಕಿ	1,819	1,808.10	15,012	-
ಸೂಪಾ (ಮೀ)	564	552.50	12,905	4,698
ಮಾಣಿ	594	582.52	2,441	-
ತುಂಗಭದ್ರಾ	1,633	1,632.14	29,500	25,811
ಮಲಪ್ರಭಾ	2,079.5	2,075.40	4,692	1,694
ಘಟಪ್ರಭಾ	2,175	2,172.33	7,715	11,660
ಭದ್ರಾ	186	182.11	6,083	3,144
ಆಲಮಟ್ಟಿ (ಮೀ)	519.6	518.15	3,09,050	2,01,331
ನಾರಾಯಣಪುರ (ಮೀ)	492.25	491.36	1,80,000	1,82,560

* ನೆಲಮಟ್ಟದಿಂದ

ಮಳೆಗೆ ಹೊಸನಗರದಿಂದ ನಗರ–ನಾಗೋಡಿ ಮಾರ್ಗವಾಗದಲ್ಲಿರುವ ಸೇತುವೆ ಹಾಗೂ ಶಿವಮೊಗ್ಗ–ತೀರ್ಥಹಳ್ಳಿ ಸಂಪರ್ಕ ಕಲ್ಪಿಸುವ ರಸ್ತೆ ಕುಸಿದಿದ್ದು, ಭಾರಿ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ.

ಸಚಿವಗಿರಿ: ಬಿಎಸ್‌ವೈಗೆ ಶಾಸಕರ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಂಪುಟದಲ್ಲಿ ಸ್ಥಾನ ಗಿಟ್ಟಿಸಲು ಶತಾಯಗತಾಯ ಯತ್ನಿಸುತ್ತಿರುವ ಹಲವು ಶಾಸಕರು, ಮಂಗಳವಾರವೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮೇಲೆ ಒತ್ತಡ ಹೇರುವ ಪ್ರಯತ್ನ ಮಾಡಿದರು.

ದೆಹಲಿಯಲ್ಲಿ ಸಂಭಾವ್ಯ ಸಚಿವರ ಪಟ್ಟಿ ಸಿದ್ಧಗೊಂಡಿದ್ದರೂ ಕೊನೆಯ ಕ್ಷಣದ ಪ್ರಯತ್ನವನ್ನು ಶಾಸಕರು ಮುಂದುವರಿಸಿದರು. ತಮ್ಮ ಮಾತು ನಡೆಯುವುದಿಲ್ಲ ಎಂದು ಯಡಿಯೂರಪ್ಪ ಹೇಳಿದರೂ ಅದನ್ನು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿ ಶಾಸಕರು ಇರಲಿಲ್ಲ. ಆದರೆ ಯಡಿಯೂರಪ್ಪ ಅವರು ಯಾರಿಗೂ ಭರವಸೆ ನೀಡುವ ಗೋಜಿಗೆ ಹೋಗಲಿಲ್ಲ ಎಂದು ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ಶಾಸಕರಿಂದ ಕೊನೆಯ ಕ್ಷಣದ ಪ್ರಯತ್ನ
- ಯಾರಿಗೂ ಭರವಸೆ ನೀಡದ ಯಡಿಯೂರಪ್ಪ

ಶಾಸಕರಾದ ಎಂ.ಪಿ. ರೇಣುಕಾಚಾರ್ಯ, ಬೆಳ್ಳಿ ಪ್ರಕಾಶ್, ಪರಣ್ಣ ಮುನವಳ್ಳಿ, ರಾಮಪ್ಪ ಲಮಾಣಿ, ನೆಹರು ಓಲೇಕಾರ, ಎ.ಎಸ್.ಪಾಟೀಲ ನಡಹಳ್ಳಿ, ಹರತಾಳು ಹಾಲಪ್ಪ ಅವರೆಲ್ಲ ಸಚಿವ ಸ್ಥಾನಕ್ಕೆ ಶಿಫಾರಸು ಮಾಡುವಂತೆ ಯಡಿಯೂರಪ್ಪ ಅವರಿಗೆ ದುಂಬಾಲು ಬಿದ್ದರು.

‘ಸಚಿವ ಸ್ಥಾನ ನಿರ್ಧರಿಸುವುದು ನಾನಲ್ಲ. ವರಿಷ್ಠರ ತೀರ್ಮಾನವೇ ಅಂತಿಮ’ ಎಂದು ಯಡಿಯೂರಪ್ಪ ಹೇಳಿದರು. ಇದರಿಂದ ಶಾಸಕರು ಸಮಾಧಾನಗೊಳ್ಳಲಿಲ್ಲ ಎಂದು ಮೂಲಗಳು ತಿಳಿಸಿವೆ.

ಹಾವೇರಿ ಶಾಸಕ ನೆಹರು ಓಲೇಕಾರ್ ಅವರು ತಮ್ಮ ಬೆಂಬಲಿಗರೊಂದಿಗೆ ‘ಕಾವೇರಿ’ ನಿವಾಸಕ್ಕೆ ಬಂದಿದ್ದರು. ‘ಓಲೇಕಾರ್ ಅವರನ್ನು ಸಚಿವರನ್ನಾಗಿ ಮಾಡಬೇಕು, ಒಂದು ವೇಳೆ ಸಚಿವ ಸ್ಥಾನ ನೀಡದೇ ಇದ್ದರೆ, ನೂತನ ಮುಖ್ಯಮಂತ್ರಿಯವ-ರಿಗೆ ಹಾವೇರಿ ಜಿಲ್ಲೆಯಲ್ಲಿ ಓಡಾಡಲು ಬಿಡುವುದಿಲ್ಲ’ ಎಂದು ಎಚ್ಚರಿಕೆ ನೀಡಿದ್ದೂ ಅಲ್ಲದೆ, ಪ್ರತಿಭಟನೆಯ-ನ್ನೂ ನಡೆಸಿದರು. ಬಳಿಕ ಪೊಲೀಸರು ಅವರನ್ನು ಸಮಾಧಾನ ಪಡಿಸಿ ಅಲ್ಲಿಂದ ಕಳುಹಿಸಿದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ತೀರ್ಥಹಳ್ಳಿ ಶಾಸಕ ಆರಗ ಜ್ಞಾನೇಂದ್ರ ಅವರೂ ಸಚಿವ ಸ್ಥಾನಕ್ಕಾಗಿ ಪ್ರಯತ್ನ ನಡೆಸಿದ್ದಾರೆ. ಕಾಗೇರಿ ಅವರು ಸಂಘ ಪರಿವಾರದ ಮುಖಂಡರನ್ನು ನೆಚ್ಚಿಕೊಂಡಿ-ದ್ದಾರೆ. ಒಂದು ವೇಳೆ ಕಾಗೇರಿ ಸಚಿವರಾದರೆ, ಸುರೇಶ್ ಕುಮಾರ್ ಅವರಿಗೆ ವಿಧಾನಸಭಾಧ್ಯಕ್ಷ ಪಟ್ಟ ಕಟ್ಟಬಹುದು ಎಂದು ಪಕ್ಷದ ಮೂಲಗಳು ಹೇಳಿವೆ.

ಬಿಎಸ್‌ವೈ ಬಿಗಿ ಪಟ್ಟು: ಸಂಪುಟ ಇಕ್ಕಟ್ಟು

ಒಂದನೇ ಪುಟದಿಂದ

ಉಪ ಮುಖ್ಯಮಂತ್ರಿ ಬೇಡ: ‘ಸಂಪುಟದಲ್ಲಿ ಉಪ ಮುಖ್ಯಮಂತ್ರಿಗಳು ಬೇಡ’ ಎಂಬ ನಿಲುವನ್ನು ಪಕ್ಷದ ವರಿಷ್ಠರು ತಾಳಿರುವುದು ಬೊಮ್ಮಾಯಿ ಅವರನ್ನು ಅಡಕತ್ತರಿಗೆ ದೂಡಿದೆ.

‘ಪರಿಶಿಷ್ಟ ಜಾತಿ ಮತ್ತು ಪಂಗಡದ ಒಬ್ಬೊಬ್ಬರಿಗೆ ಈ ಸ್ಥಾನಮಾನ ನೀಡದಿದ್ದರೆ ಆಡಳಿತ ನಿರ್ವಹಣೆ ಕಷ್ಟಕರ. ಅಲ್ಲದೆ, ಉಪ ಮುಖ್ಯಮಂತ್ರಿ ಸ್ಥಾನಕ್ಕಾಗಿ ಬಿ.ಶ್ರೀರಾಮುಲು ಪಟ್ಟು ಹಿಡಿದಿರುವುದರಿಂದ ಅವರ ಬೇಡಿಕೆ ಈಡೇರಿಸಲೇಬೇಕು. ಹಾಗಾಗಿ ಹಿರಿಯರಾದ ಗೋವಿಂದ ಕಾರಜೋಳ ಹಾಗೂ ಶ್ರೀರಾಮುಲು ಅವರನ್ನು ಈ ಸ್ಥಾನಕ್ಕೆ ಪರಿಗಣಿಸಿ ಎಂಬ ಮನವಿ ಸಲ್ಲಿಸಿದ್ದಾರೆ. ಈ ಸಂಬಂಧ ವರಿಷ್ಠರು ಯಾವ ನಿರ್ಧಾರ ಕೈಗೊ-ಳ್ಳಲಿದ್ದಾರೆ ಎಂಬುದೂ ಕುತೂಹಲಕ್ಕೆ ಕಾರಣವಾಗಿದೆ.

ಮೂರೇ ಸಲ ಕಂಡ ಸಿ.ಎಂ: ಭಾನುವಾರ ರಾತ್ರಿಯೇ ಪ್ರಲ್ಹಾದ ಜೋಶಿ ಅವರೊಂದಿಗೆ ನವದೆಹಲಿಗೆ ಬಂದಿರುವ ಮುಖ್ಯಮಂತ್ರಿ ಬೊಮ್ಮಾಯಿ ಮಾಧ್ಯಮದವರಿಗೆ ಕಂಡಿದ್ದು ಮೂರು ಬಾರಿ ಮಾತ್ರ.

ಭಾನುವಾರ ರಾತ್ರಿ 9ಕ್ಕೆ ಬಂದಿಳಿದ ಅವರು ವಿಮಾನ ನಿಲ್ದಾಣದಿಂದಲೇ ಅಜ್ಞಾತ ಸ್ಥಳಕ್ಕೆ ತೆರಳಿ ಸೋಮವಾರ ಬೆಳಗಿನ ಜಾವ 1.30ಕ್ಕೆ ಕರ್ನಾಟಕ ಭವನ ತಲುಪಿದ್ದರು. ಸೋಮವಾರ ಬೆಳಿಗ್ಗೆ ಸಂಸತ್ ಭವನದತ್ತ ಹೊರಡುವಾಗ ಒಮ್ಮೆ, ರಾತ್ರಿ ನಡ್ಡಾ ಭೇಟಿಯ ನಂತರ ಮತ್ತೊಮ್ಮೆ ಮಾಧ್ಯ-ಮದವರಿಗೆ ಕಂಡು ಪ್ರತಿಕ್ರಿಯೆ ನೀಡಿದ್ದರು.

ಮಂಗಳವಾರ ಬೆಳಿಗ್ಗೆ ಸಂಸದ ಜಿ.ಎಂ. ಸಿದ್ದೇಶ್ವರ ಅವರ ನಿವಾಸದಲ್ಲಿ ಮಗದೊಮ್ಮೆ ಅನೌಪಚಾರಿಕ-ವಾಗಿ ಭೇಟಿಯಾಗಿದ್ದನ್ನು ಬಿಟ್ಟರೆ, ರಾಜ್ಯದಿಂದ ಬಂದಿದ್ದ ಸಚಿವ ಸ್ಥಾನದ ಆಕಾಂಕ್ಷಿಗಳಿಗೂ ಮುಖ ತೋರಲಿಲ್ಲ.

ಸಂಪುಟ ರಚನೆ ‘ಇಕ್ಕಟ್ಟಿ’ಗೆ ಸಿಲುಕಿರುವ ಮುಖ್ಯಮಂತ್ರಿಯವರು ಬೆಂಗಾವಲು ಪಡೆಯ ಕಣ್ಣನ್ನೂ ತಪ್ಪಿಸಿ ಕೆಲವೆಡೆ ಸಂಚರಿಸಿದ್ದು, ಕರ್ನಾಟಕ ಭವನದ ಅಧಿಕಾರಿಗಳ ಆತಂಕಕ್ಕೂ ಕಾರಣವಾಗಿತ್ತು.

ಗೋಳಗುಮ್ಮಟ: ವಿಶ್ವವಿಖ್ಯಾತ ಸ್ಮಾರಕದ ಸೌಂದರ್ಯಕ್ಕೆ ಧಕ್ಕೆ

ಕಳಚಿಬಿದ್ದ ಕಲಾತ್ಮಕ ‘ಸಜ್ಜಾ’ ಕಲ್ಲು

ಪ್ರಜಾವಾಣಿ ವಾರ್ತೆ

ವಿಜಯಪುರ: ವಿಶ್ವವಿಖ್ಯಾತ ಗೋಳಗುಮ್ಮಟದ ಗೋಡೆಯನ್ನು ಅಲಂಕರಿಸಿರುವ ‘ಸಜ್ಜಾ’ದ ಕಪ್ಪು ಶಿಲೆಯ ಕಲಾತ್ಮಕ ಕಲ್ಲುಗಳು ಸಡಿಲಗೊಂಡು ಕಳಚಿ ಬಿದ್ದಿವೆ. ಇದಾಗಿ ಒಂದು ವಾರವಾದರೂ ಈ ಕಲ್ಲುಗಳನ್ನು ಸ್ಥಳಾಂತರಿಸದೆ, ಸುರಕ್ಷಿತ ಕ್ರಮ ಕೈಗೊಳ್ಳದೆ ಪುರಾತತ್ವ ಸರ್ವೇಕ್ಷಣಾ ಇಲಾಖೆ ನಿರ್ಲಕ್ಷ್ಯ ತೋರಿದೆ.

1626–56ರಲ್ಲಿ ಆದಿಲ್‌ಶಾಹಿ ಅರಸರ ಕಾಲದಲ್ಲಿ ನಿರ್ಮಾಣವಾಗಿರುವ ಸ್ಮಾರಕದ ಸುಮಾರು 150 ಅಡಿ ಎತ್ತರ-ದಲ್ಲಿರುವ ಆರನೇ ಅಂತಸ್ತಿನ ಗೋಡೆಯ ಸುತ್ತ ಕಪ್ಪು ಕಲ್ಲಿನಿಂದ ನಿರ್ಮಿಸಿರುವ ಸಜ್ಜಾ ಮಳೆ, ಗಾಳಿ, ಬಿಸಿಲಿನ ಹೊಡೆತಕ್ಕೆ ಶಿಥಿಲಗೊಂಡು ಬಿದ್ದಿದೆ.

ಗುಮ್ಮಟದ ಗೋಡೆಗಳ ಹೊರ ಭಾಗದ ಮೇಲೆ ಇರುವ ಶಿಲೆಯಿಂದ ರಚನೆಯಾಗಿರುವ ಪಾರಿವಾಳ ಆಕೃತಿ, ಆನೆಗಳ ಆಕೃತಿ, ಕಮಲದಗಳ ಆಕೃತಿ ಮತ್ತು ಕಂಠಹಾರಾಕೃತಿಯ ಸುಂದರವಾದ ಕೆತ್ತನೆಯ ಶಿಲ್ಪಗಳು ಹಾಗೂ ಸಜ್ಜಾದ ಕೆಲ ಭಾಗಗಳಿಗೆ ನಿರ್ವಹಣೆ ಇಲ್ಲದೇ ನಿರ್ಲಕ್ಷ್ಯಕ್ಕೆ ಒಳಗಾಗಿವೆ.

ವಿಜಯಪುರದ ಐತಿಹಾಸಿಕ ಗೋಳಗುಮ್ಮಟದ ಸಜ್ಜಾ ಶಿಥಿಲವಾಗಿ ಉದುರಿರುವ ಭಾಗ –ಪ್ರಜಾವಾಣಿ ಚಿತ್ರ: ಸಂಜೀವ ಅಕ್ಕಿ

ಕಲ್ಲು ಕುಸಿದಿರುವ ಸ್ಥಳದಲ್ಲಿ ಪ್ರವಾಸಿಗರ ವೀಕ್ಷಣೆಗೆ ನಿರ್ಬಂಧ ಇರುವುದರಿಂದ ಹಾಗೂ ನಿರ್ಜನ ಪ್ರ-ದೇಶವಾಗಿರುವುದರಿಂದ ಯಾವುದೇ ಅನಾಹುತ ಸಂಭವಿಸಿಲ್ಲ.

ಕೇಂದ್ರ ಕಚೇರಿಗೆ ವರದಿ: ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಧಾರವಾಡ ವಲಯ ಅಧೀಕ್ಷಕ ಪುರಾತತ್ವಜ್ಞ (ಸೂಪರಿಟೆಂಡಿಗ್ ಆರ್ಕಿಯಾಲಜಿಸ್ಟ್) ವಿ.ಎಸ್.ಬಡಿಗೇರ, ‘ಸುಮಾರು 400 ವರ್ಷಗಳ ಹಿಂದೆ ನಿರ್ಮಾಣವಾಗಿರುವ ಗೋಳಗುಮ್ಮಟದ ಕೆಲ ಭಾಗ ಶಿಥಿಲಗೊಂಡಿದೆ. ಈ ಕುರಿತು ನವದೆಹಲಿಯ ಕೇಂದ್ರ ಕಚೇರಿಗೆ ವರದಿ ಮಾಡಲಾಗಿದೆ’ ಎಂದು ಹೇಳಿದರು.

‘ಗೋಳಗುಮ್ಮಟದ ದುರಸ್ತಿ ಕಾರ್ಯಕ್ಕೆ ಈಗಾಗಲೇ ಕ್ರಿಯಾಯೋಜನೆ ತಯಾರಿಸಿ ಪ್ರಸ್ತಾವ ಸಲ್ಲಿಸಲಾಗಿದೆ. ಒಮ್ಮೆಗೆ ದುರಸ್ತಿ ಮಾಡಲು ಸಾಧ್ಯವಿಲ್ಲ. ತಾಂತ್ರಿಕ ತಜ್ಞರ ಸಲಹೆ ಮತ್ತು ದೊಡ್ಡ ಮೊತ್ತದ ಹಣಕಾಸು ಅಗತ್ಯ ಇದೆ’ ಎಂದು ವಿವರಿಸಿದರು.

ಗುಮ್ಮಟದ ಸಜ್ಜಾದ ಕಲ್ಲು ಸಡಿಲಗೊಂಡು ಬಿದ್ದಿದೆ. ಎಎಸ್‌ಐ ಕೇಂದ್ರ ಕಚೇರಿಯಿಂದ ಹಣಕಾಸು, ತಾಂತ್ರಿಕ ಒಪ್ಪಿಗೆ ದೊರೆತ ಬಳಿಕ ದುರಸ್ತಿ ಮಾಡಲಾಗುವುದು

ವಿ.ಎಸ್.ಬಡಿಗೇರ, ಸೂಪರಿಟೆಂಡಿಗ್ ಆರ್ಕಿಯಾಲಜಿಸ್ಟ್, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಧಾರವಾಡ ವಲಯ

ಸುದ್ದಿ 2 ನಿಮಿಷ

‘ನೂತನ ಶಿಕ್ಷಣ ನೀತಿ ಗೊಂದಲಮಯ’

ಬೆಳಗಾವಿ: ‘ಹೊಸ ಶಿಕ್ಷಣ ನೀತಿಯು ಭಾಷೆಯ ವಿಷಯದಲ್ಲಿ ಗೊಂದಲಮಯವಾಗಿದೆ’ ಎಂದು ಚಿಂತಕ, ಬಂಡಾಯ ಸಾಹಿತಿ ಡಾ.ಬರಗೂರು ರಾಮಚಂದ್ರಪ್ಪ ಹೇಳಿದರು.

ಇಲ್ಲಿನ ರಾಣಿ ಚನ್ನಮ್ಮ ವಿಶ್ವವಿ-ದ್ಯಾಲಯದ ಸಂಗೊಳ್ಳಿ ರಾಯಣ್ಣ ಘಟಕ ಮಹಾವಿದ್ಯಾಲಯದ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಆಯೋಜಿಸಿದ್ದ ‘ಪದವಿ ವ್ಯಾಸಂಗದಲ್ಲಿ ಸಾಹಿತ್ಯದ ಮಹತ್ವ’ ಎಂಬ ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

‘ಶಾಸ್ತ್ರೀಯ ಮತ್ತು ಪ್ರಾದೇಶಿಕ ಭಾಷೆಗಳಿಗೆ ಪ್ರಾಶಸ್ತ್ಯ ಕೊಡಬೇಕು ಎಂದು ನೀತಿಯಲ್ಲಿ ಒಂದೆಡೆ ಹೇಳಿದರೆ, ಇನ್ನೊಂದೆಡೆ ಈಗಾಗಲೇ ಪದವಿ ತರಗತಿಗ-ಳಲ್ಲಿ ಮೂರು ವರ್ಷಗಳಿಗಿದ್ದ ಭಾಷಾ ತರಗತಿಗಳನ್ನು ಒಂದು ವರ್ಷಕ್ಕೆ ಕಡಿತಗೊಳಿಸಿದೆ. ಇದು ಹೊಸ ಶಿಕ್ಷಣ ನೀತಿಯ ದ್ವಂದ್ವ ನಿಲುವಾಗಿದೆ’ ಎಂದು ವಿಶ್ಲೇಷಿಸಿದರು.

ಪ್ರಾದೇಶಿಕ ಭಾಷೆಗೆ ಒತ್ತು ಕೊಡಬೇಕು: ‘ಕನ್ನಡ ಸಾಹಿತ್ಯದ ಮಹತ್ವದ ಕುರಿತಾದ ಚರ್ಚೆ ಈಗ ಅತ್ಯಂತ ಅಗತ್ಯವಾಗಿದೆ. ಬಹುತ್ವವೇ ಭಾರತದ ಮೂಲ ಅಡಿಪಾಯ. ಹೀಗಾಗಿ, ನೂತನವಾದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನ ಮಾಡುವಾಗ ಪ್ರಾದೇಶಿಕ ಭಾಷೆಗೆ ಒತ್ತು ಕೊಡಬೇಕು’ ಎಂದು ಅವರು ಒತ್ತಾಯಿಸಿದರು.

ಹೈಕಮಾಂಡ್ ಹಿಡಿತದಲ್ಲಿ ಬೊಮ್ಮಾಯಿ: ಉಗ್ರಪ್ಪ ಟೀಕೆ

ಮೈಸೂರು: ‘ತನ್ನ ಮಂತ್ರಿಮಂಡಲದಲ್ಲಿ ಯಾರೆಲ್ಲಾ ಇರಬೇಕು ಎಂಬುದನ್ನು ನಿರ್ಧರಿಸುವ ಸ್ವಾತಂತ್ರ್ಯವನ್ನೂ ಕಳೆದುಕೊಂಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಹೈಕಮಾಂಡ್‌ನ ಬಿಗಿಹಿಡಿತಕ್ಕೆ ಸಿಲುಕಿ ಒದ್ದಾಡುತ್ತಿದ್ದಾರೆ’ ಎಂದು ಕೆಪಿಸಿಸಿ ವಕ್ತಾರ ವಿ.ಎಸ್.ಉಗ್ರಪ್ಪ ಲೇವಡಿ ಮಾಡಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮಂತ್ರಿಗಳ 2–3 ಪಟ್ಟಿಯನ್ನು ಹೈಕಮಾಂಡ್‌ಗೆ ಕೊಟ್ಟಿದ್ದು, ಅದರಲ್ಲಿ ಯಾವುದಕ್ಕೆ ಒಪ್ಪಿಗೆ ಸಿಗುವುದೋ ಗೊತ್ತಿಲ್ಲ ಎಂದು ಬೊಮ್ಮಾಯಿ ಹೇಳಿದ್ದಾರೆ. ಆ ವಿಚಾರದಲ್ಲಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರ ಮಾತೇ ಅಂತಿಮ. ಕಾಂಗ್ರೆಸ್‌ನದ್ದು ಹೈಕಮಾಂಡ್ ಸಂಸ್ಕೃತಿ ಎಂದು ಮೂದಲಿಸುತ್ತಿದ್ದ ಬಿಜೆಪಿ ಮುಖಂಡರಿಗೆ ಈಗ ಒದಗಿರುವ ಪರಿಸ್ಥಿತಿಯಾದರೂ ಏನು’ ಎಂದು ಪ್ರಶ್ನಿಸಿದರು.

‘ಬಿಜೆಪಿ ರಾಷ್ಟ್ರೀಯ ನಾಯಕರಿಗೆ ಸಂವಿಧಾನ, ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿಶ್ವಾಸವಿಲ್ಲ. ಹೈಕಮಾಂಡ್ ಒಪ್ಪಿಗೆ ಕೇಳುವುದು ತಪ್ಪಲ್ಲ. ಆದರೆ ಒಬ್ಬ ಮುಖ್ಯಮಂತ್ರಿಗಿರುವ ಪರಮಾಧಿಕಾರವಾದ ಮಂತ್ರಿಮಂಡಲ ರಚನೆಗೆ ಅವಕಾಶವನ್ನೇ ನೀಡದಿರುವುದು ರಾಜ್ಯದ 6.5 ಕೋಟಿ ಜನರಿಗೆ ಮಾಡಿರುವ ಅವಮಾನ’ ಎಂದು ದೂರಿದರು.

‘ರಾಜ್ಯದಲ್ಲಿ ಪ್ರವಾಹ ಪರಿಸ್ಥಿತಿಯಿದ್ದರೂ, ಬಿಜೆಪಿ ಶಾಸಕರು ಅಧಿಕಾರದ ಹಿಂದೆ ಬಿದ್ದಿದ್ದಾರೆ. ಕೇಂದ್ರ ಸರ್ಕಾರವು ಪ್ರವಾಹದಿಂದ ಆಗಿರುವ ನಷ್ಟಕ್ಕೆ ಸೂಕ್ತ ಪರಿಹಾರ ನೀಡದೆ ಮಲತಾಯಿ ಧೋರಣೆ ಅನುಸರಿಸುತ್ತಿದೆ’ ಎಂದು ಕಿಡಿಕಾರಿದರು.

ಪಿಯುಸಿ: ಫಲಿತಾಂಶ ತಿರಸ್ಕರಿಸಿದ 878 ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ 878 ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶವನ್ನು ತಿರಸ್ಕರಿಸಿದ್ದು, ಪರೀಕ್ಷೆ ಬರೆದು ಹೆಚ್ಚಿನ ಅಂಕ ಗಳಿಸಲು ನಿರ್ಧರಿಸಿದ್ದಾರೆ.

ಕೋವಿಡ್ ಕಾರಣ 2020–21ನೇ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯನ್ನು ರದ್ದುಪ-ಡಿಸಿದ್ದ ರಾಜ್ಯ ಸರ್ಕಾರ, ಪರೀಕ್ಷೆಗೆ ನೋಂದಾಯಿಸಿದ್ದ ಎಲ್ಲ ವಿದ್ಯಾರ್ಥಿಗಳಿಗೆ ಎಸ್ಸೆಸ್ಸೆಲ್ಸಿ, ಪ್ರಥಮ ಪಿಯುಸಿ, ಶೈಕ್ಷಣಿಕ ಚಟುವಟಿಕೆ ಮತ್ತು ಕೃಪಾಂಕ ಆಧರಿಸಿ ಅಂಕಗಳನ್ನು ನಿರ್ಣಯಿಸಿ ಉತ್ತೀರ್ಣ ಎಂದು ಘೋಷಿಸಿತ್ತು. ಇದರಿಂದ ತೃಪ್ತಿ ಇಲ್ಲದವರು ತಮ್ಮ ಫಲಿತಾಂಶವನ್ನು ತಿರಸ್ಕರಿಸಿ ಆಗಸ್ಟ್ 19ರಿಂದ ನಡೆಸಲು ಉದ್ದೇಶಿಸಿರುವ ಪರೀಕ್ಷೆಯನ್ನು ಬರೆಯಲು ಅವಕಾಶ ನೀಡಿದೆ.

ಅಂಕ ನಿರ್ಣಯಿಸಲು ಸರ್ಕಾರ ಅನುಸರಿಸಿರುವ ಮಾನದಂಡದಿಂದ ಕಡಿಮೆ ಅಂಕ ಬಂದಿದೆ ಎಂಬ ಕಾರಣಕ್ಕೆ 878 ವಿದ್ಯಾರ್ಥಿಗಳು ಫಲಿತಾಂಶ ತಿರ-ಸ್ಕರಿಸಿದ್ದಾರೆ. ಅಲ್ಲದೆ, ಪರೀಕ್ಷೆ ಬರೆದು ಹೆಚ್ಚು ಅಂಕ ಪಡೆಯುವ ವಿಶ್ವಾಸದಿಂದ ಫಲಿತಾಂಶವನ್ನು ತಿರಸ್ಕರಿಸಿದ್ದಾರೆ.

ಹೀಗೆ ಫಲಿತಾಂಶ ತಿರಸ್ಕರಿಸಿದ-ವರಲ್ಲಿ ವಿಜಯನಗರದ ಕೊಟ್ಟೂರಿನ ಪದವಿ ಪೂರ್ವ ಕಾಲೇಜೊಂದರ 104 ವಿದ್ಯಾರ್ಥಿಗಳಿದ್ದಾರೆ. ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯಲ್ಲಿ 220ಕ್ಕೂ ಹೆಚ್ಚು ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಿಸಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

ಕಸಾಪ: ಆಡಳಿತಾಧಿಕಾರಿ ನೇಮಕಕ್ಕೆ ಮನವಿ

ಬೆಂಗಳೂರು: ‘ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಪ್ರಸ್ತುತ ಕಾರ್ಯಕಾರಿ ಸಮಿತಿಯ ಅಧಿಕಾರದ ಅವಧಿ ಮುಕ್ತಾ-ಯವಾಗುತ್ತಿದ್ದಂತೆ ಆಡಳಿತಾಧಿಕಾರಿ-ಯನ್ನು ನೇಮಕ ಮಾಡಬೇಕು’ ಎಂದು ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಮನವಿ ಮಾಡಿದ್ದಾರೆ.

ಈ ಬಗ್ಗೆ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. ‘ಈ ಹಿಂದೆ ಹೊರಡಿಸಲಾದ ಸರ್ಕಾರಿ ಆದೇಶದಲ್ಲಿ ಸಹಕಾರ ಸಂಘಗಳು, ನೋಂದಾಯಿತ ಸೊಸೈಟಿಗಳು ಮತ್ತು ಸಂಘ–ಸಂಸ್ಥೆಗಳ ಚುನಾವಣೆಯನ್ನು ಕೋವಿಡ್ ಕಾರಣದಿಂದ 2021ರ ಡಿಸೆಂಬರ್ ಅಂತ್ಯದವರೆಗೂ ಮುಂದೂ-ಡುವಂತೆ ತಿಳಿಸಲಾಗಿದೆ. ಹಾಲಿ ಕಾರ್ಯಕಾರಿ ಸಮಿತಿಯ ಅಧಿಕಾರ ವಧಿಯು ಸೆ.2ಕ್ಕೆ ಅಂತ್ಯವಾಗಲಿದೆ. ಸೆ.3ರಿಂದ ಅನ್ವಯವಾಗುವಂತೆ ಆಡಳಿ-ತಾಧಿಕಾರಿಯನ್ನು ನೇಮಿಸುವುದು ಅವಶ್ಯ’ ಎಂದು ತಿಳಿಸಿದ್ದಾರೆ.

ಪರಿಷತ್ತಿನ ಚುನಾವಣೆಯು ಮೇ 9ರಂದು ಈ ಹಿಂದೆ ನಿಗದಿಯಾಗಿತ್ತು. ನಾಮಪತ್ರ ಪರಿಶೀಲನೆ ಸೇರಿದಂತೆ ವಿವಿಧ ಪ್ರಕ್ರಿಯೆಗಳು ಪೂರ್ಣಗೊಂಡು, ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಅಂತಿಮವಾಗಿ 21 ಮಂದಿ ಸ್ಪರ್ಧೆಯ-ಲ್ಲಿದ್ದರು. ಆದರೆ, ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದು, ಏಪ್ರಿಲ್ ತಿಂಗಳಲ್ಲಿ ಗರಿಷ್ಠ ಸಂಖ್ಯೆಗೆ ತಲುಪಿತ್ತು. ಹೀಗಾಗಿ, ಚುನಾವಣೆಯನ್ನು ಸರ್ಕಾರ ಮುಂದೂಡಿತ್ತು. ಚುನಾವಣಾ ಪ್ರಕ್ರಿಯೆ-ಯನ್ನು ಮುಂದೂಡಿದ ಹಂತದಿಂದ ಯಥಾವತ್ತಾಗಿ ಮುಂದುವರಿಸಲಾಗು-ವುದು ಎಂದು ಕಳೆದ ಏಪ್ರಿಲ್ 26ರಂದು ಸರ್ಕಾರ ಹೊರಡಿಸಿದ ಆದೇಶದಲ್ಲಿ ತಿಳಿಸಲಾಗಿದೆ. ಈ ಮಧ್ಯೆ ಚುನಾವಣೆ ನಡೆಸಬೇಕೆಂದು ಅಭ್ಯರ್ಥಿಗಳು ಒತ್ತಾ-ಯಿಸಲಾರಂಭಿಸಿದ್ದಾರೆ.

ರಾಜಕೀಯ ಕಾರ್ಯದರ್ಶಿ, ಸಲಹೆಗಾರರಿಗೆ ಕೊಕ್

ಬೆಂಗಳೂರು: ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾ-ಗಿದ್ದಾಗ ಸಚಿವಾಲಯದ ಆಯಕಟ್ಟಿನ ಹುದ್ದೆಗಳಲ್ಲಿ ನೇಮಕಗೊಂಡಿದ್ದ ಅಧಿ-ಕಾರಿಗಳನ್ನು ವಾಪಸ್ ಕಳಿಸಿದ ಬೆನ್ನಲ್ಲೇ, ಆ ಅವಧಿಯಲ್ಲೇ ನೇಮಕವಾಗಿದ್ದ ರಾಜಕೀಯ ಕಾರ್ಯದರ್ಶಿಗಳು ಮತ್ತು ಸಲಹೆಗಾರರನ್ನು ಮನೆಗೆ ಕಳುಹಿಸಲಾಗಿದೆ.

ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ, ಹಿಂದೆ ಮುಖ್ಯಮಂತ್ರಿ ಸಚಿವಾಲಯದಲ್ಲಿದ್ದ ಬಹುತೇಕರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ. ಮುಖ್ಯಮಂತ್ರಿ ರಾಜಕೀಯ ಕಾರ್ಯ-ದರ್ಶಿಗಳಾಗಿದ್ದ ಶಾಸಕ ಎಂ.ಪಿ. ರೇಣುಕಾಚಾರ್ಯ, ಮಾಜಿ ಶಾಸಕ ಡಿ.ಎನ್.ಜೀವರಾಜ್ ಮತ್ತು ಯಡಿಯೂರಪ್ಪ ಆಪ್ತ ಎನ್.ಆರ್. ಸಂತೋಷ್ ಅವರನ್ನು ಈ ಸ್ಥಾನದಿಂದ ಕೈಬಿಡಲಾಗಿದೆ.

ಶಿಕ್ಷಣ ಸುಧಾರಣೆಗಳ ಸಲಹೆಗಾರ ಎಂ.ಆರ್.ದೊರೆಸ್ವಾಮಿ, ಕಾನೂನು ಸಲಹೆಗಾರ ಮೋಹನ್ ಲಿಂಬಿಕಾಯಿ, ಮಾಧ್ಯಮ ಸಲಹೆಗಾರ ಎನ್.ಭೃಂಗೀಶ್, ಮಾಧ್ಯಮ ಸಂಯೋಜಕ ಸುನಿಲ್ ಜಿ.ಎಸ್, ನೀತಿ ನಿರೂಪಣೆ ಮತ್ತು ಕಾರ್ಯತಂತ್ರ ಸಲಹೆಗಾರ ಪ್ರಶಾಂತ್ ಪ್ರಕಾಶ್ ಅವರನ್ನು ಕರ್ತವ್ಯದಿಂದ ಬಿಡು-ಗಡೆಗೊಳಿಸಲಾಗಿದೆ. ಇವರ ಪೈಕಿ, ಇ–ಆಡಳಿತ ಸುಧಾರಣೆ ಸಲಹೆಗಾರ ಬೇಲೂರು ಸುದರ್ಶನ ಅವರು ಯಡಿಯೂರಪ್ಪ ರಾಜೀನಾಮೆ ನೀಡಿದ ದಿನವೇ ತಮ್ಮ ಹುದ್ದೆ ತೊರೆದಿದ್ದರು.

44 ಜಿಲ್ಲೆಗಳಲ್ಲಿ ಕೋವಿಡ್ ದೃಢಪಡುವಿಕೆ ದರವು ಶೇ 10ಕ್ಕೂ ಹೆಚ್ಚು

ಎಂಟು ರಾಜ್ಯಗಳಲ್ಲಿ ಸೋಂಕು ತೀವ್ರ

ಮುಖ್ಯಾಂಶಗಳು

- ‘ಭಾರತದಲ್ಲಿ ಕೋವಿಡ್ ಸಾಂಕ್ರಾಮಿಕವು ಇನ್ನೂ ಮುಗಿದಿಲ್ಲ
- ಕೇರಳ ರಾಜ್ಯವೊಂದರಲ್ಲೇ ಶೇ 49.58ರಷ್ಟು ಪ್ರಕರಣಗಳು ಪತ್ತೆ
- ವಿಶ್ವದಲ್ಲಿ ಪ್ರತಿದಿನ ಒಟ್ಟು 4.7 ಲಕ್ಷ ಕೋವಿಡ್ ಪ್ರಕರಣಗಳು ಹೊಸದಾಗಿ ಪತ್ತೆ

ನವದೆಹಲಿ (ಪಿಟಿಐ): ಕೇರಳ, ತಮಿಳುನಾಡು, ಜಮ್ಮು-ಕಾಶ್ಮೀರ, ಹಿಮಾಚಲ ಪ್ರದೇಶ ಸೇರಿ ಎಂಟು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೋವಿಡ್ ಆರ್ ಸಂಖ್ಯೆ 1ಕ್ಕಿಂತಲೂ ಹೆಚ್ಚು ಇದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಕೋವಿಡ್ ಸೋಂಕು ಹರಡುವ ವೇಗವನ್ನು ಆರ್ ಸಂಖ್ಯೆಯಲ್ಲಿ (ರಿಪ್ರೊಡಕ್ಷನ್ ನಂಬರ್) ಗುರುತಿಸಲಾಗುತ್ತದೆ. ಒಬ್ಬ ಸೋಂಕಿತ ವ್ಯಕ್ತಿಯಿಂದ ಎಷ್ಟು ಜನಕ್ಕೆ ಸೋಂಕು ಹರಡುತ್ತದೆ ಎಂಬುದನ್ನು ಆರ್ ಸಂಖ್ಯೆ ಸೂಚಿಸುತ್ತದೆ. ಈ ಸಂಖ್ಯೆ 1ಕ್ಕಿಂತಲೂ ಕಡಿಮೆ ಇದ್ದರೆ, ಸೋಂಕು ನಿಧಾನವಾಗಿ ಹರಡುತ್ತಿದೆ ಎಂದು ಅರ್ಥ. ಈ ಸಂಖ್ಯೆ 1 ಮತ್ತು ಅದಕ್ಕಿಂತಲೂ ಹೆಚ್ಚು ಇದ್ದರೆ, ಸೋಂಕು ವೇಗವಾಗಿ ಹರಡುತ್ತಿದೆ ಎಂದು ಅರ್ಥ.

ಕಳೆದ ಒಂದು ವಾರದಲ್ಲಿ ದೇಶದಾದ್ಯಂತ ಪತ್ತೆಯಾದ ಹೊಸ ಪ್ರಕರಣಗಳಲ್ಲಿ ಕೇರಳ ರಾಜ್ಯವೊಂದರಲ್ಲೇ ಶೇ 49.58ರಷ್ಟು ಪ್ರಕರಣಗಳು ಪತ್ತೆಯಾಗಿವೆ.

‘ಭಾರತದಲ್ಲಿ ಕೋವಿಡ್ ಸಾಂಕ್ರಾಮಿಕವು ಇನ್ನೂ ಮುಗಿದಿಲ್ಲ. ಕೋವಿಡ್ ಎರಡನೇ ಅಲೆಯೇ ಮುಗಿದಿಲ್ಲ. ವಿಶ್ವದ ಹಲವೆಡೆ ಕೋವಿಡ್ ಸಾಂಕ್ರಾಮಿಕ ಮುಗಿದಿಲ್ಲ. ವಿಶ್ವದಲ್ಲಿ ಪ್ರತಿದಿನ ಒಟ್ಟು 4.7 ಲಕ್ಷ ಕೋವಿಡ್ ಪ್ರಕರಣಗಳು ಹೊಸದಾಗಿ ಪತ್ತೆಯಾಗುತ್ತಿವೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

‘12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 44 ಜಿಲ್ಲೆಗಳಲ್ಲಿ ಕೋವಿಡ್ ಸೋಂಕು ದೃಢಪಡುವ ದರ (ಪಾಸಿಟಿವಿಟಿ ರೇಟ್) ಶೇ 10ಕ್ಕೂ ಹೆಚ್ಚು. ಕೇರಳ, ಮಹಾರಾಷ್ಟ್ರ, ಮಣಿಪುರ ಮತ್ತು ಅರುಣಾಚಲ ಪ್ರದೇಶದ 18 ಜಿಲ್ಲೆಗಳಲ್ಲಿ ಪ್ರತಿದಿನ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಲೇ ಇದೆ. ನಾಲ್ಕು ವಾರಗಳಿಂದಲೂ ಈ ಜಿಲ್ಲೆಗಳಲ್ಲಿ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ಕೋವಿಶೀಲ್ಡ್ ಉತ್ಪಾದನೆ ಹೆಚ್ಚಳ’

ಮನಸುಖ್ ಮಾಂಡವಿಯ

ನವದೆಹಲಿ: ವರ್ಷಾಂತ್ಯದ ವೇಳೆಗೆ ಕೋವಿಶೀಲ್ಡ್ ಲಸಿಕೆಯ ಉತ್ಪಾದನೆಯನ್ನು ತಿಂಗಳಿಗೆ 12 ಕೋಟಿ ಹಾಗೂ ಕೋವ್ಯಾಕ್ಸಿನ್‌ನ ಉತ್ಪಾದನೆಯನ್ನು 5.8 ಕೋಟಿ ಡೋಸ್‌ಗಳಿಗೆ ಹೆಚ್ಚಿಸಲು ಯೋಜಿಸಲಾಗಿದೆ ಇದೆ ಎಂದು ಕೇಂದ್ರ ಸರ್ಕಾರ ರಾಜ್ಯಸಭೆಯಲ್ಲಿ ಮಂಗಳವಾರ ಮಾಹಿತಿ ನೀಡಿದೆ.

ಕೋವಿಡ್–19 ಲಸಿಕೆಗಳನ್ನು ಉತ್ಪಾದಿಸುವ ಕಂಪನಿಗಳು ಒದಗಿಸಿರುವ ಮಾಹಿತಿಯನ್ನು ಉಲ್ಲೇಖಿಸಿ ಕೇಂದ್ರ ಆರೋಗ್ಯ ಸಚಿವ ಮನಸುಖ್ ಮಾಂಡವೀಯ ಈ ವಿಷಯ ತಿಳಿಸಿದರು.

ಲಸಿಕೆಗಳನ್ನು ತಯಾರಿಸುವ ಕಂಪನಿಗಳ ಸದ್ಯದ ಉತ್ಪಾದನಾ ಸಾಮರ್ಥ್ಯ ಹಾಗೂ ಡಿಸೆಂಬರ್ ವೇಳೆಗೆ ಉತ್ಪಾದನಾ ಸಾಮರ್ಥ್ಯದಲ್ಲಿ ಎಷ್ಟು ಹೆಚ್ಚಳ ಮಾಡಲಾಗುವುದು ಕುರಿತ ಪ್ರಶ್ನೆಗೆ ಅವರು ಉತ್ತರಿಸಿದರು.

ಕೋವಿಡ್–19 ಲಸಿಕೆಯನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ಅಧೀನದ ಬಯೋಟೆಕ್ನಾಲಜಿ ಇಲಾಖೆಯು ‘ಮಿಷನ್ ಕೋವಿಡ್ ಸುರಕ್ಷಾ’ ಎಂಬ ಕಾರ್ಯಕ್ರಮಕ್ಕೆ ಚಾಲನೆ ನೀಡಿದೆ. ಸಾರ್ವಜನಿಕ ವಲಯದ ಉದ್ಯಮವಾದ ಬಯೋಟೆಕ್ನಾಲಜಿ ಇಂಡಸ್ಟ್ರಿ ರಿಸರ್ಚ್ ಅಸಿಸ್ಟನ್ಸ್ ಕೌನ್ಸಿಲ್ (ಬಿಐಆರ್‌ಎಸಿ) ಈ ಕಾರ್ಯಕ್ರಮವನ್ನು ಜಾರಿಗೊಳಿಸುವುದು ಎಂದು ಅವರು ಮಾಹಿತಿ ನೀಡಿದರು.

4 ಕಂಪನಿಗಳಿಂದ ಲಸಿಕೆ ಉತ್ಪಾದನೆ: ‘ದೇಶದ ಇನ್ನೂ ನಾಲ್ಕು ಔಷಧ ಕಂಪನಿಗಳು ಅಕ್ಟೋಬರ್–ನವೆಂಬರ್ ವೇಳೆಗೆ ಕೋವಿಡ್ ಲಸಿಕೆಗಳ ಉತ್ಪಾದನೆಯನ್ನು ಆರಂಭಿಸುವ ನಿರೀಕ್ಷೆ ಇದೆ’ ಎಂದು ಸಚಿವ ಮಾಂಡವೀಯ ತಿಳಿಸಿದರು.

ರಾಜ್ಯಸಭೆಯಲ್ಲಿ ಪ್ರಶ್ನೋತ್ತರ ವೇಳೆ ಈ ವಿಷಯ ತಿಳಿಸಿದ ಅವರು, ‘ಲಸಿಕೆ ಉತ್ಪಾದನೆ ಹೆಚ್ಚಾಗುವುದರಿಂದ ಲಸಿಕೆ ಕಾರ್ಯಕ್ರಮಕ್ಕೆ ಮತ್ತಷ್ಟು ವೇಗ ಸಿಗುವುದು’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ನವೆಂಬರ್ ವೇಳೆಗೆ ಬಯೋಲಾಜಿಕಲ್ಸ್ ಇ ಹಾಗೂ ನೋವಾರ್ಟಿಸ್ ಕಂಪನಿಗಳ ಲಸಿಕೆಗಳು ಸಹ ಮಾರುಕಟ್ಟೆಗೆ ಬರಲಿವೆ. ತುರ್ತು ಸಂದರ್ಭದಲ್ಲಿ ಬಳಕೆಗಾಗಿ ಝೈಡಸ್–ಕ್ಯಾಡಿಲಾ ಕಂಪನಿಯ ಔಷಧಕ್ಕೆ ತಜ್ಞರ ಸಮಿತಿ ಅನುಮೋದನೆ ಸಿಗುವ ಸಾಧ್ಯತೆ’ ಎಂದೂ ಅವರು ತಿಳಿಸಿದರು.

ಅಂತರ ಮರೆತರು

ಕೋವಿಡ್ ಸ್ಥಿತಿ ನಡುವೆಯೂ ಮಂಗಳವಾರ ಆಗ್ರಾದ ಡಾ. ಭೀಮರಾವ್ ಅಂಬೇಡ್ಕರ್ ವಿಶ್ವವಿದ್ಯಾಲಯದ ಪರೀಕ್ಷೆ ಎದುರಿಸಿದ ಬಳಿಕ ವಿದ್ಯಾರ್ಥಿಗಳು ಗುಂಪುಗೂಡಿದ್ದರು. –ಪಿಟಿಐ ಚಿತ್ರ

ಲಸಿಕೆ ಮಿಶ್ರಣಕ್ಕೆ ಶಿಫಾರಸು ಮಾಡಿಲ್ಲ: ಕೇಂದ್ರ

ನವದೆಹಲಿ (ಪಿಟಿಐ): ಕೋವಿಡ್–19 ತಡೆಗಟ್ಟುವ ನಿಟ್ಟಿನಲ್ಲಿ ನೀಡುತ್ತಿರುವ ವಿವಿಧ ಲಸಿಕೆಗಳನ್ನು ಮಿಶ್ರಣ ಮಾಡುವ ಬಗ್ಗೆ ಈವರೆಗೂ ಯಾವುದೇ ಶಿಫಾರಸು ಮಾಡಿಲ್ಲ ಎಂದು ರಾಜ್ಯಸಭೆಗೆ ಶುಕ್ರವಾರ ತಿಳಿಸಲಾಯಿತು.

‘ಕೋವಿಡ್ -19 ಲಸಿಕೆಗಳನ್ನು ಇತ್ತೀಚೆಗೆ ಅಭಿವೃದ್ಧಿಪಡಿಸಲಾಗಿದೆ. ಆದ್ದರಿಂದ, ವಿವಿಧ ಲಸಿಕೆಗಳ ಮಿಶ್ರಣ ಮತ್ತು ಹೊಂದಾಣಿಕೆಯ ಅಧ್ಯಯನಗಳ ಬಗ್ಗೆ ವೈಜ್ಞಾನಿಕ ಪುರಾವೆಗಳು ಇನ್ನೂ ವಿಕಸನಗೊಳ್ಳುತ್ತಿವೆ’ ಎಂದು ಆರೋಗ್ಯ ಖಾತೆ ರಾಜ್ಯ ಸಚಿವೆ ಭಾರತಿ ಪ್ರವೀಣ್ ಪವಾರ್ ಅವರು ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

‘ಕೋವಿಡ್ ಲಸಿಕೆಗಳ ಮೊದಲ ಮತ್ತು ಎರಡನೆಯ ಡೋಸ್‌ಗಳನ್ನು ಮಿಶ್ರಣ ಮಾಡಿ ಲಸಿಕೆ ನೀಡಲು ರಾಷ್ಟ್ರೀಯ ತಾಂತ್ರಿಕ ಸಲಹಾ ಗುಂಪು ಹಾಗೂ ರಾಷ್ಟ್ರೀಯ ತಜ್ಞರ ಗುಂಪು ಯಾವುದೇ ಶಿಫಾರಸು ಮಾಡಿಲ್ಲ. ಈ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆಯಿಂದ ಸಹ ಯಾವುದೇ ನಿರ್ದಿಷ್ಟ ಶಿಫಾರಸು ಇಲ್ಲ’ ಎಂದು ಸಚಿವರು ಹೇಳಿದ್ದಾರೆ.

ಪಶ್ಚಿಮ ಬಂಗಾಳ: ಮಳೆ, 14 ಜನರ ಸಾವು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಆರು ಜಿಲ್ಲೆಗಳಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದ ಸಂಭವಿಸಿದ ಗೋಡೆ ಕುಸಿತ, ವಿದ್ಯುತ್ ಸ್ಪರ್ಶದಿಂದ ಕನಿಷ್ಠ 14 ಜನರು ಮೃತಪಟ್ಟಿದ್ದಾರೆ.

ದಾಮೋದರ್ ವ್ಯಾಲಿ ಅಣೆಕಟ್ಟೆಯಿಂದ ಹೊರಬಿಡಲಾದ ಹೆಚ್ಚುವರಿ ನೀರಿನಿಂದ ಈ ಭಾಗದ ಹಲವು ರಸ್ತೆಗಳು, ಮನೆಗಳು ಜಲಾವೃತಗೊಂಡಿವೆ. ಹೀಗಾಗಿ ಈ ಜಿಲ್ಲೆಗಳಲ್ಲಿ ಸುಮಾರು 2.5 ಲಕ್ಷ ಜನರನ್ನು ಬೇರೆಡೆಗೆ ಸ್ಥಳಾಂತರಿಸಲಾಗಿದೆ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಕಳೆದ ವಾರ ಆರಂಭವಾದ ಪರಿಹಾರ ಕಾರ್ಯಾಚರಣೆಗಳು ಮುಂದುವರಿದಿವೆ ಎಂದು ಅವರು ಹೇಳಿದರು.

ಪೂರ್ವ ವರ್ಧಮಾನ್, ಪಶ್ಚಿಮ ವರ್ಧಮಾನ್, ಪಶ್ಚಿಮ ಮೇದಿನಿಪುರ, ಹೂಗ್ಲಿ, ಹೌರಾ ಮತ್ತು ದಕ್ಷಿಣ 24 ಪರಗಣ ಜಿಲ್ಲೆಗಳ ಹಲವಾರು ಪ್ರದೇಶಗಳಲ್ಲಿ ಸೊಂಟದ ಮಟ್ಟದವರೆಗೆ ನೀರು ಆವರಿಸಿದೆ. ಇಲ್ಲಿ ಜನರು ತಮ್ಮ ಮೂಲಭೂತ ಅಗತ್ಯಗಳನ್ನು ಪಡೆಯಲು ಪರದಾಡುವಂತಾಗಿದೆ ಎಂದು ಅವರು ಮಾಹಿತಿ ನೀಡಿದರು.

‘ಪ್ರವಾಹದಿಂದ ಜೀವ ಕಳೆದುಕೊಂಡ 14 ಜನರ ವಿವರಗಳನ್ನು ಸಂಗ್ರಹಿಸುತ್ತಿದ್ದೇವೆ.

ಈ ಕುರಿತು ಜಿಲ್ಲಾಡಳಿತಗಳಿಂದ ಬರಲಿರುವ ವರದಿಯ ನಿರೀಕ್ಷೆಯಲ್ಲಿದ್ದೇವೆ’ ಎಂದು ಅವರು ತಿಳಿಸಿದರು.

ಹೂಗ್ಲಿ ಜಿಲ್ಲೆಯಲ್ಲಿನ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸೋಮವಾರ ಸೇನೆ ಮತ್ತು ವಾಯುಪಡೆ ರಕ್ಷಣಾ ಕಾರ್ಯಾಚರಣೆ ನಡೆಸಿವೆ.

ಮಧ್ಯಪ್ರದೇಶ: 1,171 ಹಳ್ಳಿಗಳಲ್ಲಿ ಪ್ರವಾಹ

ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಶಿವಪುರಿ ಜಿಲ್ಲೆಯಲ್ಲಿ ಮಂಗಳವಾರ ಭಾರಿ ಮಳೆಯಿಂದ ಪ್ರವಾಹ ಉಂಟಾಗಿದ್ದು, ಪ್ರವಾಹದ ನಡುವೆ ಸುಮಾರು 24 ಗಂಟೆಗಳ ಕಾಲ ಮರದ ಮೇಲೆ ಸಿಲುಕಿದ್ದ ಮೂವರನ್ನು ಮತ್ತು ಇತರ ಐವರನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗ್ವಾಲಿಯರ್-ಚಂಬಲ್ ಪ್ರದೇಶದ 1,171 ಹಳ್ಳಿಗಳು ಮುಂಗಾರು ಮಳೆಯ ಆರ್ಭಟಕ್ಕೆ ಪ್ರವಾಹಪೀಡಿತವಾಗಿವೆ.

ಶಿವಪುರಿ, ಶಿಯೋಪುರ್, ಗ್ವಾಲಿಯರ್ ಮತ್ತು ಡಾಟಿಯಾ ಜಿಲ್ಲೆಗಳಲ್ಲಿ ರಕ್ಷಣಾ ಕಾರ್ಯಾಚರಣೆಗಾಗಿ ಸೇನೆ ಕರೆಸಿಕೊಳ್ಳಲಾಗಿದೆ ಎಂದು ರಾಜ್ಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಗೃಹ) ರಾಜೇಶ್ ರಾಜೋರಾ ತಿಳಿಸಿದ್ದಾರೆ.

ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಪ್ರಧಾನಿ ನರೇಂದ್ರ ಮೋದಿಯವರಿಗೆ ಪರಿಸ್ಥಿತಿಯ ಬಗ್ಗೆ ಮಾಹಿತಿ ನೀಡಿದ್ದು, ರಾಜ್ಯಕ್ಕೆ ಎಲ್ಲ ರೀತಿಯ ಸಹಾಯ ನೀಡುವ ಭರವಸೆಯನ್ನು ಪ್ರಧಾನಿ ನೀಡಿದ್ದಾರೆ.

ರಾಜ್ಯದ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಶೀಘ್ರದಲ್ಲೇ ವೈಮಾನಿಕ ಸಮೀಕ್ಷೆ ನಡೆಸುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ.

ಪಶ್ಚಿಮ ಬಂಗಾಳದ ಪಶ್ಚಿಮ ಮೇದಿನಿಪುರ ಮತ್ತಿತರ ಭಾಗಗಳಲ್ಲಿ ಪ್ರವಾಹ ಎದುರಾಗಿದ್ದು, ಜನರನ್ನು ಸುರಕ್ಷಿತ ಸ್ಥಳಗಳಿಗೆ ಕಳುಹಿಸಲಾಗುತ್ತಿದೆ

ಅತ್ಯಾಚಾರ ಕೃತ್ಯ ಸಿ.ಎಂ ಕೇಜ್ರಿವಾಲ್ ಖಂಡನೆ

ನವದೆಹಲಿ (ಪಿಟಿಐ): ರಾಜಧಾನಿಯಲ್ಲಿ ಒಂಬತ್ತು ವರ್ಷದ ಬಾಲಕಿ ಮೇಲಿನ ಅತ್ಯಾಚಾರ, ಕೊಲೆ ಪ್ರಕರಣವನ್ನು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಖಂಡಿಸಿದ್ದು, ತಪ್ಪಿತಸ್ಥರಿಗೆ ಕಠಿಣಸಜೆ ವಿಧಿಸಬೇಕು ಎಂದು ಆಗ್ರಹಿಸಿದ್ದಾರೆ.

ರಾಜಧಾನಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯನ್ನು ಸುಧಾರಿಸುವ ಅಗತ್ಯವಾಗಿದೆ. ಮೃತಳ ಕುಟುಂಬ ಸದಸ್ಯರನ್ನು ಬುಧವಾರ ಭೇಟಿ ಮಾಡಲಿದ್ದು, ಕಾನೂನು ಹೋರಾಟಕ್ಕೆ ಅಗತ್ಯವಿರುವ ಎಲ್ಲ ನೆರವು ನೀಡಲಾಗುವುದು ಎಂದರು.

ತೇಜಸ್ವಿ–ಚಿರಾಗ್ ಮೈತ್ರಿ: ಲಾಲು ಬೆಂಬಲ

ಪಟ್ನಾ: ಬಿಹಾರದಲ್ಲಿ ಎಲ್‌ಜೆಪಿ ನಾಯಕ ಚಿರಾಗ್ ಪಾಸ್ವಾನ್ ಮತ್ತು ತಮ್ಮ ಮಗ ತೇಜಸ್ವಿ ಯಾದವ್ ಮೈತ್ರಿಯನ್ನು ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಬೆಂಬಲಿಸಿದ್ದಾರೆ. ತೇಜಸ್ವಿ ಮತ್ತು ಚಿರಾಗ್ ಜೊತೆಯಾಗಿ ನಡೆಯಬೇಕು ಎಂದು ಹಾರೈಸಿದ್ದಾರೆ.

ಪಶುಪತಿ ಕುಮಾರ್ ಪರಾಸ್ ನೇತೃತ್ವದ ಎಲ್‌ಜೆಪಿಯ ಐವರು ಸಂಸದರ ಬಂಡಾಯದ ಹಿಂದೆಯೇ ಚಿರಾಗ್ ಅವರನ್ನು ಎಲ್‌ಜೆಪಿ ಮುಖಂಡ ಎಂದು ಕರೆದಿರುವ ಅವರು, 'ಅವರ ಪಕ್ಷದಲ್ಲಿ ಏನೇ ನಡೆಯುತ್ತಿದ್ದರು ಚಿರಾಗ್ ಪಾಸ್ವಾನ್ ಎಲ್‌ಜೆಪಿ ನಾಯಕ' ಎಂದು ಹೇಳಿದ್ದಾರೆ.

'ಹೌದು, ಅವರಿಬ್ಬರು ಜೊತೆಯಾಗಿ ಇರಬೇಕು' ಎಂದು ತೇಜಸ್ವಿ ಮತ್ತು ಚಿರಾಗ್ ಅವರನ್ನು ಉದ್ದೇಶಿಸಿ ಲಾಲು ಪ್ರಸಾದ್ ಮಾಧ್ಯಮಕ್ಕೆ ಪ್ರತಿಕ್ರಿಯಿಸಿದ್ದಾರೆ.

ಮುಖ್ಯಮಂತ್ರಿ ನಿತೀಶ್ ಕುಮಾರ್ ವಿರುದ್ಧ ಹರಿಹಾಯ್ದಿರುವ ಅವರು, 'ಕಳೆದ ವರ್ಷ ನಾವು ಸರ್ಕಾರ ರಚಿಸುವ ಹಂತದಲ್ಲಿದ್ದೆವು. ಮಗ ತೇಜಸ್ವಿ ಯಾದವ್ ಮೈತ್ರಿ ಸರ್ಕಾರದ ಏಕಾಂಗಿಯಾಗಿ ಹೋರಾಟ ನಡೆಸಿದ್ದ. ಮೋಸ ಮಾಡಿ 10-15 ಮತಗಳಿಂದ ಸೋಲುವಂತೆ ಮಾಡಿದರು' ಎಂದರು.

ಅನಾರೋಗ್ಯದಿಂದ ಚೇತರಿಸಿಕೊಂಡ ಶರದ್ ಯಾದವ್ ಅವರನ್ನು ಭೇಟಿ ಮಾಡಿದ ಲಾಲು ಪ್ರಸಾದ್ ಒಂದು ಗಂಟೆ ಕಾಲ ಚರ್ಚಿಸಿದರು. ನಂತರ ಅವರು, 'ಸಂಸತ್ತಿನಲ್ಲಿ ಶರದ್ ಯಾದವ್, ಮುಲಾಯಂ ಸಿಂಗ್ ಯಾದವ್ ಮತ್ತು ನನ್ನಂತಹ ನಾಯಕರು ಇಲ್ಲ. ಜನರಿಗೆ ಸಂಬಂಧಿಸಿದ ಚರ್ಚೆಗಳನ್ನು ಕಡೆಗಣಿಸಲಾಗುತ್ತಿದೆ' ಎಂದರು.

ಪೆಗಾಸಸ್ ಗೂಢಚರ್ಯೆಯಲ್ಲಿ ಭಾಗಿಯಾದವರ ಹೆಸರು ಬಹಿರಂಗ ಪಡಿಸಬೇಕು ಎಂದು ಆಗ್ರಹಿಸಿದರು.

ಕೋವಿಡ್ ನಿರ್ವಹಣೆ: ಟೀಕೆ ಎದುರಿಸಲು ಬಿಜೆಪಿ ಸಂಸದರಿಗೆ ‘ಮಾಹಿತಿ ಅಸ್ತ್ರ’

ನವದೆಹಲಿ (ಪಿಟಿಐ): ಕೋವಿಡ್ ನಿರ್ವಹಣೆ ಕುರಿತ ಟೀಕೆಗಳನ್ನು ಸಮರ್ಪಕವಾಗಿ ಎದುರಿಸಲು ಶಕ್ತವಾಗುವಂತೆ ಕೇಂದ್ರ ಸರ್ಕಾರದ ನೇತೃತ್ವ ವಹಿಸಿರುವ ಬಿಜೆಪಿ, ತನ್ನ ಸಂಸದರಿಗೆ ಈ ಕುರಿತ ಸಮಗ್ರ ಮಾಹಿತಿ ಒದಗಿಸಿದೆ.

ಲಸಿಕೆ ಅಭಿಯಾನವೂ ಒಳಗೊಂಡಂತೆ ಕೋವಿಡ್ ಪಿಡುಗು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರಗಳಿರುವ ಕೈಪಿಡಿಯನ್ನು ಆರೋಗ್ಯ ಸಚಿವಾಲಯ ಸಿದ್ಧಪಡಿಸಿದೆ. ಅದರ ಪ್ರಕಾರ, ಕೋವಿಡ್ ಪಿಡುಗು ಹತ್ತಿಕ್ಕಲು ‘ಸರ್ಕಾರ ಮತ್ತು ಸಮಾಜ ಒಟ್ಟುಗೂಡಿ’ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಉತ್ತರ ಪ್ರದೇಶ, ಉತ್ತರಾಖಂಡ ಮತ್ತು ಗೋವಾ ರಾಜ್ಯಗಳು ವಿಧಾನಸಭೆ ಚುನಾವಣೆಗೆ ಸಜ್ಜಾಗುತ್ತಿರುವಂತೆಯೇ, ಕೋವಿಡ್ ನಿರ್ವಹಣೆಯ ವೈಫಲ್ಯವನ್ನೇ ಅಸ್ತ್ರವಾಗಿಸಿ ವಿರೋಧಪಕ್ಷಗಳು ಸರ್ಕಾರದ ಮೇಲೆ ದಾಳಿಗೆ ಸಜ್ಜಾಗಿವೆ. ಸೋಂಕು ತಡೆಗೆ ನಿರೀಕ್ಷಿತ ಪ್ರಮಾಣದಲ್ಲಿ ಲಸಿಕೆಯನ್ನೂ ನೀಡಲಾಗಿಲ್ಲ ಎಂಬುದು ಪ್ರಮುಖ ಆರೋಪವಾಗಿದೆ.

ಆರೋಗ್ಯ ಸಚಿವಾಲಯ ಈಗ ಸಿದ್ಧಪಡಿಸಿ ಬಿಜೆಪಿ ಸಂಸದರಿಗೆ ಒದಗಿಸಿರುವ ಕೈಪಿಡಿಯ ಪ್ರಕಾರ, ಇತರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಗರಿಷ್ಠ ಪ್ರಮಾಣದಲ್ಲಿ ಲಸಿಕೆ ನೀಡಿದ್ದು-,ವೆಬ್‌ಸೈಟ್‌ನಲ್ಲಿ ವಿವರಗಳಿವೆ. ಚೀನಾ ಹೇಳಿಕೊಂಡಿರುವಂತೆ 160 ಕೋಟಿ ಡೋಸ್ ಲಸಿಕೆಯನ್ನಷ್ಟೇ ನೀಡಿದೆ ಎಂದೂ ಉಲ್ಲೇಖಿಸಿದೆ.

ಜುಲೈ ಅಂತ್ಯದವರೆಗೂ ಭಾರತ 45 ಕೋಟಿಗೂ ಹೆಚ್ಚು ಡೋಸ್ ಲಸಿಕೆ ನೀಡಿದೆ. ಅಮೆರಿಕದಲ್ಲಿ ಈ ಸಂಖ್ಯೆ 34.3 ಕೋಟಿ ಆಗಿದ್ದರೆ, ಬ್ರೆಜಿಲ್‌ನಲ್ಲಿ 13.7 ಕೋಟಿ, ಬ್ರಿಟನ್‌ನಲ್ಲಿ 8.4 ಕೋಟಿ ಆಗಿದೆ. 34 ಕೋಟಿ ಡೋಸ್ ಲಸಿಕೆ ನೀಡುವ ಗುರಿಯನ್ನು 166 ದಿನಗಳಲ್ಲಿ ಸಾಧಿಸಲಾಗಿದೆ. ಅಮೆರಿಕ ಇದನ್ನು 221 ದಿನಗಳಲ್ಲಿ ಸಾಧಿಸಿದೆ ಎಂದು ತಿಳಿಸಿದೆ.

ಕೈಪಿಡಿಯ ಪ್ರಕಾರ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರಾಜ್ಯಗಳ ಜೊತೆಗೆ 21 ಸಭೆಯನ್ನು ಮಾಡಿದ್ದಾರೆ. 10 ಬಾರಿ ದೇಶವನ್ನು ಉದ್ದೇಶಿಸಿ ಮಾತನಾಡಿದ್ದಾರೆ. 40 ಸಭೆಗಳ ಅಧ್ಯಕ್ಷತೆ ವಹಿಸಿದ್ದಾರೆ. ಕೋವಿಡ್ ಪ್ರಕರಣಗಳ ಸಂಖ್ಯೆ ಪ್ರತಿ 10 ಲಕ್ಷಕ್ಕೆ ಭಾರತದಲ್ಲಿ 22,726 ಆಗಿದ್ದು, ಸಾವಿನ ಸಂಖ್ಯೆ 305 ಆಗಿದೆ. ಇದು, ಜಗತ್ತಿನಲ್ಲೇ ಕಡಿಮೆ ಪ್ರಮಾಣದ್ದು ಆಗಿದೆ ಎಂದು ಆರೋಗ್ಯ ಸಚಿವಾಲಯ ಪರಿಸ್ಥಿತಿಯನ್ನು ಸಮರ್ಥಿಸಿಕೊಂಡಿದೆ.

ಪೆಂಟಗನ್ ಬಳಿ ಗುಂಡಿನ ದಾಳಿ: ತನಿಖೆ ಚುರುಕು

ವಾಷಿಂಗ್ಟನ್ (ಎ.ಪಿ): ಅಮೆರಿಕದ ಸೇನೆ ಮುಖ್ಯಕಚೇರಿ ಪೆಂಟಗನ್‌ನ ಸಮೀಪ ಮಂಗಳವಾರ ಗುಂಡಿನ ದಾಳಿ ನಡೆದಿದೆ. ಮೆಟ್ರೊ ಬಸ್ ಸ್ಟೇಷನ್ ಬಳಿ ಕೃತ್ಯ ನಡೆದಿದ್ದು, ಪೆಂಟಗನ್ ಕಚೇರಿಯನ್ನು ಲಾಕ್‌ಡೌನ್ ಮಾಡಲಾಗಿದೆ.

ಕೆಲವರಿಗೆ ಪೆಟ್ಟಾಗಿದೆ ಎಂದು ಅರ್ಲಿಂಗ್ಟನ್ ಕಂಟ್ರಿ ಅಗ್ನಿಶಾಮಕ ಸೇವೆಯ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಅದು ಗುಂಡಿನ ದಾಳಿಯಿಂದ ಆದುದೇ ಅಥವಾ ಗಾಯದ ತೀವ್ರತೆ ಎಷ್ಟು ಎಂಬುದನ್ನು ಅವರು ಖಚಿತಪಡಿಸಿಲ್ಲ.

‘ಅನೇಕ ಸಲ ಗುಂಡಿನ ಶಬ್ದ ಕೇಳಿಬಂದಿತು. ಕೆಲಹೊತ್ತಿನ ವಿರಾಮದ ಬಳಿಕ ಮತ್ತೆ ಗುಂಡಿನ ಶಬ್ದ ಕೇಳಿಬಂದಿತು‘ ಎಂದು ಎ.ಪಿ ಸುದ್ದಿ ಸಂಸ್ಥೆಯ ಪ್ರತಿನಿಧಿಗಳು ತಿಳಿಸಿದ್ದಾರೆ. ಪೊಲೀಸ್ ತನಿಖೆ ನಡೆದಿದೆ.

ಶಾ ಭೇಟಿ ಮಾಡಿದ ಶರದ್ ಪವಾರ್

ನವದೆಹಲಿ: ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಮಂಗಳವಾರ ದೆಹಲಿಯಲ್ಲಿ ಕೇಂದ್ರ ಗೃಹಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ಸಕ್ಕರೆಯ ಬೆಲೆ ಹೆಚ್ಚಳ ಮತ್ತು ಪೆಟ್ರೋಲಿಯಂ ಉತ್ಪನ್ನಗಳಲ್ಲಿ ಎಥೆನಾಲ್ ಅನ್ನು ಬೆರೆಸುವಿಕೆ ಕುರಿತು ಚರ್ಚೆ ನಡೆಸಿದರು.

ಭೇಟಿಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಪವಾರ್ ಅವರು, ‘ಪ್ರಸ್ತುತ ಸಕ್ಕರೆಯ ಮಾರುಕಟ್ಟೆಯ ಬೆಲೆಯು ಅದರ ಉತ್ಪಾದನಾ ವೆಚ್ಚಗಿಂತಲೂ ಕಡಿಮೆ ಇದೆ. ಈ ಬಗ್ಗೆ ಸರ್ಕಾರ ಗಮನ ಹರಿಸುವಂತೆ ಶಾ ಅವರನ್ನು ಕೋರಲಾಯಿತು. ಪೆಟ್ರೋಲಿಯಂ ಉತ್ಪನ್ನಗಳಲ್ಲಿ ಎಥೆನಾಲ್ ಮಿಶ್ರಣದ ಪ್ರಮಾಣವನ್ನು ಹೆಚ್ಚಿಸುವ ಕುರಿತೂ ಚರ್ಚಿಸಲಾಯಿತು’ ಎಂದು ತಿಳಿಸಿದರು.

‘ಸಕ್ಕರೆಗೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಶಾ ಅವರು ಭರವಸೆ ನೀಡಿದ್ದಾರೆ’ ಎಂದೂ ಪವಾರ್ ಮಾಹಿತಿ ನೀಡಿದರು.

ಭೇಟಿಯ ವೇಳೆ ಪವಾರ್ ಅವರೊಂದಿಗೆ ರಾಷ್ಟ್ರೀಯ–ರಾಜ್ಯ ಸಹಕಾರ ಸಕ್ಕರೆ ಕಾರ್ಖಾನೆಗಳ ಒಕ್ಕೂಟದ ಅಧ್ಯಕ್ಷ ಜಯಪ್ರಕಾಶ್ ದಂಡೇಗಾಂವ್ಕರ್ ಮತ್ತು ಎನ್‌ಸಿಪಿಯ ರಾಯಗಡದ ಸಂಸದ ಉಪಸ್ಥಿತರಿದ್ದರು.

ನವದೆಹಲಿಯಲ್ಲಿ ಮಂಗಳವಾರ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದರು. –ಪಿಟಿಐ ಚಿತ್ರ

ಕಳ್ಳಬಟ್ಟಿ: ತಪ್ಪಿತಸ್ಥರಿಗೆ ಮರಣದಂಡನೆ ಕಾಯ್ದೆ ತಿದ್ದುಪಡಿಗೆ ಮಧ್ಯಪ್ರದೇಶ ನಿರ್ಧಾರ

ಭೋಪಾಲ್ (ಪಿಟಿಐ): ಕಳ್ಳಬಟ್ಟಿ ದಂಧೆ ಪ್ರಕರಣದಲ್ಲಿ ಆರೋಪ ಸಾಬೀತಾದಲ್ಲಿ ತಪ್ಪಿತಸ್ಥರಿಗೆ ಮರಣದಂಡನೆ ವಿಧಿಸಲು ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾಪಕ್ಕೆ ಮಧ್ಯಪ್ರದೇಶದ ಸಚಿವ ಸಂಪುಟ ಅನುಮೋದನೆ ನೀಡಿದೆ.

ಕಳ್ಳಬಟ್ಟಿಯಿಂದ ಸಾವು ಸಂಭವಿಸಿದಲ್ಲಿ ಜೀವಾವಧಿ ಸಜೆ ಮತ್ತು ತೀವ್ರ ಸ್ವರೂಪದ ದಂಡ ವಿಧಿಸಲು ಆಗುವಂತೆ ರಾಜ್ಯ ಅಬಕಾರಿ ಕಾಯ್ದೆಗೆ ತಿದ್ದುಪಡಿ ತರಲಾಗುತ್ತದೆ. ₹ 20 ಲಕ್ಷದವರೆಗೂ ದಂಡ ವಿಧಿಸುವ ಪ್ರಸ್ತಾವವಿದೆ.

ರಾಜ್ಯ ಶಾಸನಸಭೆ ಒಮ್ಮೆಮಸೂದೆಗೆ ಅನುಮೋದನೆ ನೀಡಿ ರಾಜ್ಯಪಾಲರ ಅಂಕಿತ ದೊರೆತಂತೆಯೇ ಜಾರಿಗೆ ಬರಲಿದೆ. ಇಂದೋರ್‌ನಲ್ಲಿ ಈಚೆಗೆ ಕಳ್ಳಬಟ್ಟಿ ಸೇವಿಸಿ ಏಳು ಮಂದಿ ಮೃತಪಟ್ಟಿದ್ದರು.

ಸಂಪುಟ ಸಭೆ ನಂತರ ವಿವರ ನೀಡಿದ ಗೃಹ ಸಚಿವ ನರೋತ್ತಮ್ ಮಿಶ್ರಾ, ಮದ್ಯದ ಅಕ್ರಮ ಮಾರಾಟ ಹಾಗೂ ಕಳ್ಳಬಟ್ಟಿ ದಂಧೆಯನ್ನು ಹತ್ತಿಕ್ಕುವುದು ತಿದ್ದುಪಡಿಯ ಉದ್ದೇಶವಾಗಿದೆ. ಕಳ್ಳಬಟ್ಟಿಯಿಂದ ದೈಹಿಕವಾಗಿ ತೊಂದರೆಯಾದಲ್ಲಿ ₹ 10 ಲಕ್ಷದಿಂದ ₹ 14 ಲಕ್ಷವರೆಗೆ ದಂಡ ವಿಧಿಸಲು, ಕನಿಷ್ಠ 5 ರಿಂದ 10 ವರ್ಷದವರೆಗೂ ಸಜೆ ವಿಧಿಸಲು ಅವಕಾಶವಿದೆ. ಸದ್ಯ, ಸಜೆ ಪ್ರಮಾಣ ಕನಿಷ್ಠ 1 ವರ್ಷದಿಂದ ಗರಿಷ್ಠ 6 ವರ್ಷವಾಗಿದೆ ಎಂದರು.

ಎನ್‌ಕೌಂಟರ್‌ನಲ್ಲಿ ಎಲ್‌ಇಟಿ ಉಗ್ರ ಸಾವು

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಬಂಡಿಪೋರಾ ಜಿಲ್ಲೆಯಲ್ಲಿ ಮಂಗಳವಾರ ನಡೆದ ಎನ್‌ಕೌಂಟರ್‌ನಲ್ಲಿ ಪಾಕಿಸ್ತಾನದ ಲಷ್ಕರ್‌-ಎ-ತೈಯಬಾ- (ಎಲ್‌ಇಟಿ) ಭಯೋತ್ಪಾದಕ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತಪಟ್ಟ ಭಯೋತ್ಪಾದಕನನ್ನು ಬಾಬರ್ ಅಲಿ ಎಂದು ಗುರುತಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ದೆಹಲಿ ಶಾಸಕರಿಗೆ ಇನ್ನು ₹ 90 ಸಾವಿರ ವೇತನ

ನವದೆಹಲಿ (ಪಿಟಿಐ): ದೆಹಲಿಯ ಶಾಸಕರ ಮಾಸಿಕ ವೇತನವನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಮಾಡಿದ್ದ ಶಿಫಾರಸನ್ನು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನೇತೃತ್ವದ ಸರ್ಕಾರ ಮಂಗಳವಾರ ಅನುಮೋದನೆ ನೀಡಿದೆ.

ಇನ್ನು ಮುಂದೆ ದೆಹಲಿಯ ಪ್ರತಿ ಶಾಸಕರು ವೇತನ ಮತ್ತು ಭತ್ಯೆ ಸೇರಿ ತಿಂಗಳಿಗೆ ₹90 ಸಾವಿರ ಪಡೆಯುತ್ತಾರೆ. ಇದಕ್ಕೂ ಮುನ್ನ ಶಾಸಕರು ಪ್ರತಿ ತಿಂಗಳು ₹53 ಸಾವಿರ ವೇತನ ಪಡೆಯುತ್ತಿದ್ದರು. ಇದರಲ್ಲಿ ₹12 ಸಾವಿರ ವೇತನವಾದರೆ, ಉಳಿದ ಹಣವನ್ನು ಇತರೆ ಭತ್ಯೆಗಳ ರೂಪದಲ್ಲಿ ನೀಡಲಾಗುತ್ತಿತ್ತು ಎಂದು ಸರ್ಕಾರ ಹೇಳಿಕೆಯಲ್ಲಿ ತಿಳಿಸಿದೆ.

ಪರಿಷ್ಕೃತ ವೇತನದಿಂದಾಗಿ ಪ್ರತಿ ಶಾಸಕರು ತಿಂಗಳಿಗೆ ₹30 ಸಾವಿರವನ್ನು ವೇತನವಾಗಿ ಹಾಗೂ ₹60 ಸಾವಿರ ಹಣವನ್ನು ವಿವಿಧ ಭತ್ಯೆಗಳ ರೂಪದಲ್ಲಿ ಪಡೆಯಲಿದ್ದಾರೆ ಎಂದು ಸರ್ಕಾರ ತಿಳಿಸಿದೆ.

‘ವೇತನದಲ್ಲಿ ಇಷ್ಟೆಲ್ಲ ಏರಿಕೆಯಾದರೂ, ಇಡೀ ದೇಶದಲ್ಲೇ ಅತಿ ಕಡಿಮೆ ವೇತನ ಪಡೆಯುವವರು ದೆಹಲಿ ಶಾಸಕರು‘ ಎಂದು ಸರ್ಕಾರ ಹೇಳಿಕೆಯಲ್ಲಿ ತಿಳಿಸಿದೆ.

ವುಹಾನ್: ಸಾಮೂಹಿಕ ಪರೀಕ್ಷೆ

ಬೀಜಿಂಗ್ (ಪಿಟಿಐ): 2019ರಲ್ಲಿ ಕೊರೊನಾ ವೈರಸ್ ಮೊದಲು ಪತ್ತೆಯಾದ ಚೀನಾದ ವುಹಾನ್ ನಗರದಲ್ಲಿ ಮಂಗಳವಾರ ಸಾಮೂಹಿಕ ಕೋವಿಡ್ ಪರೀಕ್ಷೆಗೆ ಆದೇಶಿಸಲಾಗಿದೆ. ನಗರದಲ್ಲಿ ಕೊರೊನಾ ಹರಡುವಿಕೆ ತಡೆಯುವ ಮುಂಜಾಗ್ರತಾ ಕ್ರಮವಾಗಿ ಅಧಿಕಾರಿಗಳು ಈ ಪ್ರಕ್ರಿಯೆಗೆ ಮುಂದಾಗಿದ್ದಾರೆ.

1.1 ಕೋಟಿ ಜನಸಂಖ್ಯೆ ಇರುವ ವುಹಾನ್, ಮಧ್ಯ ಚೀನಾದ ಪ್ರಾಂತೀಯ ರಾಜಧಾನಿ. ಇತ್ತೀಚಿನ ದಿನಗಳಲ್ಲಿ ಸಾಮೂಹಿಕ ಕೊರೊನಾ ಪರೀಕ್ಷೆಗೆ ಆದೇಶಿಸಲಾದ ಚೀನಾದ ಮೊದಲ ನಗರವಾಗಿದೆ. ಸೋಮವಾರ ಇಲ್ಲಿ ಮೂರು ಪ್ರಕರಣಗಳು ದೃಢಪಟ್ಟಿದ್ದವು.

ಶಾಲೆಗಳು ಬಂದ್: ವುಹಾನ್‌ನಲ್ಲಿ ಎಲ್ಲಾ ಶಾಲೆಗಳು ಮತ್ತು ಟ್ಯುಟೋರಿಯಲ್ ಸಂಸ್ಥೆಗಳನ್ನು ಬಂದ್ ಮಾಡಲು ಸೂಚಿಸಲಾಗಿದೆ.

‘ಜೂವಾಂಕೌನ ನೆರೆಯ ನಿವಾಸಿಯೊಬ್ಬರಿಗೆ ಈಚೆಗೆ ಕೋವಿಡ್ ದೃಢಪಟ್ಟಿದ್ದು, ಅವರಿಂದಾಗಿ ಆರು ಜನರು ಸೋಂಕಿಗೀಡಾಗಿದ್ದಾರೆ. ಈ ಸ್ಥಳವನ್ನು ಲಾಕ್‌ಡೌನ್ ಮಾಡಲು ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ. ವುಹಾನ್‌ನ ಜಿಂಕ್ಸ ಜಿಲ್ಲೆಯ ಕಟ್ಟಡ ನಿರ್ಮಾಣ ಸ್ಥಳವೊಂದರಲ್ಲಿ ಕೋವಿಡ್ ಪ್ರಕರಣವೊಂದು ವರದಿಯಾಗಿದ್ದು, ಸೋಂಕಿತ ಕೆಲಸ ಮಾಡುತ್ತಿದ್ದ ಸ್ಥಳದ ಬಳಿಯ ಏಳು ಪ್ರದೇಶಗಳನ್ನು ಬಂದ್ ಮಾಡಲಾಗಿದೆ’ ಎಂದು ಚೀನಾದ ಆರೋಗ್ಯ ಆಯೋಗವು ಮಾಹಿತಿ ನೀಡಿದೆ.

ಪ್ರಯಾಣಿಕರ ಒತ್ತಡ; ವಿಮಾನಯಾನ ಸಂಸ್ಥೆಗಳ ಪರದಾಟ

ಡಲ್ಲಾಸ್ (ಅಮೆರಿಕ) (ಎಪಿ): ಅಮೆರಿಕದಲ್ಲಿ ಕೋವಿಡ್ ಪಿಡುಗಿನ ನಡುವೆಯೂ ವಿಮಾನ ಪ್ರಯಾಣವು ಗರಿಷ್ಠ ಮಟ್ಟವನ್ನು ತಲುಪಿದೆ. ವಿಮಾನಯಾನ ಸಂಸ್ಥೆಗಳು ಬೇಸಿಗೆ ರಜಾದಿನಗಳ ಜನಸಂದಣಿಯನ್ನು ನಿಯಂತ್ರಿಸಲು ಹರಸಾಹಸ ಪಡುತ್ತಿವೆ.

‘ಅಮೆರಿಕದಲ್ಲಿ ಡೆಲ್ಟಾ ರೂಪಾಂತರ ತಳಿಯಿಂದ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದ್ದರೂ, ಬೇಸಿಗೆ ರಜಾದಿನಗಳಲ್ಲಿ ಬಹುತೇಕ ಜನರು ಪ್ರಯಾಣಿಸುತ್ತಿದ್ದಾರೆ. ಭಾನುವಾರದ ವೇಳೆಗೆ ಸುಮಾರು 22 ಲಕ್ಷ ಜನರು ವಿಮಾನದ ಮೂಲಕ ಪ್ರಯಾಣಿಸಿದ್ದಾರೆ’ ಎಂದು ಟ್ರಾನ್ಸ್‌ಪೋರ್ಟೇಶನ್ ಸೆಕ್ಯೂರಿಟಿ ಅಡ್ಮಿನಿಸ್ಟ್ರೇಷನ್ ತಿಳಿಸಿದೆ.

ಈಗಾಗಲೇ ಕೋವಿಡ್ ಸಾಂಕ್ರಾಮಿಕದಿಂದ ಸಂಕಷ್ಟಕ್ಕೆ ಸಿಲುಕಿರುವ ವಿಮಾನಯಾನ ಸಂಸ್ಥೆಗಳು, ಕೆಟ್ಟ ಹವಾಮಾನದಿಂದಾಗಿ ಹಲವು ವಿಮಾನಗಳನ್ನು ರದ್ದುಗೊಳಿಸಿವೆ. ಇದರಿಂದಾಗಿ ಜನಸಂದಣಿಯನ್ನು ನಿಯಂತ್ರಿಸಲು ಸಂಸ್ಥೆಗಳು ಪರದಾಡುತ್ತಿವೆ.

ಸೇನಾ ಹೆಲಿಕಾಪ್ಟರ್ ಪತನ: ಶೋಧ

ಕಥುವಾ, ಜಮ್ಮು ಮತ್ತು ಕಾಶ್ಮೀರ (ಪಿಟಿಐ): ಸೇನೆಯ ಹೆಲಿಕಾಪ್ಟರ್ ಮಂಗಳವಾರ ಬೆಳಿಗ್ಗೆ 10.30ರಲ್ಲಿ ಅಪಘಾತಕ್ಕೆ ಗುರಿಯಾಗಿದ್ದು, ಇಲ್ಲಿನ ರಂಜಿತ್ ಸಾಗರ್ ಅಣೆಕಟ್ಟೆಯ ಸರೋವರಕ್ಕೆ ಬಿದ್ದಿದೆ. ಭಾಗಶಃ ಅವಶೇಷಗಳು ಪತ್ತೆಯಾಗಿದ್ದು, ಅದರಲ್ಲಿದ್ದವರ ಶೋಧ ಕಾರ್ಯ ಸಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಂಜಾಬ್‌ನ ಪಠಾಣ್‌ಕೋಟ್‌ನಿಂದ 30 ಕಿ.ಮೀ ದೂರದಲ್ಲಿ ಈ ಅಣೆಕಟ್ಟು ಇದ್ದು, ಸುಮಾರು 200 ಅಡಿ ಆಳವಿದೆ. ಕಥುವಾದ ಪೊಲೀಸ್ ವರಿಷ್ಠಾಧಿಕಾರಿ ಆರ್.ಸಿ.ಕೊತ್ವಾಲ್ ಅವರು, ಪತ್ತೆ ಕಾರ್ಯಾಚರಣೆಗೆ ಬೋಟ್‌ಗಳನ್ನು ಬಳಸಲಾಗಿದೆ. ಹೆಲಿಕಾಪ್ಟರ್‌ನ ಕೆಲ ಅವಶೇಷಗಳು ಪತ್ತೆಯಾಗಿವೆ ಎಂದು ತಿಳಿಸಿದರು.

ಆಹ್ವಾನ ಬಂದರೆ ಮೈತ್ರಿಕೂಟಕ್ಕೆ ಸೇರ್ಪಡೆ: ಕಮಲ್

ಕೊಯಮತ್ತೂರು (ಪಿಟಿಐ): ಆಹ್ವಾನ ಬಂದರೆ ಮಕ್ಕಳ್ ನೀಧಿ ಮಯ್ಯಂ (ಎಂಎನ್‌ಎಂ) ಪಕ್ಷ ಕೇಂದ್ರದಲ್ಲಿ ಬಿಜೆಪಿ ವಿರುದ್ಧದ ವಿರೋಧಪಕ್ಷಗಳ ಮೈತ್ರಿಕೂಟ ಸೇರಲಿದೆ ಎಂದು ಎಂಎನ್‌ಎಂ ಅಧ್ಯಕ್ಷ ಕಮಲ್‌ಹಾಸನ್ ತಿಳಿಸಿದ್ದಾರೆ.

ಈಗಿನ ಪರಿಸ್ಥಿತಿ ಮತ್ತು ಆಹ್ವಾನ ಆಧರಿಸಿ ವಿರೋಧಪಕ್ಷ ಸೇರುವುದನ್ನು ಪಕ್ಷ ಪರಿಗಣಿಸಬಹುದು ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು. ಬಿಜೆಪಿ ವಿರುದ್ಧ ಮೈತ್ರಿಕೂಟ ಸೇರುವ ಕುರಿತ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

ಮೇಕೆದಾಟು ಕುರಿತ ಪ್ರಶ್ನೆಗೆ, ನಾನು ಚಲನಚಿತ್ರದಲ್ಲಿ ದ್ವಿಪಾತ್ರಗಳನ್ನು ನಿಭಾಯಿಸಿದ್ದೇನೆ. ರಾಜಕಾರಣದಲ್ಲಿ ದ್ವಿಪಾತ್ರ ನಿಭಾಯಿಸುತ್ತಿರುವವರನ್ನು ನಾನು ಗುರುತಿಸಬಲ್ಲೆ. ಹೆಸರು ಬೇರೆಯಾಗಿರಬಹುದು, ಆದರೆ, ಎಲ್ಲರೂ ಕೇಂದ್ರ ಸರ್ಕಾರದ ಕೈಗೊಂಬೆಯೇ ಆಗಿದ್ದಾರೆ ಎಂದು ಕಮಲ್ ಹಾಸನ್ ಅವರು ಪ್ರತಿಕ್ರಿಯಿಸಿದರು.

ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಳಿ — ಸಮುದಾಯ ನಿರ್ಮಾಣದತ್ತ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009. ದೂರವಾಣಿ – 080 – 22273511–16

ಸಂಖ್ಯೆ: ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ–5/2021–22 — ದಿನಾಂಕ: 03–08–2021

ಸಾರ್ವಜನಿಕ ಪ್ರಕಟಣೆ

ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕಾಕರಾಮನಹಳ್ಳಿ, ಬೋರೇಹಳ್ಳಿ, ಮುದ್ದಾಪುರ–ಕರೇನಹಳ್ಳಿ ಗ್ರಾಮಗಳಲ್ಲಿ ಬಾಕಿ ಉಳಿದಿರುವ ನಿವೇಶನಗಳ ಹಂಚಿಕೆಗೆ ಲಾಟರಿ ವೇಳಾಪಟ್ಟಿ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕಾಕರಾಮನಹಳ್ಳಿ ಗ್ರಾಮದ ಸರ್ವೆ ನಂ.1 ಮತ್ತು ಇತರೆ, ಬೋರೇಹಳ್ಳಿ ಗ್ರಾಮದ ಸರ್ವೆ ನಂ.1 ಮತ್ತು ಇತರೆ, ಮುದ್ದಾಪುರ–ಕರೇನಹಳ್ಳಿ ಗ್ರಾಮದ ಸರ್ವೆ ನಂ.76 ಮತ್ತು ಇತರೆಯಲ್ಲಿನ ಜಮೀನಿನಲ್ಲಿ ಅಭಿವೃದ್ಧಿಪಡಿಸಿದ ನೇತಾಜಿ ಸುಭಾಷ್‌ಚಂದ್ರ ಬೋಸ್ ಬಡಾವಣೆಯಲ್ಲಿ ವಿವಿಧ ವರ್ಗದ ಮನೆ/ನಿವೇಶನಗಳನ್ನು ಈಗಾಗಲೇ ಲಾಟರಿ ಮೂಲಕ ಹಂಚಿಕೆ ಮಾಡಲಾಗಿದೆ. ಸದರಿ ಬಡಾವಣೆಯಲ್ಲಿ ಕೆಲವು ನಿವೇಶನಗಳನ್ನು ತಾಂತ್ರಿಕ ಕಾರಣಾಂತರಗಳಿಂದ ತಡೆಹಿಡಿಯಲಾಗಿತ್ತು. ಪ್ರಸ್ತುತ ಸದರಿ ಬಡಾವಣೆಯಲ್ಲಿ ವಿವಿಧ ವರ್ಗದ ನಿವೇಶನಗಳು ಹಂಚಿಕೆ ಲಭ್ಯವಿರುತ್ತದೆ.

ಕರ್ನಾಟಕ ಗೃಹ ಮಂಡಳಿ ಹಂಚಿಕೆ ರೆಗ್ಯುಲೇಶನ್ಸ್ 1983ರ ನಿಯಮ 9ರ ಅನ್ವಯ ಇ–ಲಾಟರಿ ಮುಖಾಂತರ ಹಂಚಿಕೆ ಮಾಡಲು ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಕ್ರ. ಸಂ	ತಾತ್ಕಾಲಿಕ ಅರ್ಹ ಅರ್ಜಿದಾರರ ಪಟ್ಟಿ ಪ್ರಕಟಣೆ ದಿನಾಂಕ ಮತ್ತು ಸ್ಥಳ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸ್ಥಳ	ಅಂತಿಮ ಅರ್ಹ ಅರ್ಜಿದಾರರ ಪಟ್ಟಿ ಪ್ರಕಟಣೆ ದಿನಾಂಕ ಮತ್ತು ಸ್ಥಳ	ಲಾಟರಿ ನಡೆಯುವ ದಿನಾಂಕ ಮತ್ತು ಸ್ಥಳ ಹಾಗೂ ಸಮಯ
1	ದಿನಾಂಕ: 04–08–2021 ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ, ರಾಮನಗರ, ಹಾಗೂ ಕೇಂದ್ರಕಛೇರಿ, ಕಾವೇರಿಭವನ, ಬೆಂಗಳೂರು.	ದಿನಾಂಕ: 11–08–2021 ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ, ರಾಮನಗರ, ಹಾಗೂ ಕೇಂದ್ರಕಛೇರಿ, ಕಾವೇರಿಭವನ, ಬೆಂಗಳೂರು.	ದಿನಾಂಕ: 12–08–2021 ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ, ರಾಮನಗರ, ಕೇಂದ್ರಕಛೇರಿ, ಕಾವೇರಿಭವನ, ಬೆಂಗಳೂರು.	ದಿನಾಂಕ: 13–08–2021 ಕರ್ನಾಟಕ ಗೃಹ ಮಂಡಳಿ, ಕೇಂದ್ರ ಕಛೇರಿ, ಕಾವೇರಿಭವನ, ಬೆಂಗಳೂರು. ಸಮಯ: 11.00 ಗಂಟೆಗೆ

ನಿಯಮ ಮತ್ತು ಷರತ್ತುಗಳ ಪೂರ್ಣ ವಿವರಗಳಿಗಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು.

ಹೆಚ್ಚಿನ ಮಾಹಿತಿಗಾಗಿ:– ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ, ರಾಮನಗರ ಇವರನ್ನು ಖುದ್ದಾಗಿ ಅಥವಾ ಮೊಬೈಲ್ ಸಂಖ್ಯೆ: 9844742363 ಅಥವಾ ಉಪ ಪ್ರಧಾನ ವ್ಯವಸ್ಥಾಪಕರು (ಗ್ರಾ.ಸೇ)/ ಕಂದಾಯ ಅಧಿಕಾರಿಗಳು, ಹಂಚಿಕೆ ಶಾಖೆ, ಕಛೇರಿ ದೂರವಾಣಿ ಸಂಖ್ಯೆ: 080–22273511 ext.335/307 ಗೆ ಸಂಪರ್ಕಿಸುವುದು.

DIPR/DDU/Zen/R.O: 1036/2021-22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ದಿನಾಂಕ: 03–08–2021

ಸಹಿ/–
ಆಯುಕ್ತರು
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಮಾಹಿತಿಯನ್ನು ನೀವು ಹೇಗೆ ಸಂಗ್ರಹಿಸುತ್ತೀರಿ, ನಿರ್ವಹಿಸುತ್ತೀರಿ ಮತ್ತು ಅದನ್ನು ಹೇಗೆ ಬಳಸಿಕೊಳ್ಳುತ್ತೀರಿ ಎಂಬುದು ನಿಮ್ಮ ಸೋಲು ಅಥವಾ ಗೆಲುವನ್ನು ನಿರ್ಧರಿಸುತ್ತದೆ.

–ಬಿಲ್ ಗೇಟ್ಸ್

ಠೇವಣಿದಾರರಿಗೆ ಹೆಚ್ಚಿನ ಪರಿಹಾರ ಕೇಂದ್ರದ ಸ್ವಾಗತಾರ್ಹ ಹೆಜ್ಜೆ

ಬ್ಯಾಂಕ್‌ಗಳ ಹಣಕಾಸಿನ ಸ್ಥಿತಿ ಹದಗೆಟ್ಟು, ಅವು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ (ಆರ್‌ಬಿಐ) ನಿರ್ಬಂಧಕ್ಕೆ ಗುರಿಯಾದರೆ, ಆ ಬ್ಯಾಂಕ್‌ಗಳಲ್ಲಿ ಹಣ ಠೇವಣಿ ಇರಿಸಿದವರಿಗೆ ಕಾಲಮಿತಿಯಲ್ಲಿ ಸಹಾಯ ಸಿಗಬೇಕು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರವು ಕಾನೂನಿನಲ್ಲಿ ಕೆಲವು ತಿದ್ದುಪಡಿಗಳನ್ನು ತರಲು ತೀರ್ಮಾನಿಸಿದೆ. ಇದು ಅತ್ಯಂತ ಸ್ವಾಗತಾರ್ಹ ಕ್ರಮ. 'ಠೇವಣಿ ವಿಮೆ ಮತ್ತು ಸಾಲ ಖಾತರಿ ಕಾರ್ಪೊರೇಷನ್ ಕಾಯ್ದೆ'ಗೆ (ಡಿಐಸಿಜಿಸಿ ಕಾಯ್ದೆ) ತಿದ್ದುಪಡಿ ತರಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಈಚೆಗೆ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು ಒಪ್ಪಿಗೆ ಸೂಚಿಸಿದೆ. ಈಗ ತಿದ್ದುಪಡಿ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಿ ಆಗಿದೆ. ತಿದ್ದುಪಡಿಗಳು ಕಾಯ್ದೆಯ ಭಾಗವಾದ ನಂತರದಲ್ಲಿ, ಯಾವುದೇ ಬ್ಯಾಂಕ್ ಮೇಲೆ ಆರ್‌ಬಿಐ ನಿರ್ಬಂಧ ವಿಧಿಸಿದರೆ ಅಲ್ಲಿನ ಠೇವಣಿದಾರರು ಆತಂಕಕ್ಕೆ ಗುರಿಯಾಗಬೇಕಾದ ಪ್ರಮೇಯ ಗಮನಾರ್ಹವಾಗಿ ಕಡಿಮೆ ಆಗುವ ನಿರೀಕ್ಷೆ ಇದೆ. ಠೇವಣಿದಾರರ ₹ 5 ಲಕ್ಷದವರೆಗಿನ ಹಣಕ್ಕೆ ವಿಮಾ ಸೌಲಭ್ಯ ಇರಲಿದ್ದು, ವಿಮಾ ಪರಿಹಾರ ಮೊತ್ತವು 90 ದಿನಗಳೊಳಗೆ ಠೇವಣಿದಾರರಿಗೆ ಸಿಗಬೇಕು ಎಂಬ ನಿಯಮವು ಕಾನೂನಿನ ಭಾಗವಾಗುವ ಸಾಧ್ಯತೆ ಇದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ 2021–22ನೇ ಸಾಲಿನ ಬಜೆಟ್‌ನಲ್ಲಿ ಕೂಡ, ಠೇವಣಿದಾರರ ವಿಮಾ ಸೌಲಭ್ಯವನ್ನು ಹೆಚ್ಚಿಸುವ ಪ್ರಸ್ತಾವ ಇತ್ತು. ಆ ಪ್ರಸ್ತಾವದ ಮುಂದುವರಿದ ಭಾಗವಾಗಿ ಕೇಂದ್ರವು ಈಗ ಈ ಹೆಜ್ಜೆ ಇರಿಸಿದೆ. ಪಿಎಂಸಿ ಬ್ಯಾಂಕ್ ಪ್ರಕರಣವು ಠೇವಣಿದಾರರ ಹಿತವನ್ನು ಕಾಯಲು ಹೆಚ್ಚಿನ ಕ್ರಮಗಳ ಅಗತ್ಯ ಇದೆ ಎಂಬುದನ್ನು ಮನದಟ್ಟು ಮಾಡಿಸಿತ್ತು. ಯೆಸ್ ಬ್ಯಾಂಕ್ ಮತ್ತು ಲಕ್ಷ್ಮೀವಿಲಾಸ್ ಬ್ಯಾಂಕ್ ಕೂಡ ಹಣಕಾಸಿನ ಸಮಸ್ಯೆಗೆ ಸಿಲುಕಿದವು. ಆದರೆ ಈ ಎರಡು ಬ್ಯಾಂಕ್‌ಗಳ ವಿಚಾರದಲ್ಲಿ ತ್ವರಿತವಾಗಿ ಪರಿಹಾರವೊಂದು ಸಿಕ್ಕಿತು– ಯೆಸ್ ಬ್ಯಾಂಕ್‌ಗೆ ಭಾರತೀಯ ಸ್ಟೇಟ್ ಬ್ಯಾಂಕ್ ಕಡೆಯಿಂದ ಬಂಡವಾಳ ಹರಿದುಬಂದಿತು, ಲಕ್ಷ್ಮೀವಿಲಾಸ್ ಬ್ಯಾಂಕ್‌ಗೆ ಸಿಂಗಪುರ ಮೂಲದ ಡಿಬಿಎಸ್ ಬ್ಯಾಂಕ್ ಕಡೆಯಿಂದ ಬಂಡವಾಳ ದೊರೆಯಿತು. ಈ ಎರಡು ಬ್ಯಾಂಕ್‌ಗಳ ಠೇವಣಿದಾರರು ಸಮಾಧಾನಪಡುವಂತೆ ಆಯಿತು.

ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಹುಳುಕುಗಳು ಮೂಡಬಾರದು ಎಂದಾದರೆ, ಆರ್‌ಬಿಐ ಕಡೆಯಿಂದ ಕಟ್ಟುನಿಟ್ಟಿನ ನಿಗಾ ಇರಬೇಕು

ಈಗಿರುವ ಕಾನೂನಿನ ಅನ್ವಯ ಠೇವಣಿಗಳ ಮೇಲಿನ ವಿಮಾ ಪರಿಹಾರ ಮೊತ್ತವು ₹ 1 ಲಕ್ಷ ಮಾತ್ರ. ಹೆಚ್ಚಿನ ಮೊತ್ತವನ್ನು ಠೇವಣಿಯಾಗಿ ಇರಿಸಿದವರು, ಬ್ಯಾಂಕ್ ಬಿಕ್ಕಟ್ಟಿಗೆ ಸಿಲುಕಿದರೆ ತಮ್ಮ ಹಣವನ್ನು ಹಿಂಪಡೆಯಲು ಹೆಣಗಾಡಬೇಕಾದ ಸ್ಥಿತಿ ಇದೆ. ಈಗಿರುವ ನಿಯಮಗಳ ಪ್ರಕಾರ, ಬ್ಯಾಂಕ್‌ನ ಪರವಾನಗಿ ರದ್ದಾಗಿ, ಬ್ಯಾಂಕಿಂಗ್ ಕಂಪನಿಯನ್ನು ಪರಿಸಮಾಪ್ತಿಗೊಳಿಸಿ, ಅದರ ಆಸ್ತಿಗಳನ್ನು ಹಣವನ್ನಾಗಿಸುವ ಪ್ರಕ್ರಿಯೆ ಶುರುವಾದ ನಂತರ ವಿಮಾ ಪರಿಹಾರ ಮೊತ್ತವು ಸಿಗುತ್ತದೆ. ಇಷ್ಟಾಗಲು ವರ್ಷಗಳೇ ಬೇಕಾಗಬಹುದು. ಕಷ್ಟಪಟ್ಟು ದುಡಿದ ಹಣವನ್ನು ಠೇವಣಿ ಇರಿಸಿದವರು, ತಮ್ಮದೇ ಹಣಕ್ಕೆ ಪರಿಹಾರ ಪಡೆಯಲು ಈ ಪರಿಯಲ್ಲಿ ಕಾಯಬೇಕಾದ ಸ್ಥಿತಿ ಬರಬಾರದು. 1993ಕ್ಕಿಂತ ಮೊದಲು ವಿಮಾ ಪರಿಹಾರ ಮೊತ್ತವು ₹ 30 ಸಾವಿರ ಆಗಿತ್ತು. 1993ರಿಂದ ಈ ಮೊತ್ತವನ್ನು ₹ 1 ಲಕ್ಷಕ್ಕೆ ಹೆಚ್ಚಿಸಲಾಯಿತು. ಈಗ 28 ವರ್ಷಗಳ ನಂತರ ಪರಿಹಾರ ಮೊತ್ತವನ್ನು ₹ 5 ಲಕ್ಷಕ್ಕೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ವಾಸ್ತವದಲ್ಲಿ ಪರಿಹಾರ ಮೊತ್ತವನ್ನು ಕಾಲಕಾಲಕ್ಕೆ ಹೆಚ್ಚಿಸುತ್ತ ಹೋಗಬೇಕಿತ್ತು. ಏಕೆಂದರೆ ಸಮಯ ಕಳೆದಂತೆಲ್ಲ ಹಣವು ಮೌಲ್ಯ ಕಳೆದುಕೊಳ್ಳುತ್ತ ಹೋಗುತ್ತದೆ. ಇಂದು ₹ 100 ಬೆಲೆಬಾಳುವ ವಸ್ತುವು, ಒಂದು ವರ್ಷದ ನಂತರದಲ್ಲಿ ₹ 106 ಆಗಿರುತ್ತದೆ. ಅಂದರೆ, ಹಣದುಬ್ಬರದ ಕಾರಣದಿಂದಾಗಿ ಹಣಕ್ಕೆ ಇರುವ ಕೊಳ್ಳುವ ಶಕ್ತಿಯು ಕುಸಿಯುತ್ತದೆ. ಹಾಗಾಗಿ, ಹಣದುಬ್ಬರದ ಪ್ರಮಾಣಕ್ಕೆ ಅನುಗುಣವಾಗಿ ವಿಮಾ ಪರಿಹಾರ ಮೊತ್ತವನ್ನು ಹೆಚ್ಚಿಸುತ್ತ ಹೋಗುವ ಬಗ್ಗೆ ಕೇಂದ್ರ ಸರ್ಕಾರವು ಗಂಭೀರವಾಗಿ ಚಿಂತನೆ ನಡೆಸಬೇಕು. ₹ 5 ಲಕ್ಷವನ್ನು ಮೂಲವಾಗಿ ಇರಿಸಿಕೊಂಡು, ಹಣದುಬ್ಬರದ ಪ್ರಮಾಣಕ್ಕೆ ಅನುಗುಣವಾಗಿ ಈ ಮೊತ್ತ ಕೂಡ ಹೆಚ್ಚಾಗಬೇಕು ಎಂಬ ಅಂಶವನ್ನು ತಿದ್ದುಪಡಿ ಮಸೂದೆಯ ಭಾಗವಾಗಿಸಬಹುದು. ಮುಂದೊಂದು ಸಂದರ್ಭದಲ್ಲಿ, ₹ 5 ಲಕ್ಷ ಎಂಬ ಮೊತ್ತವು ತೀರಾ ಕಡಿಮೆ ಅನ್ನಿಸಿದರೆ, ಅದನ್ನು ಹೆಚ್ಚಿಸಬೇಕು ಎಂದು ಜನರು ಆಗ್ರಹಿಸಬೇಕಾದ ಸ್ಥಿತಿ ಎದುರಾಗಬಾರದು. ವಿಮಾ ಪರಿಹಾರವನ್ನು ಹಣದುಬ್ಬರದ ಪ್ರಮಾಣದ ಜೊತೆ ಬೆಸೆಯುವುದರಿಂದ ಅಂತಹ ಸ್ಥಿತಿ ನಿರ್ಮಾಣ ಆಗದಂತೆ ನೋಡಿಕೊಳ್ಳಬಹುದು.

ಠೇವಣಿದಾರರಲ್ಲಿ ಬ್ಯಾಂಕ್‌ಗಳು ಕುಸಿಯುವಂತಹ ಸ್ಥಿತಿ ನಿರ್ಮಾಣ ಆಗುವ ಸಾಧ್ಯತೆಯೇ ಇಲ್ಲ ಎಂದು ಹಿಂದೊಂದು ಕಾಲದಲ್ಲಿ ಪ್ರತಿಪಾದಿಸಲಾಗುತ್ತಿತ್ತು. ಆದರೆ, ಪಿಎಂಸಿ ಬ್ಯಾಂಕ್, ಯೆಸ್ ಬ್ಯಾಂಕ್, ಲಕ್ಷ್ಮೀವಿಲಾಸ್ ಬ್ಯಾಂಕ್‌ನಲ್ಲಿ ಆಗಿರುವ ವಿದ್ಯಮಾನಗಳು ಅಂತಹ ಪ್ರತಿಪಾದನೆಗಳು ಹುಸಿ ಎಂಬುದನ್ನು ತೋರಿಸಿಕೊಟ್ಟಿವೆ. ಬ್ಯಾಂಕಿಂಗ್ ವ್ಯವಸ್ಥೆಯ ಬಗ್ಗೆ ಜನರಲ್ಲಿ ಅಪನಂಬಿಕೆ ಮೂಡಬೇಕಿಲ್ಲ. ಬ್ಯಾಂಕ್‌ಗಳ ವ್ಯವಸ್ಥೆ ಇಲ್ಲದೆ ದೈನಂದಿನ ಚಟುವಟಿಕೆಗಳು ಮುಂದಕ್ಕೆ ಸಾಗುವುದಿಲ್ಲ. ಬ್ಯಾಂಕ್‌ಗಳು ತಮ್ಮ ಠೇವಣಿದಾರರಿಗೆ ಹಣ ವಾಪಸ್ ಕೊಡಲು ಆಗದಂತಹ ಸ್ಥಿತಿ ತಲುಪಬಾರದು ಎಂದಾದರೆ, ಆರ್‌ಬಿಐ ಕಡೆಯಿಂದ ಕಟ್ಟುನಿಟ್ಟಿನ ನಿಗಾ ಇರಬೇಕು. ಬ್ಯಾಂಕಿಂಗ್ ವ್ಯವಸ್ಥೆಗೆ ಪರ್ಯಾಯವಿಲ್ಲ; ಹಾಗೆಯೇ ಈ ವ್ಯವಸ್ಥೆಯಲ್ಲಿ ಹುಳುಕುಗಳು ಮೂಡಬಾರದು ಎಂದಾದರೆ ಆರ್‌ಬಿಐನ ನಿಗಾ ಮಾತ್ರವೇ ಪರಿಹಾರ. ಈಗ ಕೇಂದ್ರ ಸರ್ಕಾರ ಮಂಡಿಸಿರುವ ತಿದ್ದುಪಡಿ ಮಸೂದೆಯು ಜನರ ವಿಶ್ವಾಸ ಹೆಚ್ಚಿಸುವ ಒಂದು ಕ್ರಮ ಮಾತ್ರ. ಅದಕ್ಕಿಂತ ಹೆಚ್ಚಾಗಿ ಆಗಬೇಕಿರುವುದು, ಬ್ಯಾಂಕ್‌ನ ವ್ಯವಹಾರಗಳಲ್ಲಿ ಯಾವ ಲೋಪವೂ ಇಲ್ಲದಂತೆ ನೋಡಿಕೊಳ್ಳುವ ಕೆಲಸ.

ಅಫ್ಗಾನಿಸ್ತಾನದಲ್ಲಿ ತನ್ನ ಪ್ರಭಾವ ಉಳಿಸಿಕೊಳ್ಳುವುದು ಭಾರತಕ್ಕೆ ಬಹುಮುಖ್ಯ

ತಾಲಿಬಾನ್ 2.0: ಭಾರತದ ನಿಲುವೇನು?



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಅಫ್ಗಾನಿಸ್ತಾನದ ವಿಷಯದಲ್ಲಿ ಎಲ್ಲವೂ ನಿರೀಕ್ಷೆಯಂತೆಯೇ ಆಗುತ್ತಿವೆ. ತಾಲಿಬಾನ್ ಅಟ್ಟಹಾಸ ಮೆರೆಯುತ್ತಿದೆ. ಅಲ್ಲಿನ ಜನ ದಿಕ್ಕುತೋಚದೆ ಕುಳಿತಿದ್ದಾರೆ. ಅಪಾಯಕಾರಿಯಲ್ಲದ ಭ್ರಷ್ಟ ಸರ್ಕಾರ ಒಂದೆಡೆಯಾದರೆ, ಹಿಂಸೆ, ದೌರ್ಜನ್ಯ, ಮತೀಯ ಜಡತ್ವಕ್ಕೆ ಅನ್ವರ್ಥವಾಗಿರುವ ಮೃಗೀಯ ತಾಲಿಬಾನ್ ಮತ್ತೊಂದೆಡೆ.

ಅಮೆರಿಕದ ಅನುಪಸ್ಥಿತಿಯಲ್ಲಿ ಚೀನಾ, ಪಾಕಿಸ್ತಾನ ಮತ್ತು ರಷ್ಯಾವು ಅಫ್ಗಾನಿಸ್ತಾನದಲ್ಲಿ ತಮ್ಮ ಪ್ರಾಬಲ್ಯ ಹೆಚ್ಚಿಸಿಕೊಳ್ಳಲು ತಂತ್ರ ರೂಪಿಸುತ್ತಿವೆ. ತಾಲಿಬಾನ್ ಪ್ರತಿನಿಧಿಯನ್ನು ಕರೆಸಿಕೊಂಡು ಚೀನಾ ಮಾತುಕತೆ ನಡೆಸಿದೆ. ಅಂತಹುದೇ ಮಾತುಕತೆಗೆ ರಷ್ಯಾ ಮತ್ತು ಇರಾನ್ ಚಾಲನೆ ಕೊಟ್ಟಿವೆ. ಪಾಕಿಸ್ತಾನ ಮತ್ತು ತಾಲಿಬಾನ್ ಸಖ್ಯ ಬಿಡಿಸಿ ಹೇಳಬೇಕಿಲ್ಲ. ಈ ಎಲ್ಲ ಮಾತುಕತೆಗಳ ಹಿಂದೆ, ಅಫ್ಗಾನಿಸ್ತಾನದ ಆಡಳಿತವು ತಾಲಿಬಾನ್ ತೆಕ್ಕೆಗೆ ಬೀಳಲಿದೆ ಎಂಬ ಲೆಕ್ಕಾಚಾರವಿದೆ ಮತ್ತು ತಮ್ಮ ಹಿತಾಸಕ್ತಿ ಕಾಯ್ದುಕೊಳ್ಳುವ ಜಾಣ್ಮೆಯಿದೆ.

ಆದರೆ ತಾಲಿಬಾನ್ ಜೊತೆ ಬಹಿರಂಗವಾಗಿ ಮಾತುಕತೆಯಲ್ಲಿ ತೊಡಗಲು ಭಾರತ ಹಿಂದೇಟು ಹಾಕುತ್ತಿರುವಂತಿದೆ. ಅದಕ್ಕೆ ಪ್ರಮುಖ ಕಾರಣಗಳು ಮೂರು. ಮೊದಲನೆಯದು, ಈ ಹಿಂದಿನ ತಾಲಿಬಾನ್ ವರ್ತನೆ ಮತ್ತು ಅದು ಪ್ರತಿನಿಧಿಸುವ ಮೌಲ್ಯಗಳು ನಮ್ಮ ಆದರ್ಶಗಳಿಗೆ ವಿರುದ್ಧವಾಗಿವೆ. ಎರಡನೆಯದು, ಕಳೆದ ಎರಡು ದಶಕಗಳ ಅವಧಿಯಲ್ಲಿ ಅಫ್ಗಾನಿಸ್ತಾನ ಮರುನಿರ್ಮಾಣ ಕಾರ್ಯದಲ್ಲಿ ಭಾರತ ತೊಡಗಿದೆ ಮತ್ತು ಅಶ್ರಫ್ ಘನಿ ನೇತೃತ್ವದ ಸರ್ಕಾರ ಎಲ್ಲ ರೀತಿಯಿಂದಲೂ ಭಾರತದ ಹಿತಾಸಕ್ತಿಗಳಿಗೆ ಪೂರಕವಾಗಿದೆ. ಮೂರನೆಯದು, ಅಫ್ಗಾನಿಸ್ತಾನದಲ್ಲಿ ಅನಿಶ್ಚಿತತೆ ಮುಂದುವರಿದಿರುವಾಗ, ನೇರವಾಗಿ ಯಾರೊಂದಿಗೂ ಗುರುತಿಸಿಕೊಳ್ಳಬಾರದು ಎಂಬ ರಾಜತಾಂತ್ರಿಕ ಲೆಕ್ಕಾಚಾರ. ಆದರೆ, ತಾಲಿಬಾನ್ ತನ್ನ ಎರಡನೆಯ ಆವೃತ್ತಿಯಲ್ಲಿ ಭಾರತವನ್ನು ದೂರ ಇಡುವ ಮನಃಸ್ಥಿತಿ ಪ್ರದರ್ಶಿಸಿಲ್ಲ. ತಾನು ಬದಲಾಗಿದ್ದೇನೆ ಎಂದು ಜಗತ್ತಿಗೆ ಸಾರುತ್ತಿದೆ. ಆದರೆ ಆ ಮಾತನ್ನು ನಂಬಬಹುದೇ ಎಂಬುದು ಸದ್ಯದ ಪ್ರಶ್ನೆ.

ಏಕೆಂದರೆ, ಮೊದಲಿಗೆ ತಾಲಿಬಾನ್ ಹುಟ್ಟಿಕೊಂಡಾಗ ಅದರ ವಕ್ತಾರರು ಒಂದಿಷ್ಟು ಒಳ್ಳೆಯ ಮಾತು ಆಡಿದ್ದರು. 90ರ ದಶಕದಲ್ಲಿ ಸೋವಿಯತ್ ಸೇನೆ ಅಫ್ಗಾನಿಸ್ತಾನದಿಂದ ಕಾಲ್ತೆಗೆದಾಗ ಆರಂಭವಾದ ಪಶ್ತೂನ್ ಆಂದೋಲನ, ಸೌದಿ ಅರೇಬಿಯಾದ ಆರ್ಥಿಕ ನೆರವಿನೊಂದಿಗೆ ಚಿಗುರಿತ್ತು. ಈ ಆಂದೋಲನದಲ್ಲಿ, ಮತೀಯ ಶಿಕ್ಷಣ ಪಡೆದ ಯುವಕರು ಹೆಚ್ಚಿದ್ದರು. ಹಾಗಾಗಿ ತಾಲಿಬಾನ್ ಎಂಬ ಹೆಸರು ಬಂತು. ಶಾಂತಿ ಮತ್ತು ಭದ್ರತೆಯನ್ನು ಸ್ಥಾಪಿಸುವುದು ತನ್ನ ಉದ್ದೇಶ ಮತ್ತು ಅದು ಸಾಧ್ಯವಾಗಬೇಕಾದರೆ ಷರಿಯಾ ನಿಯಮಗಳನ್ನು ಅನುಸರಿಸಬೇಕು ಎಂಬ ವಾದವನ್ನು ತಾಲಿಬಾನ್ ಮುಂದೆ ಮಾಡಿತು.

ತಾಲಿಬಾನೀಯರು ತಮ್ಮನ್ನು 'ಇಸ್ಲಾಮಿಕ್ ಎಮಿರೇಟ್ಸ್ ಆಫ್ ಅಫ್ಘಾನಿಸ್ತಾನ್' ಎಂದು ಕರೆದುಕೊಂಡರು. ನಾಗರಿಕ ಯುದ್ಧ ಆರಂಭವಾಯಿತು. ಪೈಶಾಚಿಕ ಕೃತ್ಯಗಳು ನಡೆದವು. ತಾಲಿಬಾನ್ ಪಡೆ ಆಡಳಿತದ ಚುಕ್ಕಾಣಿ ಹಿಡಿಯಿತು.

ಅರಾಜಕತೆಯಿಂದ ಬಸವಳಿದಿದ್ದ ಅಫ್ಗನ್ನರು ಮೊದಲಿಗೆ ತಾಲಿಬಾನ್ ಒಂದು ಆಡಳಿತ ವ್ಯವಸ್ಥೆಯನ್ನು ಸೃಷ್ಟಿಸಿದಾಗ ಅದನ್ನು ಸ್ವಾಗತಿಸಿದ್ದರು. ಆದರೆ ತಾಲಿಬಾನ್ ಜಾರಿಗೆ ತಂದ ತನ್ನದೇ ಆದ ಕಠಿಣ ನಿಯಮಗಳು ಜನರಲ್ಲಿ ಭೀತಿ ಹುಟ್ಟಿಸಿದವು. ಶಿಕ್ಷೆಯ ರೂಪದಲ್ಲಿ ಸಾರ್ವಜನಿಕವಾಗಿ ಹತ್ಯೆಗಳು ನಡೆದವು. ವ್ಯಕ್ತಿ ಸ್ವಾತಂತ್ರ್ಯವನ್ನು ಅಪಹರಿಸಲಾಯಿತು. ಪುರುಷರು ಇಂತಿಷ್ಟು ಉದ್ದ ಗಡ್ಡ ಬಿಡಲೇಬೇಕು, ಹೆಣ್ಣುಮಕ್ಕಳು ಮೈತುಂಬಾ ಬುರ್ಖಾ ತೊಡಬೇಕು, ಒಬ್ಬಂಟಿಯಾಗಿ ಮನೆಯಿಂದ ಹೊರಹೋಗುವಂತಿಲ್ಲ, ಸಂಗೀತ, ಚಲನಚಿತ್ರ, ಮನರಂಜನಾ ಕಾರ್ಯಕ್ರಮಗಳಿಗೆ ಆಸ್ಪದವಿಲ್ಲ, ಹೆಣ್ಣುಮಕ್ಕಳಿಗೆ ಶಾಲೆ ನಿಷೇಧ, ಹೀಗೆ ಹಲವು ನಿರ್ಬಂಧಗಳನ್ನು ತಾಲಿಬಾನ್ ಹೇರಿತು. ಅನ್ಯ ಧರ್ಮೀಯರನ್ನು ಹಿಂಸಿಸಲಾಯಿತು. ಬುದ್ಧ ಮೂರ್ತಿಗಳು ಪುಡಿಯಾದವು. ಅಫ್ಗಾನಿಸ್ತಾನವು ಭಯೋತ್ಪಾದಕರ ಗೂಡಾಯಿತು. ಈ ಅವಧಿಯಲ್ಲಿ ಯುಎಇ, ಸೌದಿ ಅರೇಬಿಯಾ ಮತ್ತು ಪಾಕಿಸ್ತಾನ ಬಿಟ್ಟು ಉಳಿದ ದೇಶಗಳು ಅಫ್ಗಾನಿಸ್ತಾನದ ಜೊತೆ ಸಂಬಂಧ ಕಡಿದುಕೊಂಡವು.

ಬಿಡಿ, 2001ರ ಸೆಪ್ಟೆಂಬರ್ 11ರ ಘಟನೆಯ ಬಳಿಕ ನಡೆದದ್ದು ಈಗ ಇತಿಹಾಸ. ಅಮೆರಿಕ ಮತ್ತು ನ್ಯಾಟೊ ಪಡೆಗಳ ರಕ್ಷಣೆಯಲ್ಲಿ ಶಾಲೆ, ಆಸ್ಪತ್ರೆ, ರಸ್ತೆ, ಸೇತುವೆ, ಅಣೆಕಟ್ಟು, ವಿದ್ಯುತ್ ಸರಬರಾಜು ಘಟಕಗಳು ಹೀಗೆ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಲ್ಲಿ ಭಾರತ ತೊಡಗಿಸಿಕೊಂಡಿತು. 2016ರಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ 'ಸಲ್ಮಾ ಅಣೆಕಟ್ಟು' ಉದ್ಘಾಟಿಸಲು ಹೋದಾಗ, ಮೋದಿಯವರನ್ನು ಅಶ್ರಫ್ ಘನಿ 'Welcome to your second home' ಎಂದು ಸ್ವಾಗತಿಸಿದ್ದರು. ಅಷ್ಟರಮಟ್ಟಿಗೆ ಭಾರತ- ಅಫ್ಗಾನಿಸ್ತಾನದ ಬಾಂಧವ್ಯ ವೃದ್ಧಿಸಿತು. ಹಾಗಾಗಿ ಬದಲಾದ ಪರಿಸ್ಥಿತಿಯಲ್ಲಿ ತಕ್ಷಣಕ್ಕೆ ಅಫ್ಗನ್ ಸರ್ಕಾರದಿಂದ ಭಾರತ ದೂರಸರಿದು ನಿಲ್ಲಲು ಸಾಧ್ಯವಿಲ್ಲ. ಹಾಗಂತ ತಾಲಿಬಾನ್ ಪಡೆಯಿಂದ ಅಂತರ ಕಾಯ್ದುಕೊಳ್ಳುವುದು ಅವಾಸ್ತವಿಕ ಮತ್ತು ಮುಂದಿನ ದಿನಗಳಲ್ಲಿ ದುಬಾರಿಯಾಗಬಹುದಾದ ನಡೆ.

ತಾಲಿಬಾನ್ ಕುರಿತು ವಿವೇಚಿಸಿದರೆ, ಈ ಇಪ್ಪತ್ತು ವರ್ಷಗಳ ಅಜ್ಞಾತವಾಸದಲ್ಲಿ ಅದು ಕೊಂಚ ಮೆತ್ತಗಾಗಿರಬಹುದು. ಇತರ ದೇಶಗಳು ತಮ್ಮನ್ನು ಅಫ್ಗನ್ ಸರ್ಕಾರವೆಂದು ಮಾನ್ಯ ಮಾಡಬೇಕಾದರೆ ಕನಿಷ್ಠ ಬಾಹ್ಯ ಚಹರೆಯನ್ನಾದರೂ ಬದಲಿಸಿಕೊಳ್ಳಬೇಕು ಎಂದು ತಾಲಿಬಾನ್ ಮನಗಂಡಿರಬಹುದು. ಹಾಗಾಗಿ ಭಾರತದತ್ತಲೂ ಅದು ನೋಡುತ್ತಿದೆ. ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿದಾಗ, 'ಅದು ಭಾರತದ ಆಂತರಿಕ ವಿಚಾರ' ಎಂದು ತಾಲಿಬಾನ್ ಪ್ರತಿಕ್ರಿಯಿಸಿತ್ತು.

ತಾಲಿಬಾನ್ 1.0ಯಲ್ಲಿ ಬಂಡುಕೋರರ ಪಡೆ ಎನಿಸಿಕೊಂಡಿದ್ದ ಸಂಘಟನೆ ಇದೀಗ ಒಂದು ರಾಜಕೀಯ ಶಕ್ತಿಯಾಗಿ ಹೊರಹೊಮ್ಮುವ ಪ್ರಯತ್ನದಲ್ಲಿದೆ. ಹಾಗಾಗಿಯೇ 'ನಮ್ಮ ಅವಧಿಯಲ್ಲಿ ಶಾಲೆ, ಕಚೇರಿ, ಮಾರುಕಟ್ಟೆ, ಮಾಧ್ಯಮ ಸಂಸ್ಥೆ ಎಲ್ಲವೂ ಮುಕ್ತವಾಗಿರುತ್ತವೆ, ನಾಗರಿಕ ಸ್ವಾತಂತ್ರ್ಯ, ಮಹಿಳಾ ಶಿಕ್ಷಣ, ಉದ್ಯೋಗಕ್ಕೆ ನೂತನ ತಾಲಿಬಾನ್ ಸರ್ಕಾರವು 'ಷರಿಯಾ ನಿಯಮಗಳಿಗೆ ಅನುಗುಣವಾಗಿ ಅವಕಾಶ ಮಾಡಿಕೊಡಲಿದೆ' ಎಂದು ಪದೇ ಪದೇ ಹೇಳುತ್ತಿದೆ. ಆದರೆ ಹತ್ಯೆಗಳು ನಿಂತಿಲ್ಲ!

ಭಾರತದ ಮುಂದೆ ಮೂರು ಆಯ್ಕೆಗಳಿವೆ. ಒಂದು, ತಾಲಿಬಾನ್ ಆಡಳಿತಕ್ಕಿಂತ ಅಫ್ಗಾನಿಸ್ತಾನದಲ್ಲಿ ದೀರ್ಘಾವಧಿಯ ಅರಾಜಕತೆ ಇದ್ದರೆ ಒಳಿತು ಎಂದು ಭಾವಿಸಿ, ಘನಿ ಸರ್ಕಾರವನ್ನು ಪೂರ್ಣ ಪ್ರಮಾಣದಲ್ಲಿ ಬೆಂಬಲಿಸುವುದು. ತಾಲಿಬಾನ್ ವೇಗವಾಗಿ ಅಫ್ಗಾನಿಸ್ತಾನದ ಮೇಲೆ ಹಿಡಿತ ಸಾಧಿಸುವುದನ್ನು ತಡೆಯುವ ತಂತ್ರ ರೂಪಿಸುವುದು. ಎರಡು, ತಾಲಿಬಾನ್ ಜೊತೆ ಒಂದು ಹಂತದ ಮಾತುಕತೆಗೆ ಚಾಲನೆ ಕೊಟ್ಟು ಪ್ರಸ್ತುತ ಘನಿ ನೇತೃತ್ವದ ಸರ್ಕಾರಕ್ಕೆ ನೀಡುತ್ತಿರುವ ಸಹಕಾರವನ್ನು ಕರಾರಿನ ಮೇಲೆ ಮುಂದುವರಿಸುವ ಪ್ರಸ್ತಾಪ ಇಡಬಹುದು. ಅಷ್ಟರಮಟ್ಟಿಗೆ ಭಾರತ ಕೈಗೆತ್ತಿಕೊಂಡಿರುವ ಯೋಜನೆಗಳನ್ನು ತಾಲಿಬಾನ್ ಹಾಳುಗೆಡವದಂತೆ ನೋಡಿಕೊಳ್ಳಬಹುದು.

ಮೂರನೆಯದು, ಅನಿಶ್ಚಿತತೆ ಅಂತ್ಯವಾಗುವವರೆಗೆ ಕಾದು, ನಂತರ ಜಾಗತಿಕ ಸಮುದಾಯ ತೆಗೆದುಕೊಳ್ಳುವ ನಿರ್ಣಯ ಬೆಂಬಲಿಸುವುದು. ಮೂರನೆಯ ಆಯ್ಕೆ ಸುರಕ್ಷಿತ ಎನಿಸಿದರೂ, ಅದು ದಕ್ಷಿಣ ಏಷ್ಯಾದಲ್ಲಿ ಭಾರತದ ಪ್ರಭಾವವನ್ನು ಕುಗ್ಗಿಸುತ್ತದೆ. ಆ ಕಾರಣದಿಂದಲೇ ಭಾರತ ಹಿಂಬಾಗಿಲಿನಿಂದ ತಾಲಿಬಾನ್ ಜೊತೆ ಮಾತುಕತೆ ನಡೆಸುತ್ತಿದೆ ಎಂಬ ಸುದ್ದಿಯಿದೆ. ಅಫ್ಗಾನಿಸ್ತಾನದ ವಿಷಯದಲ್ಲಿ ಭಾರತ ಸಂಪೂರ್ಣವಾಗಿ ವಿಮುಖವಾಗದೆ, ಮಾತುಕತೆಯ ಮೇಜಿನಲ್ಲಿ ಇರುವುದು, ಅಫ್ಗಾನಿಸ್ತಾನದಲ್ಲಿ ತನ್ನ ಪ್ರಭಾವವನ್ನು ಉಳಿಸಿಕೊಳ್ಳುವುದು ಚೀನಾ ಮತ್ತು ಪಾಕಿಸ್ತಾನವನ್ನು ಎದುರಿಸುವ ದೃಷ್ಟಿಯಿಂದಲೂ ಬಹುಮುಖ್ಯ.

ಒಟ್ಟಿನಲ್ಲಿ, ಅಡಕತ್ತರಿಯಲ್ಲಿ ಸಿಲುಕಿರುವ ಅಫ್ಗಾನಿಸ್ತಾನ ಒಂದು ನಾಗರಿಕ ದೇಶವಾಗಿ ಉಳಿಯಬೇಕಾದರೆ, ಷರಿಯಾ ನಿಯಮಗಳಿಗೆ ಅನುಗುಣವಾಗಿ ಎಂಬ ತನ್ನ ಚೌಕಟ್ಟನ್ನು ತೊರೆದು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವವನ್ನು ಎತ್ತಿ ಹಿಡಿಯುವ ಸಂವಿಧಾನಕ್ಕೆ ಬದ್ಧವಾದ ದೇಶವಾಗಬೇಕು. ಮುಂದಿನ ದಿನಗಳಲ್ಲಿ ತಾಲಿಬಾನ್ ತನ್ನ ಮೂಲಗುಣ ತ್ಯಜಿಸಿ, ಮುಖ್ಯವಾಹಿನಿಗೆ ತೆರೆದುಕೊಳ್ಳುತ್ತದೆಯೇ ಅಥವಾ ಮಧ್ಯಕಾಲೀನ ಮನಃಸ್ಥಿತಿಯನ್ನೇ ಉಳಿಸಿಕೊಂಡು ಅಫ್ಗನ್ ಜನರ ಕನಸು ಮತ್ತು ಭವಿಷ್ಯ ಕಮರುವಂತೆ ಮಾಡುತ್ತದೆಯೇ, ಅಲ್ಲಿನ ಜನರೇ ಬಂಡೆದ್ದು ಅದನ್ನು ತಿರಸ್ಕರಿಸುತ್ತಾರೋ ಕಾದು ನೋಡಬೇಕು. ಸದ್ಯದ ಮಟ್ಟಿಗಂತೂ ಅಫ್ಗಾನಿಸ್ತಾನದ ವಿಷಯ ಭಾರತಕ್ಕೆ ತಂತಿಯ ಮೇಲಿನ ನಡಿಗೆ.

ಚುರುಮುರಿ

ಫೈನಲ್ ಪಟ್ಟಿ

• ಮಣ್ಣೆರಾಜು

'ಮಂತ್ರಿಗಳ ಫೈನಲ್ ಪಟ್ಟಿ ರೆಡಿ ಆಯ್ತೇನ್ರೀ?...' ಸುಮಿಗೆ ಕುತೂಹಲ.

'ಕ್ವಾರ್ಟರ್ ಫೈನಲ್, ಸೆಮಿಫೈನಲ್ ಮುಗಿದು ಈಗ ಫೈನಲ್ ಪಟ್ಟಿಗೆ ಹೈಕಮಾಂಡ್ ಗ್ರೀನ್ ಸಿಗ್ನೇಚರ್ ಹಾಕಿದೆಯಂತೆ' ಅಂದ ಶಂಕ್ರಿ.

'ಸಿಎಂ ಆಯ್ಕೆ ಅವಿರೋಧವಾದರೂ ಮಂತ್ರಿಗಳ ಆಯ್ಕೆ ಅವಿರತ ಆಗೋಯ್ತಲ್ಲ. ಪಾಪ! ಆಕಾಂಕ್ಷಿಗಳು ವಾರದಿಂದ ನಿದ್ರೆ-ನೆಮ್ಮದಿಯಿಲ್ಲದೆ, ಊಟ-ತಿಂಡಿ, ಕೆಲಸಕಾರ್ಯ ಬಿಟ್ಟು ದಿಲ್ಲಿ ಧ್ಯಾನ ಮಾಡಿಕೊಂಡಿದ್ದರು'.

'ಶಾಸಕರ ಗಾತ್ರ, ಘನತೆ, ನಿಷ್ಠೆ-ಪ್ರತಿಷ್ಠೆಯನ್ನು ಅಳೆದು ತೂಗಿ ಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆಯಂತೆ'.

'ಯಾರಿಗೆ ಯಾವ ಖಾತೆ ಅನ್ನುವುದೂ ತೀರ್ಮಾನವಾಗಿದೆಯೆ? ಇಲ್ಲಾಂದ್ರೆ ಖಾತೆಯ ಪಟ್ಟಿ ಹಿಡಿದು ಸಿಎಂ ಮತ್ತೆ ದೆಹಲಿಯಾನ ಮಾಡಬೇಕಾಗುತ್ತದೆ. ರಾಜ್ಯದ ಗಡಿಗೆ ಬಂದು ಕುಳಿತಿರುವ ಕೊರೊನಾ 3ನೇ ಅಲೆ ಒಳ ನುಗ್ಗುವುದರೊಳಗೆ ಮಂತ್ರಿಗಳಿಗೆ ಪದವಿ ಹಂಚಿ ಪಟ್ಟಾಭಿಷೇಕ ಮಾಡಬೇಕು'.

'3ನೇ ಅಲೆಗಿಂತ ಬಂಡಾಯದ ಅಲೆ ಅಪಾಯಕಾರಿಯಂತೆ. ರಾಜ್ಯಭಾರ ವ್ಯಾಜ್ಯಭಾರ ಆಗಬಾರದು ಅಂತ ಬಂಡಾಯದ ಅಲೆ ನಿಯಂತ್ರಣಕ್ಕೆ ಲಸಿಕೆ, ಚಿಕಿತ್ಸೆ ಸಿದ್ಧಮಾಡಿಕೊಳ್ಳಲಾಗಿದೆಯಂತೆ'.

'ಬಂಡಾಯಗಾರರಿಗೆ ಕಾಂಗ್ರೆಸ್‌ನವರು ಕಾಲು ಹಾಕಿ ಕಷ್ಟ ತಂದೊಡ್ಡುತ್ತಾರೆ ಅಂತನಾ?'

'ಅಂಥಾ ಸಂಕಷ್ಟ ಕಾಲದಲ್ಲಿ ನಾವು ಕೈ ಹಿಡಿಯುತ್ತೇವೆ ಅಂತ ದೇವೇಗೌಡರು ಸಿಎಂಗೆ ವರ ನೀಡಿದ್ದಾರಂತೆ'.

'ತಾವು ಮಂತ್ರಿ ಸ್ಥಾನದ ಆಕಾಂಕ್ಷಿಯಲ್ಲ ಅಂತ ಕೆಲ ನಾಯಕರು ಅಧಿಕಾರ ವೈರಾಗ್ಯ ಪ್ರಕಟಿಸಿದ್ದಾರಲ್ಲ'.

'ಅವರಿಗೆ ಮಂತ್ರಿ ಸ್ಥಾನ ಸಿಗೋದು ಅನುಮಾನವಾಗಿ ಅವಮಾನದಿಂದ ತಪ್ಪಿಸಿಕೊಳ್ಳಲು ಹೀಗೆ ಹೇಳಿರಬಹುದು' ಅಂದ ಶಂಕ್ರಿ.

'ಅದಲ್ಲದೆ, 3ನೇ ಅಲೆ ವಕ್ಕರಿಸುತ್ತಿದೆ. ಸರ್ಕಾರದ ದುಡ್ಡೆಲ್ಲಾ ಕೊರೊನಾ ಪಾಲಾಗುತ್ತದೆ. ಅನುದಾನ, ಅಭಿವೃದ್ಧಿ ಇಲ್ಲದೆ ಫುಡ್ ಕಿಟ್, ಮಾಸ್ಕ್, ಸ್ಯಾನಿಟೈಸರ್ ಹಂಚುವ, ಕಿಮ್ಮತ್ತಿಲ್ಲದ ಮಂತ್ರಿಗಿರಿ ಯಾಕೆ ಬೇಕು ಅಂತ ಸುಮ್ಮನಿದ್ದಾರಂತೆ ಕಣ್ರೀ...' ಅಂದಳು ಸುಮಿ.

ದಿನದ ಟ್ವೀಟ್

ಕನ್ನಡಕ್ಕೆ ಸಿಗಲಿ ಆದ್ಯತೆ

ಕನ್ನಡಿಗರ ಜಾಣ ಮರೆವುಗಳು

1. ಬಣ್ಣಕ್ಕೆ 'ಕಲರ್' ಅನ್ನೋದು.
2. ಬಣ್ಣಗಳ ಹೆಸರೆಲ್ಲ ಇಂಗ್ಲಿಷಿನಲ್ಲಿ ಹೇಳೋದು.
3. ದಿನ, ವಾರಗಳನ್ನು 'ಡೇಸ್', 'ವೀಕ್' ಅನ್ನೋದು.
4. ದೋಸೆಗೆ ದೋಸಾ, ವಡೆಗೆ ವಡಾ ಅನ್ನೋ ಮರೆವು, ಮೊಸರೊಡೆಗೆ ದಹಿವಡಾ, ಅನ್ನಕ್ಕೆ ರೈಸ್ ಅನ್ನೋದು.
5. ದುಡ್ಡುಕಾಸು ಎಲ್ಲ ಆಂಗ್ಲದಲ್ಲೇ, 'ಹಂಡ್ರೆಡ್', ಫಿಫ್ಟಿ, ಕ್ರೋರ್' ಅನ್ನೋದು. #ಸಾಕುಬದಲಾಗೋಣ

ಉಮೇಶ್ ಶಿವರಾಜು, ಉದ್ಯಮಿ

ಕಿಡಿನುಡಿ

ದೆಹಲಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಯುವ ಹೊಣೆಯಿರುವ ಕೇಂದ್ರ ಗೃಹ ಸಚಿವರು ಪ್ರಮಾಣಪತ್ರ ಹಂಚಲು ಉತ್ತರ ಪ್ರದೇಶಕ್ಕೆ ಹೋಗಿದ್ದಾರೆ. ಆದರೆ, ತಮ್ಮ ಹೊಣೆ ನಿಭಾಯಿಸಲು ವಿಫಲರಾಗಿದ್ದಾರೆ.

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

25 ವರ್ಷಗಳ ಹಿಂದೆ

ಭಾನುವಾರ, 4-8-1996

• **ಅಧಿಕಾರಿಗಳಿಬ್ಬರಿಗೆ ಕೃಷಿ ಸಚಿವರಿಂದ ಕಪಾಳಮೋಕ್ಷ**

ಕೋಲಾರ, ಆ. 3– ಜಿಲ್ಲಾ ಪಂಚಾಯಿತಿ ಕಚೇರಿಯ ಇಬ್ಬರು ಅಧಿಕಾರಿಗಳಿಗೆ ಇಂದು ಸಂಜೆ ನಾಲ್ಕು ಗಂಟೆ ಸಮಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸಿ. ಬೈರೇಗೌಡರು ಕಪಾಳಮೋಕ್ಷ ಮತ್ತು ತಮ್ಮ ಕೈಲಿದ್ದ ನಡಿಗೆ ಕೋಲಿನಿಂದ ಬೆನ್ನ ಮೇಲೆ ಬಲವಾಗಿ ತಿವಿದ ಬಗ್ಗೆ ಈ ಅಧಿಕಾರಿಗಳು ಪತ್ರಿಕಾಗೋಷ್ಠಿಯಲ್ಲಿ ದೂರಿದ್ದಾರೆ.

ಜಿಲ್ಲಾ ಪಂಚಾಯಿತಿ ಕಚೇರಿಗೆ ಭೇಟಿ ನೀಡಿದ್ದ ಸಚಿವರು ಹಾಜರಿ ಪುಸ್ತಕ ತರಲು ಸೂಪರಿಂಟೆಂಡೆಂಟ್ ಅವರಿಗೆ ತಿಳಿಸಿದಾಗ ಅವರು ಹಾಜರಿ ಪುಸ್ತಕ ತರಲು ತಡವಾದುದನ್ನು ಸಹಿಸದ ಸಚಿವರು ಕೂಡಲೇ ಹಾಲ್‌ಗೆ ನುಗ್ಗಿ ಇವರಿಗೆ ಬೆನ್ನು ಹಾಕಿ ನಿಂತಿದ್ದ ಸೂಪರಿಂಟೆಂಡೆಂಟ್ ಎಚ್. ವೆಂಕಣ್ಣ ಅವರ ಬೆನ್ನಿಗೆ ಅವರ ಕೈಲಿದ್ದ ಊರುಗೋಲಿನಿಂದ ಬಲವಾಗಿ ತಿವಿದುದಾಗಿಯೂ, ಮತ್ತೊಬ್ಬ ಸೂಪರಿಂಟೆಂಡೆಂಟ್ ಮಂಜುನಾಥ್ ಅವರ ಎಡ ಕಪಾಳಕ್ಕೆ ಬೀಸಿ ಹೊಡೆದುದಾಗಿಯೂ ಇವರಿಬ್ಬರೂ ತಿಳಿಸಿದರು. ಸಚಿವರ ವಿರುದ್ಧ ಅಧಿಕಾರಿಗಳು ಗಲ್‌ಪೇಟೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 4-8-1971

• **ವ್ಯಾಪಕ ಅಧಿಕಾರದ ದುರುಪಯೋಗ ಇಲ್ಲ: ಲೋಕಸಭೆಗೆ ಭರವಸೆ**

ನವದೆಹಲಿ, ಆ. 3– ಮೂಲಭೂತ ಹಕ್ಕುಗಳೂ ಸೇರಿ ಸಂವಿಧಾನದ ಯಾವುದೇ ಭಾಗವನ್ನಾದರೂ ತಿದ್ದುಪಡಿ ಮಾಡಲು ಸಂಸತ್ತಿಗೆ ಹಕ್ಕು ದೊರಕಿಸಿಕೊಡುವ ಸಂವಿಧಾನ (24ನೇ ತಿದ್ದುಪಡಿ) ಮಸೂದೆಯು ಇಂದು ಲೋಕಸಭೆಯಲ್ಲಿ ಅತ್ಯಧಿಕ ಪ್ರಮಾಣದ ಬೆಂಬಲ ಪಡೆಯಿತು.

ಈ ಮಸೂದೆಯ ಪ್ರಕಾರ ನೀಡಲಾಗುವ ವ್ಯಾಪಕ ಅಧಿಕಾರಗಳನ್ನು ಸರ್ಕಾರ ಎಂದಿಗೂ ದುರುಪಯೋಗ ಪಡಿಸಿಕೊಳ್ಳುವುದಿಲ್ಲ ಎಂದು ಕಾನೂನು ಸಚಿವ ಶ್ರೀ ಎಚ್.ಆರ್. ಗೋಖಲೆ ಅವರು ಸ್ಪಷ್ಟವಾದ ಆಶ್ವಾಸನೆ ಇತ್ತರು.

ಪ್ರತಿಗಾಮಿಗಳು ಪ್ರಗತಿಗೆ ಉಂಟು ಮಾಡಿದ 'ಅಡಚಣೆ'ಗಳನ್ನು ನಿರ್ಮೂಲ ಮಾಡಲು ಈ ಮಸೂದೆಯಿಂದ ಸಾಧ್ಯವಿದೆ ಎಂದು ಅದನ್ನು ಮಂಡಿಸಿದ ಸಚಿವ ಗೋಖಲೆ ಅವರು ಮತ್ತು ಅಧಿಕಾರಾರೂಢ ಪಕ್ಷದ ಉತ್ಸಾಹೀ ಸದಸ್ಯರು, ವಿರೋಧ ಪಕ್ಷಗಳಲ್ಲಿನ ವಾಮವಾದಿಗಳ ವಕ್ತಾರರು ಹಾಗೂ ಖಾತೆರಹಿತ ಸಚಿವ ಶ್ರೀ ಸಿದ್ಧಾರ್ಥ ಶಂಕರ್ ರಾಯ್ ಅವರು ವಿವರಿಸಿದರು.

ಸಂಗತ

ನಡುವಿನ ಗೆರೆಯೇ ಅಳಿಸಿರುವಾಗ...

ಕೆಲವು ಮಠಗಳು ತಮ್ಮದೇ ಜಾತಿಯ ರಾಜಕಾರಣಿಗಳ ರಕ್ಷಣೆಗೆ ಕಂಕಣಬದ್ಧವಾಗುವುದು ಇಂದಿನ ಮಾರುಕಟ್ಟೆ ಆರ್ಥಿಕತೆಯ ಸೂತ್ರಗಳಿಗೆ ಅನುಗುಣವಾಗಿಯೇ ಇದೆಯಲ್ಲವೇ?

• ನಡಹಳ್ಳಿ ವಸಂತ್

ರಾಜಕೀಯದಲ್ಲಿ ಧಾರ್ಮಿಕ ಕ್ಷೇತ್ರದವರು ಮೂಗು ತೂರಿಸುತ್ತಿದ್ದಾರೆ ಎಂದು ಪ್ರಜ್ಞಾವಂತರು ಇಂದು ತಕರಾರುಗಳನ್ನು ಎತ್ತುತ್ತಿದ್ದಾರೆ. ಸೋಜಿಗವೆಂದರೆ, ಇದರಿಂದ ತೊಂದರೆಗೊಳಗಾಗಿರುವ ಕೆಲವು ರಾಜಕಾರಣಿಗಳು ತಮ್ಮ ಆಕ್ಷೇಪಗಳನ್ನು ಹೇಳಿಕೊಳ್ಳುತ್ತಿದ್ದಾರೆ. ಇವೆಲ್ಲಾ ಮೇಲ್ನೋಟಕ್ಕೆ ಕಾಣುವಷ್ಟು ಸರಳವಾದ ವಿಶ್ಲೇಷಣೆಗೆ ಸಿಗಲು ಸಾಧ್ಯವೇ?

ಚುನಾವಣೆಗೆ ಟಿಕೆಟ್ ಪಡೆಯುವ ಹಂತದಿಂದಲೇ ಜಾತಿ, ಧರ್ಮಗಳ ಲೆಕ್ಕಾಚಾರಗಳು ಶುರುವಾಗುತ್ತವೆ. ಇಲ್ಲಿಂದಲೇ ಧಾರ್ಮಿಕ ಮುಖಂಡರ ರಂಗಪ್ರವೇಶ ಪ್ರಾರಂಭವಾಗಿರುತ್ತದೆ. ವೋಟಿನ ಬೇಟೆಗೆ, ಮಂತ್ರಿ ಪದವಿ ಗಳಿಸಲು, ಆಪಾದನೆಗಳಿಂದ ತಪ್ಪಿಸಿಕೊಳ್ಳಲು- ಹೀಗೆ ಪ್ರತೀ ಹಂತದಲ್ಲಿಯೂ ರಾಜಕಾರಣಿಗಳು ಧಾರ್ಮಿಕ ಕ್ಷೇತ್ರಗಳಿಗೆ ಎಡತಾಕುತ್ತಾರೆ. ನಮ್ಮ ಮತದಾರರು ಕೂಡ ಇಂತಹ ಎಲ್ಲಾ ವರ್ತನೆಗಳನ್ನು ಮಾನ್ಯ ಮಾಡಿರುತ್ತಾರೆ. ಹೀಗೆ ಅಯಾಚಿತವಾಗಿ ಬಂದ ಅಧಿಕಾರವನ್ನು ಧರ್ಮಪಾಲಕರೆಂದು ಕರೆಸಿಕೊಳ್ಳುವವರು ಏಕೆ ಬಳಸಿಕೊಳ್ಳಬಾರದು? ಕೇಳದೆಯೇ ಓಡಿಬಂದು ಕಾಲಿಗೆರಗುವವರು ಇರುವಾಗ ಅವರು ಆಶೀರ್ವಾದ ಮಾಡಲೇಬೇಕಲ್ಲವೇ?

ಧರ್ಮ– ರಾಜಕಾರಣದ ಸಂಬಂಧಕ್ಕೆ ಇನ್ನೂ ಆಳವಾದ ಒಳಸುಳಿಗಳಿವೆ. ಅಭಿವೃದ್ಧಿಯ ಹೆಸರಿನಲ್ಲಿ ಬದುಕಿನ ಸೌಲಭ್ಯಗಳನ್ನು ಹೆಚ್ಚಿಸಿಕೊಳ್ಳುತ್ತಾ ಜಾಗತೀಕರಣಗೊಂಡಿರುವ ಇಂದಿನ ಪ್ರಪಂಚದಲ್ಲಿ, ಎಲ್ಲ ಕ್ಷೇತ್ರಗಳಿಗೆ ಮೂಲ ಅಗತ್ಯ ಮತ್ತು ಪ್ರೇರಣೆ ಹಣ ಮಾತ್ರವಾಗಿದೆ. ಇಂದು ಹಣ ಗಳಿಕೆಗಾಗಿ ಕೇವಲ ವಸ್ತುಗಳನ್ನು ಮಾರುತ್ತಿಲ್ಲ. ವಿದ್ಯೆ, ಸಾರ್ವಜನಿಕ ಆರೋಗ್ಯವನ್ನೂ ಮಾರುತ್ತಿದ್ದೇವೆ. ಅಷ್ಟೇ ಅಲ್ಲ ಸಾಹಿತ್ಯ, ಕಲೆ, ಸಂಶೋಧನೆಯಂತಹ ದೂರಗಾಮಿ ಪರಿಣಾಮಗಳುಳ್ಳ ಮತ್ತು ಹಣ ಹೂಡುವಿಕೆ, ಗಳಿಸುವಿಕೆಗಿಂತ ಮಿಗಿಲಾದ ಉದ್ದೇಶಗಳುಳ್ಳ ಕ್ಷೇತ್ರಗಳನ್ನೂ ಈಗ ಬರೀ ಲಾಭದ ಮಾನದಂಡಗಳ ಮೇಲೆ ತೂಗಲಾಗುತ್ತದೆ.

ಇದು ಹೋಗಲಿ, ವ್ಯಕ್ತಿಯೊಬ್ಬನ ಪ್ರೇಮ, ಮಮತೆಯಂತಹ ಮೃದು ಭಾವನೆಗಳು ಮತ್ತು ತೀರಾ ಆಪ್ತವಾದ ಕಾಮವೂ ಇಂದು ಮಾರುಕಟ್ಟೆ ವಸ್ತುಗಳಾಗಿವೆ. ಹೀಗಿರುವಾಗ ಧರ್ಮವೊಂದೇ ಇವತ್ತಿನ ಮಾರುಕಟ್ಟೆ ನೀತಿಯ ಹೊರಗಿರಬೇಕೆಂದು ನಿರೀಕ್ಷಿಸುವುದು ಸಾಧ್ಯವೇ? ಕ್ಯಾಪಿಟೇಷನ್ ಶುಲ್ಕದಲ್ಲಿ ವೈದ್ಯನಾದವನೊಬ್ಬ 'ವೈದ್ಯೋ ನಾರಾಯಣೋ ಹರಿಃ' ಎಂದು ಹೇಳುತ್ತಾ ಹಳ್ಳಿಯಲ್ಲಿ ವೃತ್ತಿಯನ್ನು ನಡೆಸುತ್ತಾನೆಂಬ ನಿರೀಕ್ಷೆಯೇ ಅವಾಸ್ತವಿಕ ಅಲ್ಲವೇ?

ಧರ್ಮಗಳ ಇಂದಿನ ಸ್ಥಿತಿಯಾದರೂ ಎಂತಹುದು? ತಮ್ಮ ಉಳಿವಿಗಾಗಿ ಭಕ್ತರನ್ನು ಆಕರ್ಷಿಸಲೇಬೇಕಾಗಿರುವುದರಿಂದ ಧಾರ್ಮಿಕ ಕ್ಷೇತ್ರಗಳ ನಡುವೆ ಭಕ್ತರನ್ನು ಸೆಳೆಯಲು ಸ್ಪರ್ಧೆ ಇರುತ್ತದೆ. ಹಾಗಾಗಿ ಅವು ಕೂಡ ಮಾರುಕಟ್ಟೆ ವ್ಯವಸ್ಥೆಯ ತಂತ್ರಗಳನ್ನೆಲ್ಲಾ ಮೈಗೂಡಿಸಿಕೊಂಡಿವೆ. ಕೇವಲ 'ಸ್ಥಾವರಗಳು' ನಿರ್ಮಾಣವಾದರೆ ಸಾಲದು, ಅವು ಭವ್ಯವಾಗಿರಬೇಕು, ಆಕರ್ಷಕವಾಗಿರಬೇಕು. ಅವನ್ನು ನಿಭಾಯಿಸುವವರು ಜನರನ್ನು ಸೆಳೆಯಬಲ್ಲವರಾಗಿರಬೇಕು. ಇಲ್ಲಿನ ಪೂಜೆ, ಉತ್ಸವಗಳು ಅದ್ದೂರಿಯಾಗಿರಬೇಕು ಮತ್ತು ಅವುಗಳಿಗೆ ಎಲ್ಲಾ ಮಾಧ್ಯಮಗಳಲ್ಲಿ ಪ್ರಚಾರ ಸಿಕ್ಕಬೇಕು.

'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎನ್ನುವ ಬಸವಣ್ಣನ ವಚನ ಇಂದು ಮರೆತುಹೋಗಿದೆ. ನಾವು ನೋಡುತ್ತಿರುವುದು ಉಳ್ಳವರು ನಿರ್ಮಿಸಿದ ಭವ್ಯವಾದ ಸ್ಥಾವರಗಳು ಮಾತ್ರ.

ಹಣದ ಮೂಲ ಏನೇ ಇರಲಿ, ಹೆಚ್ಚು ದಾನ ಮಾಡುವವ ಮಹಾಭಕ್ತ. ನಮ್ಮ ಭಕ್ತಿ ನಾವು ದೇವರಿಗಾಗಿ ವ್ಯಯಿಸುವ ಹಣದ ನೇರ ಅನುಪಾತದಲ್ಲಿರುತ್ತದೆ ಎನ್ನುವುದು ಎಲ್ಲ ದೇವರುಗಳ ಅಲಿಖಿತ ಆದೇಶ ಎನ್ನುವಂತೆ ಹೆಚ್ಚಿನ ಧರ್ಮಾಧಿಕಾರಿಗಳು ನಡೆದುಕೊಳ್ಳುತ್ತಾರೆ. ಹಾಗಾಗಿ ಕಪ್ಪುಹಣಾಧಿಪತಿಗಳು ಇಂದಿನ ಮಹಾಭಕ್ತರು. ಅವರನ್ನು ರಕ್ಷಿಸುವುದು ದೇವರ, ಮಠಾಧಿಪತಿಗಳ ಹೊಣೆಯಾದಂತಿದೆ. ಅಂದಮೇಲೆ ಆಯಾ ಜಾತಿಯ ಮಠಗಳು ತಮ್ಮದೇ ಜಾತಿಯ ರಾಜಕಾರಣಿಗಳನ್ನು ರಕ್ಷಿಸಲು ಕಂಕಣಬದ್ಧವಾದರೆ, ಅದು ಇಂದಿನ ಮಾರುಕಟ್ಟೆ ಆರ್ಥಿಕತೆಯ ಸೂತ್ರಗಳಿಗೆ ಅನುಗುಣವಾಗಿಯೇ ಇರುತ್ತದಲ್ಲವೇ?



ಇಂದಿನ ಬಹುತೇಕ ಧರ್ಮಾಧಿಕಾರಿಗಳು ನಡೆಸುತ್ತಿರುವ ಜೀವನಶೈಲಿಯಾದರೂ ಎಂತಹುದು? ಹೆಚ್ಚಿನವರು, ಧರಿಸುವ ಬಟ್ಟೆಯಲ್ಲಿ ಮಾತ್ರ ನಮ್ಮಂತಹ ಹುಲುಮಾನವರಿಗಿಂತ ಭಿನ್ನ. ನಡೆ–ನುಡಿ, ಜೀವನಶೈಲಿಯಿಂದ ಸಮಾಜಕ್ಕೆ ಮಾರ್ಗದರ್ಶಕರಾಗಬಲ್ಲವರು ಎಂಬ ವಿಶ್ವಾಸವನ್ನು ನಮ್ಮಲ್ಲಿ ಇವರೆಲ್ಲಾ ಹುಟ್ಟಿಸುವುದು ಸಾಧ್ಯವೇ? ಮಾರ್ಗದರ್ಶನ ಮಾಡುವುದಿರಲಿ ಸಮಾಜಕಂಟಕರಾಗದಿದ್ದರೆ ಅದೇ ದೊಡ್ಡ ಉಪಕಾರ ಎನ್ನುವ ಪರಿಸ್ಥಿತಿ ಸೃಷ್ಟಿಯಾಗಿದೆ. ಇವರಲ್ಲಿ ಕೆಲವರ ಧನದಾಹ, ವೃತ್ತಿವೈಷಮ್ಯ, ರಾಜಕೀಯ ಕುಟಿಲತೆ ಇವುಗಳೆಲ್ಲಾ ವ್ಯಾಪಾರಿ ಜಗತ್ತಿನ ಧನದಾಹಿಗಳ ನಡುವೆ ನಡೆಯುವ ವ್ಯವಹಾರಗಳಿಗಿಂತ ಕಡಿಮೆಯೇನೂ ಇಲ್ಲ. ಅಂತಹವರು ನಡೆಸುವ ವಿದ್ಯಾಸಂಸ್ಥೆಗಳು ಶುದ್ಧ ವ್ಯಾಪಾರವಲ್ಲದೆ ಮತ್ತೇನು?

ಇಂದು ಧರ್ಮ ಧರ್ಮವಾಗಿಯೂ ಉಳಿದಿಲ್ಲ, ರಾಜಕೀಯ ರಾಜಕೀಯವಾಗಿಯೂ ಉಳಿದಿಲ್ಲ. ನಮ್ಮೆಲ್ಲರ ಬದುಕಿನ ಮೂಲ ಸೂತ್ರವೇ ಹಣವಾಗಿರುವಾಗ, ಎಲ್ಲಾ ಕ್ಷೇತ್ರಗಳು ಮೇಲ್ನೋಟಕ್ಕೆ ಭಿನ್ನವೆಂದು ಕಾಣಿಸಿದರೂ ಅವೆಲ್ಲವೂ ಒಂದೇ ಗುರಿಯೆಡೆಗೆ ಸಾಗಿರುವ ಭಿನ್ನಭಿನ್ನ ಸಮಾನಾಂತರ ರೇಖೆಗಳು ಮಾತ್ರ.

ಅಕ್ಕನವರ ಕ್ಷಮೆ ಕೇಳುತ್ತಾ, 'ಧನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು, ಹಣ ಕೊಡದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯಾ ನೀನು' ಎಂದು ಹಾಡಬಹುದೇನೋ ಅಥವಾ ದಾಸರ ಪದವನ್ನು 'ರೊಕ್ಕ ಎಲ್ಲಕ್ಕೂ ಬಹುದೊಡ್ಡದು ಕಾಣಕ್ಕಾ' ಎಂದೂ ಹಾಡಬಹುದು.

ವಾಚಕರ ವಾಣಿ

ಫೋನ್ ಕದ್ದಾಲಿಕೆ: ನಾಚಿಕೆಗೇಡಿನ ಅಸ್ತ್ರ

ಸರ್ಕಾರವು ವಿರೋಧ ಪಕ್ಷಗಳ ಮುಖಂಡರು ಮತ್ತು ಪತ್ರಕರ್ತರ ಫೋನ್ ಕದ್ದಾಲಿಕೆ ಮಾಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ 1996ರಲ್ಲಿ ತನಿಖೆಗೆ ಆಗ್ರಹಿಸಿದ್ದರು (ಪ್ರ.ವಾ., 25 ವರ್ಷಗಳ ಹಿಂದೆ, ಆ. 3). ಸ್ವತಃ ಹೆಗಡೆ ಅವರು ಮುಖ್ಯಮಂತ್ರಿ ಆಗಿದ್ದಾಗ ಎಚ್.ಡಿ.ದೇವೇಗೌಡರ ಫೋನ್ ಕದ್ದಾಲಿಕೆ ಮಾಡಿದ ಆರೋಪಕ್ಕೊಳಗಾಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಸಮಾಜವು ದೇಶದ್ರೋಹಿಗಳನ್ನು ಸದೆಬಡಿಯಲು ಗೂಢಚಾರಕ್ಕೆ ಬಳಸಬೇಕಾದ ಫೋನ್ ಕದ್ದಾಲಿಕೆಯು ಸರ್ಕಾರಗಳು ತಮ್ಮ ವಿರೋಧಿಗಳನ್ನು ಬಗ್ಗು ಬಡಿಯಲು ಅಸ್ತ್ರವಾಗುತ್ತಿರುವುದು ನಾಚಿಕೆಗೇಡು.

ಡಾ. ಎಚ್.ಆರ್.ಪ್ರಕಾಶ್, ಮಂಡ್ಯ

ಪ್ಲಾಸ್ಟಿಕ್ ಧ್ವಜಕ್ಕೆ ಯಾಕಿಲ್ಲ ನಿಷೇಧ?

ರಾಷ್ಟ್ರೀಯ ಹಬ್ಬ ಸ್ವಾತಂತ್ರ್ಯ ದಿನಾಚರಣೆ ಸಮೀಪಿಸುತ್ತಿದೆ. ರಾಷ್ಟ್ರಧ್ವಜವನ್ನು ಪ್ಲಾಸ್ಟಿಕ್‌ನಲ್ಲಿ ತಯಾರಿಸಿ ಬೀದಿಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಇಂತಹ ರಾಷ್ಟ್ರಧ್ವಜವು ಬಳಸಿದ ನಂತರ ಕಸದ ರಾಶಿ ಸೇರುವುದರಿಂದ ಧ್ವಜಕ್ಕೆ ಅಪಮಾನ ಮಾಡಿದಂತಾಗುತ್ತದೆ. ಅಂಗಡಿಗಳಲ್ಲಿ ಪ್ಲಾಸ್ಟಿಕ್ ಚೀಲ ಮಾರಾಟ ನಿಷೇಧಿಸಿರುವ ಸರ್ಕಾರ, ಪ್ಲಾಸ್ಟಿಕ್ ರಾಷ್ಟ್ರಧ್ವಜಗಳ ಮಾರಾಟ ನಡೆಯುತ್ತಿದ್ದರೂ ಕಣ್ಣುಮುಚ್ಚಿ ಕುಳಿತಿದೆ. ಪ್ಲಾಸ್ಟಿಕ್ ರಾಷ್ಟ್ರಧ್ವಜಗಳಿಂದ ಪರಿಸರ ಮಾಲಿನ್ಯ ಉಂಟಾಗುತ್ತದೆ. ಈ ಕುರಿತು ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪೊಲೀಸರು ಕ್ರಮ ಕೈಗೊಳ್ಳಬೇಕಿದೆ.

ಲಕ್ಷ್ಮೀಕಾಂತರಾಜು ಎಂ.ಜಿ., ಮಠಗ್ರಾಮ, ಗುಬ್ಬಿ

ಒಲಿಂಪಿಕ್ಸ್: ನಡೆಯಲಿ ಆತ್ಮಾವಲೋಕನ

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಒಂದೆರಡು ಪದಕಗಳು ಬಂದಿವೆ. ಇದು ಭಾರತಿಯರೆಲ್ಲರೂ ಸಂತೋಷಪಡುವ ಸಂಗತಿ. ಭೌಗೋಳಿಕವಾಗಿ, ಜನಸಂಖ್ಯಾ ದೃಷ್ಟಿಯಿಂದ ನಮ್ಮದು ದೊಡ್ಡ ದೇಶ. ಉಪಖಂಡವೆಂದೇ ಕರೆಯಲಾಗುವ ಭಾರತಕ್ಕೆ ಇಷ್ಟು ಪದಕಗಳು ಸಾಕೇ ಎಂಬ ಪ್ರಶ್ನೆ ಮೂಡುತ್ತದೆ. ಪಕ್ಕದ ಚೀನಾ ಪದಕಗಳ ಬೇಟೆಯಲ್ಲಿ ಮುಂಚೂಣಿಯಲ್ಲಿದೆ. ಜಗತ್ತಿನ ಸಣ್ಣ- ಪುಟ್ಟ ರಾಷ್ಟ್ರಗಳು ಕೂಡ ಈ ದಿಸೆಯಲ್ಲಿ ಮುಂದಿವೆ. ಆದರೆ ನಾವು ಮಾತ್ರ ಇನ್ನೂ ದೂರದಲ್ಲಿರುವುದಕ್ಕೆ ಕಾರಣವೇನು ಎಂಬ ಬಗ್ಗೆ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

ನಮ್ಮಲ್ಲಿ ಪ್ರತಿಭೆಗಳಿಗೇನೂ ಕೊರತೆಯಿಲ್ಲ. ಆದರೆ, ಅವುಗಳನ್ನು ಪ್ರೋತ್ಸಾಹಿಸುವ ಕಾಳಜಿ, ಜವಾಬ್ದಾರಿ ಇಲ್ಲವಷ್ಟೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದರೆ ಪ್ರಶಸ್ತಿ, ಬಹುಮಾನ ನೀಡುತ್ತವೆ. ಆದರೆ ಅದಕ್ಕೂ ಮುನ್ನ ಸ್ಥಳೀಯ ಪ್ರತಿಭೆಗಳಿಗೆ ತಳಮಟ್ಟದಲ್ಲೇ ಆರ್ಥಿಕ ನೆರವು ನೀಡಿ ಪ್ರೋತ್ಸಾಹಿಸಬೇಕು. ಆಗ ನಮ್ಮ ಪ್ರತಿಭೆಗಳಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಸಾಧನೆಯನ್ನು ನಿರೀಕ್ಷಿಸಬಹುದು.

ಶ್ರೀಧರ್ ಡಿ. ರಾಮಚಂದ್ರಪ್ಪ, ತುರುವನೂರು, ಚಿತ್ರದುರ್ಗ

ಸಂಪುಟ ಸೂತ್ರ

ಜಾತಿ, ಪಂಗಡ
ಮೂಲ, ವಲಸಿಗ
ಹಿರಿಯ, ಕಿರಿಯ...
ಸಂಪುಟ ರಚನೆಗೆ
ಹತ್ತಾರು ಸೂತ್ರ,
ಜನಸಾಮಾನ್ಯರಿಗೆ
ಒಂದೇ ಆಸೆ
ಸರ್ಕಾರ ನಡೆಯಲಿ
ಸುಸೂತ್ರ!

ಮಹಾಂತೇಶ ಮಾಗನೂರ
ಬೆಂಗಳೂರು

ಅತಿರೇಕದ ವರ್ತನೆ ಸಲ್ಲದು

ಫೇಸ್‌ಬುಕ್, ಇನ್‌ಸ್ಟಾಗ್ರಾಂನಂಥ ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ವ್ಯಕ್ತಿಗಳನ್ನು ಹಂಗಿಸುವುದರ ಜೊತೆಗೆ ಬೇರೆ ಬೇರೆ ಧರ್ಮದ ಆಚಾರ ವಿಚಾರಗಳ ಬಗ್ಗೆ ಹಾಸ್ಯಾಸ್ಪದವಾಗಿ ವಿಡಿಯೊ ಚಿತ್ರೀಕರಿಸಿ ಹರಿಬಿಡುವುದು ಸಾಮಾನ್ಯವಾಗಿಬಿಟ್ಟಿದೆ. ಕೆಲ ದಿನಗಳ ಹಿಂದೆ ಫೇಸ್‌ಬುಕ್‌ನಲ್ಲಿ ವ್ಯಕ್ತಿಯೊಬ್ಬರು ರಾಜಕೀಯ ಮುಖಂಡರೊಬ್ಬರನ್ನು ಟೀಕಿಸುವ ಭರದಲ್ಲಿ ಶ್ರವಣಬೆಳಗೊಳದ ಬಾಹುಬಲಿ ಮೂರ್ತಿಯ ಹೆಸರು ಬಳಸಿಕೊಂಡು ಹಾಸ್ಯಾಸ್ಪದವಾಗಿ ಬರೆದಿದ್ದರು. ನಂತರ ಈ ಬಗ್ಗೆ ಹಲವರ ಕೋಪಕ್ಕೆ ತುತ್ತಾಗಿ, ಆ ಬರವಣಿಗೆಯನ್ನು ಅಳಿಸಿ ಹಾಕಿದರು. ಮತ್ತೊಮ್ಮೆ ಯುವತಿಯೊಬ್ಬರು ಗೊಮ್ಮಟೇಶ್ವರನ ಹೆಸರನ್ನು ಬಳಸಿ ಹಾಸ್ಯಾಸ್ಪದವಾದ ವಿಡಿಯೊ ಹಂಚಿಕೊಂಡಿದ್ದರು.

ಶಾಂತಿ, ಅಹಿಂಸಾ ಮಂತ್ರವನ್ನು ಇಡೀ ವಿಶ್ವಕ್ಕೆ ಸಾರಿದ ಬಾಹುಬಲಿ ಅಥವಾ ಗೊಮ್ಮಟೇಶ್ವರನ ಹೆಸರನ್ನು ಕ್ಷುಲ್ಲಕ ಕಾರಣಗಳಿಗೆ ಹಾಗೂ ಹಾಸ್ಯದ ಸನ್ನಿವೇಶಗಳಿಗೆ ಬಳಸುತ್ತಿರುವುದು ದುರದೃಷ್ಟಕರ. ವೈರಾಗ್ಯಮೂರ್ತಿಯನ್ನು ನಿಂದಿಸುವುದು ಇನ್ನು ಮುಂದಾದರೂ ನಿಲ್ಲಲಿ.

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

ಮೂಕಪ್ರಾಣಿಗಳ ಮೇಲಿನ ದೌರ್ಜನ್ಯಕ್ಕೆ ಶಿಕ್ಷೆಯಾಗಲಿ

ಹಾಸನ ಜಿಲ್ಲೆಯಲ್ಲಿ ಇತ್ತೀಚೆಗೆ ಹಲವಾರು ಮಂಗಗಳ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಅವುಗಳನ್ನು ಗೋಣಿಚೀಲದಲ್ಲಿ ಕಟ್ಟಿ ಎಸೆದಿದ್ದುದು ಹೇಯ ಕೃತ್ಯ. ಈ ಬಗ್ಗೆ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿರುವ ಹೈಕೋರ್ಟ್‌ನ ವಿಭಾಗೀಯ ಪೀಠ, ಪ್ರಕರಣದ ಬಗ್ಗೆ ವರದಿ ಸಲ್ಲಿಸುವಂತೆ ಹಾಸನ ಜಿಲ್ಲಾಧಿಕಾರಿಗೆ ಆದೇಶಿಸಿದ್ದು ಸ್ವಾಗತಾರ್ಹ. ವಿಕೃತ ಮನಸ್ಕರು ಪ್ರಾಣಿಗಳಿಗೆ ಹಿಂಸೆ ನೀಡುವ ಮೂಲಕ 'ಮಜಾ' ತೆಗೆದುಕೊಳ್ಳುವುದು ಸಾಮಾನ್ಯವಾದ ಸಂಗತಿಯಾಗಿದೆ. ರಸ್ತೆಗಳಲ್ಲಿ ತಮ್ಮ ಪಾಡಿಗೆ ಮಲಗಿರುವ ನಾಯಿ ಹಾಗೂ ಇತರ ಪ್ರಾಣಿಗಳ ಮೇಲೆ ಕಲ್ಲು ಎಸೆಯುವುದು, ಮನರಂಜನಾ ಸ್ಥಳಗಳಲ್ಲಿ ಮಂಗಗಳನ್ನು ಅಣಕಿಸುವುದು ಸೇರಿದಂತೆ ಹಲವು ಅಮಾನವೀಯ ಹಾಗೂ ಅನಾಗರಿಕ ಕೃತ್ಯಗಳು ನಡೆಯುತ್ತಿರುತ್ತವೆ.

ಪ್ರಾಣಿಗಳ ಮೇಲೆ ದೌರ್ಜನ್ಯ ಎಸಗುವವರನ್ನು ಶಿಕ್ಷಿಸಲು ದೇಶದಲ್ಲಿ 'ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ' 1960ರಷ್ಟು ಹಿಂದೆಯೇ ಅಸ್ತಿತ್ವಕ್ಕೆ ಬಂದಿದೆಯಾದರೂ ಈ ಕಾಯ್ದೆಯ ಅಡಿ ಶಿಕ್ಷೆಗೆ ಒಳಗಾಗುತ್ತಿರುವವರ ಸಂಖ್ಯೆ ಗೌಣವಾಗಿದೆ. ಸರ್ಕಾರ ಈ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದು ಮೂಕಪ್ರಾಣಿಗಳ ಮೇಲಿನ ದೌರ್ಜನ್ಯವನ್ನು ತಡೆಯಬೇಕಾಗಿದೆ.

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಒಟಿಟಿ, ಆ್ಯಪ್‌ಗಳ ನೀಲಿ ಮಾರುಕಟ್ಟೆ

ಭಾರತದಲ್ಲಿ ಆ್ಯಪ್ ಮತ್ತು ಒಟಿಟಿ ಆಧಾರಿತ ವಯಸ್ಕರ ವಿಡಿಯೊಗಳ ಮಾರುಕಟ್ಟೆಯು ದೊಡ್ಡ ಉದ್ಯಮವಾಗಿ ಬೆಳೆದಿದೆ. ಮಾರುಕಟ್ಟೆ ಸಮೀಕ್ಷೆಗಳ ಪ್ರಕಾರ 2020ರಲ್ಲಿ ಆ್ಯಪ್ ಆಧಾರಿತ ನೀಲಿ ಚಿತ್ರಗಳ ಮಾರುಕಟ್ಟೆಯ ವಹಿವಾಟು ₹ 3,800 ಕೋಟಿ. ಭಾರತದಲ್ಲಿ ಏಳೆಂಟು ವರ್ಷಗಳಿಂದ ಆ್ಯಪ್ ಆಧಾರಿತ ನೀಲಿ ಚಿತ್ರಗಳ ಮಾರುಕಟ್ಟೆ ಇದೆಯಾದರೂ, ಕೋವಿಡ್ ಲಾಕ್‌ಡೌನ್‌ನ ನಂತರ ಈ ಮಾರುಕಟ್ಟೆ ಬಹಳ ವಿಸ್ತೃತವಾಗಿ ಬೆಳೆದಿದೆ ಎಂದು ಮಾರುಕಟ್ಟೆ ಸಮೀಕ್ಷೆ ವರದಿಗಳು ಹೇಳಿವೆ.

ಈ ಹಿಂದೆ ವಯಸ್ಕರ ಸಿನಿಮಾಗಳನ್ನು ನಿರ್ಮಿಸುತ್ತಿದ್ದ ನಿರ್ಮಾಪಕರೇ ಈಗ ಆ್ಯಪ್ ಆಧಾರಿತ ನೀಲಿ ಚಿತ್ರಗಳ ಉದ್ಯಮವನ್ನು ನಡೆಸುತ್ತಿದ್ದಾರೆ. ಹಿಂದಿಯಲ್ಲಿ ನೀಲಿ ಚಿತ್ರಗಳನ್ನು ನಿರ್ಮಿಸುತ್ತಿದ್ದ ಯಶ್ ಠಾಕೂರ್‌ನನ್ನು ಭಾರತದ ನೀಲಿ ಚಿತ್ರಗಳ ರಾಜ ಎಂದು ಕರೆಯಲಾಗುತ್ತದೆ. ಭಾರತದಲ್ಲಿ ಚಂದಾದಾರರಾಗಿ ನೀಲಿ ಚಿತ್ರವನ್ನು ನೋಡುವ ಮೊದಲ ಆ್ಯಪ್ ಬಿಡುಗಡೆ ಮಾಡಿದ್ದು ಇದೇ ಯಶ್ ಠಾಕೂರ್ ಎನ್ನಲಾಗಿದೆ. ಯಶ್ ಠಾಕೂರ್ ಒಡೆತನದ ನ್ಯೂಫ್ಲಿಕ್ಸ್ ಮತ್ತು ಫ್ಲಿಜ್‌ಮೂವಿಸ್ ಎಂಬ ಆ್ಯಪ್‌ಗಳು ಕೋಟಿಗಟ್ಟಲೆ ಸಂಖ್ಯೆಯಲ್ಲಿ ಡೌನ್‌ಲೋಡ್ ಆಗಿವೆ.

ನೀಲಿ ಚಿತ್ರಗಳ ಆ್ಯಪ್ ಆರಂಭಿಸುವವರಿಗೆ ಆ್ಯಪ್ ಅಭಿವೃದ್ಧಿಪಡಿಸಿಕೊಡುವ ಉದ್ಯಮವನ್ನೂ ಯಶ್ ಠಾಕೂರ್ ನಡೆಸುತ್ತಿದ್ದಾರೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ. ಭಾರತದಲ್ಲಿ ಆ್ಯಪ್ ಆಧಾರಿತ ವಯಸ್ಕರ ವಿಡಿಯೊ ಉದ್ಯಮವು ಮುಂಬೈ ಕೇಂದ್ರಿತವಾಗಿವೆ. ಇಲ್ಲಿ ನಿರ್ಮಿಸಲಾಗುವ ನೀಲಿ ವಿಡಿಯೊಗಳಲ್ಲಿ 15 ನಟಿಯರು ಮತ್ತು 4 ನಟರು ನಟಿಸುತ್ತಿದ್ದಾರೆ. ಇವುಗಳನ್ನು ನಿರ್ಮಿಸುವ ಚಿತ್ರ ತಂಡದ ಸಂಖ್ಯೆ 6 ದಾಟುವುದಿಲ್ಲ ಎಂದು ಮೂಲಗಳು ಹೇಳಿವೆ.

ಈ ಆ್ಯಪ್‌ಗಳನ್ನು ಅಳವಡಿಸಿಕೊಳ್ಳುವವರು ಪ್ಯಾಕೇಜ್ ರೂಪದಲ್ಲಿ ನೀಲಿ ಚಿತ್ರಗಳನ್ನು ಖರೀದಿಸಬೇಕಾಗುತ್ತದೆ ಮತ್ತು ಕೆಲವೊಮ್ಮೆ ತಿಂಗಳ ಚಂದಾದಾರಿಕೆ ಪಡೆಯಬೇಕಾಗುತ್ತದೆ. ಕೆಲವು ಆ್ಯಪ್‌ಗಳು ಪ್ರತಿ ನೀಲಿಚಿತ್ರ ಮತ್ತು ನೇರ ಪ್ರಸಾರಕ್ಕೆ ಪ್ರತ್ಯೇಕ ಶುಲ್ಕ ವಿಧಿಸುತ್ತವೆ. ಕೆಲವು ಸಿನಿಮಾಗಳಿಗೆ ಕೇವಲ ₹ 10 ದರದಲ್ಲಿ ಶುಲ್ಕ ವಿಧಿಸಲಾಗುತ್ತದೆ. ಕೆಲವು ಆ್ಯಪ್‌ಗಳು ₹ 198ಕ್ಕೆ ಒಂದು ವರ್ಷದ ಚಂದಾದಾರಿಕೆ ನೀಡುತ್ತವೆ. ಕಡಿಮೆ ಶುಲ್ಕ ಇರುವ ಕಾರಣಕ್ಕೇ ಈ ಆ್ಯಪ್‌ಗಳ ಮಾರುಕಟ್ಟೆ ವಿಸ್ತಾರವಾಗಿ ಬೆಳೆದಿದೆ. ನೇರ ಪ್ರಸಾರದ ಸವಲತ್ತು ಹೊಂದಿರುವ ಆ್ಯಪ್‌ಗಳಿಗೆ ದುಬಾರಿ ಶುಲ್ಕ ವಿಧಿಸಲಾಗುತ್ತದೆ. ಈ ಆ್ಯಪ್‌ಗಳಲ್ಲಿ ನಿಮಿಷಗಳ ಲೆಕ್ಕಾಚಾರದಲ್ಲಿ ಶುಲ್ಕ ವಿಧಿಸಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಶುಲ್ಕ ಪಾವತಿಯ ಸೌಲಭ್ಯವಿರುವ ನೀಲಿ ಚಿತ್ರಗಳ ಆ್ಯಪ್‌ಗಳನ್ನು ಅಭಿವೃದ್ಧಿಪಡಿಸುವ ಬಹುತೇಕ ತಂತ್ರಜ್ಞರು ಯಶ್ ಠಾಕೂರ್‌ಗಾಗಿಯೇ ಕೆಲಸ ಮಾಡುತ್ತಿದ್ದಾರೆ. ಆ್ಯಪ್ ಆಧಾರಿತ ನೀಲಿ ಚಿತ್ರಗಳ ಉದ್ಯಮದಲ್ಲಿ ಈಚಿನ ವರ್ಷಗಳಲ್ಲಿ ಕೇಳಿಬಂದ ಮತ್ತೊಂದು ದೊಡ್ಡ ಹೆಸರು ಉದ್ಯಮಿ ರಾಜ್ ಕುಂದ್ರಾ ಅವರದ್ದು. ರಾಜ್ ಕುಂದ್ರಾ ಅವರು ಆ್ಯಪ್ ಆಧಾರಿತ ನೀಲಿ ಚಿತ್ರಗಳನ್ನು ನಿರ್ಮಿಸಲೆಂದೇ ಕೆಲವು ಕಂಪನಿಗಳನ್ನು ಆರಂಭಿಸಿದ್ದಾರೆ ಎಂದು ಹೇಳಲಾಗುತ್ತಿದೆ.

ಭಾರತದಲ್ಲೇ ಅಭಿವೃದ್ಧಿಪಡಿಸಿ ಕಾರ್ಯನಿರ್ವಹಿಸುತ್ತಿರುವ ನೀಲಿ ಚಿತ್ರಗಳ ಆ್ಯಪ್‌ಗಳ ಸಂಖ್ಯೆ 1,000 ದಾಟುತ್ತದೆ. ಕೆಲವು ಮುಖ್ಯವಾಹಿನಿ ಒಟಿಟಿ ವೇದಿಕೆಗಳೂ ಬೆತ್ತಲೆ ದೃಶ್ಯಗಳಿರುವ ವಿಡಿಯೊಗಳನ್ನು ಬಿತ್ತರಿಸುತ್ತವೆ. ಆಲ್ಟ್ ಬಾಲಾಜಿ, ಊಲು ಇವುಗಳಲ್ಲಿ ಪ್ರಧಾನವಾದ ಒಟಿಟಿ ವೇದಿಕೆಗಳು. ಪೂನಂ ಪಾಂಡೆ, ಶೆರ್ಲಿನ್ ಚೋಪ್ರಾ ಮತ್ತಿತರ ನಟಿಯರು ತಮ್ಮದೇ ಪ್ರತ್ಯೇಕ ನೀಲಿಚಿತ್ರಗಳ ಆ್ಯಪ್ ಹೊಂದಿದ್ದಾರೆ. ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್, ಎಂಎಕ್ಸ್ ಪ್ಲೇಯರ್ ಒಟಿಟಿ ವೇದಿಕೆಗಳಲ್ಲಿ ಕೆಲವು ಚಲನಚಿತ್ರಗಳು ಮತ್ತು ವೆಬ್ ಸರಣಿಗಳು ಬೆತ್ತಲೆ ದೃಶ್ಯಗಳನ್ನು ಬಿತ್ತರಿಸಿ ವಿವಾದಕ್ಕೆ ಕಾರಣವಾಗಿದ್ದವು.

ಆಧಾರ: ಗೂಗಲ್ ಪ್ಲೇಸ್ಟೋರ್, ವಿವಿಧ ಮೂಲಗಳಿಂದ

ನಿಷೇಧವಿದ್ದರೂ ಲಭ್ಯ

ನೀಲಿಚಿತ್ರಗಳನ್ನು ಪ್ರಸಾರ ಮಾಡುವ ಬಹುತೇಕ ಆ್ಯಪ್‌ಗಳು ಗೂಗಲ್ ಪ್ಲೇಸ್ಟೋರ್‌ನಲ್ಲಿ ಲಭ್ಯವಿವೆ. ಆ್ಯಪಲ್ ಸ್ಟೋರ್‌ನಲ್ಲಿ ಇಂತಹ ಆ್ಯಪ್‌ಗಳು ಇಲ್ಲವೇ ಇಲ್ಲ ಎನ್ನಬಹುದು. ಗೂಗಲ್ ಪ್ಲೇಸ್ಟೋರ್‌ನಲ್ಲಿ ಈ ಆ್ಯಪ್‌ಗಳು ಲಭ್ಯವಿದ್ದರೂ, ನೀಲಿ ಚಿತ್ರಗಳನ್ನು ಪ್ರಸಾರ ಮಾಡಿದ ಕಾರಣಕ್ಕೆ ಅವುಗಳ ವಿರುದ್ಧ ದೂರು ದಾಖಲಿಸಲು ಅವಕಾಶವಿದೆ. ದೂರು ದಾಖಲಾದ ನಂತರ ಅಂತಹ ಆ್ಯಪ್‌ಗಳನ್ನು ಪ್ಲೇಸ್ಟೋರ್‌ನಿಂದ ಗೂಗಲ್ ತೆಗೆದುಹಾಕುತ್ತದೆ.

ಯಶ್ ಠಾಕೂರ್ ಅವರ ಸಂಸ್ಥೆಗಳಿಂದ ಅಭಿವೃದ್ಧಿಪಡಿಸಿದ ಆ್ಯಪ್‌ಗಳನ್ನು ಪ್ಲೇಸ್ಟೋರ್‌ನಿಂದ ತೆಗೆದುಹಾಕಿದರೂ, ಅವುಗಳ ಹೆಸರನ್ನು ಬದಲಿಸಿ ಮರಳಿ ಪ್ಲೇಸ್ಟೋರ್‌ಗೆ ಸೇರಿಸಲಾಗುತ್ತದೆ. ಈ ಮೂಲಕ ಅಂತಹ ಅಪ್ಲಿಕೇಷನ್‌ಗಳು ಲಭ್ಯ ಇರುವಂತೆ ನೋಡಿಕೊಳ್ಳಲಾಗುತ್ತದೆ. ಇಂತಹ ಬಹುತೇಕ ಆ್ಯಪ್‌ಗಳು ನಿಷೇಧಕ್ಕೆ ಒಳಗಾಗುವುದು ಅವುಗಳಲ್ಲಿನ ನೀಲಿ ಚಿತ್ರಗಳ ಕಾರಣಕ್ಕಲ್ಲ. ಬದಲಿಗೆ ಹಣ ಪಡೆದು ಚಂದಾದಾರಿಕೆ ನೀಡಲಿಲ್ಲ, ನೀಲಿಚಿತ್ರಗಳನ್ನು ಒದಗಿಸಲಿಲ್ಲ ಎಂಬ ಶುಲ್ಕ ಪಾವತಿ ಸಂಬಂಧಿ ದೂರುಗಳ ಕಾರಣಕ್ಕೆ ಎಂದು ಮೂಲಗಳು ಹೇಳಿವೆ.

ಈ ಆ್ಯಪ್‌ಗಳನ್ನು ವಿದೇಶದಲ್ಲಿರುವ ಸರ್ವರ್‌ಗಳ ಮೂಲಕ ನಿರ್ವಹಿಸಲಾಗುತ್ತದೆ. ಹೀಗಾಗಿ ಭಾರತದಲ್ಲಿ ಜಾರಿಯಲ್ಲಿರುವ ಕಾನೂನುಗಳು ಈ ಆ್ಯಪ್‌ಗಳಿಗೆ ಮತ್ತು ಸರ್ವರ್ ಒಡೆತನ ಹೊಂದಿರುವ ಕಂಪನಿಗಳಿಗೆ ಅನ್ವಯವಾಗುವುದಿಲ್ಲ. ಯಶ್ ಠಾಕೂರ್ ಅವರ ಕಂಪನಿಯ ಎಲ್ಲಾ ಸರ್ವರ್‌ಗಳೂ ವಿದೇಶದಲ್ಲಿ ಇವೆ. ರಾಜ್ ಕುಂದ್ರಾ ಅವರ ಕಂಪನಿಯ ಸರ್ವರ್ ಬ್ರಿಟನ್‌ನಲ್ಲಿ ಇದೆ ಎಂದು ವರದಿಯಾಗಿದೆ.

ನೀಲಿ ಚಿತ್ರಗಳ ಕಾರಣಕ್ಕೆ ಈ ಆ್ಯಪ್‌ಗಳನ್ನು ಪ್ಲೇಸ್ಟೋರ್‌ನಿಂದ ತೆಗೆದುಹಾಕಿದರೂ, ಅದೇ ಹೆಸರಿನ ಜಾಲತಾಣಗಳಲ್ಲಿ ಆ್ಯಪ್ ಎಪಿಕೆ ಕಡತಗಳು ದೊರೆಯುತ್ತವೆ. ಎಪಿಕೆ ಕಡತಗಳನ್ನು ಡೌನ್‌ಲೋಡ್ ಮಾಡಿಕೊಂಡು ಆ್ಯಪ್ ಅಳವಡಿಸಿಕೊಳ್ಳಬಹುದು.

ನೀಲಿ ಚಿತ್ರಗಳಲ್ಲಿ ನಟಿಸುವ ನಟರನ್ನು ಈ ಚಿತ್ರಗಳ ಪ್ರಚಾರಕ್ಕೆ ಮತ್ತು ಗ್ರಾಹಕರನ್ನು ಸೆಳೆಯಲು ಬಳಸಲಾಗುತ್ತದೆ. ಈ ನಟ-ನಟಿಯರು ತಮ್ಮ ಟ್ವಿಟರ್, ಇನ್‌ಸ್ಟಾಗ್ರಾಂ ಖಾತೆಗಳಲ್ಲಿ ಚಿತ್ರಗಳ ಪೋಸ್ಟರ್ ಮತ್ತು ಟೀಸರ್‌ಗಳನ್ನು ಹಾಕುತ್ತಾರೆ. ಜತೆಗೆ ಚಿತ್ರಗಳು ಲಭ್ಯವಿರುವ ಆ್ಯಪ್‌ಗಳ ಲಿಂಕ್‌ಗಳನ್ನು ಪ್ರಕಟಿಸುತ್ತಾರೆ. ಆ ಮೂಲಕ ಆ್ಯಪ್ ಅಳವಡಿಸಿಕೊಳ್ಳಲು ಪ್ರೇರೇಪಿಸಲಾಗುತ್ತದೆ. ಆಲ್ಟ್ ಬಾಲಾಜಿ ಮತ್ತು ಊಲೂ ಒಟಿಟಿ ಪ್ಲಾಟ್‌ಫಾರಂಗಳಲ್ಲಿನ ಸಾಫ್ಟ್‌ಪೋರ್ನ್ ಚಿತ್ರಗಳ ಪ್ರಚಾರಕ್ಕೂ ಇದೇ ತಂತ್ರ ಅನುಸರಿಸಲಾಗುತ್ತದೆ.

ಕಾನೂನಿನ ಮೂಗುದಾರ

ಲೈಂಗಿಕ ಸಂಪರ್ಕದ ವಿಡಿಯೊವನ್ನು ವೀಕ್ಷಿಸುವುದನ್ನು ಭಾರತದಲ್ಲಿ ಅಪರಾಧ ಎಂದು ಪರಿಗಣಿಸಲಾಗಿಲ್ಲ. ವಯಸ್ಕ ವ್ಯಕ್ತಿಯು ಖಾಸಗಿಯಾಗಿ ನೀಲಿ ವಿಡಿಯೊ ವೀಕ್ಷಿಸುವುದನ್ನು ತಡೆಯುವುದು ವೈಯಕ್ತಿಕ ಸ್ವಾತಂತ್ರ್ಯದ ಉಲ್ಲಂಘನೆಯಾಗುತ್ತದೆ ಎಂದು ಸುಪ್ರೀಂ ಕೋರ್ಟ್ 2015ರ ಜುಲೈನಲ್ಲಿ ಹೇಳಿತ್ತು. ಆದರೆ, ಭಾರತೀಯ ದಂಡ ಸಂಹಿತೆ (ಐಪಿಸಿ), ಮಾಹಿತಿ ತಂತ್ರಜ್ಞಾನ ಕಾಯ್ದೆ ಮತ್ತು ಮಹಿಳೆಯರ ಅಸಭ್ಯ ಚಿತ್ರಣ (ನಿಷೇಧ) ಕಾಯ್ದೆ ಪ್ರಕಾರ, ಭಾರತದಲ್ಲಿ ವಯಸ್ಕರ ಸಿನಿಮಾಗಳನ್ನು ನಿರ್ಮಿಸುವುದು ಅಪರಾಧ. ಹಾಗೆಯೇ ಮಾಹಿತಿ ತಂತ್ರಜ್ಞಾನ ಕಾಯ್ದೆ 2000ರಲ್ಲೂ ಇದನ್ನು ಅಪರಾಧ ಎಂದು ವಿವರಿಸಲಾಗಿದೆ. ಮಕ್ಕಳನ್ನು ಲೈಂಗಿಕವಾಗಿ ಬಳಸಿಕೊಂಡ ವಿಡಿಯೊಗಳನ್ನು ನಿಷೇಧಿಸಲಾಗಿದೆ.

- **ಸೆಕ್ಷನ್ 292:** ಲೈಂಗಿಕ ಸಂಪರ್ಕವನ್ನು ತೋರಿಸುವ ಸಿನಿಮಾಗಳಿಗೆ ಸಂಬಂಧಿಸಿದ ಯಾವುದೇ ತುಣುಕನ್ನು ಮಾರಾಟ ಮಾಡುವುದು, ಬಾಡಿಗೆಗೆ ನೀಡುವುದು, ವಿತರಿಸುವುದನ್ನು ಈ ವಿಧಿ ತಡೆಯುತ್ತದೆ. ನೀಲಿಚಿತ್ರಗಳ ತಯಾರಿ, ಖರೀದಿ, ದಾಸ್ತಾನು, ಆಮದು, ರಫ್ತು, ಸಾರ್ವಜನಿಕವಾಗಿ ಪ್ರದರ್ಶನ, ಮಾರಾಟ ಮಾಡಿ ಲಾಭ ಗಳಿಸುವ ಯತ್ನ ಎಲ್ಲವೂ ಶಿಕ್ಷಾರ್ಹ ಅಪರಾಧ
- **ಸೆಕ್ಷನ್ 293:** ಭಾರತೀಯ ದಂಡ ಸಂಹಿತೆಯ ಈ ಸೆಕ್ಷನ್ ಗ್ರಾಹಕರು ಅಥವಾ ಪ್ರೇಕ್ಷಕರ ವಯಸ್ಸಿನ ಬಗ್ಗೆ ಹೇಳುತ್ತದೆ. 20 ವರ್ಷದೊಳಗಿನ ಯಾವುದೇ ವ್ಯಕ್ತಿಗೆ ವಯಸ್ಕರ ವಿಡಿಯೊಗಳ ಕಂಟೆಂಟ್ ಅನ್ನು ಮಾರಾಟ ಮಾಡುವುದು, ವಿತರಿಸುವುದು, ಪ್ರದರ್ಶಿಸುವುದು ಅಥವಾ ಪ್ರಸಾರ ಮಾಡುವ ಪ್ರಯತ್ನಗಳು ಶಿಕ್ಷೆಗೆ ಒಳಪಡುತ್ತವೆ
- **ಐ.ಟಿ. ಕಾಯ್ದೆ ಸೆಕ್ಷನ್ 67:** ಎಲೆಕ್ಟ್ರಾನಿಕ್ ರೂಪದಲ್ಲಿ ನೀಲಿ ಸಿನಿಮಾದ ದೃಶ್ಯಗಳನ್ನು ಪ್ರಕಟಿಸುವುದು ಮತ್ತು ರವಾನಿಸುವುದು ಅಪರಾಧ
- **ಮಹಿಳೆಯರ ಅಸಭ್ಯ ಪ್ರಾತಿನಿಧ್ಯ (ನಿಷೇಧ) ಕಾಯ್ದೆ 1986:** ಯಾವುದೇ ವ್ಯಕ್ತಿಯು ಮಹಿಳೆಯರನ್ನು ಅಸಭ್ಯವಾಗಿ ಪ್ರತಿನಿಧಿಸುವ ಯಾವುದೇ ಜಾಹೀರಾತನ್ನು ಪ್ರಕಟಿಸಬಾರದು. ಪ್ರಕಟಣೆ ಅಥವಾ ಪ್ರದರ್ಶನದಲ್ಲಿ ಭಾಗವಹಿಸಬಾರದು
- **ಮಕ್ಕಳ ಬಳಕೆಯು ಅಪರಾಧ:** ಲೈಂಗಿಕತೆಯ ದೃಶ್ಯ ಚಿತ್ರೀಕರಣವನ್ನು ನಿಷೇಧಿಸಲಾಗಿದೆ. ಮಕ್ಕಳನ್ನು ಇಂತಹ ವಿಡಿಯೊದಲ್ಲಿ ಬಳಸಿರುವ ವೆಬ್‌ಸೈಟ್‌ಗಳನ್ನು ನಿರ್ಬಂಧಿಸಿದೆ. ಮಕ್ಕಳ ಲೈಂಗಿಕತೆಯ ದೃಶ್ಯಗಳನ್ನು ಚಿತ್ರೀಕರಿಸುವುದು, ಪ್ರಸಾರ ಮಾಡುವುದು ಭಾರತದಲ್ಲಿ ಕಾನೂನುಬಾಹಿರ.
- **ಪೋಕ್ಸೊ ಕಾಯ್ದೆ 2012ರ ಸೆಕ್ಷನ್ 14:** ಮಕ್ಕಳನ್ನು ಲೈಂಗಿಕ ಉದ್ದೇಶಗಳಿಗಾಗಿ ಬಳಸುವುದು ಅಪರಾಧ. ದಂಡದೊಂದಿಗೆ ಕನಿಷ್ಠ ಐದು ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಲಾಗುತ್ತದೆ.
- **ಪೋಕ್ಸೊ ಕಾಯ್ದೆಯ ಸೆಕ್ಷನ್ 15:** ಯಾವುದೇ ರೀತಿಯಲ್ಲಿ ಮಕ್ಕಳ ಲೈಂಗಿಕತೆಯ ಪ್ರಸಾರ, ಪ್ರದರ್ಶನ, ವಿತರಣೆ ಕಾನೂನುಬಾಹಿರ. ಇಂತಹ ಕಂಟೆಂಟ್ ಅನ್ನು ಸಾಕ್ಷ್ಯವಾಗಿ ಸಂಗ್ರಹಿಸುವುದಕ್ಕೆ ವಿನಾಯಿತಿಯಿದೆ. ಮಕ್ಕಳನ್ನು ಲೈಂಗಿಕವಾಗಿ ಬಳಸಿಕೊಂಡ ವಿಡಿಯೊ ಸಂಗ್ರಹಿಸುವ, ಹೊಂದಿರುವ ಅಪರಾಧಿಗೆ 3-5 ವರ್ಷಗಳ ಜೈಲು ಶಿಕ್ಷೆ ಇದೆ.

‘ತಮಿಳುನಾಡಿನ ಒಪ್ಪಿಗೆ ಇಲ್ಲದೆ ಮೇಕೆದಾಟು ಯೋಜನೆ ಸಾಧ್ಯವಿಲ್ಲ’

• ಇ.ಟಿ.ಬಿ ಶಿವಪ್ರಿಯನ್

ಕರ್ನಾಟಕ ಕೇಡರ್‌ನ ಐಪಿಎಸ್ ಅಧಿಕಾರಿಯಾಗಿದ್ದ ಕೆ.ಅಣ್ಣಾಮಲೈ ಅವರಿಗೆ ತಮಿಳುನಾಡು ಬಿಜೆಪಿ ಘಟಕದ ಚುಕ್ಕಾಣಿ ನೀಡಲಾಗಿದೆ. ತಮ್ಮ ನೇಮಕ, ಕರ್ನಾಟಕ-ತಮಿಳುನಾಡು ನಡುವಣ ನೀರಿನ ಸಂಘರ್ಷ ಇತ್ಯಾದಿ ಬಗ್ಗೆ ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ ಅವರು ಮಾತನಾಡಿದ್ದಾರೆ.

ಪ್ರಜಾವಾಣಿ ಸಂದರ್ಶನ

ಅಣ್ಣಾಮಲೈ

- **ಬಿಜೆಪಿ ಸೇರಿ ವರ್ಷವೂ ಆಗಿಲ್ಲ. ಆಗಲೇ ನಿಮ್ಮನ್ನು ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ತಮಿಳುನಾಡಿಗೆ ಬಿಜೆಪಿ ಆದ್ಯತೆ ನೀಡಿರುವ ಈ ಸಂದರ್ಭದಲ್ಲಿ ತಮಗೆ ಸಿಕ್ಕ ಈ ಅವಕಾಶವನ್ನು ಹೇಗೆ ನೋಡುತ್ತೀರಿ?**

ದಕ್ಷಿಣ ಭಾರತದಲ್ಲಿ ಬೆಳೆಯಬೇಕಿದ್ದರೆ ತಮಿಳುನಾಡು ಬಹಳ ಮುಖ್ಯ ಎಂದು ನಮ್ಮ ಪಕ್ಷವು ಭಾವಿಸಿದೆ. ಕೇಂದ್ರದ ಈ ಸಾಲಿನ ಬಜೆಟ್‌ನಲ್ಲಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿದ ಹಲವು ಯೋಜನೆಗಳಲ್ಲಿ ತಮಿಳುನಾಡಿಗೆ ಸಿಂಹ ಪಾಲು ಸಿಕ್ಕಿದೆ ಎಂಬುದು ಬಹಳ ಮುಖ್ಯ. ತಮಿಳರು, ತಮಿಳು ಸಂಸ್ಕೃತಿ ಮತ್ತು ತಮಿಳರ ಸೋಲರಿಯದ ಸ್ಫೂರ್ತಿಯು ಪ್ರಧಾನಿಗೆ ವೈಯಕ್ತಿಕವಾಗಿ ಇಷ್ಟ. ಹಾಗಾಗಿ, ನನಗೆ ಕೊಟ್ಟಿರುವ ಹೊಣೆಯು ಬಹಳ ದೊಡ್ಡದು.

- **ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನಾಲ್ಕು ಸ್ಥಾನಗಳನ್ನು ಗೆಲ್ಲಲು ಎಐಎಡಿಎಂಕೆಯ ಜತೆಗಿನ ಮೈತ್ರಿಯೇ ಕಾರಣ ಎನ್ನಲಾಗುತ್ತಿದೆಯಲ್ಲ...**

ಬಿಜೆಪಿ ನಾಲ್ಕು ಕ್ಷೇತ್ರಗಳಲ್ಲಿ ಗೆದ್ದದ್ದು ಹೇಗೆ ಎಂಬ ಬಗ್ಗೆ ನಾನು ಮಾತನಾಡುವುದಿಲ್ಲ. ಕೊಡು–ಕೊಳುವಿಕೆಯು ಯಾವುದೇ ಮೈತ್ರಿಯ ಲಕ್ಷಣವಾಗಿದೆ. ನಮ್ಮ ಮತಗಳು ಮತ್ತು ಇಲ್ಲಿ ದೊಡ್ಡ ಪಕ್ಷವಾಗಿರುವ ಎಐಎಡಿಎಂಕೆಯ ಮತಗಳು ಒಟ್ಟಾಗಿವೆ.

- **ಜಲಾಶಯ ನಿರ್ಮಾಣಕ್ಕೆ ತಮಿಳುನಾಡಿನ ಅನುಮತಿ ಬೇಕಿಲ್ಲ ಎಂದು ಕರ್ನಾಟಕ ಹೇಳುತ್ತಿದೆ...**

ಕಾನೂನಿನ ದೃಷ್ಟಿಯಿಂದ ನೋಡುವುದಾದರೆ ಕರ್ನಾಟಕಕ್ಕೆ ತಮಿಳುನಾಡಿನ ಅನುಮತಿ ಬೇಕು. ಕೆಳಭಾಗದ ರಾಜ್ಯದ ಅನುಮತಿ ಇಲ್ಲದೆ ಅಣೆಕಟ್ಟೆ ನಿರ್ಮಿಸಲಾಗದು ಎಂದು ಕೇಂದ್ರ ಜಲ ಸಂಪನ್ಮೂಲ ಸಚಿವಾಲಯವೂ ಹೇಳಿದೆ. ಪರಿಸ್ಥಿತಿ ಹೀಗೆ ಇದೆ. ಕೇಂದ್ರವು ತಮಿಳುನಾಡನ್ನು ಕೈಬಿಡುವುದಿಲ್ಲ ಎಂಬ ಭರವಸೆಯನ್ನು ನಾನು ನೀಡಬಲ್ಲೆ.

- **ಮೇಕೆದಾಟು ಜಲಾಶಯ ಯೋಜನೆಯನ್ನು ಜಾರಿ ಮಾಡಿಯೇ ತೀರುವುದಾಗಿ ಕರ್ನಾಟಕದ ಬಿಜೆಪಿ ನೇತೃತ್ವದ ಸರ್ಕಾರ ಹೇಳುತ್ತಿದೆ. ತಮಿಳುನಾಡು ಬಿಜೆಪಿಯ ನಿಲುವು ಏನು?**

ತಮಿಳುನಾಡು ಬಿಜೆಪಿಯ ನಿಲುವು ಸ್ಪಷ್ಟ. ಈ ವಿಚಾರವು 2017ರಿಂದಲೂ ಸುಪ್ರೀಂ ಕೋರ್ಟ್ ಮುಂದೆ ಇದೆ. ನದಿಹರಿವಿನ ಕೆಳಭಾಗದ ರಾಜ್ಯಗಳ ಅನುಮತಿ ಇಲ್ಲದೆ ಜಲಾಶಯ ನಿರ್ಮಾಣ ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್‌ನ ನಿರ್ದೇಶನಗಳು ಮತ್ತು ಮಾರ್ಗಸೂಚಿಗಳು ಸ್ಪಷ್ಟವಾಗಿ ಹೇಳಿವೆ. ತಮಿಳುನಾಡು ಕೆಳಭಾಗದ ರಾಜ್ಯವಾಗಿರುವ ಕಾರಣ ಜಲಾಶಯ ನಿರ್ಮಾಣಕ್ಕೆ ತಮಿಳುನಾಡಿನ ಅನುಮತಿ ಅಗತ್ಯ. ಅದೂ ಅಲ್ಲದೆ, ಅಣೆಕಟ್ಟೆ ನಿರ್ಮಾಣ ಕರ್ನಾಟಕದ ಕೈಯಲ್ಲಿ ಇಲ್ಲ. ಕೇಂದ್ರವು ಅನುಮತಿ ನೀಡಬೇಕಾಗುತ್ತದೆ.

- **ಮೇಕೆದಾಟು ಯೋಜನೆಯ ವಿರುದ್ಧ ತಮಿಳುನಾಡು ಬಿಜೆಪಿ ಘಟಕವು ಆಗಸ್ಟ್ 5ರಂದು ನಡೆಸಲಿರುವ ನಿರಶನಕ್ಕೆ ಕರ್ನಾಟಕದ ಹೊಸ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಟುವಾದ ಪ್ರತಿಕ್ರಿಯೆ ನೀಡಿದ್ದಾರೆ...**

ತಮಿಳುನಾಡು ಬಿಜೆಪಿಯ ನಿಲುವು ಏನು ಎಂಬುದನ್ನು ಸ್ಪಷ್ಟಪಡಿಸಿದ್ದೇನೆ. ಈ ವಿಚಾರದಲ್ಲಿ ಬೇರೆ ಯಾವ ಪ್ರತಿಕ್ರಿಯೆಯನ್ನೂ ನೀಡುವುದಿಲ್ಲ.

- **ತಮಿಳುನಾಡು ಬಿಜೆಪಿಯ ಈ ಹಿಂದಿನ ಅಧ್ಯಕ್ಷರಾಗಿದ್ದ ಎಲ್. ಮುರುಗನ್ ಅವರು ‘ಕೊಂಗುನಾಡಿನವರು’ ಎಂದು ಬಿಜೆಪಿ ಉಲ್ಲೇಖಿಸಿತ್ತು. ತಮಿಳುನಾಡು ವಿಭಜನೆಯ ಉದ್ದೇಶ ಇಲ್ಲ ಎಂದು ಆಕ್ಷೇಪ ವ್ಯಕ್ತವಾದ ಬಳಿಕ ಸ್ಪಷ್ಟಪಡಿಸಿದೆ. ಬಿಜೆಪಿಯು ಈ ವಿಚಾರದಲ್ಲಿ ಪರೀಕ್ಷಿಸಿ ನೋಡುವ ಪ್ರಯತ್ನ ಮಾಡಿತೇ?**

ಕಳೆದ ತಿಂಗಳು ಪ್ರಮಾಣವಚನ ಸ್ವೀಕರಿಸಿದ 43 ಸಚಿವರಲ್ಲಿ ಕನಿಷ್ಠ ಎಂಟು ಮಂದಿ ತಮ್ಮ ಸಾಮಾಜಿಕ ಅಸ್ಮಿತೆಯನ್ನು ಉಲ್ಲೇಖಿಸಿದ್ದಾರೆ– ಬುಂದೇಲ್‌ಖಂಡ, ಪೂರ್ವಾಂಚಲ, ಘರ್ವಾಲ್, ಕೊಂಕಣ ಮಹಾರಾಷ್ಟ್ರ, ದಕ್ಷಿಣ ಕನ್ನಡ ಮತ್ತು ಕೊಂಗನಾಡು ಎಂದು ಹೇಳಿದ್ದಾರೆ. ಇದು ಸಾಮಾಜಿಕ ಅಸ್ಮಿತೆಯ ಉಲ್ಲೇಖವಲ್ಲದೆ ಬೇರೇನೂ ಅಲ್ಲ.

ಬಾಲಿವುಡ್‌ಗೆ ಬಿಡದ ನಂಟು

ರಾಜ್ ಕುಂದ್ರಾ: ಬಾಲಿವುಡ್ ನಟ ಶಿಲ್ಪಾ ಶೆಟ್ಟಿ ಅವರ ಪತಿ, ಉದ್ಯಮಿ ರಾಜ್ ಕುಂದ್ರಾ ಅವರನ್ನು ನೀಲಿ ಚಿತ್ರ ನಿರ್ಮಾಣ ಪ್ರಕರಣ ಸಂಬಂಧ ಮುಂಬೈ ಪೊಲೀಸರು ಬಂಧಿಸಿದ್ದಾರೆ. ಕುಂದ್ರಾ ಅವರು ‘ಹಾಟ್‌ಶಾಟ್ಸ್’ ಹೆಸರಿನ ಆ್ಯಪ್ ಮೂಲಕ ವಯಸ್ಕರ ಚಿತ್ರಗಳಲ್ಲಿ ನಟಿಸುವ ಆಮಿಷವೊಡ್ಡಿದ್ದಾರೆ ಎಂದು ಆರೋಪಿಸಿ ಹಲವು ಮಹಿಳೆಯರು ದೂರು ನೀಡಿದ್ದಾರೆ. ಬ್ರಿಟನ್ ಮೂಲದ ಸಂಸ್ಥೆಯ ಒಡೆತನದಲ್ಲಿರುವ ಈ ಸಂಸ್ಥೆಯನ್ನು ಕುಂದ್ರಾ ಅವರ ಅಳಿಯ ನೋಡಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಲಾಗಿದೆ.

ಹಾಟ್‌ಶಾಟ್ಸ್ ‘ವಿಶ್ವದ ಮೊದಲ 18 + ಆ್ಯಪ್’ ಎಂದು ವಿವರಿಸಲಾಗಿದೆ. ಸೆಲೆಬ್ರಿಟಿಗಳ ಫೋಟೊಗಳು, ಕಿರುಚಿತ್ರಗಳು ಮತ್ತು ಲೈಂಗಿಕವಾಗಿ ಪ್ರಚೋದನಕಾರಿ ವಿಡಿಯೋಗಳು ಇದರಲ್ಲಿವೆ. ಉಚಿತವಾಗಿ ಆ್ಯಪ್ ಡೌನ್‌ಲೋಡ್ ಮಾಡುವ ಆಯ್ಕೆಯನ್ನು ಗೂಗಲ್ ಪ್ಲೇಸ್ಟೋರ್ ಮತ್ತು ಆ್ಯಪಲ್ ಸ್ಟೋರ್‌ಗಳಿಂದ ತೆಗೆದುಹಾಕಲಾಗಿದೆ.

ಶೆರ್ಲಿನ್ ಚೋಪ್ರಾ: ಬಾಲಿವುಡ್ ನಟಿ ಶೆರ್ಲಿನ್ ಚೋಪ್ರಾ ಅವರು ತಮ್ಮದೇ ಆ್ಯಪ್ ಮೂಲಕ ಲೈಂಗಿಕತೆಯ ವಿಡಿಯೊಗಳನ್ನು ಪ್ರಸಾರ ಮಾಡುತ್ತಿದ್ದಾರೆ. ಬಂಧನಕ್ಕೊಳಗಾಗಿರುವ ರಾಜ್ ಕುಂದ್ರಾ ಜೊತೆಗೂ ವ್ಯಾವಹಾರಿಕ ನಂಟು ಇತ್ತು ಎಂದು ಬಹಿರಂಗಪಡಿಸಿದ್ದಾರೆ. ತಮ್ಮನ್ನು ನೀಲಿ ಸಿನಿಮಾ ಉದ್ಯಮಕ್ಕೆ ತಳ್ಳಿದವರು ಕುಂದ್ರಾ ಎಂದು ಶೆರ್ಲಿನ್ ಹೇಳಿಕೆ ನೀಡಿದ್ದಾರೆ. ಪ್ರತಿ ಪ್ರಾಜೆಕ್ಟ್‌ಗೆ ಶೆರ್ಲಿನ್ ₹30 ಲಕ್ಷ ಪಡೆಯುತ್ತಿದ್ದರು ಎನ್ನಲಾಗಿದ್ದು, ಅವರು ಇದುವರೆಗೆ ರಾಜ್ ಕುಂದ್ರಾ ಅವರಿಗಾಗಿ 15ರಿಂದ 20 ಪ್ರಾಜೆಕ್ಟ್‌ಗಳನ್ನು ನಿರ್ವಹಿಸಿದ್ದಾರೆ ಎಂದು ತಿಳಿದುಬಂದಿದೆ.

ಪೂನಂ ಪಾಂಡೆ: ಬಾಲಿವುಡ್ ನಟಿ ಪೂನಂ ಅವರು ತಮ್ಮದೇ ಆದ ವಯಸ್ಕರ ಆ್ಯಪ್ ಹೊಂದಿದ್ದಾರೆ. ಪೂನಂ ಪಾಂಡೆ ಅವರನ್ನೂ ವಯಸ್ಕ ಚಿತ್ರಗಳ ಉದ್ಯಮಕ್ಕೆ ನೂಕಿದ್ದು ರಾಜ್‌ಕುಂದ್ರಾ ಎಂದು ಸ್ವತಃ ಅವರೇ ಹೇಳಿಕೊಂಡಿದ್ದಾರೆ. ಕುಂದ್ರಾ ಅವರ ಆರ್ಮ್ಸ್‌ಪ್ರೈಮ್ ಮೀಡಿಯಾ ಜತೆ ಪಾಂಡೆ ಒಪ್ಪಂದ ಮಾಡಿಕೊಂಡಿದ್ದರು. ಸಂಸ್ಥೆಯು ಹಲವಾರು ರೀತಿಯ ಆ್ಯಪ್‌ಗಳನ್ನು ನಿರ್ವಹಿಸುತ್ತಿದ್ದು, ಪೂನಂ ಪಾಂಡೆ ಅವರು ಕುಂದ್ರಾ ಸಂಸ್ಥೆಯ ಗ್ರಾಹಕರಲ್ಲಿ ಒಬ್ಬರಾಗಿದ್ದರು. ಸಂಸ್ಥೆಯು ಪಾಂಡೆ ಅವರ ಆ್ಯಪ್‌ನ ಕೆಲಸವನ್ನು ನೋಡಿಕೊಳ್ಳುತ್ತಿದೆ. ಕುಂದ್ರಾ ಸಂಸ್ಥೆ ಜೊತೆ ಅವರ ಒಪ್ಪಂದ ಮುಕ್ತಾಯವಾಗಿದ್ದರೂ ಪಾಂಡೆ ಅವರ ವಯಸ್ಕರ ಚಿತ್ರಗಳನ್ನು ಸಂಸ್ಥೆ ಬಳಸಿಕೊಳ್ಳುತ್ತಿತ್ತು. ಇದನ್ನು ಪ್ರಶ್ನಿಸಿ ಪಾಂಡೆ ಅವರು 2020ರಲ್ಲಿ ಕುಂದ್ರಾ ವಿರುದ್ಧ ಕೋರ್ಟ್ ಮೆಟ್ಟಿಲೇರಿದ್ದರು.



ನವಾಜುದ್ದೀನ್ ಸಿದ್ದಿಕಿ: ಬಾಲಿವುಡ್ ನಟ ನವಾಜುದ್ದೀನ್ ಸಿದ್ದಿಕಿ ಅವರೂ ಲೈಂಗಿಕವಾಗಿ ಪ್ರಚೋದನಕಾರಿ ಚಿತ್ರಗಳಿಂದ ವಿವಾದಕ್ಕೆ ಒಳಗಾಗಿದ್ದರು. ‘ಬಾಬುಮೋಶಾಯಿ ಬಂದೂಕ್‌ಬಾಜ್’ ಚಿತ್ರಕ್ಕೆ ಸೆನ್ಸಾರ್ ಮಂಡಳಿಯು ಒಟ್ಟು 48 ಕಟ್‌ಗಳನ್ನು ಸೂಚಿಸಿತ್ತು. ಅಲ್ಲದೇ ಇದು ವಯಸ್ಕರ ಚಿತ್ರ ಎಂದು ಪ್ರಮಾಣಪತ್ರ ನೀಡಿತ್ತು. ಅದೇ ರೀತಿ ‘ಮಿಸ್ ಲವ್ಲಿ’ ಸಿನಿಮಾ ಕೂಡ ‘ಎ’ ಪ್ರಮಾಣಪತ್ರದೊಂದಿಗೆ ಬಿಡುಗಡೆಯಾಗಿತ್ತು. ತಾವು ಬಾಲಿವುಡ್‌ಗೆ ಪದಾರ್ಪಣೆ ಮಾಡಲು ಹೋರಾಟ ನಡೆಸುತ್ತಿದ್ದ ಸಂದರ್ಭದಲ್ಲಿ ಪ್ರಚೋದನಕಾರಿ ಚಿತ್ರವೊಂದರಲ್ಲಿ ಪಾತ್ರ ಮಾಡಿದ್ದನ್ನು ಸಂದರ್ಶನವೊಂದರಲ್ಲಿ ಅವರೇ ಹೇಳಿಕೊಂಡಿದ್ದರು ಎಂದು ಬಾಲಿವುಡ್‌ಲೈಫ್ ಡಾಟ್‌ಕಾಮ್ ವರದಿ ಮಾಡಿತ್ತು. ಅದೃಷ್ಟವಶಾತ್ ಆ ಚಿತ್ರ ತೆರೆ ಕಾಣಲಿಲ್ಲ ಎಂದು ಅವರು ಹೇಳಿಕೊಂಡಿದ್ದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಉತ್ತರ ಪ್ರದೇಶ ವಿಧಾನಸಭಾ ಚುನಾವಣಾ ಹಿನ್ನೆಲೆಯಲ್ಲಿ ಸಮುದಾಯಗಳ ಓಲೈಕೆ ಶುರುವಾಗಿದೆ. ಬಿಎಸ್‌ಪಿಯು ಇತ್ತೀಚೆಗೆ ಬ್ರಾಹ್ಮಣರ ಸಮ್ಮೇಳನ ನಡೆಸಿತ್ತು. ಈ ಸಮಯದಲ್ಲೇ ಪೋಸ್ಟರ್‌ನಲ್ಲಿರುವ ಬರಹವೊಂದು ವೈರಲ್ ಆಗಿದೆ. ‘ಬ್ರಾಹ್ಮಣರು ವಿದೇಶಿಯರು. ಅವರ ಮನೆಗಳಲ್ಲಿ ಎ.ಸಿ (ಹವಾನಿಯಂತ್ರಣ ವ್ಯವಸ್ಥೆ) ಇದೆ’ ಎಂದು ಪೋಸ್ಟರ್‌ನಲ್ಲಿ ಬರೆಯಲಾಗಿದೆ. ಸಾಕಷ್ಟು ಜನರು ಈ ಚಿತ್ರವನ್ನು ಶೇರ್ ಮಾಡಿದ್ದಾರೆ. ಅಖಿಲೇಶ್ ಅವರ ಕೋಣೆಯ ಚಿತ್ರವೊಂದನ್ನು ಪ್ರಕಟಿಸಿರುವ ಸಾಮಾಜಿಕ ಜಾಲತಾಣ ಬಳಕೆದಾರರೊಬ್ಬರು, ‘ಅಖಿಲೇಶ್ ಮನೆಯಲ್ಲಿ ಎರಡು ಎ.ಸಿ ಇವೆ. ಅವರು ವಿದೇಶಿಗರೇ’ ಎಂದು ಪ್ರಶ್ನಿಸಿದ್ದಾರೆ.

ಈ ಪೋಸ್ಟರ್ ಈಗಿನದ್ದಲ್ಲ. ಭೀಮಾ ಕೋರೆಗಾಂವ್ ಯುದ್ಧದ 200ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಹರಿಯಾಣದ ಭಿವಾನಿಯಲ್ಲಿ 2018ರಲ್ಲಿ ನಡೆದ ವಿವಿಧ ದಲಿತ ಸಂಘಟನೆಗಳ ಪ್ರತಿಭಟನಾ ಮೆರವಣಿಗೆಯಲ್ಲಿ ಪ್ರದರ್ಶಿಸಲಾದ ಪೋಸ್ಟರ್ ಇದು ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ. ಆದರೆ ಮೂಲ ಪೋಸ್ಟರ್ ಅನ್ನು ತಿರುಚಲಾಗಿದೆ. ‘ಬ್ರಾಹ್ಮಣರು ವಿದೇಶಿಗರು, ಅವರ ಡಿಎನ್‌ಎ ಯುರೇಷಿಯನ್’ ಎಂದು ಅದರಲ್ಲಿ ಉಲ್ಲೇಖಿಸಲಾಗಿತ್ತು. ಭಾರತದಲ್ಲಿ ಮೇಲ್ಜಾತಿಗಳ ಡಿಎನ್‌ಎ ಯುರೋಪಿಯನ್ನರ ಡಿಎನ್‌ಎಯನ್ನು ಹೋಲುತ್ತದೆ ಎಂದು 2001ರಲ್ಲಿ ಪ್ರಕಟವಾಗಿದ್ದ ವರದಿಯ ಆಧಾರದಲ್ಲಿ ಈ ಪೋಸ್ಟರ್ ರಚಿಸಲಾಗಿತ್ತು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಯಾಚಕನ ಕ್ರೌರ್ಯ

ಹೀಗೆ ದಾಸತ್ವದ ಬಿಡುಗಡೆಗೆ ಬೆಲೆಯನ್ನು ಘೋಷಿಸಿ ಬೋಧಿಸತ್ವ, ಮಕ್ಕಳನ್ನು ಪರ್ಣಕುಟಿಗೆ ಕರೆದೊಯ್ದು. ಅಲ್ಲಿ ಕಮಂಡಲದಲ್ಲಿ ನೀರನ್ನು ತೆಗೆದುಕೊಂಡು, ಬ್ರಾಹ್ಮಣನ್ನು ಹತ್ತಿರಕ್ಕೆ ಕರೆದು, ‘ಈ ನನ್ನ ದಾನ ಸರ್ವಜ್ಞ ಜ್ಞಾನದ ಪ್ರತ್ಯಯವಾಗಲಿ’ ಎಂದು ಪ್ರಾರ್ಥಿಸಿ. ಇಬ್ಬರೂ ಮಕ್ಕಳನ್ನು ಬ್ರಾಹ್ಮಣನಿಗೆ ದಾನ ಮಾಡಿಬಿಟ್ಟ. ‘ಹೇ ಬ್ರಾಹ್ಮಣ, ನನ್ನ ನೂರು, ಸಾವಿರ, ಲಕ್ಷ ಪುತ್ರರಿಗಿಂತ, ಈ ಸರ್ವಜ್ಞ ದಾನ ನನಗೆ ತುಂಬ ಪ್ರಿಯವಾದದ್ದು’ ಎಂದ. ಹೀಗೆ ಸಿವಿರಾಷ್ಟ್ರದ ರಾಜಕುಮಾರ, ಕುಮಾರಿಯರನ್ನು ದಾನ ಮಾಡಿದಾಗ ಪೃಥ್ವಿ ಕಂಪಿಸಿತು, ಭಯಂಕರ ಸದ್ದಾಯಿತು. ಸಿವಿರಾಜ್ಯದಲ್ಲಿ ಎಲ್ಲರಿಗೆ ರೋಮಾಂಚನವಾಯಿತು. ಅವರು ಕಾರಣ ತಿಳಿಯದೆ ತತ್ತರಿಸಿದರು.

ಬೋಧಿಸತ್ವ ದಾನದ ನಂತರ ಮಕ್ಕಳನ್ನು ಕರುಣೆಯಿಂದ ನೋಡತೊಡಗಿದ. ಆಗ ದಾನ ಪಡೆದ ಬ್ರಾಹ್ಮಣ ಕ್ರೂರನಾಗಿ ವರ್ತಿಸತೊಡಗಿದ. ತನ್ನ ಅಲುಗಿನಂತಿದ್ದ ಕೆಲವೇ ಹಲ್ಲುಗಳನ್ನು ಬಳಸಿಕೊಂಡು ಹತ್ತಿರವಿದ್ದ ಬಳ್ಳಿಯನ್ನು ಕತ್ತರಿಸಿದ. ಒಂದೇ ಬಳ್ಳಿಯಿಂದ ಕುಮಾರನ ಬಲಗೈಯನ್ನು ಕೃಷ್ಣಾಜಿನಳ ಎಡಗೈಗೆ ಬಿಗಿಯಾಗಿ ಕಟ್ಟಿದ. ಅದೇ ಬಳ್ಳಿಯ ಮತ್ತೊಂದು ತುದಿಯನ್ನು ಛಡಿಯನ್ನಾಗಿ ಮಾಡಿಕೊಂಡು, ಬೋಧಿಸತ್ವನ ಎದುರಿಗೇ ಅವರನ್ನು ರಪರಪನೇ ಹೊಡೆಯುತ್ತ, ದರದರನೇ ಎಳೆದುಕೊಂಡು ನಡೆದ. ಬೋಧಿಸತ್ವದ ಮುಖದ ಮೇಲೆ ಯಾವ ವಿಕಾರವೂ ಕಾಣಲಿಲ್ಲ.

ಮಕ್ಕಳಿಗೆ ಹೀಗೆ ಹೊಡೆದಾಗ ಪೆಟ್ಟು ಬಿದ್ದಲ್ಲೆಲ್ಲ ಚರ್ಮ ಸುಲಿಯುತ್ತಿತ್ತು. ರಕ್ತ ಜಿನುಗುತ್ತಿತ್ತು. ಏಟು ತಿಂದು ಬೀಳುವಾಗ ಮಕ್ಕಳು ಒಬ್ಬರಿಗೊಬ್ಬರು ಆಧಾರ ಕೊಡುತ್ತಿದ್ದರು. ಅವರನ್ನು ಹೀಗೆ ಹೊಡೆಯುವಾಗ ಒಮ್ಮೆ ಮುದುಕ ಬ್ರಾಹ್ಮಣ ತಾನೇ ಜಾರಿ ಬಿದ್ದ. ಮಕ್ಕಳ ಕೈಗೆ ಕಟ್ಟಿದ ಕಟ್ಟು ಬಿಚ್ಚಿಹೋಯಿತು. ತಕ್ಷಣವೇ ಅವರಿಬ್ಬರೂ ಅಳುತ್ತಾ, ಓಡಿ ಬೋಧಿಸತ್ವನ ಬಳಿಗೆ ಮರಳಿ ಬಂದರು. ನೀರು ತುಂಬಿದ ಕಣ್ಣುಗಳಿಂದ ತಂದೆಯನ್ನು ನೋಡುತ್ತ ಜಾಲಿಕುಮಾರ ಹೇಳಿದ, ‘ತಂದೆ, ಅಮ್ಮ ಮನೆಯಲ್ಲಿ ಇಲ್ಲ. ಆಕೆ ಇಲ್ಲದಾಗ ನಮ್ಮನ್ನು ಆ ಬ್ರಾಹ್ಮಣನ ವಶಕ್ಕೆ ಕೊಡುತ್ತಿದ್ದೀರಿ. ಅಮ್ಮ ಬರುವವರೆಗೆ ನಮ್ಮನ್ನು ಕೊಡಬೇಡಿ. ನಾವು ಅಮ್ಮನನ್ನು ನೋಡಿದ ಮೇಲೆ ಕೊಡಿ. ಆಮೇಲೆ ಬೇಕಾದರೆ ಬ್ರಾಹ್ಮಣ ನಮ್ಮನ್ನು ಹೊಡೆಯಲಿ, ಕೊಲ್ಲಲಿ ಅಥವಾ ಮಾರಲಿ. ಅಪ್ಪಾ, ಆ ಬ್ರಾಹ್ಮಣ ಭಯಂಕರನಾಗಿದ್ದಾನೆ. ಅಗಲವಾದ ಕಾಲು, ಕೊಳೆತ ಉಗುರುಗಳು, ಉದ್ದವಾದ ನೇತಾಡುವ ತುಟಿ, ತೊಟ್ಟಿಕ್ಕುತ್ತಿರುವ ಜೊಲ್ಲು, ಮುರಿದ ಮೂಗು, ಗಡಿಗೆಯಂಥ ಹೊಟ್ಟೆ, ತಾಮ್ರವರ್ಣದ ಮುಖ, ಕೆಂಪು ಕೂದಲು, ಸುಕ್ಕುಗಟ್ಟಿದ ಚರ್ಮ, ಕೆಂಪಾದ ಕಣ್ಣುಗಳು, ಬೆನ್ನು ಬಾಗಿದ ಸೊಂಟ, ಕಟಕಟ ಸಪ್ಪಳ ಮಾಡುವ ಮೂಳೆಗಳು, ಜಿಂಕೆಯ ಚರ್ಮವನ್ನು ಹೇಗೆ ಹೇಗೂ ಸುತ್ತಿಕೊಂಡು ಬ್ರಾಹ್ಮಣ ಬಹಳ ಕ್ರೂರಿಯಾಗಿದ್ದಾನೆ. ಈತ ನಿಜವಾಗಿಯೇ ಯಾಚಕನೋ ಅಥವಾ ಮನುಷ್ಯರ ರಕ್ತ ಮಾಂಸಗಳನ್ನು ತಿನ್ನುವ ಯಕ್ಷನೋ, ಪಿಶಾಚಿಯೋ? ಅಪ್ಪಾ, ನೀವು ನೋಡುತ್ತಲೇ ಇದ್ದೀರಿ. ನಿಮ್ಮ ಹೃದಯ ನಮ್ಮ ವಿಷಯದಲ್ಲಿ ಕಬ್ಬಿಣದಂತೆ ಕಠೋರವಾಗಿದೆ. ಆ ಧನ ಲೋಭಿ ಬ್ರಾಹ್ಮಣ ನಮ್ಮನ್ನು ಪಶುಗಳಂತೆ ಹೊಡೆಯುತ್ತಿದ್ದಾನೆ. ನಾನು ಹೇಗಾದರೂ ತಡೆದುಕೊಂಡೇನು. ಆದರೆ ನನ್ನ ಪ್ರೀತಿಯ ತಂಗಿ ಕೃಷ್ಣೆ ಇದನ್ನು ಸಹಿಸಲಾರಳು. ಆಕೆ ಇಲ್ಲೇ ಇರಲಿ, ನಾನು ಮಾತ್ರ ಅವನೊಂದಿಗೆ ಹೋಗುತ್ತೇನೆ” ಎಂದು ಬೇಡಿಕೊಂಡ. ಆದರೆ ಸಹನೆಯ ಮೂರ್ತಿಯಂತಿದ್ದ ಬೋಧಿಸತ್ವ ಯಾವ ಮಾತನ್ನೂ ಹೇಳಲಿಲ್ಲ.

ಗುಂಡಣ್ಣ



ದಿನ ಭವಿಷ್ಯ

ಬುಧವಾರ ಆಗಸ್ಟ್ 4, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಆಶ್ಲೇಷಾ ಏಕಾದಶಿ ಗಂ. 18-55 (ಹ. 1-47) ಬುಧವಾರ ನಿತ್ಯ ನಕ್ಷತ್ರ ಮೃಗಶಿರ ಗಂ. 54-32 (ರಾ. 4-02) ವ್ಯಾಘಾ ನಾಮ ಯೋಗ ಗಂ. 48-14 ಬಾಲವ ಕರಣ ಗಂ. 18-55 ವಿಷ ಗಂ. 3-45 ಅಮೃತ ಗಂ. 30-9 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-09 ಸೂರ್ಯಾಸ್ತ: 6-42 ಅದೃಷ್ಟ ಸಂಖ್ಯೆ 3, 7

ಮೇಷ: ಭೂ ವ್ಯವಹಾರಗಳಿಂದ ಲಾಭ. ಗುರುದೇವತಾ ದರ್ಶನ ಯೋಗಪ್ರಾಪ್ತಿ. ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿ. ದಾಂಪತ್ಯ ಸಮಸ್ಯೆಗಳಿಗೆ ಪರಿಹಾರ ದೊರೆತು ನೆಮ್ಮದಿ. ಶಿವ ಅಷ್ಟೋತ್ತರ ಪಠಿಸಿ.

ವೃಷಭ: ಕುಟುಂಬದಲ್ಲಿ ನೆಮ್ಮದಿಯ ವಾತಾವರಣ. ಸಹೋದರರಿಂದ ಸಲಹೆ, ಸಹಕಾರ ದೊರಕಿ ಗೃಹ ನಿರ್ಮಾಣ ಕಾರ್ಯಗಳಲ್ಲಿ ಪ್ರಗತಿ. ವಿದೇಶದಿಂದ ಪ್ರಮುಖ ಸುದ್ದಿಯೊಂದು ಬರುವ ಸಾಧ್ಯತೆ ಇದೆ.

ಮಿಥುನ: ದೀರ್ಘಕಾಲಿಕ ಅನಾರೋಗ್ಯದ ಸಮಸ್ಯೆಗಳಿಂದ ಮುಕ್ತರಾಗುವಿರಿ. ಪ್ರಾಪ್ತವಯಸ್ಕರಿಗೆ ಉತ್ತಮ ಸಂಬಂಧಗಳು ದೊರಕುವ ಸಾಧ್ಯತೆ. ಗೃಹ ನಿರ್ಮಾಣ ಕಾರ್ಯಗಳಲ್ಲಿ ಸ್ವಲ್ಪಮಟ್ಟಿನ ತೊಡಕು. ಮಕ್ಕಳಿಂದ ಶುಭ ವಾರ್ತೆ.

ಕರ್ಕಾಟಕ: ಕಳೆದುಹೋದ ದಿನಗಳ ಬಗ್ಗೆ ಚಿಂತಿಸದಿರಿ. ಹಿರಿಯರ ಸಲಹೆ ಸೂಚನೆಗಳನ್ನು ನಿರ್ಲಕ್ಷಿಸದಿರಿ. ಯಾವುದೇ ಕೆಲಸ ಕಾರ್ಯಗಳಲ್ಲಿ ಆತುರತೆ ತೋರಿ ಗಂಡಾಂತರಕ್ಕೆ ಸಿಲುಕದಿರಿ. ಹಿತಶತ್ರುಗಳಿಂದ ಸಮಸ್ಯೆ.

ಸಿಂಹ: ದೂರದ ಪ್ರಯಾಣ ಯೋಗ. ವಾಹನ ಖರೀದಿ ಸಾಧ್ಯತೆ. ನ್ಯಾಯಾಲಯದಲ್ಲಿ ಜಯ. ಚಿನ್ನ ಮುಂತಾದ ಹಳದಿ ಲೋಹ ವ್ಯಾಪಾರಿಗಳಿಗೆ ಉತ್ತಮ ಲಾಭದ ನಿರೀಕ್ಷೆ. ಕುಟುಂಬ ಸದಸ್ಯರಿಂದ ಉತ್ತಮ ಸಹಕಾರ.

ಕನ್ಯಾ: ಮಿತ್ರವ್ಯವಹಾರಗಳಲ್ಲಿ ಜಾಗರೂಕರಾಗಿರುವುದು ಒಳ್ಳೆಯದು. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವಿರಿ. ಮಕ್ಕಳಿಂದ ನೆಮ್ಮದಿ. ವಿದ್ಯಾಭ್ಯಾಸದಲ್ಲಿ ಉತ್ತಮ ಶ್ರದ್ಧೆಯಿಂದ ಸಫಲತೆ.

ತುಲಾ: ನಿರೀಕ್ಷಿತ ಮೂಲಗಳಿಂದ ಧನಾಗಮನ. ವೃತ್ತಿ ಸಮಸ್ಯೆಗಳಿಂದ ಪರಿಹಾರ. ಕಲಾವಿದರಿಗೆ ಉತ್ತಮ ಅವಕಾಶ ದೊರೆತು ಗೌರವಾದರಗಳು ಪ್ರಾಪ್ತವಾಗುವವು. ವಿವಾದಾತ್ಮಕ ಸಮಸ್ಯೆಗಳಿಂದ ಮುಕ್ತರಾಗುವಿರಿ.

ವೃಶ್ಚಿಕ: ಮಾತೃವರ್ಗದವರಿಂದ ಸಹಕಾರ ದೊರೆಯುವುದು. ಆರೋಗ್ಯದಲ್ಲಿ ಏರುಪೇರಾಗುವ ಸಂಭವ ಇರುವುದರಿಂದ ವೈದ್ಯರ ಸಲಹೆ ಅತ್ಯಗತ್ಯ. ಅನಾವಶ್ಯಕ ವ್ಯವಹಾರಕ್ಕೆ ತಲೆಹಾಕದಿರುವುದು ಉತ್ತಮ.

ಧನು: ತಾಯಿಯ ಆರೋಗ್ಯದ ಬಗ್ಗೆ ವಿಶೇಷ ಗಮನ ಅಗತ್ಯ. ನೆರೆಹೊರೆಯವರೊಂದಿಗೆ ಕಲಹ ಸಂಭವವಿದ್ದು ಸಮಾಧಾನದ ನಡವಳಿಕೆ ಅಗತ್ಯ. ಮಕ್ಕಳಿಂದ ನೆಮ್ಮದಿ ಸೌಖ್ಯ. ವಿವಾಹಾಕಾಂಕ್ಷಿಗಳಿಗೆ ವಿವಾಹ ಯೋಗ.

ಮಕರ: ಮನೆಯಲ್ಲಿ ನೆಮ್ಮದಿಯ ವಾತಾವರಣ. ನಿಷ್ಠೆ, ಪ್ರಾಮಾಣಿಕತೆಯಿಂದಾಗಿ ಯಶಸ್ಸು ಮತ್ತು ಪ್ರಶಂಸೆ. ವಾಹನ ಚಾಲನೆಯಲ್ಲಿ ಎಚ್ಚರಿಕೆ ಅಗತ್ಯ. ಮೇಲಧಿಕಾರಿಗಳಿಂದ ಪ್ರಶಂಸೆ. ವ್ಯಾಪಾರಿಗಳಿಗೆ ಉದ್ಯಮದಲ್ಲಿ ಪ್ರಗತಿ.

ಕುಂಭ: ದೈನಂದಿನ ಚಟುವಟಿಕೆಯಲ್ಲಿ ಉತ್ಸಾಹ. ಕುಲದೇವತಾ ದರ್ಶನ ಲಭ್ಯ. ಋಣ ಪರಿಹಾರದಿಂದ ಸಂತೃಪ್ತಿ. ಆಸ್ತಿ ಅಥವಾ ಚಿನ್ನಾಭರಣಗಳನ್ನು ಖರೀದಿಸುವ ಸಾಧ್ಯತೆ. ವೃತ್ತಿಯಲ್ಲಿನ ಸಮಸ್ಯೆಗಳು ನಿವಾರಣೆ.

ಮೀನ: ಗೃಹಿಣಿಯರು ಹರಿತವಾದ ಆಯುಧಗಳಿಂದ ಸಂಕಷ್ಟ ಎದುರಿಸುವ ಸಾಧ್ಯತೆ. ಆಧ್ಯಾತ್ಮಿಕ ಜೀವನದಲ್ಲಿ ಸಂತೃಪ್ತಿ. ವಿಶೇಷ ವ್ಯವಹಾರಗಳಲ್ಲಿ ಅಗತ್ಯ ಪ್ರೋತ್ಸಾಹಗಳು ದೊರಕುವುದು. ಸಹೋದರರಿಂದ ಸಹಕಾರ.

ನಿಮ್ಮ ಜನ್ಮದಿನ 4-ಆಗಸ್ಟ್ ಇಂದು ಅತ್ಯಂತ ಶುಭದಾಯಕ. ಈ ದಿನದ ಕೆಲಸ ಕಾರ್ಯಗಳು ಸರಾಗವಾಗಿ ಸಾಗಿ ನೆಮ್ಮದಿಯ ಬದುಕಿನತ್ತ ನಿಮ್ಮ ಪಯಣ. ಕೃಷಿಕರಿಗೆ ಅನುಕೂಲ. ವಾಣಿಜ್ಯ ಬೆಳೆಗಳಿಂದಾಗಿ ಉತ್ತಮ ಆದಾಯ ನಿರೀಕ್ಷಿಸಬಹುದು. ಹೊಸ ಆದಾಯದ ಮೂಲಗಳು ಗೋಚರವಾಗುವ ಸಾಧ್ಯತೆ ಕಂಡುಬರುತ್ತಿದೆ.

ಪದಬಂಧ 4678

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಎಲ್ಲೆ ಮೀರಿ ಪ್ರವೇಶಿಸುವುದು (6)
4.ವಲಸೆ ಹೊರಟವರು ನೆಲೆ ನಿಂತ ಪ್ರದೇಶ (4)
5.ಸಣ್ಣ ಸಣ್ಣ ಗೆಜ್ಜೆಗಳಿಂದ ಕೂಡಿದ ಕಾಲಿನ ಕಡಗ (3)
7.ಪಾಂಡಿತ್ಯವನ್ನು ಹೊಂದಿದವನು (3)
9.ಭೀಷ್ಮನ ಇನ್ನೊಂದು ಹೆಸರು (3)
12.ದುರಸ್ತಿಯನ್ನು ಹೀಗೆನ್ನಿ (3)
13.ಅದೇ ತಾನೆ ಮೂಡುತ್ತಿರುವ ಸೂರ್ಯ (4)
15.ಯಾತ್ರಿಕರು ಇಳಿದುಕೊಳ್ಳಲು ಮಾಡಿರುವ ವಸತಿ (6)

ಮೇಲಿಂದ ಕೆಳಕ್ಕೆ

1.ಆ ಜಗಲಿ ಹತ್ತಿರವಿರುವ ಹೆಬ್ಬಾವು (4)
2.ವಶಕ್ಕೆ ಸಿಕ್ಕ ಹಣ (2)
3.ಮಾತು ಕೇಳುವ ಸೋದರಮಾವ (3)
6.ಇದು ನಿಸ್ಸಾರವದು (4)
7.ಕೆಸರಿನಲ್ಲಿ ಹುಟ್ಟಿದ ಕಮಲ (3)
8.ತರತರದ ಕಾಯಿ ಪಲ್ಲೆ (4)
10.ಓಡುತ್ತಾ ಹೋಗಿ ಸುದ್ದಿ ಮುಟ್ಟಿಸುವವನು (4)
11.ಆನೆಯ ಮೇಲೆ ಕುಳಿತುಕೊಳ್ಳಲು ಹಾಕಿರುವ ಭದ್ರಾಸನ (3)
14.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ (2)



4677ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪ್ರಸೂತಿಗೃಹ 4.ಹಲುಬೆ 5.ವಲ್ಲರಿ 6.ವರ್ಧನ 7.ತಕಲಿ 9.ಅಂಕೆ 10.ಅಲೆ 12.ವಿರಸ 14.ವಿರಹ 15.ಕಯಕಾ 16.ಗಂಡಲ 17.ಸಮರಸಿಂಹ

ಮೇಲಿಂದ ಕೆಳಕ್ಕೆ: 1.ಪ್ರಸ್ತಾವನೆ 2.ತಿಳಿವಳಿಕೆ 3.ಹವನ 4.ಹರಿತ 8.ಕಡಲೆ 9.ಅಂಕುರ 10.ಅಸಹಕಾರ 11.ಕಡುದಾಹ 13.ಸಕಲ 14.ವಿಕಾಸ

ಸುಡೊಕು 5064

3	9		2		5		6	
			4			8		5
	4	5			9		3	
4	6		9		7			
				4		1		6
8		7	5		6		4	
		4			2			7
7	2			5		6		3
	8		7				5	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5063 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

‘ಎಥೆನಾಲ್ ಬಳಸುವ ವಾಹನ ವರ್ಷದಲ್ಲಿ ಮಾರುಕಟ್ಟೆಗೆ ತನ್ನಿ’

ನವದೆಹಲಿ (ಪಿಟಿಐ): ಸಂಪೂರ್ಣವಾಗಿ ಎಥೆನಾಲ್ ಹಾಗೂ ಗ್ಯಾಸೊಲಿನ್ ಬಳಸಿ ಚಲಿಸುವ ವಾಹನಗಳನ್ನು ದೇಶದ ಮಾರುಕಟ್ಟೆಗೆ ಒಂದು ವರ್ಷದೊಳಗೆ ಬಿಡುಗಡೆ ಮಾಡಬೇಕು ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ವಾಹನ ಉದ್ಯಮದ ಪ್ರತಿನಿಧಿಗಳಿಗೆ ಸಲಹೆ ಮಾಡಿದ್ದಾರೆ. ಎಲ್ಲ ಮಾದರಿಯ ವಾಹನಗಳಲ್ಲಿಯೂ ಕನಿಷ್ಠ 6 ಏರ್‌ಬ್ಯಾಗ್‌ಗಳು ಇರುವಂತೆ ನೋಡಿಕೊಳ್ಳಬೇಕು ಎಂದೂ ಮನವಿ ಮಾಡಿದ್ದಾರೆ. ಆಟೊಮೊಬೈಲ್ ತಯಾರಕರ ಸಂಘದ ಪ್ರತಿನಿಧಿಗಳು ತಮ್ಮನ್ನು ಭೇಟಿಯಾಗಿದ್ದ ಸಂದರ್ಭದಲ್ಲಿ ಈ ವಿಚಾರ ಪ್ರಸ್ತಾಪ ಮಾಡಿರುವುದಾಗಿ ಗಡ್ಕರಿ ಅವರು ಟ್ವೀಟ್ ಮಾಡಿದ್ದಾರೆ.

ರೂಪಾಯಿ: 76ರ ಗಡಿ ದಾಟುವ ನಿರೀಕ್ಷೆ

ನವದೆಹಲಿ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಒಂದು ಡಾಲರ್‌ಗೆ ₹ 76ರಿಂದ ₹ 76.50ರ ಮಟ್ಟ ತಲುಪುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ.

ಕಚ್ಚಾತೈಲ ದರ ಏರಿಕೆ ಮತ್ತು ಕೋವಿಡ್ ಸಂಬಂಧಿತ ಸಮಸ್ಯೆಗಳಿಂದಾಗಿ ದೇಶಿ ಕರೆನ್ಸಿಯ ಮೌಲ್ಯ ಇಳಿಕೆಯಾಗುವ ಸಾಧ್ಯತೆ ಕಂಡುಬಂದಿದೆ ಎಂದು ಮಾರುಕಟ್ಟೆ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಡಾಲರ್–ರೂಪಾಯಿ ಮುನ್ನೋಟವು ಅಲ್ಪಾವಧಿಯಲ್ಲಿ ಇಳಿಮುಖವಾಗಿರಲಿದೆ. ಒಂದು ಡಾಲರ್‌ಗೆ ರೂಪಾಯಿ ಮೌಲ್ಯವು ₹ 73.50ರಷ್ಟು ಇರುವ ನಿರೀಕ್ಷೆ ಇದೆ ಎಂದು ತಜ್ಞರು ಹೇಳಿದ್ದಾರೆ. ದೀರ್ಘಾವಧಿಯಲ್ಲಿ ದೇಶಿ ಕರೆನ್ಸಿಯು ₹ 75.50ರಿಂದ ₹ 76ರ ಮಟ್ಟ ತಲುಪುವ ಸಾಧ್ಯತೆ ಇದೆ. ವರ್ಷಾಂತ್ಯದ ವೇಳೆಗೆ ₹ 77ರ ಮಟ್ಟವನ್ನೂ ತಲುಪಬಹುದಾಗಿದೆ ಎಂದಿದ್ದಾರೆ.

ಅಮೆರಿಕದ ಫೆಡರಲ್ ರಿಸರ್ವ್‌ನ ಬಡ್ಡಿದರದ ಮುನ್ನೋಟ, ಅಮೆರಿಕದ ಆರ್ಥಿಕತೆಯ ಚೇತರಿಕೆ ಹಾಗೂ ಚೀನಾದೆಡೆಗೆ ಅಮೆರಿಕದ ಆಡಳಿತಾತ್ಮಕ ನಿಲುವು ರೂಪಾಯಿ ಮೌಲ್ಯದ ದಿಕ್ಕನ್ನು ನಿರ್ಧರಿಸಲಿವೆ ಎನ್ನುವುದು ತಜ್ಞರ ಅಭಿಪ್ರಾಯ. ಆರ್‌ಬಿಐನ ಹಣಕಾಸು ನೀತಿಗಳು, ವಿದೇಶಿ ಬಂಡವಾಳ ಒಳಹರಿವು ಸಹ ರೂಪಾಯಿ ಮೌಲ್ಯವನ್ನು ನಿರ್ಧರಿಸಲಿವೆ ಎಂದೂ ಅವರು ಹೇಳಿದ್ದಾರೆ.

ರೂಪಾಯಿ ಮೌಲ್ಯವು ಪ್ರಸಕ್ತ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ಇನ್ನಷ್ಟು ದುರ್ಬಲವಾಗುವ ನಿರೀಕ್ಷೆ ಇದೆ ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಹಿರಿಯ ಸಂಶೋಧನಾ ವಿಶ್ಲೇಷಕ ಶ್ರೀರಾಮ್ ಅಯ್ಯರ್ ಹೇಳಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,885
ಇಂದಿನ ಅಂತ್ಯ	16,130
▲	245
ದಿನದ ಗರಿಷ್ಠ	16,146

ವಿನಿಮಯ ದರ

$ ಡಾಲರ್	74.28
£ ಪೌಂಡ್	103.38
€ ಯುರೊ	88.30
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹462

ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ ವರದಿ

ಜುಲೈ: 32 ಲಕ್ಷ ಉದ್ಯೋಗ ನಷ್ಟ

● ಅನ್ನಪೂರ್ಣಾ ಸಿಂಗ್

ನವದೆಹಲಿ: ಜುಲೈ ತಿಂಗಳಿನಲ್ಲಿ ನಿರುದ್ಯೋಗ ಪ್ರಮಾಣದಲ್ಲಿ ಇಳಿಕೆ ಆಗಿದ್ದರೂ ಕನಿಷ್ಠ 32 ಲಕ್ಷ ಜನ ವೇತನದಾರರು ಕೆಲಸ ಕಳೆದುಕೊಂಡಿದ್ದಾರೆ ಎಂದು ‘ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ’ (ಸಿಎಂಐಇ) ಸಂಸ್ಥೆಯ ವರದಿ ಹೇಳಿದೆ.

2019ರ ಜುಲೈ ನಂತರದಲ್ಲಿ ಒಟ್ಟು ಒಂದು ಕೋಟಿ ಜನ ವೇತನದಾರರು ಉದ್ಯೋಗ ಕಳೆದುಕೊಂಡಿದ್ದಾರೆ. 2019ರಲ್ಲಿ ಒಟ್ಟು 8.60 ಕೋಟಿ ಜನ ವೇತನ ಸಿಗುವ ಕೆಲಸ ಹೊಂದಿದ್ದರು. ಈ ಸಂಖ್ಯೆಯು ಈಗ 7.60 ಕೋಟಿಗೆ ಇಳಿಕೆ ಕಂಡಿದೆ ಎಂದು ಸಿಎಂಐಇ ಸಂಸ್ಥೆ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತಿವೆ.

ನಗರ ಪ್ರದೇಶಗಳಲ್ಲಿ ನಿರುದ್ಯೋಗ ಪ್ರಮಾಣವು ಜೂನ್ ತಿಂಗಳಿನಲ್ಲಿ ಶೇಕಡ 10.7ರಷ್ಟು ಇದ್ದುದು

ಜುಲೈನಲ್ಲಿ ಶೇ 8.3ಕ್ಕೆ ಇಳಿಕೆ ಕಂಡಿದೆ. ಆದರೆ, ಉದ್ಯೋಗ ಕಳೆದುಕೊಂಡ ವೇತನದಾರರ ಪ್ರಮಾಣವು ನಗರ ಪ್ರದೇಶಗಳಲ್ಲಿಯೇ ಹೆಚ್ಚಿದೆ.

ಕೋವಿಡ್ ಸಾಂಕ್ರಾಮಿಕದ ಎರಡನೆಯ ಅಲೆಯ ಸಂದರ್ಭದಲ್ಲಿ ಕೆಲಸ ಕಳೆದುಕೊಂಡವರಲ್ಲಿ ಮಹಿಳೆಯರಿಗಿಂತಲೂ ಪುರುಷರ ಪ್ರಮಾಣ ಹೆಚ್ಚು ಎಂದು ಸಿಎಂಐಇ ಈ ಮೊದಲು ಅಂದಾಜಿಸಿತ್ತು. ಮಹಿಳೆಯರು ಮೊದಲ ಅಲೆಯ ಸಂದರ್ಭದಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಕಳೆದುಕೊಂಡಿದ್ದರು. ಅಂದರೆ, ದೇಶದ ಲಕ್ಷಾಂತರ ಕುಟುಂಬಗಳಿಗೆ ಜೀವನೋಪಾಯವೇ ಇಲ್ಲದಂತೆ ಆಗಿದೆ.

ಮುಖ್ಯಾಂಶಗಳು

- 2019ರ ಜುಲೈ ನಂತರ 1 ಕೋಟಿ ವೇತನದಾರರ ಉದ್ಯೋಗ ನಷ್ಟ
- ನಗರ ಪ್ರದೇಶದಲ್ಲಿ ನಿರುದ್ಯೋಗ ಪ್ರಮಾಣ ಇಳಿಕೆ

ನಗರಗಳ ಪುರುಷರು ಹೊಂದಿರುವ ಉದ್ಯೋಗವು ಹೆಚ್ಚಿನ ಗುಣಮಟ್ಟದ್ದಾಗಿರುತ್ತದೆ. ಪುರುಷರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಕಳೆದುಕೊಂಡಿದ್ದಾರೆ ಎಂದಾದರೆ ಆದಾಯದ ಕುಸಿತವು ಈವರೆಗೆ ಗಮನಕ್ಕೆ ಬಂದಿರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ ಎಂದು ಸಿಎಂಐಇ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ವ್ಯಾಸ್ ಹೇಳಿದ್ದಾರೆ.

‘ಭಾರತದ ಅರ್ಥ ವ್ಯವಸ್ಥೆಯು ಇಂಗ್ಲಿಷ್‌ನ ವಿ ಅಕ್ಷರದ ರೀತಿಯಲ್ಲಿ ಚೇತರಿಕೆ ಕಾಣುತ್ತಿದೆ (ಅಂದರೆ ಕುಸಿತ ಕಂಡಷ್ಟೇ ವೇಗವಾಗಿ ಮೇಲೆದ್ದು ಬರುವುದು). ಆದರೆ, ಪುನಶ್ಚೇತನವು ಪೂರ್ಣಗೊಳ್ಳುವ ಮೊದಲೇ ದುರ್ಬಲ ಆಗಿಬಿಡುತ್ತಿದೆ. ಪ್ರತಿ ಆಘಾತವೂ ನಾವು ಒಂದಿಷ್ಟು ಬೆಲೆ ತೆರುವಂತೆ ಮಾಡುತ್ತಿದೆ’ ಎಂದು ವ್ಯಾಸ್ ಹೇಳಿದ್ದಾರೆ.

ಕೋವಿಡ್ ಲಸಿಕೆ ನೀಡುವ ವೇಗ ತಗ್ಗಿರುವುದು ಹಾಗೂ ಮಾರುಕಟ್ಟೆಯಲ್ಲಿ ಬೇರೆ ಬೇರೆ ವಸ್ತುಗಳು ಮತ್ತು ಸೇವೆಗಳಿಗೆ ಬೇಡಿಕೆ ಕಡಿಮೆ ಆಗುತ್ತಿರುವ ಕಾರಣದಿಂದಾಗಿ ದೇಶದ ಅರ್ಥ ವ್ಯವಸ್ಥೆಯ ಬೆಳವಣಿಗೆ ಪ್ರಮಾಣ ಕಡಿಮೆ ಆಗಬಹುದು ಎಂದು ಅರ್ಥಶಾಸ್ತ್ರಜ್ಞರು ಎಚ್ಚರಿಸಿದ್ದಾರೆ. ದೇಶದ ಅರ್ಥ ವ್ಯವಸ್ಥೆಯು ಕೋವಿಡ್‌ಗೂ ಮೊದಲಿನ ಸ್ಥಿತಿಯನ್ನು 2022ರ ಮಾರ್ಚ್‌ಗೆ ಮೊದಲು ತಲುಪುವ ಸಾಧ್ಯತೆ ಇಲ್ಲ ಎಂದೂ ಅವರು ಹೇಳಿದ್ದಾರೆ.

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್–ಹಣಕಾಸು ತಜ್ಞ
uppuranik@gmail.com
ಮೊ: 9448015300

ರಮಾಮಣಿ, ಕೆ.ಆರ್. ಪುರ, ಬೆಂಗಳೂರು

● **ಪ್ರಶ್ನೆ: ನಾನು ಐ.ಟಿ. ಕಂಪನಿಯೊಂದರಲ್ಲಿ ಕೆಲಸ ಮಾಡುತ್ತೇನೆ. ನನ್ನ ವಯಸ್ಸು 23 ವರ್ಷ. ತಿಂಗಳ ಸಂಬಳ ₹ 82 ಸಾವಿರ. ಕಡಿತ; ಪಿಎಫ್ ₹8,200, ಎಲ್ಐಸಿ ₹ 5 ಸಾವಿರ. ತಿಂಗಳಿಗೆ ಎಲ್ಲ ಖರ್ಚು ಕಳೆದು ₹ 50 ಸಾವಿರ ಉಳಿಸಬಹುದು. ಆರ್.ಡಿ. ಹಾಗೂ ನಗದು ಸರ್ಟಿಫಿಕೇಟ್‌ಗಳಲ್ಲಿ ಗೊಂದಲವಿದೆ. ತೆರಿಗೆ ಉಳಿಸಲು ಹಾಗೂ ಆರ್ಥಿಕ ಶಿಸ್ತು ಪಾಲಿಸಲು ನನಗೆ ಐದು ವರ್ಷಗಳ ಸರಳ ಆರ್ಥಿಕ ಯೋಜನೆ ಹಾಕಿಕೊಡಿ. ನಾನು ವಿದ್ಯಾರ್ಥಿಯಾಗಿದ್ದಾಗಿನಿಂದ ನಿಮ್ಮ ಅಂಕಣ ಓದುತ್ತಿದ್ದೇನೆ.**

ಉತ್ತರ: ಪಿಎಫ್ ಹಾಗೂ ವಿಮೆಗೆ ನೀವು ಗರಿಷ್ಠ ₹ 1.50 ಲಕ್ಷ ತುಂಬುತ್ತಿದ್ದು, ಸೆಕ್ಷನ್ 80ಸಿಯ ವಿನಾಯಿತಿಯನ್ನು ಸಂಪೂರ್ಣ ಪಡೆದಂತಾಗಿದೆ. ಸೆಕ್ಷನ್ 80ಸಿಸಿಡಿ (1ಬಿ) ಆಧಾರದ ಮೇಲೆ ವಾರ್ಷಿಕವಾಗಿ ಕನಿಷ್ಠ ₹ 50 ಸಾವಿರವನ್ನು ರಾಷ್ಟ್ರೀಯ ಪಿಂಚಣಿ ಯೋಜನೆಯಲ್ಲಿ ತೊಡಗಿಸಿದರೆ 80ಸಿ ಹೊರತಾಗಿ ₹ 50 ಸಾವಿರವನ್ನು ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಬಹುದು. ಇನ್ನು, ಉಳಿತಾಯದ ವಿಚಾರ. ನಿಮ್ಮ ಮದುವೆಯ ತನಕ ₹ 5 ಸಾವಿರದ ಒಂದು ವರ್ಷದ ಆರ್.ಡಿ. ಮಾಡುತ್ತಾ ಬಂದು ವರ್ಷಾಂತ್ಯಕ್ಕೆ ಬಂಗಾರದ ನಾಣ್ಯ ಕೊಳ್ಳಿ ಹಾಗೂ ಬ್ಯಾಂಕ್ ಲಾಕರಿನಲ್ಲಿ ಇಡಿ. ಎನ್‌ಪಿಎಸ್ ಹಾಗೂ ₹ 5 ಸಾವಿರ ಆರ್.ಡಿ. ನಂತರ ಉಳಿಯುವ ₹ 40 ಸಾವಿರವನ್ನು ಐದು ವರ್ಷಗಳ ಅವಧಿಗೆ ಆರ್.ಡಿ. ಮಾಡಿದರೆ ಐದು ವರ್ಷಗಳ ಅಂತ್ಯಕ್ಕೆ ₹ 27.66 ಲಕ್ಷ ಪಡೆಯಿರಿ. ಈ ದೊಡ್ಡ ಮೊತ್ತದಿಂದ ಒಂದು ನಿವೇಶನ ಕೊಳ್ಳಿರಿ. ಆರ್.ಡಿ. ಮತ್ತು ನಗದು ಸರ್ಟಿಫಿಕೇಟ್ ಇವುಗಳ ವ್ಯತ್ಯಾಸದ ವಿಚಾರ. ಆರ್.ಡಿ. ಪ್ರತಿ ತಿಂಗಳೂ ಕಡ್ಡಾಯವಾಗಿ ತುಂಬುವ ಒಂದು ಕ್ರಮಬದ್ಧವಾದ ಉಳಿತಾಯ. ಇದರಿಂದ ಆರ್ಥಿಕ ಶಿಸ್ತು ಬಂದಂತಾಗುತ್ತದೆ. ಒಮ್ಮೆ ಆರ್.ಡಿ. ಮಾಡಿದರೆ ಅವಧಿ ತನಕ ಬಡ್ಡಿದರದಲ್ಲಿ ಬದಲಾವಣೆ ಇರುವುದಿಲ್ಲ. ನಗದು ಸರ್ಟಿಫಿಕೇಟ್ ಪ್ರತಿ ತಿಂಗಳು ಕೊಳ್ಳುವಾಗ ಬಡ್ಡಿದರದಲ್ಲಿ ಬದಲಾಗಬಹುದು. ಈ ಎರಡೂ ಠೇವಣಿಗಳಲ್ಲಿ ಗ್ರಾಹಕರು ಚಕ್ರಬಡ್ಡಿ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗೆ ನನಗೆ ಕರೆ ಮಾಡಿ.

ರಾಮಚಂದ್ರಪ್ಪ ಸಿ.ಆರ್., ದಾವಣಗೆರೆ

● **ಪ್ರಶ್ನೆ: ನಮ್ಮ ಆಸ್ತಿ ಯಾವುದೋ ಕಾರಣದಿಂದ ನಮ್ಮ ಅಣ್ಣನ ಮಗನ ಹೆಸರಿಗೆ ವರ್ಗಾವಣೆ ಆಗಿತ್ತು. ಈಗ ಅವನು ನಮ್ಮ ಹೆಸರಿಗೆ ದಾನ ಪತ್ರ ಮುಖೇನ ಆಸ್ತಿಯನ್ನು ತಿರುಗಿ ವರ್ಗಾಯಿಸಬಹುದೇ? ಇದರಿಂದ ತೆರಿಗೆ ಬಾರದಿರಲು ಮಾರ್ಗ ತಿಳಿಸಿರಿ.**

ಉತ್ತರ: 1998ರ ಅಕ್ಟೋಬರ್ 1ರಿಂದ ಗಿಫ್ಟ್ ಟ್ಯಾಕ್ಸ್ ರದ್ದುಪಡಿಸಲಾಗಿದೆ. ಆದರೆ ಆಸ್ತಿ ವರ್ಗಾವಣೆ ವಿಚಾರದಲ್ಲಿ ಬಂಡವಾಳವೃದ್ಧಿ ತೆರಿಗೆ ಇರುತ್ತದೆ. ರಕ್ತ ಸಂಬಂಧಿಗಳೊಳಗೆ ಹಣ ಅಥವಾ ಆಸ್ತಿಯನ್ನು ದಾನ ರೂಪದಲ್ಲಿ ವರ್ಗಾಯಿಸಿದರೆ ಯಾವ ತೆರಿಗೆಯೂ ಬರುವುದಿಲ್ಲ. ಆದರೆ ಹೀಗೆ ದಾನ ಪಡೆದವರು ಮುಂದೆ ಆಸ್ತಿ ಮಾರಾಟ ಮಾಡುವಾಗ ತೆರಿಗೆ ಕೊಡಬೇಕಾಗುತ್ತದೆ. ನಿಮ್ಮ ಅಣ್ಣನ ಮಗ ನಿಮಗೆ ದಾನ ಪತ್ರದ ಮುಖಾಂತರ ಆಸ್ತಿಯನ್ನು ವರ್ಗಾಯಿಸಬಹುದು ಹಾಗೂ ಈ ವಿಚಾರದಲ್ಲಿ ನಿಮಗಾಗಲಿ ನಿಮ್ಮ ಅಣ್ಣನ ಮಗನಿಗಾಗಲಿ ಯಾವ ತೆರಿಗೆಯೂ ಬರುವುದಿಲ್ಲ.

ಶಾಂತಾ, ಜೆ.ಪಿ. ನಗರ, ಬೆಂಗಳೂರು

● **ಪ್ರಶ್ನೆ: ನನ್ನ ಪತಿ ತಮ್ಮ ಹೆಸರಿನಲ್ಲಿರುವ ನಿವೇಶನದಲ್ಲಿ ಮನೆ ಕಟ್ಟಿಸಲು ಗೃಹ ಸಾಲ ಪಡೆದಿದ್ದಾರೆ. ಅವರಿಗೆ ಹೆಚ್ಚಿನ ವಾರ್ಷಿಕ ವರಮಾನ ಇರುವುದಿಲ್ಲವಾದ್ದರಿಂದ ಗೃಹಸಾಲವನ್ನು ಬ್ಯಾಂಕ್‌ನವರು ನನ್ನ ಜಾಮೀನಿನ ಮೇರೆಗೆ ಕೊಟ್ಟಿರುತ್ತಾರೆ. ನನ್ನ ಪತಿಗಿಂತ ನನಗೆ ಹೆಚ್ಚಿನ ವಾರ್ಷಿಕ ವರಮಾನವಿದ್ದು ಗೃಹ ಸಾಲದ ತೆರಿಗೆ ವಿನಾಯಿತಿ ಪಡೆಯಲು ನನಗೆ ಮಾರ್ಗದರ್ಶನ ಮಾಡಿ.**

ಉತ್ತರ: ಗೃಹ ಸಾಲದ ಮಾಸಿಕ ಕಂತು ಸೆಕ್ಷನ್ 80ಸಿ ಆಧಾರದ ಮೇಲೆ ಗರಿಷ್ಠ ₹ 1.50 ಲಕ್ಷ ಹಾಗೂ ಗೃಹ ಸಾಲದ ಬಡ್ಡಿ ಸೆಕ್ಷನ್ 24 (ಬಿ) ಆಧಾರದ ಮೇಲೆ ಗರಿಷ್ಠ ₹ 2 ಲಕ್ಷ ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಬಹುದಾದರೂ ಈ ಸವಲತ್ತು ಪಡೆಯಲು ನಿವೇಶನ ಹೊಂದಿದ ವ್ಯಕ್ತಿಗೆ ಮಾತ್ರ ಸೀಮಿತವಾಗಿದೆ. ನಿವೇಶನ ಜಂಟಿ ಹೆಸರಿನಲ್ಲಿದ್ದರೆ ಇಬ್ಬರೂ ವಿನಾಯಿತಿ ಮಿತಿಯೊಳಗೆ ವಿನಾಯಿತಿ ಪಡೆಯಬಹುದು. ನಿವೇಶನ ನಿಮ್ಮ ಪತಿಯ ಹೆಸರಿನಲ್ಲಿದ್ದು ನೀವು ಗೃಹ ಸಾಲಕ್ಕೆ ಜಾಮೀನು ಹಾಕಿದ್ದರೂ ಸೆಕ್ಷನ್ 80ಸಿ ಹಾಗೂ 24 (ಬಿ) ಇವುಗಳ ಪ್ರಯೋಜನ ಪಡೆಯುವಂತಿಲ್ಲ. ಯುವ ಜನರಿಗೊಂದು ಕಿವಿಮಾತು; ಮುಖ್ಯವಾಗಿ ಕೆಲಸದಲ್ಲಿರುವ ದಂಪತಿ ನಿವೇಶನ, ಮನೆ, ಫ್ಲ್ಯಾಟ್ ಕೊಳ್ಳುವಾಗ ಜಂಟಿಯಾಗಿ ಕೊಳ್ಳಿರಿ. ಹೀಗೆ ಮಾಡುವುದರಿಂದ ಗೃಹ ಸಾಲ ಪಡೆಯುವಾಗ ತೆರಿಗೆ ವಿನಾಯಿತಿ ಪಡೆಯುವುದು ಮಾತ್ರವಲ್ಲ ಜೀವನದಲ್ಲಿ ಭದ್ರತೆ ಕೂಡಾ ಇರುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ಆರ್ಥಿಕತೆಯಲ್ಲಿ ಚೇತರಿಕೆಯ ಭರವಸೆ

ಸೆನ್ಸೆಕ್ಸ್ 873 ಅಂಶ ಏರಿಕೆ

ಮುಂಬೈ (ಪಿಟಿಐ): ಆರ್ಥಿಕ ಚೇತರಿಕೆಯ ಭರವಸೆಯಿಂದಾಗಿ ದೇಶದ ಷೇರುಪೇಟೆಗಳಲ್ಲಿ ಮಂಗಳವಾರ ವಹಿವಾಟು ಜೋರಾಗಿತ್ತು. ಮುಂಬೈ ಷೇರುಪೇಟೆ (ಬಿಎಸ್‌ಇ) ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 873 ಅಂಶ ಜಿಗಿತ ಕಂಡಿತು.

ಸಕಾರಾತ್ಮಕ ವಹಿವಾಟಿನ ಪ್ರಭಾವದಿಂದ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 2.30 ಲಕ್ಷ ಕೋಟಿಯಷ್ಟು ಏರಿಕೆ ಕಂಡಿದೆ. ಇದರಿಂದಾಗಿ ಷೇರುಪೇಟೆಯ ಬಂಡವಾಳ ಮೌಲ್ಯವು ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹ 240 ಲಕ್ಷ ಕೋಟಿಗೆ ತಲುಪಿದೆ.

ಸದ್ಯದ ಏರುಮುಖ ಚಲನೆಯು ಹೆಚ್ಚು ಮಹತ್ವದ್ದಾಗಿದೆ. ಏಕೆಂದರೆ ಈಗ ಬರುತ್ತಿರುವ ಹೊಸ ಹೂಡಿಕೆದಾರರಿಗೆ ಇದು ಸಾಕಷ್ಟು ಅವಕಾಶಗಳನ್ನು ಒದಗಿಸುತ್ತದೆ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ಹೇಳಿದ್ದಾರೆ.

ಜಿಎಸ್‌ಟಿ ಸಂಗ್ರಹ, ವಾಹನ ಮಾರಾಟ ಮತ್ತು ಇ–ವೇ ಬಿಲ್‌ನಂತಹ ಪ್ರಮುಖ ಆರ್ಥಿಕ ಸೂಚಕಗಳು ಜುಲೈನಲ್ಲಿ ಉತ್ತಮ ಬೆಳವಣಿಗೆ ಕಂಡಿವೆ. ಕಾರ್ಪೊರೇಟ್ ಗಳಿಕೆಯು ಆರೋಗ್ಯಕರವಾಗಿದೆ ಎನ್ನುವುದನ್ನು ಇವು ಸೂಚಿಸುತ್ತಿವೆ ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಯೋಜನಾ ಮುಖ್ಯಸ್ಥ ವಿನೋದ್ ಮೋದಿ ಹೇಳಿದ್ದಾರೆ.

ಹಣಕಾಸು ವಲಯವನ್ನು ಹೊರತುಪಡಿಸಿ, ಜೂನ್ ತ್ರೈಮಾಸಿಕದಲ್ಲಿ ಕಂಪನಿಗಳ ಇದುವರೆಗಿನ ಫಲಿತಾಂಶಗಳು ಉತ್ತೇಜನಕಾರಿ ಆಗಿದ್ದು, ಬಹುಪಾಲು ಕಂಪನಿಗಳು ನಿರೀಕ್ಷೆಯನ್ನೂ ಮೀರಿ ಗಳಿಕೆ ಕಂಡಿವೆ. ಹೀಗಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಮಾರಾಟದ ಒತ್ತಡದ ನಡುವೆಯೂ ಸೂಚ್ಯಂಕವನ್ನು ಕುಸಿಯದಂತೆ ತಡೆದಿದೆ ಎಂದಿದ್ದಾರೆ.

ಬಿಎಸ್‌ಇ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇ 0.23ರವರೆಗೂ ಏರಿಕೆ ಕಂಡಿವೆ.

ಬ್ರೆಂಟ್ ಕಚ್ಚಾತೈಲ ದರವು ಶೇ 0.80ರಷ್ಟು ಹೆಚ್ಚಾಗಿದ್ದು ಒಂದು ಬ್ಯಾರಲ್‌ಗೆ 73.47 ಡಾಲರ್‌ಗಳಿಗೆ ತಲುಪಿದೆ.

16 ಸಾವಿರದ ಗಡಿ ದಾಟಿದ ನಿಫ್ಟಿ

ಮುಂಬೈ: ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ) ಸೂಚ್ಯಂಕ ನಿಫ್ಟಿಯು ಇದೇ ಮೊದಲ ಬಾರಿಗೆ 16 ಸಾವಿರದ ಗಡಿ ದಾಟಿತು. ಮಂಗಳವಾರದ ವಹಿವಾಟಿನಲ್ಲಿ 245 ಅಂಶ ಏರಿಕೆಯೊಂದಿಗೆ 16,130 ಅಂಶಗಳಲ್ಲಿ ದಿನದ ವಹಿವಾಟು ಅಂತ್ಯವಾಗಿದೆ.

ಇಂದಿನಿಂದ ನಾಲ್ಕು ಕಂಪನಿಗಳ ಐಪಿಒ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ಕಂಪನಿಗಳು ತಮ್ಮ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸುವ (ಐಪಿಒ) ಪ್ರಕ್ರಿಯೆಯನ್ನು ಬುಧವಾರದಿಂದ (ಆ. 4) ಆರಂಭಿಸಲಿವೆ. ಒಂದೇ ದಿನ ನಾಲ್ಕು ಕಂಪನಿಗಳ ಐಪಿಒಗಳು ಶುರುವಾಗುತ್ತಿರುವುದು ಈಚಿನ ದಿನಗಳಲ್ಲಿ ಇದೇ ಮೊದಲು.

ವಿಂಡ್ಲಾಸ್ ಬಯೋಟೆಕ್ ಲಿಮಿಟೆಡ್, ದೇವಯಾನಿ ಇಂಟರ್‌ನ್ಯಾಷನಲ್ ಲಿಮಿಟೆಡ್, ಕೃಷ್ಣಾ ಡಯಾಗ್ನಾಸ್ಟಿಕ್ಸ್ ಲಿಮಿಟೆಡ್ ಮತ್ತು ಎಕ್ಸಾರೊ ಟೈಲ್ಸ್ ಲಿಮಿಟೆಡ್ ಕಂಪನಿಗಳು ಬುಧವಾರ ತಮ್ಮ ಐಪಿಒ ಆರಂಭಿಸಲಿವೆ. ಈ ಕಂಪನಿಗಳ ಷೇರುಗಳನ್ನು ಖರೀದಿಸಲು ಅರ್ಜಿ ಸಲ್ಲಿಸಲು ಶುಕ್ರವಾರದವರೆಗೆ ಅವಕಾಶ ಇರಲಿದೆ.

ಜುಲೈ ತಿಂಗಳಿನಲ್ಲಿ ಐಪಿಒ ಮೂಲಕ ತಮ್ಮ ಷೇರುಗಳನ್ನು ಸಾರ್ವಜನಿಕರಿಗೆ ನೀಡಿದ ಕಂಪನಿಗಳು, ಷೇರು ಮಾರುಕಟ್ಟೆ ಪ್ರವೇಶದ ದಿನ ಹೂಡಿಕೆದಾರರಿಗೆ ಗರಿಷ್ಠ ಶೇ 113ರಷ್ಟು ಲಾಭ ತಂದುಕೊಟ್ಟಿವೆ.

ಐಪಿಒ ನಡೆಸಿ, ಜುಲೈನಲ್ಲಿ ಷೇರು ಮಾರುಕಟ್ಟೆ ಪ್ರವೇಶಿಸಿದ ಜೊಮ್ಯಾಟೊ ಶೇ 64ರಷ್ಟು, ತತ್ವ ಚಿಂತನ ಫಾರ್ಮಾ ಕೆಮ್ ಲಿಮಿಟೆಡ್ ಶೇ 113ರಷ್ಟು, ಜಿ.ಆರ್. ಇನ್‌ಫ್ರಾಪ್ರೊಜೆಕ್ಟ್ಸ್ ಲಿಮಿಟೆಡ್ ಶೇ 107ರಷ್ಟು, ಕ್ಲೀನ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ ಲಿಮಿಟೆಡ್ ಶೇ 75ರಷ್ಟು ಲಾಭವನ್ನು ಷೇರು ಮಾರುಕಟ್ಟೆ ಪ್ರವೇಶದ ದಿನವೇ ಹೂಡಿಕೆದಾರರಿಗೆ ತಂದುಕೊಟ್ಟಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	380
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-45000
ಹಳತು	42500-52000
ಪುತ್ತೂರು	
ಹೊಸತು	31000-45000
ಸಿದ್ದಾಪುರ	
ಬಿಳಿಗೋಟು	27099-35899
ಚಾಲಿ	37699-41599
ಕೋಕ	24389-33099
ಕೆಂಪುಗೋಟು	30199-32099
ರಾಶಿ	38219-41109
ತಟ್ಟಿಬೆಟ್ಟೆ	30099-35111
ಶಿರಸಿ	
ಬೆಟ್ಟೆ	34000-39699
ಬಿಳಿಗೋಟು	21629-37686
ಚಾಲಿ	36111-41699
ರಾಶಿ	35109-42099
ಯಲ್ಲಾಪುರ	
ಬಿಳಿಗೋಟು	28899-34911
ಚಾಲಿ	35312-41500
ಕೋಕ	22899-31612
ಕೆಂಪುಗೋಟು	29069-33969
ರಾಶಿ	40039-44908
ತಟ್ಟಿಬೆಟ್ಟೆ	34899-39300
ಶಿವಮೊಗ್ಗ (ಎಪಿಎಂಸಿ)	
ಗೊರಬಲು	14009-35699
ರಾಶಿ	39800-42289
ಸರಕು	48619-75116
ಸಾಗರ	
ಬಿಳಿಗೋಟು	33519-33519
ಚಾಲಿ	39103-39269
ಕೆಂಪುಗೋಟು	32099-33699
ರಾಶಿ	39569-42499
ಸಿಪ್ಪೆಗೋಟು	22599-23350

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13200	12500	12050	172.80ಸೆಂಟ್ಸ್
ಎಸಿ	5665	4800	4725	
ಆರ್‌ಪಿ	6000	5700	5950	ಲಂಡನ್
ಆರ್‌ಸಿ	3355	3300	3400	1753 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

3-8-2021

ಜಾವಾ 70/80(ಹೊಸ)	10000-10050
ಜಾವಾ 80/90(ಹೊಸ)	9100-9150
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1485 (1485)
ಒಂದು ವಾರದ ಡೆಲಿವರಿ	1480 (1480)
ಸೋಯಾ ಕಚ್ಚಾ	1355 (1365)
ಪಾಮ್ ವಾರದ ಡೆಲಿವರಿ	1252 (1250)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1390)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,900 (47,900)
ಬೆಳ್ಳಿ ಕೆ.ಜಿ 67,850 (67,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1475 (1475)
ಸೋಯಾ (ರಿಫೈನ್ಡ್)	₹1390 (1400)
ಸೂರ್ಯಕಾಂತಿ (ರಿಫೈನ್ಡ್)	₹1470(1475)
ಪಾಮೋಲಿನ್	₹1254 (1252)

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸವಿನೆನಪು

ಜಯರಾಮ್ ಬಿ.ಸಿ.
ನೀವು ತೋರಿಸಿದ ದಾರಿಯಲ್ಲಿ ನಡೆಯುತ್ತ ಪ್ರತಿಕ್ಷಣ ನಿಮ್ಮನ್ನು ನೆನೆಯುತ್ತ, ಭಗವಂತ ನಿಮ್ಮ ಆತ್ಮಕ್ಕೆ ಶಾಂತಿ ನೀಡಲೆಂದು ಪ್ರಾರ್ಥಿಸುವ
ಇಂತಿ : ಪತ್ನಿ – ದೇವಿಕಾ, ಮಗಳು: ತನುಶ್ರೀ ಜಯರಾಮ್, ಮುರುಗೇಶ್‌ಪಾಳ್ಯ, ಎನ್.ಆರ್. ಕಾಲೋನಿ, ಬೆಂಗಳೂರು.

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

DRIVER REQUIRED for Auto Transmission Skoda and Fortuner Vehicle. Household Duty. Within Bangalore driving only. Job Timings are Mon to Sat 9 AM to 6.30 PM. Please meet in person with DL at Pan Office Systems Pvt Ltd, No. 5, 1st A Cross, Bismilla Nagar, Bannerghatta Road Cross, Bangalore- 560029 Ph: 9341221125, 080-26684821

Cook

ವಿಶ್ವಾಸಕ್ಕೆ ಅರ್ಹರಾದ ಮಹಿಳೆಯರು ಮನೆಯಲ್ಲಿಯೇ ಇದ್ದುಕೊಂಡು ಅಡುಗೆ ಕೆಲಸ ಮಾಡಲು ಬೇಕಾಗಿದ್ದಾರೆ ಆಕರ್ಷಕ ಸಂಬಳ ನೀಡಲಾಗುವುದು ಸಂಪರ್ಕಿಸಿ: 6366443134.

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

EDUCATION SPECIAL
DH Classifieds
PV Classifieds
We are coming out with special offer for Admission Notice, Education Success Congratulation Ads
For details contact:
Jerry: 9731810277
Vishal: 9845114560
Tanveer: 9886213331
E-mail: dhclassifieds@deccanherald.co.in

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕ/ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ7th, SSLC,PUC,ITI Degree Pass/Fail ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/PFನೊಂದಿಗೆ ಸಂಬಳ:16,500ರಿಂದ 45000/-ದವರೆಗೆ. 9538250222, 9538191333

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಇಂದೇ ಬೇಕಾಗಿದ್ದಾರೆ ಬೆಂಗಳೂರಿನ ಸುಪ್ರಸಿದ್ಧ ಕಂಪನಿಯಲ್ಲಿ ಆಫೀಸ್ ಕೆಲಸಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ (SSLC to Any Degree Pass/Fail) ಸಂಬಳ 18,000/-ರಿಂದ 65,000/- ದವರೆಗೆ ವಸತಿಯೂಟದೊಂದಿಗೆ ಇಂದೇ ಸಂಪರ್ಕಿಸಿ: ಸುಪ್ರಿಯಾ- 9538032277, 9538075599

ತಕ್ಷಣ ಬೇಕಾಗಿದ್ದಾರೆ ಬೆಂಗಳೂರು&ಕರ್ನಾಟಕದಾದ್ಯಂತ ಕಂಪನಿಗಳಿಗೆ, ಆಫೀಸ್‌ಗಳಿಗೆ,ಬ್ಯಾಂಕ್‌ಗಳಿಗೆ,ಶೋರೂಂಗಳಿಗೆಯಾವುದೇ ವಿದ್ಯಾರ್ಹತೆಯಿರುವ ವಿದ್ಯಾರ್ಹತೆಯಿಲದವರಿಗೂ ವಸತಿಯೂಟದೊಂದಿಗೆ ಸಂಬಳ+OT,17,200/- 47000/-.8884412822, 9986083666

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು ನೇರನೇಮಕಾತಿ 16,800- 56,000/- ವಸತಿಯೂಟವಿದೆ. 7204853296, 7204396011

ರಾವ್ ಸಂಸ್ಥೆಗೆ ವಯಸ್ಸಾದವರನ್ನು,ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ.ಊಟ ವಸತಿಯಿದೆ. 10,000-15,000. 8951315839, 9880545002

ಬೇಕಾಗಿದ್ದಾರೆ.
B.Sc. Agriculture ಮಾಡಿರುವಂತಹ ಫಾರ್ಮ್ ಸೂಪರ್ ವೈಸರ್ ಗಳು ಗೌರಿಬಿದನೂರು ಮತ್ತು ಚಿಕ್ಕಬಳ್ಳಾಪುರದಲ್ಲಿರುವ ಆಗ್ರೋ ಕಂಪನಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ತಿಂಗಳ ಸಂಬಳ 15 -18 ಸಾವಿರ ರೂಪಾಯಿಗಳು. ಕಂಪನಿಯಿಂದ ವಸತಿ ಸೌಕರ್ಯ ದೊರೆಯುತ್ತದೆ.
Mob: +91 9606111195
Ph: 080 - 2661 1101

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800- 45000/-. 9980295449, 9902839010

ಪ್ಯಾಕಿಂಗ್ ಮತ್ತು ಡಿಸ್ ಪ್ಯಾಚ್ ಸಹಾಯಕ ಕೆಲಸಕ್ಕೆ ಬೇಕಾಗಿದ್ದಾರೆ. ವಯಸ್ಸು: 30 ವರ್ಷಕ್ಕಿಂತ ಕಡಿಮೆ, ವಿದ್ಯಾರ್ಹತೆ: ಯಾವುದೇ ಪದವಿ ಅಥವಾ 12ನೇ ತರಗತಿ ಉತ್ತೀರ್ಣ, ಕಂಪ್ಯೂಟರ್ ಜ್ಞಾನ ಹೊಂದಿರುವವರು, ಸಿಗ್ಮಾ ಇಂಡಸ್ಟ್ರೀಸ್, ಪೀಣ್ಯ ಮೊದಲನೆ ಹಂತ, ಬೆಂಗಳೂರು-560 058 ಸಂಪರ್ಕಿಸಿ: 9822747289.

WANTED MARRIED hindu couple husband as driver not more than 40 years and wife as Cook for a family of 5 at Bangalore Good salary Accommodation and food Police verification will be made Call 9741900909

WORK FROM home with training, fresh graduates or 10+2 call 7605058339

Marketing & Sales

WANTED EXPERIENCED Sales Managers for Cement, Contact: 9916449766/ 9986696546, acecemex@gmail.com

Wanted

ಬಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) MNC ಕಂಪನಿಗಳಿಗೆ Primary,SSLC, PUC, ITI, any Degree Pass/Fail. ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI/ PFನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ.15,000 86,000. 7259685221, 7760116548

HEALTH SPECIAL

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ

ಲೈಂಗಿಕ ರೋಗಗಳು
ಉದ್ರೇಕದ ಸಮಸ್ಯೆ
ಲೈಂಗಿಕ ನಿರಾಸಕ್ತಿ
ನಿದ್ರಾ ಸ್ಖಲನ
ಶೀಘ್ರ ಸ್ಖಲನ
ಲಿಂಗ ಚಿಕ್ಕದಾಗುವುದು
ನರ ದೌರ್ಬಲ್ಯ
ಅವಧಿಗೆ ಮೊದಲೇ ಸ್ಖಲನ
ಆತಂಕ, ದೌರ್ಬಲ್ಯ
ಕಡಿಮೆ ವೀರ್ಯಾಣು
ಮುಷ್ಠಿ ಮೈಥುನದ ಅಡ್ಡಪರಿಣಾಮ
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ವ್ಯಾಪಾರ

Business to Business

Finance

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್: 7837015557

ಭವಿಷ್ಯ

Astrology

★॥ಶ್ರೀಲಕ್ಷ್ಮಿ ನರಸಿಂಹಸ್ವಾಮಿ ಜ್ಯೋತಿಷ್ಯರು॥★ ಸ್ತ್ರೀ ಪುರುಷ ವಶೀಕರಣ, ಸಂಭೋಗ ವಶೀಕರಣ,ಇನ್ನೂ ಯಾವುದೇ ಸಮಸ್ಯೆಗಳಿಗೆ 15 ನಿಮಿಷಗಳಲ್ಲಿ ಶಾಶ್ವತ ಪರಿಹಾರ. ರಾಘವೇಂದ್ರ ಗುರೂಜಿ. 7337678002

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★ಉಚಿತ ಭವಿಷ್ಯ★ ಖಚಿತ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ ಇರಲಿ ಸ್ತ್ರೀವಶೀಕರಣ, ಪುರುಷವಶೀಕರಣ ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿದ್ದರು 100% ಶಾಶ್ವತ ಪರಿಹಾರ.ಮಂತ್ರಾಲಯ. ಪಂಡಿತ್.ಸಾಗರ್ ಶರ್ಮ.8217374106

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಸ್ತ್ರೀವಶೀಕರಣ, ಪುರುಷವಶೀಕರಣ ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

॥★ಉಚಿತ ಭವಿಷ್ಯವಾಣಿ★॥ ವಶೀಕರಣ ಸ್ಪೆಷಲಿಸ್ಟ್ ಸರ್ವಸಿದ್ಧಿ ಸಾಧಕರು ಮಂಜುನಾಥಶಾಸ್ತ್ರಿ 9900277438. ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ. 100% ಗ್ಯಾರಂಟಿ ಪರಿಹಾರ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭಾರತ–ಇಂಗ್ಲೆಂಡ್ ಮೊದಲ ಟೆಸ್ಟ್ ಇಂದಿನಿಂದ: ಕನ್ನಡಿಗ ಕೆ.ಎಲ್. ರಾಹುಲ್‌ಗೆ ಅವಕಾಶ ಸಾಧ್ಯತೆ

ವಿರಾಟ್ ನಾಯಕತ್ವಕ್ಕೆ ಸವಾಲಿನ ಸರಣಿ

ನಾಟಿಂಗ್‌ಹ್ಯಾಮ್ (ಪಿಟಿಐ): ವಿರಾಟ್ ಕೊಹ್ಲಿ ನಾಯಕತ್ವಕ್ಕೆ ಸವಾಲೊಡ್ಡುವ ಟೆಸ್ಟ್ ಸರಣಿ ಬುಧವಾರ ಇಲ್ಲಿ ಆರಂಭವಾಗಲಿದೆ.

ಇಂಗ್ಲೆಂಡ್ ವಿರುದ್ಧದ ಐದು ಪಂದ್ಯಗಳ ಸರಣಿಯು ವಿರಾಟ್ ನಾಯಕತ್ವ ಮತ್ತು ಬ್ಯಾಟಿಂಗ್ ಎರಡರ ಪರೀಕ್ಷೆಯ ವೇದಿಕೆಯೂ ಆಗುವ ಸಾಧ್ಯತೆ ಇದೆ. ಹೋದ ತಿಂಗಳು ನಡೆದಿದ್ದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್‌ನಲ್ಲಿ ಭಾರತ ತಂಡವು ನ್ಯೂಜಿಲೆಂಡ್ ಎದುರು ಸೋತಿತ್ತು. ಆಗ ವಿರಾಟ್ ನಾಯಕತ್ವದಲ್ಲಿ ಐಸಿಸಿ ಯ ಪ್ರಮುಖ ಟೂರ್ನಿಗಳಾದ ವಿಶ್ವಕಪ್, ಚಾಂಪಿಯನ್ಸ್ ಟ್ರೋಫಿಗಳಲ್ಲಿ ಇದುವರೆಗೆ ಜಯಿಸಿಲ್ಲ ಎಂಬ ಟೀಕೆಗಳು ಕೇಳಿಬಂದಿದ್ದವು.

ಅಲ್ಲದೇ ಆ ಪಂದ್ಯದಲ್ಲಿ ಅಂತಿಮ ಹನ್ನೊಂದರ ಬಳಗದ ಆಯ್ಕೆಯೂ ಚರ್ಚೆಗೆ ಗ್ರಾಸವಾಗಿತ್ತು. ಇದೀಗ ಮತ್ತೊಮ್ಮೆ ಈ ವಿಷಯದಲ್ಲಿ ವಿರಾಟ್ ನಿಲುವಿನ ಬಗ್ಗೆ ಕುತೂಹಲ ಗರಿಗೆದರಿದೆ. ಶುಭಮನ್ ಗಿಲ್ ಗಾಯಗೊಂಡು ಹೊರಗುಳಿದಿರುವುದರಿಂದ ರೋಹಿತ್ ಶರ್ಮಾ ಅವರೊಂದಿಗೆ ಇನಿಂಗ್ಸ್ ಆರಂಭಿಸುವ ಹೊಣೆ ಅನುಭವಿ ಕೆ.ಎಲ್. ರಾಹುಲ್‌ಗೆ ಸಿಗುವ ಸಾಧ್ಯತೆ ಇದೆ. ಮಯಂಕ್ ಅಗರ್‌ವಾಲ್ ಕೂಡ ಕಂಕಷನ್‌ನಿಂದಾಗಿ (ತಲೆಗೆ ಚೆಂಡು ಬಡಿದು ಪೆಟ್ಟು) ಈ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ.

ಬಂಗಾಳದ ಬ್ಯಾಟ್ಸ್‌ಮನ್ ಅಭಿಮನ್ಯು ಈಶ್ವರನ್ ಹೋದ ವರ್ಷ ಮಾರ್ಚ್‌ನಲ್ಲಿ ದೇಶಿ ಟೂರ್ನಿಯಲ್ಲಿ ಆಡಿದ್ದರು. ಆದ್ದರಿಂದ ಅವರಿಗೆ ಈ ಮಹತ್ವದ ಪಂದ್ಯದಲ್ಲಿ ಸ್ಥಾನ ನೀಡುವ ಬಗ್ಗೆ ಕೊಹ್ಲಿ ಎರಡು ಬಾರಿ ಯೋಚಿಸುವುದು ಖಚಿತ. ಚೇತೇಶ್ವರ್ ಪೂಜಾರ ಮತ್ತು ಹನುಮವಿಹಾರಿ ಮಧ್ಯಕ್ರಮಾಂಕದಲ್ಲಿ ಸ್ಥಾನ ಪಡೆಯುವ ಸಾಧ್ಯತೆ ಹೆಚ್ಚಿದೆ. ಈಚೆಗಷ್ಟೇ ಕೋವಿಡ್‌ನಿಂದ ಚೇತರಿಸಿಕೊಂಡು ಬಂದಿರುವ ರಿಷಭ್ ಪಂತ್ ಅವರ ಫಿಟ್‌ನೆಸ್ ಚೆನ್ನಾಗಿದ್ದರೆ ಮಾತ್ರ ಅವಕಾಶ ಪಡೆಯುವರು. ಇಲ್ಲದಿದ್ದರೆ ವೃದ್ಧಿಮಾನ್ ಸಹಾಗೆ ವಿಕೆಟ್‌ಕೀಪಿಂಗ್ ಹೊಣೆ ಲಭಿಸಬಹುದು.

ಸ್ಪಿನ್ನರ್ ಆರ್. ಅಶ್ವಿನ್ ಜೊತೆಗೆ ಆಲ್‌ರೌಂಡರ್ ರವೀಂದ್ರ ಜಡೇಜ ಕಣಕ್ಕಿಳಿಯುವುದು ಬಹುತೇಕ ಖಚಿತ. ಬೆನ್ನುನೋವಿನಿಂದ ಬಳಲುತ್ತಿರುವ ಜಸ್‌ಪ್ರೀತ್ ಬೂಮ್ರಾ ಆಡುವುದು ಖಚಿತವಾಗಿಲ್ಲ. ಆದ್ದರಿಂದ ಸಿರಾಜ್ ಮತ್ತು ಶಾರ್ದೂಲ್ ಠಾಕೂರ್ ಅವರಲ್ಲೊಬ್ಬರು ಸ್ಥಾನ ಪಡೆಯಬಹುದು.

ಜೋ ರೂಟ್ ಬಳಗವು ಈಚೆಗೆ ಭಾರತ ಪ್ರವಾಸದಲ್ಲಿ ಅನುಭವಿಸಿದ ಸೋಲಿಗೆ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿದೆ. ಅದಕ್ಕಾಗಿ ಹಸಿರು ಗರಿಕೆಗಳಿರುವ ಪಿಚ್‌ನಲ್ಲಿ ಕೊಹ್ಲಿ ಪಡೆಯನ್ನು ಕಾಡಲು ವೇಗಿಗಳ ಪಡೆಯನ್ನು ಕಣಕ್ಕಿಳಿಸುತ್ತಿದ್ದಾರೆ. ಆದರೆ ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಅಲಭ್ಯರಾಗಿರುವುದು ತಂಡಕ್ಕೆ ಚಿಂತೆಯ ವಿಷಯ. ಯುವ ಬ್ಯಾಟ್ಸ್‌ಮನ್‌ಗಳ ಮೇಲೆ ಹೆಚ್ಚಿನ ನಿರೀಕ್ಷೆ ಇದೆ.

ಎರಡನೇ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಆರಂಭಿಕ ಸರಣಿಯೂ ಇದಾಗಿದ್ದು, ಉಭಯ ತಂಡಗಳು ಗೆಲುವಿನೊಂದಿಗೆ ಅಭಿಯಾನ ಆರಂಭಿಸುವ ಛಲದಲ್ಲಿವೆ.

ಸರಣಿಯ ಟ್ರೋಫಿಗಳೊಂದಿಗೆ ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ ಮತ್ತು ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ —ಎಎಫ್‌ಪಿ ಚಿತ್ರ

ರೋಹಿತ್ ಶರ್ಮಾ

ಟ್ರೆಂಟ್‌ಬ್ರಿಡ್ಜ್ ಕ್ರೀಡಾಂಗಣದಲ್ಲಿ ದಾಖಲಾದ ಗರಿಷ್ಠ ಮೊತ್ತ

ತಂಡ	ಮೊತ್ತ	ಎದುರಾಳಿ	ವರ್ಷ
ಇಂಗ್ಲೆಂಡ್	658ಕ್ಕೆ 8 ಡಿ.	ಆಸ್ಟ್ರೇಲಿಯಾ	1938
ಕನಿಷ್ಠ ಮೊತ್ತ			
ಆಸ್ಟ್ರೇಲಿಯಾ	60	ಇಂಗ್ಲೆಂಡ್	2015

ಐಸಿಸಿ ರ‍್ಯಾಂಕಿಂಗ್

ಭಾರತ	ಇಂಗ್ಲೆಂಡ್
2	4

ಒಟ್ಟು ಪಂದ್ಯಗಳು 126

ಇಂಗ್ಲೆಂಡ್ ಜಯ	48
ಭಾರತ ಜಯ	29
ಡ್ರಾ	49

ಇಂಗ್ಲೆಂಡ್‌ನಲ್ಲಿ ನಡೆದ ಒಟ್ಟು ಪಂದ್ಯಗಳು 62

ಇಂಗ್ಲೆಂಡ್ ಜಯ	34
ಭಾರತ ಜಯ	7
ಡ್ರಾ	21

ತಂಡಗಳು: ಭಾರತ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ, ಚೇತೇಶ್ವರ್ ಪೂಜಾರ, ಅಜಿಂಕ್ಯ ರಹಾನೆ(ಉಪನಾಯಕ), ಹನುಮವಿಹಾರಿ, ರಿಷಭ್ ಪಂತ್ (ವಿಕೆಟ್‌ಕೀಪರ್), ಆರ್. ಅಶ್ವಿನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಜಸ್‌ಪ್ರೀತ್ ಬೂಮ್ರಾ, ಇಶಾಂತ್ ಶರ್ಮಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಶಾರ್ದೂಲ್ ಠಾಕೂರ್, ಉಮೇಶ್ ಯಾದವ್, ಕೆ.ಎಲ್. ರಾಹುಲ್, ವೃದ್ಧಿಮಾನ್ ಸಹಾ (ವಿಕೆಟ್‌ಕೀಪರ್), ಅಭಿಮನ್ಯು ಈಶ್ವರನ್, ಪೃಥ್ವಿ ಶಾ, ಸೂರ್ಯಕುಮಾರ್ ಯಾದವ್.

ಇಂಗ್ಲೆಂಡ್: ಜೋ ರೂಟ್ (ನಾಯಕ), ಜೇಮ್ಸ್ ಆ್ಯಂಡರ್ಸನ್, ಜಾನಿ ಬೆಸ್ಟೊ, ಡಾಮ್ ಬೆಸ್, ಸ್ಟುವರ್ಟ್ ಬ್ರಾಡ್, ರೋರಿ ಬರ್ನ್ಸ್, ಜೋಸ್ ಬಟ್ಲರ್, ಜ್ಯಾಕ್ ಕ್ರಾಲಿ, ಸ್ಯಾಮ್ ಕರನ್, ಹಸೀಬ್ ಹಮೀದ್, ಡ್ಯಾನ್ ಲಾರೆನ್ಸ್, ಜ್ಯಾಕ್ ಲೀಚ್, ಒಲಿ ಪೊಪ್, ಒಲಿ ರಾಬಿನ್ಸನ್, ಡಾಮ್ ಸಿಬ್ಲಿ, ಮಾರ್ಕ್ ವುಡ್.

ಪಂದ್ಯ ಆರಂಭ: ಮಧ್ಯಾಹ್ನ 3.30 (ಭಾರತೀಯ ಕಾಲಮಾನ)

ನೇರಪ್ರಸಾರ: ಸೋನಿ ನೆಟ್‌ವರ್ಕ್

ಕೆ.ಎಲ್. ರಾಹುಲ್

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್ ಬುಕ್, ಯೂ ಟ್ಯೂಬ್, ಟ್ವಿಟರ್ ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು
ಗ್ರೀನ್ ಟಾಕ್ 20
ನೋಡ ಬನ್ನಿ, ಚಂಪಕಾನದಿ ವೈಭವ
ಶತಮಾನಗಳ ಹಿಂದಿದ್ದ ಚಂಪಕಾನದಿ ಇದೀಗ ಮತ್ತೆ ಹರಿಯುತ್ತಿದೆ... ಮುತ್ತಾನಲ್ಲೂರು ಕೆರೆ ದಶಕಗಳ ನಂತರ ಕೋಡಿ ಹರಿದಿದೆ. ಇದಕ್ಕೆಲ್ಲ ಕಾರಣ ರಾಜಕಾಲುವೆ ಒತ್ತುವರಿ ತೆರವು...
https://bit.ly/3lnU0m5

ನಾಳೆ
ಸಂವಾದ
ಬೊಮ್ಮಾಯಿ ಸಚಿವ ಸಂಪುಟ ಹೊಸ ದಾರಿ ಹಿಡಿಯಬಹುದೆ?
ಭಾಗವಹಿಸುವವರು: ಅಶ್ವತ್ಥನಾರಾಯಣ ಗೌಡ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ., ಎಂ.ಕೆ.ಭಾಸ್ಕರರಾವ್, ಹಿರಿಯ ಪತ್ರಕರ್ತ., ಡಿ.ಉಮಾಪತಿ, ರಾಜಕೀಯ ವಿಶ್ಲೇಷಕ,. ಪುಷ್ಪಾ ಅಮರನಾಥ್, ಅಧ್ಯಕ್ಷೆ, ರಾಜ್ಯ ಮಹಿಳಾ ಕಾಂಗ್ರೆಸ್, ಗುರುವಾರ, 5-8-2021, ಬೆಳಿಗ್ಗೆ 11ರಿಂದ 12

ಮಂಗಳೂರಿಗೆ ಮಿಶ್ರ ಫಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧೀರಜ್ ಗಳಿಸಿದ 34 ಪಾಯಿಂಟ್ಸ್ ನೆರವಿನಿಂದ ಜಿಎಸ್‌ಟಿ ಆ್ಯಂಡ್ ಕಸ್ಟಮ್ಸ್ ತಂಡವು ಪ್ರೊ. ಪರಪ್ಪ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಎ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು. ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಆ ತಂಡವು 83–80ರಿಂದ ಮಂಗಳೂರು ಬಿ.ಸಿ ತಂಡವನ್ನು ಸೋಲಿಸಿತು.

ಪಂದ್ಯದ ಪ್ರಥಮಾರ್ಧದಲ್ಲಿ ಮಂಗಳೂರು 41–30ರಿಂದ ಮುನ್ನಡೆಯಲ್ಲಿತ್ತು. ಆದರೆ ಪುಟಿದೆದ್ದ ಜಿಎಸ್‌ಟಿ ಆ್ಯಂಡ್ ಕಸ್ಟಮ್ಸ್ ಜಯ ಒಲಿಸಿಕೊಂಡಿತು. ವಿಜೇತ ತಂಡದ ಪರ ಆಕಾಶ್ 10 ಪಾಯಿಂಟ್ಸ್ ಗಳಿಸಿದರು. ಮಂಗಳೂರು ತಂಡದ ಶಶಾಂಕ್ ಮತ್ತೆ ಮಿಂಚಿದರು. ಅವರು 25 ಪಾಯಿಂಟ್ಸ್ ಕಲೆಹಾಕಿದರೆ, ಪ್ರನ್ವಿಲ್ 15 ಪಾಯಿಂಟ್ಸ್ ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಮಂಗಳೂರು 91–67ರಿಂದ ಸದರ್ನ್ ಬ್ಲ್ಯೂಸ್ ತಂಡವನ್ನು ಪರಾಭವಗೊಳಿಸಿತು. ಮಂಗಳೂರು ತಂಡದ ಶಶಾಂಕ್ ರೈ 40, ರಂಜಿತ್ 17 ಪಾಯಿಂಟ್ಸ್ ಗಳಿಸಿದರು. ಬ್ಲ್ಯೂಸ್ ಪರ ಅಭಿಷೇಕ್ ಗೌಡ (28) ಮತ್ತು ರಿಷಭ್ (16) ಮಿಂಚಿದರು.

ಮಂಗಳೂರು ಬಿಸಿ ಎದುರಿನ ಪಂದ್ಯದಲ್ಲಿ ಸದರ್ನ್ ಬ್ಲ್ಯೂಸ್ ತಂಡದ ರಂಗನಾಥ್ (ನೀಲಿ ಪೋಷಾಕು) ಆಟದ ವೈಖರಿ– ಪ್ರಜಾವಾಣಿ ಚಿತ್ರ

ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್: ಕರ್ನಾಟಕದ ಪ್ರಿಯಾಗೆ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಪ್ರಿಯಾ ಮೋಹನ್ ಅವರು 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೆ ಭಾರತ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ. ಕೀನ್ಯಾದ ನೈರೋಬಿಯಲ್ಲಿ ಆಗಸ್ಟ್ 17ರಿಂದ 22ರವರೆಗೆ ಈ ಚಾಂಪಿಯನ್‌ಷಿಪ್ ನಿಗದಿಯಾಗಿದೆ.

ಪ್ರಿಯಾ ಮೋಹನ್

ಪ್ರಿಯಾ ಅವರು 400 ಮೀ. ಓಟ ಮತ್ತು 4X400 ಮೀ. ರಿಲೇಯಲ್ಲಿ ಸ್ಪರ್ಧಿಸಲಿದ್ದಾರೆ. ಭಾರತದ 17 ಪುರುಷ ಮತ್ತು 11 ಮಹಿಳಾ ಅಥ್ಲೀಟ್‌ಗಳು ನೈರೋಬಿಗೆ ತೆರಳಲಿದ್ದಾರೆ.

ಫುಟ್‌ಬಾಲ್: ಅಥ್ಲೆಟಿಕ್ಸ್ ಎಫ್‌ಸಿ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಿರುದ್ಧ ನಬಿಯರ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಬೆಂಗಳೂರು ಅಥ್ಲೆಟಿಕ್ಸ್ ಎಫ್‌ಸಿ ತಂಡವು ಜಯ ಗಳಿಸಿತು. ಇಲ್ಲಿ ನಡೆಯುತ್ತಿರುವ ಕೆಎಸ್‌ಎಫ್‌ಎ–ಬಿಡಿಎಫ್‌ಎ 'ಸಿ' ಡಿವಿಷನ್ ನಾಕೌಟ್ ಫುಟ್‌ಬಾಲ್ ಟೂರ್ನಿಯಲ್ಲಿ 3–2ರಿಂದ ಗ್ಲೋಬಲ್ ಎಫ್‌ಸಿ ಎದುರು ಜಯ ಸಾಧಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಎರಡನೇ ಸುತ್ತಿನ ಹಣಾಹಣಿಯಲ್ಲಿ ವಿಜೇತ ತಂಡದ ಅನಿರುದ್ಧ 16 ಹಾಗೂ 46ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು. ವೇದಾಂತ್ ಸುದರ್ಶನ್ (52ನೇ ನಿ.) ಒಂದು ಗೋಲು ದಾಖಲಿಸಿದರು. ಗ್ಲೋಬಲ್ ಎಫ್‌ಸಿ ಪರ ಹರಿ ಲಕ್ಷ್ಮಣ್ (29ನೇ ನಿ.) ಮತ್ತು ಪ್ರಿನ್ಸ್ (45ನೇ ನಿಮಿಷ) ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಏರೋಸ್ ಎಫ್‌ಸಿ ತಂಡವು 3–1ರಿಂದ ಎಫ್‌ಸಿಐ ಎದುರು ಜಯ ಸಾಧಿಸಿತು. ಏರೋಸ್ ಪರ ಅಬಿಂದನ್ (21ನೇ ನಿಮಿಷ), ಸಲೀಮ್ (45ನೇ ನಿಮಿಷ) ತಲಾ ಒಂದು ಗೋಲು ಹೊಡೆದರು. ಮತ್ತೊಂದು ಗೋಲನ್ನು ಎದುರಾಳಿ ತಂಡದ ಅಲೆಕ್ಸ್ (26ನೇ ನಿಮಿಷ) ಉಡುಗೊರೆಯಾಗಿ ನೀಡಿದರು. ಎಫ್‌ಸಿ ತಂಡದ ಅರುಲ್ ಮಣಿ 20ನೇ ನಿಮಿಷದಲ್ಲಿ ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಪ್ಯಾಂಥರ್ಸ್ ತಂಡವು 2–0ಯಿಂದ ವೈಟ್‌ಫೀಲ್ಡ್ ಎಫ್‌ಸಿ ಎದುರು ಗೆದ್ದಿತು. ತಂಡದ ಪರ ನಿಕೋಲಾಸ್ ವಿಶಾಲ್ ಅರ್ನಾಲ್ಡ್ 24ನೇ ನಿಮಿಷ ಮತ್ತು ಕರಣ್ ಎಂ. ಕುಮಾರ್ 35ನೇ ನಿಮಿಷ ಕಾಲ್ಚಳಕ ತೋರಿದರು.

ಸದನದ ಸಂಪ್ರದಾಯಕ್ಕೆ ಪ್ರತಿಭಟನೆ ಮೂಲಕ ಅಪಮಾನ: ಸ್ಪೀಕರ್ ಅಸಮಾಧಾನ

ಸಂಸತ್ತಿನಲ್ಲಿ ಮುಗಿಯದ ಗದ್ದಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಪೆಗಾಸಸ್ ಮತ್ತು ರೈತರ ಸಮಸ್ಯೆಗಳ ಕುರಿತು ಪ್ರತಿಪಕ್ಷಗಳ ಸದಸ್ಯರು ಮಾಡಿದ ಪ್ರತಿಭಟನೆಗೆ ಲೋಕಸಭೆ ಮಂಗಳವಾರವೂ ಸಾಕ್ಷಿಯಾಯಿತು. ಎರಡು ಪ್ರಮುಖ ಮಸೂದೆಗಳನ್ನು ಅಂಗೀಕರಿಸಿದ ನಂತರ ದಿನದ ಕಲಾಪವನ್ನು ಮುಂದೂಡಬೇಕಾಯಿತು. ನ್ಯಾಯಮಂಡಳಿಗಳ ಸುಧಾರಣಾ ಮಸೂದೆ–2021 ಮತ್ತು ಅಗತ್ಯ ರಕ್ಷಣಾ ಸೇವೆಗಳ ಮಸೂದೆ–2021 ಅನ್ನು ವಿರೋಧ ಪಕ್ಷಗಳ ಸದಸ್ಯರ ನಿರಂತರ ಪ್ರತಿಭಟನೆಯ ನಡುವೆಯೇ ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ಕೃಷಿ ಮತ್ತು ತೋಟಗಾರಿಕೆಗೆ ಸಂಬಂಧಿಸಿದ ಐದು ಪ್ರಶ್ನೆಗಳನ್ನು ಮೊದಲ ಮುಂದೂಡಿಕೆಗೂ ಮುನ್ನ ಚರ್ಚಿಸಲಾಯಿತು. ಪ್ರಶ್ನೋತ್ತರ ಸಮಯ ಸುಮಾರು 40 ನಿಮಿಷ ನಡೆಯಿತು. ರೈತರಿಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತು ಚರ್ಚಿಸಲಾಗುತ್ತಿದೆ ಎಂದು ಸ್ಪೀಕರ್ ಓಂ ಬಿರ್ಲಾ ಹೇಳಿದರು. ಆದರೆ ಪೆಗಾಸಸ್ ವಿಷಯ ಇಟ್ಟುಕೊಂಡು ಸ್ಪೀಕರ್ ಪೀಠದ ಎದುರು ಪ್ರತಿಭಟನೆ ನಡೆಸುತ್ತಿರುವ ಸದಸ್ಯರು ತಮ್ಮ ಸ್ಥಾನಗಳಿಗೆ ಹಿಂತಿರುಗುವಂತೆ ಅವರು ಮನವಿ ಮಾಡಿದರು. ಪ್ರತಿಭಟನಕಾರರಿಗೆ ಚರ್ಚೆಗಳು ನಡೆಯುವುದು ಬೇಕಿಲ್ಲ ಎಂದ ಅವರು, ಸಂಸತ್ತಿನ ಸಂಪ್ರದಾಯಗಳನ್ನು ಸಂಸದರು ಅವಮಾನಿಸುತ್ತಿದ್ದಾರೆ ಎಂದು ಆರೋಪಿಸಿದರು.

ಕೋವಿಡ್ ಲಸಿಕೆಗಾಗಿ ಜುಲೈ 30ರವರೆಗೆ ಕೋ-ವಿನ್‌ನಲ್ಲಿ 43.17 ಕೋಟಿ ನೋಂದಣಿ ಮಾಡಿಸಿಕೊಂಡಿದ್ದಾರೆ. ಶೇ 62.54ರಷ್ಟು ನೋಂದಣಿ ಸ್ಥಳದಲ್ಲೇ ಆಗಿದೆ. 45.10 ಕೋಟಿ ಲಸಿಕೆಗಳನ್ನೂ ನೀಡಲಾಗಿದೆ ಎಂದು ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ರಾಜ್ಯಸಭೆಗೆ ತಿಳಿಸಿದರು.

> **ಯಾವುದೇ ಮಸೂದೆ ಅಂಗೀಕರಿಸುವ ಮೊದಲು ಸರಿಯಾದ ಚರ್ಚೆಯಾಗಬೇಕು. ಸದನವು ಕ್ರಮಬದ್ಧವಾಗಿ ನಡೆಯದಿರುವಾಗ ಮಸೂದೆ ಅಂಗೀಕರಿಸಬಾರದು ಅಧೀರ್ ರಂಜನ್ ಚೌಧರಿ,** ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ

> **ಸದನದಲ್ಲಿ ಮಂಡಿಸಿದ ಮಸೂದೆಗಳ ಬಗ್ಗೆ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಲು ಸರ್ಕಾರ ಸಿದ್ಧ. ವಿರೋಧ ಪಕ್ಷಗಳು ಸಂಸತ್ತಿನಲ್ಲಿ ಸಾಂವಿಧಾನಿಕ ಬಿಕ್ಕಟ್ಟು ಸೃಷ್ಟಿಸುವುದು ಸರಿಯಲ್ಲ ನಿರ್ಮಲಾ ಸೀತಾರಾಮನ್,** ಹಣಕಾಸು ಸಚಿವೆ

ಪ್ರತಿಪಕ್ಷಗಳ ವಿರುದ್ಧ ಪ್ರಧಾನಿ ಕಿಡಿ

ಮಸೂದೆಗಳು ಅಂಗೀಕಾರ ಆಗುತ್ತಿರುವ ವಿಧಾನದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಿರುವ ವಿರೋಧ ಪಕ್ಷಗಳ ವರ್ತನೆಗೆ ಪ್ರಧಾನಿ ನರೇಂದ್ರ ಮೋದಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ವಿರೋಧ ಪಕ್ಷಗಳು ತಮ್ಮ ನಡವಳಿಕೆ ಮೂಲಕ ಸಂವಿಧಾನ ಮತ್ತು ಶಾಸಕಾಂಗವನ್ನು ಅಪಮಾನಿಸುತ್ತಿವೆ ಎಂದು ದೂರಿದ್ದಾರೆ. ಬಿಜೆಪಿ ಸಂಸದೀಯ ಪಕ್ಷದ ಸಭೆಯಲ್ಲಿ ಅವರು ಮಾತನಾಡಿದರು.

ಸಚಿವರ ಕೈಯಲ್ಲಿದ್ದ ಕಾಗದಪತ್ರವನ್ನು ಟಿಎಂಸಿ ಸದಸ್ಯರು ಹರಿದುಹಾಕಿದ್ದಾರೆ. ಟಿಎಂಸಿ ನಾಯಕ ಡೆರೆಕ್ ಒಬ್ರಿಯಾನ್ ಅವರು ಮಸೂದೆ ಅಂಗೀಕಾರದ ಬಗ್ಗೆ ಪ್ರಶ್ನೆ ಎತ್ತಿದ್ದಾರೆ. ಇಂತಹ ವರ್ತನೆ ಮತ್ತು ಟೀಕೆಗಳನ್ನು ಸಭೆಯಲ್ಲಿ ಪ್ರಸ್ತಾಪಿಸಿದ ಪ್ರಧಾನಿ, ಪ್ರತಿಪಕ್ಷಗಳ ನಡವಳಿಕೆಯು ಸಂಸತ್ತು ಮತ್ತು ಸಂವಿಧಾನಕ್ಕೆ ಮಾಡಿದ ಅವಮಾನ ಎಂದು ಕರೆದರು.

ನಾಯ್ಡು ಮನವೊಲಿಕೆ ಯತ್ನ

ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಸುಗಮ ಕಲಾಪ ನಡೆಸುವ ಉದ್ದೇಶದಿಂದ ರಾಜ್ಯಸಭೆ ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವರು ಸಚಿವರಾದ ರಾಜನಾಥ್ ಸಿಂಗ್ ಮತ್ತು ಅಮಿತ್ ಶಾ ಹಾಗೂ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಹಿರಿಯ ಮುಖಂಡರ ಜೊತೆ ಮಾತುಕತೆ ನಡೆಸಿದರು.

ಎರಡೂ ಸದನಗಳಲ್ಲಿ ಕಲಾಪಗಳು ತೀವ್ರ ಪ್ರತಿಭಟನೆಯ ಕಾರಣ ಹಳಿ ತಪ್ಪಿರುವ ಹಿನ್ನೆಲೆಯಲ್ಲಿ ನಾಯ್ಡು ಮಾತುಕತೆ ನಡೆಸಿದರು. ರಾಜನಾಥ್, ಶಾ, ಪೀಯೂಷ್ ಗೋಯಲ್ ಮತ್ತು ಪ್ರಲ್ಹಾದ ಜೋಶಿ ಅವರೊಂದಿಗೆ ಸೋಮವಾರ ಸಂಜೆ ಮಾತನಾಡಿದ್ದ ನಾಯ್ಡು, ಮಂಗಳವಾರ ಬೆಳಿಗ್ಗೆ ಖರ್ಗೆ ಅವರೊಂದಿಗೆ ಚರ್ಚಿಸಿದರು.

ಸಂಸತ್ತಿನ ಕೋಲಾಹಲಕ್ಕೆ ಒಟ್ಟಾಗಿ ಪರಿಹಾರ ಕಂಡುಕೊಳ್ಳುವಂತೆ ಅವರು ಸಲಹೆ ನೀಡಿದರು. ಪೆಗಾಸಸ್ ವಿಚಾರವನ್ನು ಚರ್ಚೆಗೆ ಎತ್ತಿಕೊಳ್ಳುವಂತೆ ಪ್ರತಿಪಕ್ಷಗಳು ಇಟ್ಟಿರುವ ಬೇಡಿಕೆಯನ್ನು ಸರ್ಕಾರ ಒಪ್ಪುತ್ತಿಲ್ಲ. ಈ ಜಿದ್ದಾಜಿದ್ದಿ ಕೊನೆಗೊಳಿಸಲು ಸೌಹಾರ್ದಯುತ ಪರಿಹಾರವನ್ನು ರೂಪಿಸಲು ನಾಯ್ಡು ಎರಡೂ ಕಡೆಯವರನ್ನು ಒಟ್ಟಾಗಿ ಕುಳಿತುಕೊಂಡು ಚರ್ಚಿಸುವಂತೆ ಮನವಿ ಮಾಡಿದರು.

ಗದ್ದಲದ ನಡುವೆಯೇ ರಾಜ್ಯಸಭೆಯು ದಿವಾಳಿತನ ಸಂಹಿತೆ (ತಿದ್ದುಪಡಿ) ಮಸೂದೆ 2021 ಅನ್ನು ಅಂಗೀಕರಿಸಿತು.

'ತಮಿಳುನಾಡು ರಾಜ್ಯ ವಿಭಜನೆ ಪ್ರಸ್ತಾವ ಇಲ್ಲ'

ನಿತ್ಯಾನಂದ ರೈ

ನವದೆಹಲಿ: 'ತಮಿಳುನಾಡು ರಾಜ್ಯವನ್ನು ವಿಭಜಿಸುವ ಯಾವುದೇ ಪ್ರಸ್ತಾವ ಕೇಂದ್ರ ಸರ್ಕಾರದ ಮುಂದಿಲ್ಲ' ಎಂದು ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಮಂಗಳವಾರ ಲೋಕಸಭೆಯಲ್ಲಿ ತಿಳಿಸಿದರು.

ತಮಿಳುನಾಡು ಸಂಸದರಾದ ಟಿ.ಆರ್. ಪಾರಿವೆಂಧರ್ ಮತ್ತು ಎಸ್. ರಾಮಲಿಂಗಂ ಅವರ ಪ್ರಶ್ನೆಗೆ ಉತ್ತರಿಸಿದರು. ಗೌಂಡರ್ ಸಮುದಾಯ ಪ್ರಾಬಲ್ಯ ಹೊಂದಿರುವ ನಮಕ್ಕಲ್, ಸೇಲಂ, ತಿರುಪ್ಪೂರ್, ಕೊಯಮತ್ತೂರು ಒಳಗೊಂಡಂತೆ ಕೊಂಗುನಾಡು ರಾಜ್ಯ ಸ್ಥಾಪನೆಯಾಗಲಿದೆ ಎಂದೂ ಊಹಾಪೋಹಗಳಿದ್ದವು.

'ಜೆಎನ್‌ಯು ಪ್ರಕರಣ: ಯಾರನ್ನೂ ಬಂಧಿಸಿಲ್ಲ'

ನವದೆಹಲಿ (ಪಿಟಿಐ): 'ಇಲ್ಲಿನ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ (ಜೆಎನ್‌ಯು) ಕಳೆದ ವರ್ಷ ನಡೆದ ಹಿಂಸಾಚಾರಕ್ಕೆ ಸಂಬಂಧ ದೆಹಲಿ ಪೊಲೀಸರು ಹಲವರನ್ನು ವಿಚಾರಣೆಗೆ ಒಳಪಡಿಸಿದ್ದರು. ಆದರೆ ಯಾರನ್ನೂ ಬಂಧಿಸಿಲ್ಲ' ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಅವರು ಮಂಗಳವಾರ ಲೋಕಸಭೆಗೆ ತಿಳಿಸಿದರು.

'ಈ ಪ್ರಕರಣ ಸಂಬಂಧ ವಸಂತ್ ಕುಂಜ್ (ಉತ್ತರ) ಪೊಲೀಸ್ ಠಾಣೆಯಲ್ಲಿ ದಾಖಲಾದ ಮೂರು ಪ್ರಕರಣಗಳ ತನಿಖೆಗಾಗಿ ಅಪರಾಧ ವಿಭಾಗವು ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿತ್ತು ಎಂಬುದಾಗಿ ದೆಹಲಿ ಪೊಲೀಸ್ ಇಲಾಖೆ ವರದಿ ಮಾಡಿದೆ' ಎಂದು ಅವರು ಹೇಳಿದರು.

ಡಿಎಂಕೆ ಸದಸ್ಯ ದಯಾನಿಧಿ ಮಾರನ್ ಕೇಳಿದ ಪ್ರಶ್ನೆಗೆ ಉತ್ತರಿಸಿದರು.

'ಹಣಕಾಸು ನಷ್ಟ, ದಿವಾಳಿ ಸಂಹಿತೆ' ತಿದ್ದುಪಡಿ ಮಸೂದೆ ಅಂಗೀಕಾರ

ದಿನದ ಮಟ್ಟಿಗೆ ರಾಜ್ಯಸಭೆ ಮುಂದೂಡಿಕೆ

ನವದೆಹಲಿ (ಪಿಟಿಐ): ವಿರೋಧ ಪಕ್ಷಗಳ ಪ್ರತಿಭಟನೆಯ ನಡುವೆಯೇ 'ಹಣಕಾಸು ನಷ್ಟ ಹಾಗೂ ದಿವಾಳಿ ಸಂಹಿತೆ' ತಿದ್ದುಪಡಿ ಮಸೂದೆಯನ್ನು ಮಂಗಳವಾರ ಅಂಗೀಕರಿಸಿದ ನಂತರ ರಾಜ್ಯಸಭೆಯನ್ನು ಒಂದು ದಿನದ ಮಟ್ಟಿಗೆ ಮುಂದೂಡಲಾಯಿತು.

ಪೆಗಾಸಸ್ ಗೂಢಚರ್ಯೆ ತಂತ್ರಾಂಶದ ದುರ್ಬಳಕೆ, ನೂತನ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರ ಪ್ರತಿಭಟನೆ ಹಾಗೂ ಇತರ ವಿಷಯಗಳ ಕುರಿತು ಚರ್ಚೆಗೆ ವಿರೋಧ ಪಕ್ಷಗಳು ಪಟ್ಟು ಹಿಡಿದವು.

ನಂತರ, ವಿರೋಧ ಪಕ್ಷಗಳು ಪ್ರತಿಭಟನೆಗೆ ಮುಂದಾದವು. ವಿರೋಧ ಪಕ್ಷಗಳ ಗದ್ದಲದ ನಡುವೆಯೇ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಸೂದೆ ಮಂಡಿಸಿದರು.

ಮಸೂದೆ ಮೇಲೆ ಕೆಲ ಹೊತ್ತಿನ ಚರ್ಚೆ ನಡೆಯಿತಲ್ಲದೇ, ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ವಿರೋಧ ಪಕ್ಷಗಳ ಸದಸ್ಯರು ಸಭಾಪತಿ ಪೀಠದ ಮುಂದೆ ಬಂದು ಪ್ರತಿಭಟನೆ ತೀವ್ರಗೊಳಿಸಿದರು. ಘೋಷಣೆಗಳನ್ನೂ ಕೂಗಿದರು.

ರಾಜ್ಯಸಭೆಯಲ್ಲಿ ಮಂಗಳವಾರ ವಿರೋಧ ಪಕ್ಷಗಳ ಸದಸ್ಯರು ಸಭಾಪತಿ ಪೀಠದ ಮುಂದೆ ಪ್ರತಿಭಟಿಸಿದರು —ಪಿಟಿಐ ಚಿತ್ರ

2030ಕ್ಕೆ ಭಾರತ ಎಲ್ಲಾ ಕ್ಷೇತ್ರದಲ್ಲೂ ಜಗತ್ತನ್ನು ಮುನ್ನಡೆಸಬಹುದು: ವರ್ಮಾ

ವಾಷಿಂಗ್ಟನ್ (ಪಿಟಿಐ): '2030ರ ವೇಳೆಗೆ ಭಾರತ ಪ್ರತಿಯೊಂದು ಕ್ಷೇತ್ರದಲ್ಲೂ ಜಗತ್ತನ್ನು ಮುನ್ನಡೆಸಬಹುದು. ವಿಶ್ವದ ಎರಡು ಅತಿದೊಡ್ಡ ಪ್ರಜಾಪ್ರಭುತ್ವದ ದೇಶಗಳಾದ ಅಮೆರಿಕ ಮತ್ತು ಭಾರತ ಒಗ್ಗೂಡಿದರೆ, ಇನ್ನಷ್ಟು ಹೆಚ್ಚು ಸಾಧನೆ ಮಾಡಬಹುದು' ಎಂದು ಅಮೆರಿಕದ ಹಿರಿಯ ರಾಜತಾಂತ್ರಿಕ ರಿಚರ್ಡ್ ವರ್ಮಾ ಹೇಳಿದರು.

ರಿಚರ್ಡ್ ವರ್ಮಾ

'2030ರಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಜಗತ್ತನ್ನು ಮುನ್ನಡೆಸಲಿರುವ ಭಾರತ ನನಗೆ ಕಾಣುತ್ತಿದೆ. ಭಾರತವು ಹೆಚ್ಚು ಜನಸಂಖ್ಯೆ, ಕಾಲೇಜು ಪದವೀಧರರು, ಮಧ್ಯಮ ವರ್ಗದವರು, ಮೊಬೈಲ್ ಫೋನ್ ಮತ್ತು ಇಂಟರ್‌ನೆಟ್ ಬಳಕೆದಾರರನ್ನು ಹೊಂದಿದೆ. ಅಲ್ಲದೆ ಭಾರತವು ಮೂರನೇ ಅತಿದೊಡ್ಡ ಸೇನೆ ಮತ್ತು ಮೂರನೇ ಅತಿದೊಡ್ಡ ಆರ್ಥಿಕತೆಯನ್ನು ಹೊಂದಿದೆ. ಜತೆಗೆ ದೇಶದಲ್ಲಿ 25 ವರ್ಷದೊಳಗಿನ 60 ಕೋಟಿ ಜನರಿದ್ದಾರೆ' ಎಂದು ಅವರು ತಿಳಿಸಿದರು.

'ಜಿಂದಾಲ್ ಯೂನಿವರ್ಸಿಟಿ ಸ್ಕೂಲ್ ಆಫ್ ಬ್ಯಾಂಕಿಂಗ್ ಆ್ಯಂಡ್ ಫೈನಾನ್ಸ್‌ನ ವಿದ್ಯಾರ್ಥಿಗಳನ್ನುದ್ದೇಶಿಸಿ ಅವರು ಮಾತನಾಡಿದರು.

'ನಮ್ಮ ಕಣ್ಮುಂದೆಯೇ ಇವತ್ತು ಭಾರತದಲ್ಲಿ ಬೃಹತ್ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಮುಂದಿನ ದಶಕದಲ್ಲಿ ಮೂಲಸೌಕರ್ಯಕ್ಕಾಗಿ ಸುಮಾರು 2 ಲಕ್ಷ ಕೋಟಿ ಡಾಲರ್ ಖರ್ಚು ಮಾಡಲಾಗುವುದು. ಪ್ರಸ್ತುತ 100 ಹೊಸ ವಿಮಾನ ನಿಲ್ದಾಣಗಳು ಯೋಜನೆ ಅಥವಾ ನಿರ್ಮಾಣ ಹಂತದಲ್ಲಿವೆ' ಎಂದರು.

'ಮುಂದಿನ ದಿನಗಳಲ್ಲಿ ಭಾರತ–ಅಮೆರಿಕ ಜತೆಗೂಡಿ ಹೊಸ ಮೈಲಿಗಲ್ಲು ಸಾಧಿಸಬಹುದು. ಅದು ಸಾಂಕ್ರಾಮಿಕ, ಭಯೋತ್ಪಾದನೆ ವಿರುದ್ಧ ಹೋರಾಟವೇ ಇರಲಿ, ಆವಿಷ್ಕಾರಗಳ ಮೂಲಕ ಜನರ ಜೀವನವನ್ನು ಇನ್ನಷ್ಟು ಸರಳಗೊಳಿಸುವ ಕಾರ್ಯವೇ ಇರಲಿ. ನಾವು ಜತೆಯಾಗಿ ಎಲ್ಲವನ್ನೂ ಸಾಧಿಸಲು ಸಾಧ್ಯ' ಎಂದು ಅವರು ಅಭಿಪ್ರಾಯಪಟ್ಟರು.

ಸುಪ್ರೀಂಕೋರ್ಟ್‌ಗೆ ಸಂಪಾದಕರ ಮಂಡಳಿ ಅರ್ಜಿ

ಪೆಗಾಸಸ್ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಲು ಮನವಿ

ನವದೆಹಲಿ (ಪಿಟಿಐ): ಪೆಗಾಸಸ್ ಗೂಢಚರ್ಯೆ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಬೇಕು ಎಂದು ಕೋರಿ ಭಾರತೀಯ ಸಂಪಾದಕರ ಮಂಡಳಿಯು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಇಸ್ರೇಲ್‌ನ ಸಂಸ್ಥೆ ಎನ್‌ಎಸ್‌ಒದ ಪೆಗಾಸಸ್ ತಂತ್ರಾಂಶವನ್ನು ಬಳಸಿ ಆಯ್ದ ಪತ್ರಕರ್ತರು ಮತ್ತು ಇತರರ ಚಲನವಲನವನ್ನು ಕೇಂದ್ರ ಸರ್ಕಾರ ಗಮನಿಸಿದೆ ಎಂಬ ಆರೋಪಗಳಿವೆ.

ಜನರಿಗೆ ಮಾಹಿತಿ ಒದಗಿಸುವ, ವಿಶ್ವಾಸಾರ್ಹತೆ ಮತ್ತು ಸರ್ಕಾರ ಮುಕ್ತ, ಪಾರದರ್ಶಕವಾಗಿರಬೇಕು ಎಂಬ ಜನರ ಹಕ್ಕು ಸಾಕಾರಗೊಳಿಸುವ ಕಾರ್ಯವನ್ನು ಪತ್ರಕರ್ತರು ನಿಭಾಯಿಸುತ್ತಿದ್ದಾರೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಉತ್ತರದಾಯಿತ್ವವುಳ್ಳ ಸರ್ಕಾರದ ಎಲ್ಲ ಇಲಾಖೆಗಳಿಂದ ಮಾಹಿತಿ, ವಿವರಣೆಯನ್ನು ಪಡೆಯುವ, ಸರ್ಕಾರದ ಕಾರ್ಯಕ್ರಮಗಳಿಗೆ ಸಾಂವಿಧಾನಿಕ ಸಮರ್ಥನೆಯ ಪಡೆಯುವ ಹೊಣೆ ಪತ್ರಕರ್ತರದ್ದಾಗಿದೆ ಎಂದೂ ಹೇಳಲಾಗಿದೆ.

ಪತ್ರಕರ್ತರ ಈ ಹೊಣೆಗಾರಿಕೆ ನಿಭಾಯಿಸಲು ಮಾಧ್ಯಮ ಸ್ವಾತಂತ್ರ್ಯದ ರಕ್ಷಣೆಯೂ ಅತ್ಯಗತ್ಯ ಎಂದು ಮಂಡಳಿಯು ಅರ್ಜಿಯಲ್ಲಿ ಪ್ರತಿಪಾದಿಸಿದೆ. ಪತ್ರಕರ್ತ ಮೃಣಾಲ್ ಪಾಂಡೆ ಅವರು ಸಹ ಅರ್ಜಿದಾರರಾಗಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠವು ಆ.5ರಂದು ಇದಕ್ಕೆ ಸಂಬಂಧಿತ ಅರ್ಜಿಗಳನ್ನು ವಿಚಾರಣೆಗೆ ಎತ್ತಿಕೊಳ್ಳಲಿದೆ. ಹಿರಿಯ ಪತ್ರಕರ್ತರಾದ ಎನ್.ರಾಮ್, ಶಶಿಕುಮಾರ್ ಅವರೂ ಪ್ರತ್ಯೇಕ ಅರ್ಜಿ ಸಲ್ಲಿಸಿದ್ದು, ಹಾಲಿ ಅಥವಾ ವಿಶ್ರಾಂತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಸ್ವತಂತ್ರ ತನಿಖೆಗೆ ಒತ್ತಾಯಿಸಿದ್ದಾರೆ.

ಎನ್‌ಎಸ್‌ಒದ ಪೆಗಾಸಸ್ ತಂತ್ರಾಂಶ ಬಳಸಿ ಗೂಢಚರ್ಯೆ ಮಾಡುವ ಪಟ್ಟಿಯಲ್ಲಿ ಭಾರತದ ಸುಮಾರು 300 ಮೊಬೈಲ್ ಸಂಖ್ಯೆಗಳಿವೆ ಎಂದು ಅಂತರರಾಷ್ಟ್ರೀಯ ಮಾಧ್ಯಮ ಒಕ್ಕೂಟ ಈಚೆಗೆ ವರದಿ ಮಾಡಿತ್ತು.

ಸಹೋದ್ಯೋಗಿ ಮೇಲೆ ಅತ್ಯಾಚಾರ ಯತ್ನ: ಎಸ್‌ಐ ಬಂಧನ

ಹೈದರಾಬಾದ್ (ಪಿಟಿಐ): ತರಬೇತಿ ಅವಧಿಯಲ್ಲಿದ್ದ ಮಹಿಳಾ ಸಬ್ ಇನ್‌ಸ್ಪೆಕ್ಟರ್ ಮೇಲೆ 'ಅತ್ಯಾಚಾರ ಯತ್ನ' ಆರೋಪದ ಮೇಲೆ ಇಲ್ಲಿನ ಮಹಬುದಾಬಾದ್ ಜಿಲ್ಲೆಯ ಸಬ್ ಇನ್‌ಸ್ಪೆಕ್ಟರ್ ಒಬ್ಬರನ್ನು ಬಂಧಿಸಲಾಗಿದೆ.

29 ವರ್ಷದ ಮಹಿಳಾ ಅಧಿಕಾರಿ ಈ ಕುರಿತು ವಾರಂಗಲ್‌ನ ಪೊಲೀಸ್ ಕಮಿಷನರ್ ತರುಣ್ ಜೋಷಿ ಅವರಿಗೆ ದೂರು ನೀಡಿದ್ದು, ಈ ಬಗ್ಗೆ ತನಿಖೆಗೆ ಆದೇಶಿಸಿ ಪ್ರಕರಣವನ್ನು ದಾಖಲಿಸಲಾಗಿತ್ತು.

ತನಿಖೆಯೊಂದರ ನೆಪದಲ್ಲಿ ತಮ್ಮ ಖಾಸಗಿ ವಾಹನದಲ್ಲಿ ಸೋಮವಾರ ರಾತ್ರಿ ಮಹಿಳಾ ಅಧಿಕಾರಿಯನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದಿದ್ದ ಇನ್‌ಸ್ಪೆಕ್ಟರ್ ಅತ್ಯಾಚಾರಕ್ಕೆ ಯತ್ನಿಸಿದ್ದರು ಎಂದು ದೂರು ನೀಡಲಾಗಿತ್ತು.

ಪ್ರಜಾವಾಣಿ ಇದ್ದರೆ ಗಮನ... ಗೆಲ್ಲುತ್ತೀರಿ ಬಹುಮಾನ!
ಸ್ಪೆಷಲ್ ಅಂಕಣಗಳ ಸಿಂಪಲ್ ಪ್ರಶ್ನೆ!
ಪ್ರತಿ ದಿನ ಒಂದು ಸ್ಪೆಷಲ್ ಅಂಕಣದಿಂದ ಆಯ್ದ ಪ್ರಶ್ನೆಗೆ ಉತ್ತರಿಸಿ ಬಹುಮಾನ ಗೆಲ್ಲಿ!
ಇಂದಿನ ಅಂಕಣ: 50 ವರ್ಷಗಳ ಹಿಂದೆ
ಪ್ರಶ್ನೆ: ಈ ಅಂಕಣದಲ್ಲಿ ಕೊಡಲಾಗಿರುವ ಸುದ್ದಿ ಯಾವುದು?
www.bit.ly/pvgamana
ಲಿಂಕ್ ಬಳಸಿ ಇಂದು ರಾತ್ರಿ 8ರ ಒಳಗೆ ನಿಮ್ಮ ಉತ್ತರವನ್ನು ಕಳುಹಿಸಿ
ಪ್ರಜಾವಾಣಿ GIFT VOUCHER ₹500/-
ಪ್ರತಿ ದಿನ 8 ಅದೃಷ್ಟಶಾಲಿಗಳಿಗೆ
ಹಿಂದಿನ ಪ್ರಶ್ನೆಗೆ ಉತ್ತರ: ದೂರವಾಣಿ ಕದ್ದಾಲಿಕೆ, ತನಿಖೆಗೆ ಆಗ್ರಹ

ಎಲೈನ್ 'ಡಬಲ್' ದಾಖಲೆ

ಟೋಕಿಯೊ: ಜಮೈಕಾದ ಎಲೈನ್ ಥಾಮ್ಸನ್ ಹೆರಾ ಅವರು ಒಲಿಂಪಿಕ್ಸ್‌ನಲ್ಲಿ 'ಡಬಲ್' ಡಬಲ್ ಸಾಧನೆ ಮಾಡಿ ಇತಿಹಾಸ ರಚಿಸಿದರು.

100 ಮೀಟರ್ಸ್ ಓಟದಲ್ಲಿ ಚಾಂಪಿಯನ್ ಆಗಿದ್ದ ಅವರು ಮಂಗಳವಾರ 200 ಮೀಟರ್ಸ್‌ನಲ್ಲೂ ಮೊದಲಿಗರಾದರು. ರಿಯೊ ಒಲಿಂಪಿಕ್ಸ್‌ನಲ್ಲೂ ಈ ಎರಡು ವಿಭಾಗಗಳ ಚಿನ್ನದ ಪದಕ ಅವರ ಕೊರಳಿಗೇರಿದ್ದವು. ಮಂಗಳವಾರ 21.53 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಅವರು ರಾಷ್ಟ್ರೀಯ ದಾಖಲೆಯನ್ನೂ ಬರೆದರು.

ನಮೀಬಿಯಾದ 18ರ ವರ್ಷದ ಕ್ರಿಸ್ಟಿನ್ ಬೋಮಾ 21.81 ಸೆಕೆಂಡುಗಳ ಸಾಧನೆಯೊಂದಿಗೆ ಚಿನ್ನ ಗೆದ್ದು 20 ವರ್ಷದೊಳಗಿನವರ ವಿಶ್ವದಾಖಲೆ ಮುರಿದರು. ಜಮೈಕಾದ ಶೆಲ್ಲಿ ಆ್ಯನ್ ಫ್ರೇಸರ್ ಪ್ರೈಸ್ ಅವರನ್ನು ಹಿಂದಿಕ್ಕಿ ಅಮೆರಿಕದ ಗಾಬ್ರಿಯೆಲಿ ಥಾಮಸ್ (21.87ಸೆ) ಕಂಚಿನ ಪದಕ ಗೆದ್ದರು.

ಮಹಿಳೆಯರ 800 ಮೀಟರ್ಸ್ ಓಟದಲ್ಲಿ ಅಮೆರಿಕ ಪ್ರಾಬಲ್ಯ ಮೆರೆಯಿತು. ಅತಿಂಗ್ ಮೂ 1 ನಿಮಿಷ 55.21 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಚಿನ್ನ ಗೆದ್ದರೆ ರೆವಿನ್ ರೋಜರ್ಸ್ ವೈಯಕ್ತಿಕ ಶ್ರೇಷ್ಠ 1 ನಿಮಿಷ 56.81 ಸೆಕೆಂಡುಗಳ ಸಾಧನೆಯೊಂದಿಗೆ ಕಂಚು ಗಳಿಸಿದರು. ಬೆಳ್ಳಿ ಪದಕ ಬ್ರಿಟನ್‌ನ ಕೀಲಿ ಹೊಂಕಿನ್ಸನ್ (1 ನಿ 55.88ಸೆ) ಪಾಲಾಯಿತು.

ಹರ್ಡಲ್ಸ್‌ನಲ್ಲಿ ಕರ್ಸ್ಟನ್ ವಿಶ್ವ ದಾಖಲೆ: ಪುರುಷರ 400 ಮೀಟರ್ಸ್ ಹರ್ಡಲ್ಸ್‌ನಲ್ಲಿ ನಾರ್ವೆಯ ವಾರ್‌ಹಲ್ಮ್ ಕರ್ಸ್ಟನ್ (45.94 ಸೆಕೆಂಡು) ವಿಶ್ವ ದಾಖಲೆಯೊಂದಿಗೆ ಚಿನ್ನ ಗೆದ್ದರು. ಅಮೆರಿಕದ ಬೆಂಜಿಮಿನ್ ರೇ (46.17 ಸೆ) ಮತ್ತು ಜಮೈಕಾದ ಅಲಿಸನ್ (46.72 ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿದರು.

ಮಹಿಳೆಯರ ಲಾಂಗ್‌ಜಂಪ್‌ನ ಚಿನ್ನದ ಪದಕ ಜರ್ಮನಿ ಪಾಲಾಯಿತು. ಮಲೈಕಾ ಮಿಹಾಬೊ 7 ಮೀಟರ್ ದೂರ ಜಿಗಿದರು. ಅಮೆರಿಕದ ಬ್ರಿಟ್ನಿ ರೀಸ್ (6.97 ಮೀ) ಮತ್ತು ನೈಜೀರಿಯಾದ ಇಸ್ ಬ್ರೂಮ್ (6.97 ಮೀ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗಳಿಸಿದರು. ಮಹಿಳೆಯರ ಹ್ಯಾಮರ್ ಥ್ರೋದಲ್ಲಿ ಪೋಲೆಂಡ್‌ನ ಅನಿಟಾ ವ್ಲೊಡಾರ್ಕ್‌ಜಿಕ್ (78.48ಮೀ) ಚಿನ್ನ ಗೆದ್ದರು. ಬೆಳ್ಳಿ ಮತ್ತು ಕಂಚಿನ ಪದಕ ಕ್ರಮವಾಗಿ ಚೀನಾದ ಜೆಂಗ್ ವಾಂಗ್ (77.03ಮೀ) ಪೋಲೆಂಡ್‌ನ ಮಾಲ್ವಿನಾ ಕೊಪ್ರೋನ್ (75.49ಮೀ) ಪಾಲಾಯಿತು.

ಅನಿಟಾ, ಒಲಿಂಪಿಕ್ಸ್‌ನ ಟ್ರ್ಯಾಕ್ ಮತ್ತು ಫೀಲ್ಡ್‌ನ ಒಂದೇ ಸ್ಪರ್ಧೆಯಲ್ಲಿ ಸತತ ಮೂರು ಚಿನ್ನ ಗೆದ್ದ ಮೊದಲ ಮಹಿಳೆ ಎನಿಸಿದರು. 35 ವರ್ಷದ ಅವರು 2012 ಮತ್ತು 2016ರಲ್ಲೂ ಚಿನ್ನ ಗೆದ್ದಿದ್ದರು.

ಎಲೈನ್ ಥಾಮ್ಸನ್ ಹೆರಾ –ಎಎಫ್‌ಪಿ ಚಿತ್ರ

ಎಲೈನ್ ಥಾಮ್ಸನ್

- ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ವೈಯಕ್ತಿಕ ನಾಲ್ಕು ಚಿನ್ನ ಗೆದ್ದ ಮೊದಲ ಮಹಿಳೆ
- 200 ಮೀಟರ್ಸ್ ಓಟದಲ್ಲಿ ಜಗತ್ತಿನ ಎರಡನೇ ಅತಿವೇಗದ ಮಹಿಳೆ
- 200 ಮೀಟರ್ಸ್ ವಿಶ್ವದಾಖಲೆ ಅಮೆರಿಕದ ಫ್ಲಾಲೆನ್ಸ್ ಗ್ರಿಫಿತ್ ಜಾಯ್ನರ್ ಹೆಸರಿನಲ್ಲಿದೆ
- ಫ್ಲಾಲೆನ್ಸ್ ಗ್ರಿಫಿತ್ 1988ರ ಒಲಿಂಪಿಕ್ಸ್‌ನಲ್ಲಿ 21.34 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ್ದರು

ಮಲೈಕಾ ಮಿಹಾಬೊ ಜಿಗಿದ ಭಂಗಿ –ಎಎಫ್‌ಪಿ ಚಿತ್ರ

ತಜಿಂದರ್, ಅನು 'ವಿಫಲ' ಯತ್ನ

ತಜಿಂದರ್ ಪಾಲ್ ಸಿಂಗ್ ತೂರ್ –ಪಿಟಿಐ ಚಿತ್ರ

ಭಾರತದ ತಜಿಂದರ್ ಪಾಲ್ ಸಿಂಗ್ ತೂರ್ ಮತ್ತು ಅನುರಾಣಿ ನಿರಾಶೆ ಅನುಭವಿಸಿದರು. ಪುರುಷರ ಶಾಟ್‌ಪಟ್‌ನಲ್ಲಿ ತಜಿಂದರ್ 'ಎ' ಗುಂಪಿನ ಅರ್ಹತಾ ಸುತ್ತಿನಲ್ಲಿ 13ನೇ ಸ್ಥಾನಕ್ಕೆ ಕುಸಿದರು. ಮಹಿಳೆಯರ ಜಾವೆಲಿನ್ ಎಸೆತದ 'ಎ' ಗುಂಪಿನ ಅರ್ಹತಾ ಸುತ್ತಿನಲ್ಲಿ ಅನುರಾಣಿ ಕೊನೆಯವರಾದರು.

ಏಷ್ಯಾದ ದಾಖಲೆ ಹೊಂದಿರುವ ತಜಿಂದರ್ ಪಾಲ್ ಸಿಂಗ್ ಮೊದಲ ಪ್ರಯತ್ನದಲ್ಲಿ ಮಾತ್ರ ಯಶಸ್ಸು ಕಂಡರು. ಉಳಿದೆರಡು ಪ್ರಯತ್ನಗಳು ವಿಫಲವಾಗಿದ್ದವು. 21.49 ಮೀಟರ್‌ಗಳ ಸಾಧನೆಯೊಂದಿಗೆ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದ ಅವರಿಗೆ ಇಲ್ಲಿ 19.99 ಮೀಟರ್ ಎಸೆಯಲಷ್ಟೇ ಸಾಧ್ಯವಾಯಿತು.

ಅನುರಾಣಿ 54.04 ಮೀಟರ್ ದೂರ ಜಾವೆಲಿನ್ ಎಸೆದರು. ಮೊದಲ ಪ್ರಯತ್ನದಲ್ಲಿ 50.35 ಮೀಟರ್ಸ್ ದೂರ ಎಸೆದ ಅವರು ನಂತರ 53.19 ಮೀಟರ್ಸ್ ಸಾಧನೆ ಮಾಡಿದರು. ಕೊನೆಯ ಯತ್ನದಲ್ಲಿ ಜಾವೆಲಿನ್ ಇನ್ನಷ್ಟು ದೂರ ಸಾಗಿತು. ಆದರೆ 63 ಮೀಟರ್‌ಗಳ ಅರ್ಹತಾ ಮಟ್ಟವನ್ನು ಪೂರೈಸಲು ಸಾಧ್ಯವಾಗಲಿಲ್ಲ. ಫೆಡರೇಷನ್ ಕಪ್‌ನಲ್ಲಿ ಅವರು 63.24 ಮೀಟರ್ಸ್ ಸಾಧನೆ ಮಾಡಿದ್ದರು.

ಅನುರಾಣಿ –ಎಎಫ್‌ಪಿ ಚಿತ್ರ

ಭರವಸೆಯ ಪಥದಲ್ಲಿ ನೀರಜ್ ಚೋಪ್ರಾ

ಒಲಿಂಪಿಕ್ಸ್‌ನ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಭಾರತದ ಅಥ್ಲೀಟ್‌ಗಳ ಮತ್ತೊಮ್ಮೆ ನಿರಾಶೆ ಅನುಭವಿಸಿದ್ದಾರೆ. ಈಗ ಪುರುಷರ ಜಾವೆಲಿನ್ ಎಸೆತದಲ್ಲಿ ಭಾರತ ನಿರೀಕ್ಷೆ ಇರಿಸಿಕೊಂಡಿದೆ. ಪದಕದ ಭರವಸೆಯೊಂದಿಗೆ ನೀರಜ್ ಚೋಪ್ರಾ ಬುಧವಾರ ಕಣಕ್ಕೆ ಇಳಿಯಲಿದ್ದಾರೆ. ಅರ್ಹತಾ ಸುತ್ತಿನ 'ಎ' ಗುಂಪಿನಲ್ಲಿ ಅವರು ಕಾಣಿಸಿಕೊಳ್ಳಲಿದ್ದಾರೆ.

ವಯಸ್ಸು: 23

ಪಾಲ್ಗೊಳ್ಳುವ ಸ್ಪರ್ಧೆ: **ಜಾವೆಲಿನ್ ಎಸೆತ**

ವೈಯಕ್ತಿಕ ಶ್ರೇಷ್ಠ ಸಾಧನೆ: 88.07 ಮೀಟರ್ಸ್ (2021)

2018 — ಗೋಲ್ಡ್‌ಕೋಸ್ಟ್‌ನಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಮತ್ತು ಜಕಾರ್ತದಲ್ಲಿ ಜರುಗಿದ್ದ ಏಷ್ಯನ್ ಕ್ರೀಡಾಕೂಟಗಳಲ್ಲಿ ಚಿನ್ನದ ಸಾಧನೆ

2017 — ಭುವನೇಶ್ವರದಲ್ಲಿ ಆಯೋಜನೆಯಾಗಿದ್ದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಸಾಮರ್ಥ್ಯ

2016 — ಗುವಾಹಟಿಯಲ್ಲಿ ನಡೆದಿದ್ದ ದಕ್ಷಿಣ ಏಷ್ಯನ್ ಕ್ರೀಡಾಕೂಟ ಮತ್ತು ಪೋಲೆಂಡ್‌ನಲ್ಲಿ ನಡೆದಿದ್ದ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಜಯಿಸಿದ ಹಿರಿಮೆ.

16 ವಿಶ್ವ ರ‍್ಯಾಂಕಿಂಗ್

1224 ಸ್ಕೋರ್

4 ಗರಿಷ್ಠ ವಿಶ್ವ ರ‍್ಯಾಂಕಿಂಗ್

ಪಿ.ವಿ.ಸಿಂಧು ಅವರನ್ನು ಸಚಿವರಾದ ಅನುರಾಗ್ ಠಾಕೂರ್ ಮತ್ತು ನಿರ್ಮಲಾ ಸೀತಾರಾಮನ್ ಸನ್ಮಾನಿಸಿದರು –ಪಿಟಿಐ ಚಿತ್ರ

ಸಿಂಧುಗೆ ಅದ್ದೂರಿ ಸ್ವಾಗತ

ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಬ್ಯಾಡ್ಮಿಂಟನ್‌ನಲ್ಲಿ ಕಂಚಿನ ಪದಕ ಗಳಿಸಿದ ಪಿ.ವಿ.ಸಿಂಧು ಮಂಗಳವಾರ ತವರಿಗೆ ಮರಳಿದ್ದು ಅವರನ್ನು ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಇಂದಿರಾಗಾಂಧಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಸಿಬ್ಬಂದಿ ಸಿಂಧು ಅವರನ್ನು ಚಪ್ಪಾಳೆ ತಟ್ಟಿ ಅಭಿನಂದಿಸಿದರು.

ಸಿಂಧು ಮತ್ತು ಅವರ ಕೊರಿಯಾ ಕೋಚ್ ಪಾರ್ಕ್ ಟೇ ಸಾಂಗ್ ಅವರನ್ನು ಕ್ರೀಡಾ ಸಚಿವ ಅನುರಾಗ್ ಠಾಕೂರ್ ಸನ್ಮಾನಿಸಿದರು.

ವೈಯಕ್ತಿಕ ವಿಭಾಗದಲ್ಲಿ ಎರಡು ಪದಕ ಗೆದ್ದ ಭಾರತದ ಮೊದಲ ಕ್ರೀಡಾಪಟು ಆಗಿದ್ದಾರೆ ಸಿಂಧು.

ಮಾವೊ ಬ್ಯಾಡ್ಜ್ ಧರಿಸಿದ ಚೀನಾ ಸೈಕ್ಲಿಸ್ಟ್‌ಗಳು!

ಟೋಕಿಯೊ (ಪಿಟಿಐ): ಮಹಿಳೆಯರ ಟ್ರ್ಯಾಕ್ ಸೈಕ್ಲಿಂಗ್‌ನಲ್ಲಿ ಚಿನ್ನ ಗೆದ್ದ ಚೀನಾದ ಬಾವೊ ಶೇಂಜು ಮತ್ತು ಝೂಂಗ್ ತಿಯಾಂಶಿ ಈಗ ಒಲಿಂಪಿಕ್ ಆಯೋಜಕರ ಅಸಮಾಧಾನಕ್ಕೆ ಗುರಿಯಾಗಿದ್ದಾರೆ.

ಸೋಮವಾರ ಪದಕ ಸ್ವೀಕಾರ ಮಾಡುವ ಸಂದರ್ಭದಲ್ಲಿ ಇವರು ತಮ್ಮ ಪೋಷಾಕಿನ ಮೇಲೆ ಚೀನಾದ ಕಮ್ಯುನಿಸ್ಟ್ ನಾಯಕ ಮಾವೊ ಜೆಡಾಂಗ್ ಬ್ಯಾಡ್ಜ್ ಹಾಕಿಕೊಂಡಿದ್ದರು.

ಇದು ಒಲಿಂಪಿಕ್ ನಿಯಮ 50ರ ಉಲ್ಲಂಘನೆಯಾಗಿದೆ. ಈ ಕುರಿತು ವಿಚಾರಣೆ ಮಾಡುವುದಾಗಿ ಐಒಎ ತಿಳಿಸಿದೆ.

ರವೆನ್ ಸೃಷ್ಟಿಸಿದ ವಿವಾದ: ಸೋಮವಾರ ಅಮೆರಿಕದ ಶಾಟ್‌ಪಟ್ ಬೆಳ್ಳಿ ಪದಕ ವಿಜೇತೆ ರವೆನ್ ಸಾಂಡರ್ಸ್ ಒಂದು ವಿವಾದಕ್ಕೆ ನಾಂದಿ ಹಾಡಿದರು.

ಅವರು ಬೆಳ್ಳಿ ಪದಕ ಸ್ವೀಕರಿಸಿದ ನಂತರ ತಮ್ಮ ಕೈಗಳನ್ನು ಎತ್ತಿ ಇಂಗ್ಲಿಷ್‌ನ ಎಕ್ಸ್ ಪದದ ಭಂಗಿಯಲ್ಲಿ ತೋರಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇದು ತುಳಿತಕ್ಕೊಳಗಾದವರ ಬೆಂಬಲಕ್ಕಾಗಿ' ಎಂದರು.

ಬಾವೊ ಶೊಂಜು ಮತ್ತು ಝೂಂಗ್ ತಿಯಾಂಶಿ –ರಾಯಿಟರ್ಸ್ ಚಿತ್ರ

ಮಹಿಳಾ ಬಾಕ್ಸಿಂಗ್‌ನ 69 ಕೆಜಿ ವಿಭಾಗದ ಸೆಮಿಫೈನಲ್‌ನಲ್ಲಿ ಲವ್ಲಿನಾ ಇಂದು ಕಣಕ್ಕೆ

ಕಂಚಿಗೆ ಚಿನ್ನದ ಹೊಳಪು ತುಂಬುವತ್ತ...

ಟೋಕಿಯೊ (ಪಿಟಿಐ): ಅಂತಿಮ ನಾಲ್ಕರ ಘಟ್ಟ ಪ್ರವೇಶಿಸಿರುವ ಭಾರತದ ಬಾಕ್ಸರ್ ಲವ್ಲಿನಾ ಬೋರ್ಗೊಹೈನ್ ಈಗಾಗಲೇ ಖಚಿತಪಡಿಸಿಕೊಂಡಿರುವ ಕಂಚಿನ ಪದಕಕ್ಕೆ ಚಿನ್ನದ ಹೊಳಪು ತುಂಬುವ ನಿರೀಕ್ಷೆಯಲ್ಲಿ ಬುಧವಾರ ಕಣಕ್ಕೆ ಇಳಿಯಲಿದ್ದಾರೆ.

ಸೆಮಿಫೈನ್‌ನಲ್ಲಿ ಅವರಿಗೆ ಟರ್ಕಿಯ ಬುಸೆನಾಜ್ ಸುರ್ಮೆನೆಲಿ ಎದುರಾಳಿ. ಪ್ರೀಕ್ವಾರ್ಟರ್ ಫೈನಲ್ ಮತ್ತು ಕ್ವಾರ್ಟರ್ ಫೈನಲ್‌ನಲ್ಲಿ ಏಕಪಕ್ಷೀಯ ಜಯ ಗಳಿಸಿರುವ ಬುಸೆನಾಜ್ ಹಾಲಿ ವಿಶ್ವ ಚಾಂಪಿಯನ್ ಆಗಿದ್ದಾರೆ. ಅವರನ್ನು ಮಣಿಸಿ ಫೈನಲ್ ಪ್ರವೇಶಿಸಿದರೆ ಲವ್ಲಿನಾ ಭಾರತದ ಪರವಾಗಿ ಇತಿಹಾಸ ಸೃಷ್ಟಿಸಲಿದ್ದಾರೆ. ವಿಜೇಂದರ್ ಸಿಂಗ್ ಮತ್ತು ಎಂ.ಸಿ.ಮೇರಿ ಕೋಮ್ ಕ್ರಮವಾಗಿ 2008 ಮತ್ತು 2012ರ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದಾರೆ. ಲವ್ಲಿನಾ ಗೆದ್ದರೆ ಭಾರತದ ಪರವಾಗಿ ಫೈನಲ್ ಪ್ರವೇಶಿಸುವ ಮೊದಲ ಬಾಕ್ಸರ್ ಆಗಲಿದ್ದಾರೆ.

ಕ್ವಾರ್ಟರ್ ಫೈನಲ್‌ನಲ್ಲಿ ಮಾಜಿ ವಿಶ್ವ ಚಾಂಪಿಯನ್ ನಿನ್ ಚಿನ್ ಚೆನ್ ವಿರುದ್ಧ ಜಯಗಳಿಸಿದ ನಂತರ ಲವ್ಲಿನಾ ಆತ್ಮವಿಶ್ವಾಸ ಹೆಚ್ಚಾಗಿದೆ. ಆ ಬೌಟ್ ಮುಗಿದ ಕೂಡಲೇ 'ಪದಕ ಎಂದರೆ ಚಿನ್ನದ ಪದಕ. ಅದನ್ನು ಗಳಿಸಲು ಪ್ರಯತ್ನಿಸುವೆ' ಎಂದು ಹೇಳಿದ್ದರು.

ಟರ್ಕಿ ಬಾಕ್ಸರ್ ಕೂಡ ಭರವಸೆಯಲ್ಲಿದ್ದಾರೆ. ಈ ವರ್ಷ ಅಂತರರಾಷ್ಟ್ರೀಯ ಮಟ್ಟದ ಎರಡು ಪದಕಗಳನ್ನು ಗಳಿಸಿದ್ದಾರೆ. 2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಈ ಇಬ್ಬರೂ ಸ್ಪರ್ಧಿಸಿದ್ದರು.

ಸುರ್ಮೆನೆಲಿ ಸೆಮಿಫೈನಲ್ ಹಾದಿ
ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಪೋಲೆಂಡ್‌ನ ಕೊಜೆವ್‌ಸ್ಕ ಕರೋಲಿನಾ ವಿರುದ್ಧ **5-0**ರಲ್ಲಿ ಗೆಲುವು.
ಕ್ವಾರ್ಟರ್ ಫೈನಲ್‌ನಲ್ಲಿ ಉಕ್ರೇನ್‌ನ ಲೈಜೆಂಕೊ ಅನಾ ವಿರುದ್ಧ **5-0**ಯಲ್ಲಿ ಗೆಲುವು

ಈ ಇಬ್ಬರು ಬಾಕ್ಸರ್‌ಗಳು ಹಿಂದೆ ಮುಖಾಮುಖಿಯಾಗಿಲ್ಲ. ಹೀಗಾಗಿ ಲವ್ಲಿನಾಗೆ ನಿಖರ ರಣತಂತ್ರ ಹೇಳಿಕೊಡಲಾಗಿದೆ. ಅವರು ಎಲ್ಲ ಬಗೆಯ ಸವಾಲಿಗೆ ಸಿದ್ಧರಾಗಿದ್ದಾರೆ. ಸಂಜೆ ವೇಳೆ ಈ ಬೌಟ್ ಇದೆ. ಆದ್ದರಿಂದ ಅವರಿಗೆ ಕೆಲವು ದಿನಗಳಿಂದ ಸಂಜೆಯೇ ತರಬೇತಿ ನೀಡಲಾಗುತ್ತದೆ.
ಮೊಹಮ್ಮದ್ ಅಲಿ ಕ್ವಮರ್ ಭಾರತ ತಂಡದ ಕೋಚ್

ಲವ್ಲಿನಾ ಬೋರ್ಗೊಹೈನ್ ಸಾಗಿ ಬಂದ ಹಾದಿ
ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಜರ್ಮನಿಯ ಅಪೆಜ್ ನಡೈನ್ ವಿರುದ್ಧ **3-2**ರಲ್ಲಿ ಗೆಲುವು.
ಕ್ವಾರ್ಟರ್ ಫೈನಲ್‌ನಲ್ಲಿ ಚೀನಾ ತೈಪೆಯ ಚೆನ್ ನೀನ್ ಚಿನ್ ವಿರುದ್ಧ **4-1**ರಲ್ಲಿ ಜಯ

ವಿಭಾಗ 69 ಕೆಜಿ

ಸುರ್ಮೆನೆಲಿ ಬುಸೆನಜ್ ವಯಸ್ಸು 23 ವರ್ಷ

ಲವ್ಲಿನಾ ವಯಸ್ಸು 23ವರ್ಷ

ಸುರ್ಮೆನೆಲಿ ಬುಸೆನಾಜ್ –ರಾಯಿಟರ್ಸ್ ಚಿತ್ರ

ಲವ್ಲಿನಾ ಬೋರ್ಗೋಹೈನ್ –ಎಎಫ್‌ಪಿ ಚಿತ್ರ

ಸ್ಪರ್ಧಾ ಸಮಯ

ಆರ್ಟಿಸ್ಟಿಕ್ ಈಜು

ಸಂಜೆ 4 ಗಂಟೆ	ಡ್ಯೂಯೆಟ್ ಫ್ರಿರೂಟೀನ್ ಫೈನಲ್

ಅಥ್ಲೆಟಿಕ್ಸ್

ಬೆಳಿಗ್ಗೆ 5.35	ಪುರುಷರ ಜಾವೆಲಿನ್ ಥ್ರೋ ಅರ್ಹತಾ ಸುತ್ತು (ನೀರಜ್ ಚೋಪ್ರಾ, ಶಿವಪಾಲ್ ಸಿಂಗ್)
ಬೆಳಿಗ್ಗೆ 8 ಗಂಟೆ	ಮಹಿಳೆಯರ 400 ಮೀ. ಹರ್ಡಲ್ಸ್ ಫೈನಲ್
ಸಂಜೆ 4.30	ಮಹಿಳೆಯರ 3000 ಮೀ. ಸ್ಟೀಪಲ್‌ಚೇಸ್ ಫೈನಲ್
ಸಂಜೆ 4.45	ಪುರುಷರ ಹ್ಯಾಮರ್ ಥ್ರೊ ಫೈನಲ್
ಸಂಜೆ 5.35	ಪುರುಷರ 800 ಮೀ. ಓಟ ಫೈನಲ್
ಸಂಜೆ 6.25	ಪುರುಷರ 200 ಮೀ. ಓಟ ಫೈನಲ್

ಬಾಕ್ಸಿಂಗ್

ಬೆಳಿಗ್ಗೆ 11 ಗಂಟೆ	ಮಹಿಳೆಯರ ವೆಲ್ಟರ್‌ವೇಟ್ (64–69 ಕೆಜಿ) ಸೆಮಿಫೈನಲ್ 1 (ಲವ್ಲಿನಾ ಬೊರ್ಗೋಹೈನ್)
ಮಧ್ಯಾಹ್ನ 12.05	ಪುರುಷರ ಲೈಟ್ ಹೆವಿವೇಟ್ (75–81 ಕೆಜಿ) ಫೈನಲ್

ಹಾಕಿ (ಮಹಿಳಾ ತಂಡ)

ಬೆಳಿಗ್ಗೆ 7 ಗಂಟೆ	ಸೆಮಿಫೈನಲ್ 1 (ನೆದರ್ಲೆಂಡ್ಸ್–ಗ್ರೇಟ್ ಬ್ರಿಟನ್)
ಮಧ್ಯಾಹ್ನ 3.30	ಸೆಮಿಫೈನಲ್ 2 (ಭಾರತ–ಅರ್ಜೆಂಟೀನಾ)

(ಆವರಣದಲ್ಲಿ ಭಾರತದ ಸ್ಪರ್ಧಿಗಳು)

ಗಾಲ್ಫ್

ಬೆಳಿಗ್ಗೆ 4 ಗಂಟೆ	ಮಹಿಳೆಯರ ವೈಯಕ್ತಿಕ ವಿಭಾಗದ ಸ್ಟ್ರೋಕ್‌ಪ್ಲೇ (ಅದಿತಿ ಅಶೋಕ್, ದೀಕ್ಷಾ ದಾಗರ್)

ವೇಟ್‌ಲಿಫ್ಟಿಂಗ್

ಸಂಜೆ 4.30	ಪುರುಷರ +109 ಕೆಜಿ ಗುಂಪು 'ಎ' ಫೈನಲ್

ಕುಸ್ತಿ

ಬೆಳಿಗ್ಗೆ 8 ರಿಂದ	ಪುರುಷರ 57 ಕೆಜಿ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ ಮತ್ತು ಕ್ವಾರ್ಟರ್‌ಫೈನಲ್ (ರವಿಕುಮಾರ್ ದಹಿಯಾ)
	ಪುರುಷರ 86 ಕೆಜಿ ವಿಭಾಗದ ಪ್ರೀಕ್ವಾರ್ಟರ್ ಮತ್ತು ಕ್ವಾರ್ಟರ್‌ಫೈನಲ್ (ದೀಪಕ್ ಪುನಿಯಾ)
	ಮಹಿಳೆಯರ 57 ಕೆಜಿ ವಿಭಾಗದ ಪ್ರೀಕ್ವಾರ್ಟರ್ ಮತ್ತು ಕ್ವಾರ್ಟರ್‌ಫೈನಲ್ (ಅನ್ಶು ಮಲಿಕ್)
ಮಧ್ಯಾಹ್ನ 2.45 ರಿಂದ	ಪುರುಷರ 57 ಕೆಜಿ ವಿಭಾಗದ ಸೆಮಿಫೈನಲ್ಸ್
	ಪುರುಷರ 86 ಕೆಜಿ ವಿಭಾಗದ ಸೆಮಿಫೈನಲ್ಸ್
	ಮಹಿಳೆಯರ 57 ಕೆಜಿ ವಿಭಾಗದ ಸೆಮಿಫೈನಲ್ಸ್
	ಮಹಿಳೆಯರ 62 ಕೆಜಿ ವಿಭಾಗದ ಫೈನಲ್.
	ಪುರುಷರ ಗ್ರೀಕೊ ರೋಮನ್ 67 ಕೆಜಿ ಮತ್ತು 87 ಕೆಜಿ ವಿಭಾಗಗಳ ಫೈನಲ್

ಭಾರತೀಯ ಕಾಲಮಾನ | ಲೈವ್ ಸೋನಿ ನೆಟ್‌ವರ್ಕ್

ಅಥ್ಲೀಟ್ ವಾಪಸ್: ತನಿಖೆಗೆ ನಿರ್ಧಾರ

ಟೋಕಿಯೊ (ಎಎಫ್‌ಪಿ): ಬೆಲಾರಸ್‌ನ ಕ್ರೀಡಾಪಟು ಕ್ರಿಸ್ಟಿನಾ ತಿಮನೊಸ್ಕಯ ಅವರನ್ನು ವಾಪಸ್ ಕಳುಹಿಸಿದ್ದರ ಕುರಿತು ತನಿಖೆ ನಡೆಸಲಾಗುವುದು ಎಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ತಿಳಿಸಿದೆ. ಕೋಚ್‌ಗಳ ಮೇಲೆ ಆರೋಪ ಮಾಡಿದ್ದಕ್ಕಾಗಿ ಅವರನ್ನು ವಾಪಸ್ ಕಳುಹಿಸಲಾಗಿತ್ತು. ತವರಿಗೆ ತೆರಳದ ಅವರು ಈಗ ಪೋಲೆಂಡ್‌ನಲ್ಲಿದ್ದಾರೆ.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	32	21	16	69
ಅಮೆರಿಕ	24	28	21	73
ಜಪಾನ್	19	6	11	36
ಆಸ್ಟ್ರೇಲಿಯಾ	14	4	15	33
ಆರ್‌ಒಸಿ*	13	21	18	52
ಭಾರತ (64ನೇ ಸ್ಥಾನ)	0	1	1	2

* ರಷ್ಯಾ ಒಲಿಂಪಿಕ್ ಸಮಿತಿ

ಸ್ಪ್ರಿಂಗ್‌ಬೋರ್ಡ್ ಚಿನ್ನ, ಬೆಳ್ಳಿ ಚೀನಾಗೆ 'ಡಬಲ್' ಗಳಿಸಿದ ಕ್ಸೀ ಸಿಯಿ

ಚೀನಾದ ಕ್ಸೀ ಸಿಯಿ –ಎಎಫ್‌ಪಿ ಚಿತ್ರ

ಟೋಕಿಯೊ (ರಾಯಿಟರ್ಸ್): ಗಾಳಿಯಲ್ಲಿ ದೇಹವನ್ನು ತೂರಿ ವೈವಿಧ್ಯತೆ ಮೆರೆದ ಚೀನಾದ ಕ್ಸೀ ಸಿಯಿ ಅವರು ಒಲಿಂಪಿಕ್ಸ್‌ನ ಪುರುಷರ ಸ್ಪ್ರಿಂಗ್‌ಬೋರ್ಡ್ ಸ್ಪರ್ಧೆಯಲ್ಲಿ 'ಚಿನ್ನ ಡಬಲ್' ಸಂಭ್ರಮದಲ್ಲಿ ಮಿಂದರು.

ಈ ಮೂಲಕ ಒಂದೇ ಒಲಿಂಪಿಕ್ಸ್‌ನಲ್ಲಿ 20 ವರ್ಷಗಳಲ್ಲಿ ವೈಯಕ್ತಿಕ ಮತ್ತು ಸಿಂಕ್ರನೈಸ್ಡ್ ಮೂರು ಮೀಟರ್ಸ್ ಸ್ಪ್ರಿಂಗ್‌ಬೋರ್ಡ್‌ನಲ್ಲಿ ಚಾಂಪಿಯನ್ ಆದ ಮೊದಲ ಪುರುಷ ಡೈವರ್ ಎನಿಸಿಕೊಂಡರು. ಚೀನಾದವರೇ ಆದ ಕ್ಸಿಯಾಂಗ್ ನೀ 2000ನೇ ಇಸವಿಯಲ್ಲಿ ಸಿಡ್ನಿ ಒಲಿಂಪಿಕ್ಸ್‌ನಲ್ಲಿ ಈ ಸಾಧನೆ ಮಾಡಿದ್ದರು.

ಸ್ಪ್ರಿಂಗ್‌ಬೋರ್ಡ್‌ನಲ್ಲಿ ಚೀನಾ ಪಾರಮ್ಯ ಮೆರೆಯಿತು. ಕ್ಸೀ ಸಿಯಿ ಅವರ ಚಿನ್ನದ ಸಾಧನೆಯ ಬೆನ್ನಲ್ಲೇ 19 ವರ್ಷದ ವಾಂಗ್ ಜೊಂಗ್ಯಾನ್ ಬೆಳ್ಳಿ ಪದಕ ಗೆದ್ದುಕೊಂಡರು. ಬ್ರಿಟನ್‌ನ ಜ್ಯಾಕ್ ಲಾಫರ್ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಸ್ಪರ್ಧೆಯ ಉದ್ದಕ್ಕೂ ಅಗ್ರಸ್ಥಾನಗಳನ್ನು ಉಳಿಸಿಕೊಂಡು ಬಂದ ಕ್ಸೀ ಮತ್ತು ವಾಂಗ್ ಕ್ರಮವಾಗಿ 558.75 ಮತ್ತು 534.90 ಪಾಯಿಂಟ್ಸ್ ಕಲೆಹಾಕಿದರು. ಸ್ಪರ್ಧೆಯ ನಂತರ ಜೋರಾಗಿ ಕಿರುಚಾಡಿ ಸಂಭ್ರಮ ವ್ಯಕ್ತಪಡಿಸಿದರು.

ಬುಧವಾರ ನಡೆಯಲಿರುವ 10 ಮೀಟರ್ಸ್ ಪ್ಲಾಟ್‌ಫಾರ್ಮ್ ವಿಭಾಗದಲ್ಲಿ ಚೀನಾದ ಚೆನ್ ಯುಕ್ಸಿ ಚಿನ್ನ ಗೆಲ್ಲುವ ನೆಚ್ಚಿನ ಡೈವರ್ ಎನಿಸಿದ್ದಾರೆ. ಅವರಿಗೆ ಈಗ 15 ವರ್ಷ ವಯಸ್ಸು.

ವಾಂಗ್ ಜೊಂಗ್ಯಾನ್ ಸಂಭ್ರಮ –ರಾಯಿಟರ್ಸ್ ಚಿತ್ರ

ಒಲಿಂಪಿಕ್ಸ್‌ನ ಮಹಿಳಾ ಗಾಲ್ಫ್‌ನಲ್ಲಿ ಭಾರತದ ಅದಿತಿ ಅಶೋಕ್ ಅವರು ಬುಧವಾರ ಕಣಕ್ಕೆ ಇಳಿಯಲಿದ್ದಾರೆ. ಕಸುಮಿಗಸೆಕಿ ಕೌಂಟಿ ಕ್ಲಬ್ ಆವರಣದಲ್ಲಿ ಮಂಗಳವಾರ ಅವರು ಅಭ್ಯಾಸ ನಡೆಸಿದರು –ರಾಯಿಟರ್ಸ್ ಚಿತ್ರ

ಭಾರತದ ಮಹಿಳಾ ಹಾಕಿ ತಂಡದವರು ಫೈನಲ್ ಪ್ರವೇಶಿಸುವ ಕನಸಿನಲ್ಲಿದ್ದಾರೆ

ಸೆಮಿಯಲ್ಲಿ ಭಾರತ ತಂಡಕ್ಕೆ ಬೆಲ್ಜಿಯಂ ವಿರುದ್ಧ 'ಪೆನಾಲ್ಟಿ' ಪೆಟ್ಟು

ಪುರುಷರ ಹಾಕಿ; ಕಂಚಿನಾಸೆ ಬಾಕಿ

ಗೋಲು ವಿವರ
2 ಭಾರತ
5 ಬೆಲ್ಜಿಯಂ

ಟೋಕಿಯೊ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ನಲ್ವತ್ತೊಂಬತ್ತು ವರ್ಷಗಳ ನಂತರ ಸೆಮಿಫೈನಲ್ ಪ್ರವೇಶಿಸಿದ್ದ ಭಾರತ ಪುರುಷರ ತಂಡದ ಚಿನ್ನದ ಕನಸು ಕಮರಿತು.

ಆದರೆ 41 ವರ್ಷಗಳ ನಂತರ ಪದಕವೊಂದನ್ನು ಜಯಿಸುವ ಅವಕಾಶ ಇನ್ನೂ ಇದೆ.

ಮಂಗಳವಾರ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಬೆಲ್ಜಿಯಂ 5–2 ಗೋಲುಗಳಿಂದ ಭಾರತದ ಆಸೆಗೆ ತಣ್ಣೀರೆರಚಿತು. ಮನಪ್ರೀತ್ ಸಿಂಗ್ ನಾಯಕತ್ವದ ತಂಡದ ರಕ್ಷಣಾ ಗೋಡೆಯನ್ನು ನುಚ್ಚುನೂರು ಮಾಡಿದ ಬೆಲ್ಜಿಯಂನ ಅಲೆಕ್ಸಾಂಡರ್ ಹೆಂಡ್ರಿಕ್ಸ್ (19ನಿಮಿಷ, 49ನಿಮಿಷ ಮತ್ತು 53ನೇ ನಿಮಿಷ) ಹ್ಯಾಟ್ರಿಕ್ ಸಾಧಿಸಿದರು. ಅವರಿಗೆ ಜೊತೆ ನೀಡಿದ ಲೊಯಕ್ ಲೈಪರ್ಟ್ (2ನೇ ನಿ) ಮತ್ತು ಜಾನ್ ಜಾನ್ ಡೊಮನ್ (60ನೇ ನಿ) ಗೋಲು ಹೊಡೆದರು. ಬೆಲ್ಜಿಯಂ ನಾಲ್ಕು ಗೋಲುಗಳನ್ನು ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿಯೇ ಗಳಿಸಿತು. ಇದು ಭಾರತ ತಂಡದ ರಕ್ಷಣಾ ಪಡೆಯ ವೈಫಲ್ಯವನ್ನು ಎತ್ತಿ ತೋರಿಸಿತು. ಅದರಲ್ಲೂ 14 ಪೆನಾಲ್ಟಿ ಕಾರ್ನರ್‌ಗಳನ್ನು ಬಿಟ್ಟುಕೊಟ್ಟಿತು.

ಬೆಲ್ಜಿಯಂ ಪಂದ್ಯದ ಎರಡನೇ ನಿಮಿಷದಲ್ಲಿ ಗೋಲು ಗಳಿಸಿದಾಗ, ಭಾರತದ ಹರ್ಮನ್‌ಪ್ರೀತ್ ಸಿಂಗ್ (7ನೇ ನಿ) ಮತ್ತು ಮನದೀಪ್ ಸಿಂಗ್ (8ನೇ ನಿ) ತಿರುಗೇಟು ಕೊಟ್ಟಿದ್ದರು. 19ನೇ ನಿಮಿಷದಲ್ಲಿ ಅಲೆಕ್ಸಾಂಡರ್ ಗೋಲು ಸಮಬಲ ಗಳಿಸಲು ಕಾರಣವಾಯಿತು. ಆದರೆ ಮೂರನೇ ಕ್ವಾರ್ಟರ್‌ನಲ್ಲಿ ಉಭಯ ತಂಡಗಳು ಒಂದೂ ಗೋಲು ಗಳಿಸಲಿಲ್ಲ. ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಭಾರತದ ಗೋಲ್‌ಕೀಪರ್ ಶ್ರೀಜೇಶ್ ಅಮೋಘ ಆಟವಾಡಿದರು.

ಆದರೆ, ಕೊನೆಯ ಕ್ವಾರ್ಟರ್‌ನಲ್ಲಿ ಎಲ್ಲವೂ ತಲೆಕೆಳಗಾದವು. ಪದೇ ಪದೇ ಕೊಟ್ಟ ಪೆನಾಲ್ಟಿ ಕಾರ್ನರ್‌ಗಳು ಮುಳುವಾದವು. ಇದೊಂದೇ ಕ್ವಾರ್ಟರ್‌ನಲ್ಲಿ ಮೂರು ಗೋಲುಗಳು ದಾಖಲಾದವು.

ಇದರಿಂದಾಗಿ ಫೈನಲ್ ಆಡುವ ನಿರೀಕ್ಷೆ ಹುಸಿಯಾಯಿತು. ಆದರೆ ಗುರುವಾರ ಮೂರನೇ ಸ್ಥಾನಕ್ಕಾಗಿ ನಡೆಯುವ ಪಂದ್ಯದಲ್ಲಿ ಭಾರತವು ಜರ್ಮನಿಯನ್ನು ಎದುರಿಸಲಿದೆ. ಅದರಲ್ಲಿ ಗೆದ್ದರೆ ಕಂಚಿನ ಪದಕದೊಂದಿಗೆ ದೇಶಕ್ಕೆ ಮರಳಬಹುದು.

ಸೋತಿದ್ದು ಬೇಸರ ತಂದಿದೆ. ಆದರೆ ಅದನ್ನೇ ಯೋಚಿಸುತ್ತ ಕೂರಲು ಸಮಯವಿಲ್ಲ. ಮುಂದಿರುವ ಅವಕಾಶವನ್ನು ಬಳಸಿಕೊಂಡು ಗೆಲುವಿನತ್ತ ಮುನ್ನುಗ್ಗಬೇಕು.
ಪಿ.ಆರ್. ಶ್ರೀಜೇಶ್
ಗೋಲ್‌ಕೀಪರ್ ಭಾರತ ತಂಡ

ಭಾರತದ ಆಟಗಾರರ ನಿರಾಸೆಯ ಕ್ಷಣ –ಪಿಟಿಐ ಚಿತ್ರ

ಸೆಮಿಫೈನಲ್‌ನಲ್ಲಿ ಭಾರತ –ಅರ್ಜೆಂಟಿನಾ ಮುಖಾಮುಖಿ

ಇತಿಹಾಸಕ್ಕೆ ಮೆರುಗು ತುಂಬುವತ್ತ ರಾಣಿ ರಾಂಪಾಲ್ ಪಡೆ ಚಿತ್ತ

ಟೋಕಿಯೊ (ಪಿಟಿಐ): ಇದೇ ಮೊದಲ ಬಾರಿಗೆ ಒಲಿಂಪಿಕ್ ಹಾಕಿಯ ಸೆಮಿಫೈನಲ್ ಪ್ರವೇಶಿಸಿ ಇತಿಹಾಸ ಬರೆದಿರುವ ಮಹಿಳಾ ತಂಡ ಈಗ ಮತ್ತೊಂದು ಹೆಜ್ಜೆ ಮುಂದಿಡುವತ್ತ ಚಿತ್ತ ನೆಟ್ಟಿದೆ.

ರಾಣಿ ರಾಂಪಾಲ್ ಬಳಗವು ಬುಧವಾರ ನಡೆಯುವ ನಾಲ್ಕರ ಘಟ್ಟದ ಪಂದ್ಯದಲ್ಲಿ ಅರ್ಜೆಂಟಿನಾ ಎದುರು ಆಡಲಿದೆ.

ಕ್ವಾರ್ಟರ್‌ಫೈನಲ್‌ನಲ್ಲಿ ಬಲಿಷ್ಠ ಆಸ್ಟ್ರೇಲಿಯಾ ತಂಡವನ್ನು ಸೋಲಿಸಿ ಭರ್ತಿ ಆತ್ಮವಿಶ್ವಾಸದಲ್ಲಿರುವ ಭಾರತ ವನಿತೆಯರ ತಂಡವು ಫೈನಲ್ ಪ್ರವೇಶಿಸುವ ಹುಮ್ಮಸ್ಸಿನಲ್ಲಿದೆ.

ಡ್ರ್ಯಾಗ್ ಫ್ಲಿಕ್ ಪರಿಣತರಾದ ಗುರ್ಜಿತ್ ಕೌರ್ ಗಳಿಸಿದ್ದ ಏಕೈಕ ಗೋಲಿನ ನೆರವಿನಿಂದ ಭಾರತವು ಎಂಟರ ಘಟ್ಟದಲ್ಲಿ 1–0ಯಿಂದ ಆಸ್ಟ್ರೇಲಿಯಾವನ್ನು ಮಣಿಸಿತ್ತು. ಆ ಪಂದ್ಯದಲ್ಲಿ ತಂಡದ ರಕ್ಷಣಾ ಪಡೆ ಮತ್ತು ಗೋಲ್‌ಕೀಪರ್ ಸವಿತಾ ಅವರ ಆಟ ಅಮೋಘವಾಗಿತ್ತು.

ಆದರೆ ಸೆಮಿಫೈನಲ್ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ಅರ್ಜೆಂಟಿನಾವನ್ನು ಮಣಿಸಲು ವಿಶೇಷ ಕಾರ್ಯತಂತ್ರದೊಂದಿಗೆ ಕಣಕ್ಕಿಳಿಯಬೇಕು. ಕೋಚ್ ಶೋರ್ಡ್ ಮರೈನ್ ಏನು ತಂತ್ರ ಹೆಣೆದಿದ್ದಾರೆ ಎಂಬ ಕುತೂಹಲ ಈಗ ಗರಿಗೆದರಿದೆ.

ಅರ್ಜೆಂಟಿನಾ ತಂಡವು 2000ರಲ್ಲಿ ಸಿಡ್ನಿ ಮತ್ತು 2012ರಲ್ಲಿ ಲಂಡನ್ ಒಲಿಂಪಿಕ್ ಕೂಟಗಳಲ್ಲಿ ಬೆಳ್ಳಿ ಪದಕ ಜಯಿಸಿತ್ತು. ಈಗ ಚಿನ್ನದತ್ತ ಕಣ್ಣು ನೆಟ್ಟಿದೆ. ಒಲಿಂಪಿಕ್ ಕೂಟಕ್ಕೂ ಮುನ್ನ ಅರ್ಜೆಂಟಿನಾ ಎದುರು ಸರಣಿ ಆಡಿದ್ದ ಭಾರತವು 1–1ರಿಂದ ಡ್ರಾ ಸಾಧಿಸಿತ್ತು.

1980ರಲ್ಲಿ ಆಡಿದ್ದ ಭಾರತ ಮಹಿಳಾ ಬಳಗವು ಆರು ತಂಡಗಳ ಪೈಕಿ ನಾಲ್ಕನೇ ಸ್ಥಾನ ಪಡೆದಿತ್ತು. ಅದಾದ ನಂತರ 2016ರಲ್ಲಿ ಒಲಿಂಪಿಕ್ ಅರ್ಹತೆ ಗಳಿಸಿತ್ತು. ಕೊನೆಯ ಸ್ಥಾನ ಪಡೆದಿತ್ತು. ಟೋಕಿಯೊದಲ್ಲಿಯೂ ಗುಂಪು ಹಂತದ ಆರಂಭಿಕ ಪಂದ್ಯಗಳನ್ನು ಸೋತಿತ್ತು. ನಂತರ ಪುಟಿದೆದ್ದು ನಾಕೌಟ್ ತಲುಪಿತ್ತು.

ಮಂಗಳವಾರ ನಡೆದ ಪುರುಷರ ಸೆಮಿಫೈನಲ್‌ಗಳನ್ನು ತದೇಕಚಿತ್ತದಿಂದ ನೋಡಿರುವ ರಾಣಿ ಬಳಗವು ತನ್ನ ಮುಂದಿರುವ ಸವಾಲಿಗೆ ಸಿದ್ಧವಾಗಿದೆ. ವಂದನಾ ಕಟಾರಿಯಾ, ಗುರ್ಜಿತ್ ಕೌರ್ ಅವರ ಮೇಲೆ ನಿರೀಕ್ಷೆಯ ಭಾರವಿದೆ.

'ಸೆಮಿ ತಲುಪಿ ಇತಿಹಾಸ ಬರೆದಿದ್ದೇವೆ ಅಷ್ಟೇ. ಆದರೆ ಇಲ್ಲಿಗೆ ಮುಗಿಸಲು ನಮಗೆ ಇಷ್ಟವಿಲ್ಲ. ಇಲ್ಲಿಂದ ಮುಂದುವರೆದು ಮತ್ತೊಂದು ಇತಿಹಾಸ ಬರೆಯುತ್ತೇವೆ' ಎಂದು ರಾಣಿ ಹೇಳಿದ್ದಾರೆ.

ರೂಪಿಂದರ್ ಪಾಲ್ ಸಿಂಗ್ ನಿರಾಸೆಯಿಂದ ಅಂಗಳದಲ್ಲೇ ಅಂಗಾತ ಮಲಗಿದರು

ಜರ್ಮನಿ ಮಣಿಸಿದ ಆಸ್ಟ್ರೇಲಿಯಾ

ಟೋಕಿಯೊ (ಪಿಟಿಐ): ಆಸ್ಟ್ರೇಲಿಯಾ ತಂಡವು ಒಲಿಂಪಿಕ್ಸ್‌ನ ಪುರುಷರ ಹಾಕಿಯಲ್ಲಿ ಫೈನಲ್ ಪ್ರವೇಶಿಸಿತು.

ಮಂಗಳವಾರ ನಡೆದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ 3–1 ಗೋಲುಗಳಿಂದ ಜರ್ಮನಿ ತಂಡವನ್ನು ಪರಾಭವಗೊಳಿಸಿತು.

ಆರಂಭದಿಂದಲೇ ಚುರುಕಿನ ಆಟಕ್ಕೆ ಒತ್ತು ನೀಡಿದ ಕಾಂಗರೂ ನಾಡಿನ ತಂಡ ಏಳನೇ ನಿಮಿಷದಲ್ಲೇ ಖಾತೆ ತೆರೆಯಿತು. ಫ್ಲಿನ್ ಒಗಿಲ್ವೀ ನೀಡಿದ ಪಾಸ್‌ನಲ್ಲಿ ಟಿಮ್ ಬ್ರಾಂಡ್ ಚೆಂಡನ್ನು ಗುರಿ ಮುಟ್ಟಿಸಿದರು. ಜರ್ಮನಿ ತಂಡದ ಲುಕಾಸ್ ವಿಂಡ್‌ಫೆಡರ್ ಕೈಚಳಕ ತೋರಿದ್ದರಿಂದ 1–1 ಸಮಬಲ ಕಂಡುಬಂತು.

ಎರಡನೇ ಕ್ವಾರ್ಟರ್‌ನಲ್ಲಿ ಆಸ್ಟ್ರೇಲಿಯಾ ಮತ್ತಷ್ಟು ಆಕ್ರಮಣಕಾರಿಯಾಗಿ ಆಡಿತು. 27ನೇ ನಿಮಿಷದಲ್ಲಿ ಬ್ಲೇಕ್ ಗೋವರ್ಸ್ ಗೋಲು ಬಾರಿಸಿ ಸಂಭ್ರಮಿಸಿದರು. ಹೀಗಾಗಿ ತಂಡವು 2–1 ಮುನ್ನಡೆಯೊಂದಿಗೆ ವಿರಾಮಕ್ಕೆ ಹೋಯಿತು.

ದ್ವಿತೀಯಾರ್ಧದಲ್ಲಿ ಉಭಯ ತಂಡಗಳು ಜಿದ್ದಾಜಿದ್ದಿನಿಂದ ಸೆಣಸಿದವು. ಹೀಗಾಗಿ ಮೂರನೇ ಕ್ವಾರ್ಟರ್ ಗೋಲು ರಹಿತವಾಗಿತ್ತು.

ನಾಲ್ಕನೇ ಕ್ವಾರ್ಟರ್‌ನಲ್ಲಿ ಜರ್ಮನಿ ಆಟಗಾರರು ಸಮಬಲದ ಗೋಲು ದಾಖಲಿಸಲು ಸಾಕಷ್ಟು ಪ್ರಯತ್ನಪಟ್ಟರು. ಎದುರಾಳಿಗಳ ಬಲಿಷ್ಠ ರಕ್ಷಣಾ ಕೋಟೆ ಭೇದಿಸಲು ಅವರಿಗೆ ಆಗಲಿಲ್ಲ. ಪಂದ್ಯ ಮುಗಿಯಲು ಒಂದು ನಿಮಿಷ ಬಾಕಿ ಇದ್ದಾಗ (59) ಆಸ್ಟ್ರೇಲಿಯಾದ ಲಾಚ್ಲನ್ ಶಾರ್ಪ್ ಗೋಲು ಬಾರಿಸಿ ತಂಡದ ಸಂಭ್ರಮಕ್ಕೆ ಕಾರಣರಾದರು.



ಕೆವಿನ್ ಡ್ಯುರಾಂಟ್ ಚೆಂಡನ್ನು ಬ್ಯಾಸ್ಕೆಟ್ ಮಾಡಿದ ರೀತಿ -ಎಎಫ್‌ಪಿ ಚಿತ್ರ

ಚಿನ್ನ ಗೆದ್ದ ಚೀನಾ ಪೋರಿ; ಹೃದಯ ಗೆದ್ದ ಬೈಲ್ಸ್

ಟೋಕಿಯೊ (ಎಎಫ್‌ಪಿ): ಚೀನಾದ 16 ಮತ್ತು 18 ವರ್ಷ ವಯಸ್ಸಿನ ಪೋರಿಯರು ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್‌ನ ಬೀಮ್ ವಿಭಾಗದ ಫೈನಲ್‌ನಲ್ಲಿ ಪದಕಗಳನ್ನು ಗೆದ್ದು ಸಂಭ್ರಮಿಸಿದರು. ಇದೇ ವೇಳೆ, ಮಾನಸಿಕ ಆರೋಗ್ಯ ಸದೃಢತೆಗಾಗಿ ಕಣದಿಂದ ದೂರ ಉಳಿದು ಮಂಗಳವಾರ ವಾಪಸ್ ಬಂದಿರುವ ಅಮೆರಿಕದ ಸಿಮೋನ್ ಬೈಲ್ಸ್ ಕ್ರೀಡಾಲೋಕದ ಹೃದಯ ಗೆದ್ದರು. ಕಂಚಿನ ಪದಕವನ್ನೂ ಗೆದ್ದುಕೊಂಡರು.

ಗುವಾನ್ ಚೆಂಚೆನ್ –ಎಎಫ್‌ಪಿ ಚಿತ್ರ

16 ವಯಸ್ಸಿನ ಗುವಾನ್ ಚೆಂಚೆನ್ ಅವರು ಚಿನ್ನದ ನಗೆಸೂಸಿದರೆ ಅವರ ಸಹ ಕ್ರೀಡಾಪಟು, 18 ವರ್ಷದ ಟ್ಯಾಂಗ್ ಜೈಜಿಂಗ್ ಬೆಳ್ಳಿ ಪದಕಕ್ಕೆ ಮುತ್ತು ನೀಡಿದರು.

ಕಳೆದ ವಾರ ನಡೆದ ಮಹಿಳೆಯರ ತಂಡ ವಿಭಾಗದ ಫೈನಲ್ ಸಂದರ್ಭದಲ್ಲಿ ಸಿಮೋನ್ ಬೈಲ್ಸ್ ಕಣದಿಂದ ದೂರ ಉಳಿಯುವುದಾಗಿ ದಿಢೀರ್ ಘೋಷಿಸಿದ್ದರು. ಅವರಿಗೆ ಸಹ ಅಥ್ಲೀಟ್‌ಗಳು ಮತ್ತು ಕ್ರೀಡಾಜಗತ್ತಿನ ಅನೇಕರು ಬೆಂಬಲ ಸೂಚಿಸಿದ್ದರು.

ಮಂಗಳವಾರ ಗೆದ್ದ ಪದಕದೊಂದಿಗೆ ಬೈಲ್ಸ್ ಒಲಿಂಪಿಕ್ಸ್‌ನಲ್ಲಿ ಗೆದ್ದ ಪದಕಗಳ ಒಟ್ಟು ಸಂಖ್ಯೆ ಏಳಕ್ಕೇರಿತು. ಇದರೊಂದಿಗೆ ಅವರು ಶಾನನ್ ಮಿಲ್ಲರ್ ಅವರ ದಾಖಲೆಯನ್ನು ಸಮಗಟ್ಟಿದರು. ಅಮೆರಿಕದ ಜಿಮ್ನಾಸ್ಟ್‌ಗಳ ಪೈಕಿ ಗರಿಷ್ಠ ಸಂಖ್ಯೆಯ ಪದಕಗಳನ್ನು ಗೆದ್ದ ಸಾಧನೆ ಇವರಿಬ್ಬರದಾಗಿದೆ.

ಸಿಮೋನ್ ಬೈಲ್ಸ್ ಅಂಗಣಕ್ಕೆ ಬರುತ್ತಿದ್ದಂತೆ ಅಮೆರಿಕ ತಂಡದವರು ಚಪ್ಪಾಳೆ ತಟ್ಟಿ ಸ್ವಾಗತಿಸಿ ಹುರಿದುಂಬಿಸಿದರು. ಅವರ ಪ್ರೀತಿಗೆ ಅತ್ಯುತ್ತಮ ಸಾಮರ್ಥ್ಯದ ಮೂಲಕ ಬೈಲ್ಸ್ ಕೃತಜ್ಞತೆ ಸಲ್ಲಿಸಿದರು.

ಗುವಾನ್ ಚೆಂಚೆನ್ 14.633 ಸ್ಕೋರು ಸಂಗ್ರಹಿಸಿದರು. ಬೆಳ್ಳಿ ಪದಕವೂ ಚೀನಾ ಪಾಲಾಯಿತು. ಟ್ಯಾನ್ ಕ್ಸೈಜಿಂಗ್ 14.233 ಸ್ಕೋರುಗಳೊಂದಿಗೆ ಖುಷಿಯಿಂದ ನಲಿದಾಡಿದರು. ಸಿಮೋನ್ ಬೈಲ್ಸ್ ಗಳಿಸಿದ ಸ್ಕೋರು 14 ಆಗಿತ್ತು.

ಫುಟ್‌ಬಾಲ್: ಪ್ರಶಸ್ತಿ ಸುತ್ತಿಗೆ ಬ್ರೆಜಿಲ್–ಸ್ಪೇನ್

ಟೋಕಿಯೊ (ಎಎಫ್‌ಪಿ): ಪ್ರಶಸ್ತಿ ಉಳಿಸಿಕೊಳ್ಳುವತ್ತ ಚಿತ್ತ ನೆಟ್ಟಿರುವ ಒಲಿಂಪಿಕ್ಸ್ ಹಾಲಿ ಚಾಂಪಿಯನ್ ಬ್ರೆಜಿಲ್ ತಂಡವು ಟೋಕಿಯೊ ಕ್ರೀಡಾಕೂಟದ ಫುಟ್‌ಬಾಲ್‌ನಲ್ಲಿ ಫೈನಲ್ ತಲುಪಿದೆ. ಕಶಿಮಾ ಅಂಗಣದಲ್ಲಿ ಮಂಗಳವಾರ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ ಆ ತಂಡವು ಪೆನಾಲ್ಟಿ ಶೂಟೌಟ್‌ನಲ್ಲಿ 4–1ರಿಂದ ಮೆಕ್ಸಿಕೊ ತಂಡವನ್ನು ಪರಾಭವಗೊಳಿಸಿತು.

ಪಂದ್ಯದ 120 ನಿಮಿಷಗಳ ಅವಧಿಯಲ್ಲಿ ಉಭಯ ತಂಡಗಳು ಯಾವುದೇ ಗೋಲು ದಾಖಲಿಸಿರಲಿಲ್ಲ. ಹೀಗಾಗಿ ಪೆನಾಲ್ಟಿ ಶೂಟೌಟ್ ಮೊರೆ ಹೋಗಲಾಗಿತ್ತು. ಇಲ್ಲಿ ಬ್ರೆಜಿಲ್ ಆಟಗಾರರು ನಾಲ್ಕು ಪ್ರಯತ್ನಗಳಲ್ಲಿ ಯಶಸ್ಸು ಸಾಧಿಸಿದರೆ, ಮೆಕ್ಸಿಕೊ ಒಂದು ಗೋಲು ದಾಖಲಿಸುವಲ್ಲಿ ಮಾತ್ರ ಯಶಸ್ವಿಯಾಯಿತು.

ಎದುರಾಳಿಗಳ ಪ್ರಯತ್ನಗಳನ್ನು ವಿಫಲಗೊಳಿಸಿದ ಬ್ರೆಜಿಲ್ ಗೋಲ್‌ಕೀಪರ್ ಸ್ಯಾಂಟೋಸ್ ಅವರು ತಂಡಕ್ಕೆ ಆಪತ್ಬಾಂಧವರಾದರು.

ಬ್ರೆಜಿಲ್ ಪರ ಡ್ಯಾನಿ ಅಲ್ವೆಸ್, ಗೇಬ್ರಿಯಲ್ ಮಾರ್ಟಿನೆಲ್ಲಿ, ಬ್ರೂನೊ ಗಿಮಾರೆಸ್ ಮತ್ತು ರೇನೈರ್ ಶೂಟೌಟ್‌ನಲ್ಲಿ ಕಾಲ್ಚಳಕ ತೋರಿದರು. ಸ್ಪೇನ್ ಪರ ಜೋಹಾನ್ ವಾಸ್ಕೆಜ್ ಯಶಸ್ವಿಯಾದರು.

ಮೆಕ್ಸಿಕೊ ತಂಡವು 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿತ್ತು.

ಸೆಮಿಫೈನಲ್‌ನ ಇನ್ನೊಂದು ಹಣಾಹಣಿಯಲ್ಲಿ 1–0ಯಿಂದ ಆತಿಥೇಯ ಜಪಾನ್ ತಂಡವನ್ನು ಮಣಿಸಿದ ಸ್ಪೇನ್ ಫೈನಲ್ ಪ್ರವೇಶಿಸಿತು. ಸ್ಪೇನ್ ಪರ 115ನೇ ನಿಮಿಷದಲ್ಲಿ ಅಸೆನ್ಸಿಯೊ ಗೋಲು ದಾಖಲಿಸಿದರು.

ಫೈನಲ್ ಪಂದ್ಯ ಶನಿವಾರ ಯೊಕೊಹಾಮ ಕ್ರೀಡಾಂಗಣದಲ್ಲಿ ನಡೆಯಲಿದೆ.

ಹೆಡರ್ ಮಾಡುವ ಯತ್ನದಲ್ಲಿ ಮೆಕ್ಸಿಕೊದ ಲೂಯಿಸ್ ರೊಮೊ (ಎಡ) ಹಾಗೂ ಬ್ರೆಜಿಲ್ ಡ್ಯಾನಿ ಅಲ್ವೆಸ್ – ರಾಯಿಟರ್ಸ್ ಚಿತ್ರ

ಫೈನಲ್ ತಲುಪಿದ ಸಂಭ್ರಮದಲ್ಲಿ ಬ್ರೆಜಿಲ್ ಆಟಗಾರರು– ಎಎಫ್‌ಪಿ ಚಿತ್ರ

ಕುಸ್ತಿ: ಹೋರಾಡಿ ಸೋತ ಸೋನಂ

ಟೋಕಿಯೊ (ಪಿಟಿಐ/ರಾಯಿಟರ್ಸ್): ಭಾರತದ ಯುವ ಕುಸ್ತಿಪಟು ಸೋನಂ ಮಲಿಕ್ ಅವರ ಮೊದಲ ಒಲಿಂಪಿಕ್ಸ್ ಅಭಿಯಾನ ಮೊದಲ ಸುತ್ತಿನಲ್ಲೇ ಅಂತ್ಯವಾಗಿದೆ. ಮಂಗಳವಾರ ನಡೆದ ಜಿದ್ದಾಜಿದ್ದಿನ ಹಣಾಹಣಿಯಲ್ಲಿ ಅವರು ಮಂಗೋಲಿಯಾದ ಬೊಲೊರ್ಟುಯಾ ಖುರೆಲ್ಕು ಎದುರು ಸೋತರು.

62 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಸೋನಂ ಆರಂಭದಲ್ಲಿ 2-0ಯಿಂದ ಮುನ್ನಡೆ ಸಾಧಿಸಿದ್ದರು. ಆದರೆ ಏಷ್ಯನ್ ಬೆಳ್ಳಿ ಪದಕ ವಿಜೇತೆ ಖುರೆಲ್ಕು, ಬೌಟ್ ಮುಗಿಯಲು 35 ಸೆಕೆಂಡುಗಳಿರುವಾಗ ಎರಡು ಪಾಯಿಂಟ್ಸ್ ಗಳಿಸಿ ಬೌಟ್ ಸಮಬಲಗೊಳಿಸಿದರು.

ಹಣಾಹಣಿಯು ಸಮಬಲದಲ್ಲೇ ಅಂತ್ಯವಾದರೂ ಕೊನೆಯ ಹಂತದಲ್ಲಿ ಖುರೆಲ್ಕು ತೋರಿದ ನಡೆಯಿಂದಾಗಿ ಅವರನ್ನು ನಿಯಮಗಳ ಅನ್ವಯ ವಿಜೇತೆಯೆಂದು ಘೋಷಿಸಲಾಯಿತು. ಆದರೆ ಮುಂದಿನ ಸುತ್ತಿನಲ್ಲಿ ಖುರೆಲ್ಕು, ಬಲ್ಗೇರಿಯಾದ ತಾಯೆಬ್ ಮುಸ್ತಫಾ ಯುಸೆನ್ ಎದುರು ಪರಾಭವಗೊಂಡರು.

ಯುಸೆನ್ ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಖುರೆಲ್ಕು ಎದುರು ಜಯ ಗಳಿಸಿ ಕ್ವಾರ್ಟರ್‌ಫೈನಲ್ ತಲುಪಿದರು. ಈ ಹಣಾಹಣಿಯಲ್ಲಿ ಖುರೆಲ್ಕು ಜಯ ಗಳಿಸಿದ್ದರೆ ಸೋನಂ ಅವರಿಗೆ ಇನ್ನೊಂದು ಪಂದ್ಯವಾಡುವ ಅವಕಾಶ ಸಿಗುವ ಸಾಧ್ಯತೆ ಇತ್ತು. ಸೋನಂ ಅವರು 2017 ಹಾಗೂ 2019ರಲ್ಲಿ ವಿಶ್ವ ಕೆಡೆಟ್ ಚಾಂಪಿಯನ್ ಆಗಿದ್ದಾರೆ. ಏಪ್ರಿಲ್‌ನಲ್ಲಿ ಅಲ್ಮಾಟಿಯಲ್ಲಿ ನಡೆದ ಏಷ್ಯನ್ ಅರ್ಹತಾ ಟೂರ್ನಿಯ ಮೂಲಕ ಟೋಕಿಯೊ ಟಿಕೆಟ್ ಗಿಟ್ಟಿಸಿದ್ದರು.

ಬುಧವಾರ ನಡೆಯುವ ಹಣಾಹಣಿಗಳಲ್ಲಿ ರವಿ ದಹಿಯಾ (57 ಕೆಜಿ ವಿಭಾಗ), ದೀಪಕ್ ಪೂನಿಯಾ (86 ಕೆಜಿ) ಮತ್ತು ಅನ್ಶು ಮಲಿಕ್ (ಮಹಿಳೆಯರ 57 ಕೆಜಿ) ಕಣಕ್ಕಿಳಿಯಲಿದ್ದಾರೆ.

ಹೆವಿಯೇಟ್ ಚಿನ್ನ ಗೆದ್ದ ಮೂಸಾ: ರಷ್ಯಾ ಪೈಲ್ವಾನ್ ಮೂಸಾ ಎವಲೊವ್ ಅವರು ಪುರುಷರ ಹೆವಿವೇಟ್ (97 ಕೆಜಿ ವಿಭಾಗ) ಚಿನ್ನದ ಪದಕಕ್ಕೆ ಮುತ್ತಿಕ್ಕಿದರು. ಫೈನಲ್ ಹಣಾಹಣಿಯಲ್ಲಿ ಅವರು 5–1ರಿಂದ ಅರ್ಮೇನಿಯಾದ ಅರ್ಟರ್ ಅಲೆಕ್ಸಾನಿನ್ ಅವರನ್ನು ಪರಾಭವಗೊಳಿಸಿದರು.



ಸೋನಮ್ ಮಲಿಕ್ (ಎಡ) ಮತ್ತು ಬೊಲೊರ್ಟುಯಾ ಖುರೆಲ್ಕು ನಡುವಣ ಸೆಣಸಾಟ – ಪಿಟಿಐ ಚಿತ್ರ

ಬ್ಯಾಸ್ಕೆಟ್‌ಬಾಲ್: ಸೆಮಿ ತಲುಪಿದ ಅಮೆರಿಕ

ಸಾಯ್‌ತಮ (ಎಎಫ್‌ಪಿ): ಅಮೆರಿಕ ಪುರುಷರ ಬ್ಯಾಸ್ಕೆಟ್‌ಬಾಲ್ ತಂಡ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದೆ. ಇದರೊಂದಿಗೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆಲ್ಲುವ ಕನಸನ್ನು ಬಲಪಡಿಸಿಕೊಂಡಿದೆ.

ಮಂಗಳವಾರ ನಡೆದ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ಅಮೆರಿಕ 95–81 ಪಾಯಿಂಟ್ಸ್‌ನಿಂದ ವಿಶ್ವ ಚಾಂಪಿಯನ್ ಸ್ಪೇನ್ ತಂಡವನ್ನು ಪರಾಭವಗೊಳಿಸಿತು.

ಮೊದಲ ಕ್ವಾರ್ಟರ್‌ನಲ್ಲಿ ಸ್ಪೇನ್ 21–19ರಿಂದ ಮುನ್ನಡೆ ಹೊಂದಿತ್ತು. ನಂತರ ಅಮೆರಿಕದ ಆಟಗಾರರು ಪ್ರಾಬಲ್ಯ ಮೆರೆದರು. ಈ ತಂಡದ ಕೆವಿನ್ ಡ್ಯುರಾಂಟ್ ಒಟ್ಟು 29 ಪಾಯಿಂಟ್ಸ್ ಕಲೆಹಾಕಿ ಗಮನಸೆಳೆದರು. ಜೇಸನ್ ಟಾಟಮ್ 13 ಪಾಯಿಂಟ್ಸ್ ಗಳಿಸಿ ತಂಡದ ಗೆಲುವಿನ ಅಂತರ ಹೆಚ್ಚಿಸಲು ನೆರವಾದರು.

ಸ್ಪೇನ್ ತಂಡದ ರಿಕಿ ರುಬಿಯೊ 38 ಪಾಯಿಂಟ್ಸ್ ಕಲೆಹಾಕಿ ಸೋಲಿನ ನಡುವೆಯೂ ಗಮನ ಸೆಳೆದರು.

ಮತ್ತೊಂದು ಕ್ವಾರ್ಟರ್ ಫೈನಲ್‌ನಲ್ಲಿ ಸ್ಲೊವೇನಿಯಾ ತಂಡ ಜರ್ಮನಿಗೆ ಆಘಾತ ನೀಡಿತು.

ಸ್ಲೊವೇನಿಯಾ 94–70 ಪಾಯಿಂಟ್ಸ್‌ನಿಂದ ಎದುರಾಳಿ ತಂಡವನ್ನು ಮಣಿಸಿತು. ಈ ತಂಡದ ಜೊರಾನ್ ಡ್ರಾಗಿಕ್ 27 ಮತ್ತು ಲುಕಾ ಡೊಂಕಿಚ್ 20 ಪಾಯಿಂಟ್ಸ್ ಕಲೆಹಾಕಿದರು.

ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಸ್ಲೊವೇನಿಯಾ ತಂಡವು ಬಲಿಷ್ಠ ಫ್ರಾನ್ಸ್ ವಿರುದ್ಧ ಸೆಣಸಲಿದೆ.

ಎಂಟರ ಘಟ್ಟದ ಇನ್ನೊಂದು ಹೋರಾಟದಲ್ಲಿ ಫ್ರಾನ್ಸ್ 84–75ರಿಂದ ಇಟಲಿ ವಿರುದ್ಧ ಜಯಿಸಿತು.